ಭಾನುವಾರ, ಡಿಸೆಂಬರ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 360 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹೊಸ ವರ್ಷದ ಹೊಸ್ತಿಲಲ್ಲಿ ಮೂರು ಸ್ಫೂರ್ತಿದಾಯಕ ಕಥನಗಳ ಗುಚ್ಛ

ಎಎಪಿ ವಿರುದ್ಧ ಕ್ರಮಕ್ಕೆ ಸೂಚನೆ 5
ರೈಲು ನಿಲ್ದಾಣ, ರೈಲುಗಳಲ್ಲಿ ಪತ್ತೆ
ಅಣು ಸ್ಥಾವರಕ್ಕೆ ಭೂಮಿ: ವಿರೋಧ 6
ಮನೆ ತೊರೆದ 290 ಮಕ್ಕಳ ರಕ್ಷಣೆ 7

ಗ್ರಾಮೀಣರ ಮನೆ ವೆಚ್ಚ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದ ಜನರು ಮನೆ ಬಳಕೆಗೆ ಮಾಡುವ ಖರ್ಚಿನಲ್ಲಿ ಹೆಚ್ಚಳವಾಗಿದೆ. ನಗರ ಪ್ರದೇಶದ ಜನರು ಮತ್ತು ಗ್ರಾಮೀಣ ಪ್ರದೇಶದ ಜನರು ಮನೆ ಬಳಕೆಗೆ ಮಾಡುವ ಖರ್ಚಿನ ನಡುವೆ ಇದ್ದ ಅಂತರ ಗಣನೀಯವಾಗಿ ಕಡಿಮೆಯಾಗಿದೆ ಎಂದು ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ 2023–24ನೇ ಸಾಲಿನ 'ಮನೆಯೊಂದರ ಬಳಕೆ ವೆಚ್ಚ ಸಮೀಕ್ಷೆ'ಯ (ಎಚ್‌ಸಿಎಎಸ್) ವರದಿ ಹೇಳಿದೆ. ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಡಿಯಲ್ಲಿ ಬರುವ ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್ (ಎನ್‌ಎಸ್‌ಎಸ್‌ಒ) ಈ ಸಮೀಕ್ಷೆಯನ್ನು ನಡೆಸಿದೆ.

2022–23ರ ಸಮೀಕ್ಷೆ ಪ್ರಕಾರ ಗ್ರಾಮೀಣ ಕುಟುಂಬವೊಂದು ತಿಂಗಳಿಗೆ ₹3,773 ವೆಚ್ಚ ಮಾಡುತ್ತಿತ್ತು. ಈ ಸಾಲಿನಲ್ಲಿ ಈ ಮೊತ್ತವು ₹4,122ಕ್ಕೆ ಏರಿಕೆಯಾಗಿದೆ. ಅಂದರೆ, ಕಳೆದ ಬಾರಿಯ ಹೋಲಿಕೆಯಲ್ಲಿ ಗ್ರಾಮೀಣ ಕುಟುಂಬವೊಂದರ ವೆಚ್ಚ ಪ್ರಮಾಣವು ಶೇ 9ರಷ್ಟು ಏರಿಕೆಯಾಗಿದೆ.

ಇದೇ ಅವಧಿಯಲ್ಲಿ ನಗರ ಕುಟುಂಬವೊಂದು ಪ್ರತಿ ತಿಂಗಳು ₹6,459 ವೆಚ್ಚ ಮಾಡುತ್ತಿದ್ದರೆ, 2024ರಲ್ಲಿ ಈ ಮೊತ್ತವು ₹6,996ಕ್ಕೆ ಏರಿಕೆಯಾಗಿದೆ. ಅಂದರೆ, ವೆಚ್ಚ ಪ್ರಮಾಣವು ಶೇ 8ರಷ್ಟು ಏರಿಕೆ ಕಂಡಿದೆ. ನಗರ ಹಾಗೂ ಗ್ರಾಮೀಣ ಭಾಗದ ವೆಚ್ಚದ ಹೋಲಿಕೆ ಮಾಡಿದರೆ ನಗರದ ಕುಟುಂಬಗಳೇ ಈಗಲೂ ಹೆಚ್ಚಿನ ವೆಚ್ಚ ಮಾಡುತ್ತಿವೆ. ಆದರೆ ವೆಚ್ಚ ಏರಿಕೆ ಪ್ರಮಾಣವು ಗ್ರಾಮೀಣ ಭಾಗದಲ್ಲಿ ಹೆಚ್ಚಿದೆ ಎಂಬುದು ಗಮನಾರ್ಹ.



ಸರಾಸರಿ ವಾಸ್ತವಿಕ ವೆಚ್ಚ

ವರ್ಷ	ನಗರ ಪ್ರದೇಶ	ಗ್ರಾಮೀಣ ಪ್ರದೇಶ
2011-12	₹2,630	₹1,430
2022-23	₹6,459	₹3,773
2023-24	₹6,996	₹4,122



ಕರ್ನಾಟಕದ ಸ್ಥಿತಿ ಏನು?

ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಕುಟುಂಬಗಳು ಮಾಡುವ ವೆಚ್ಚವು ಹೆಚ್ಚು. ನಗರ ಪ್ರದೇಶದ ಕುಟುಂಬಗಳ ಸರಾಸರಿ ವೆಚ್ಚ ₹6,996 ಇದ್ದರೆ ಗ್ರಾಮೀಣ ಪ್ರದೇಶದಲ್ಲಿ ₹4,122 ಇದೆ. ನಗರ ಕುಟುಂಬಗಳ ವೆಚ್ಚದ ಸರಾಸರಿಯಲ್ಲಿ ದಕ್ಷಿಣದ ಐದು ರಾಜ್ಯಗಳ ಪೈಕಿ ಕರ್ನಾಟಕವು 3ನೇ ಸ್ಥಾನದಲ್ಲಿದ್ದರೆ, ಗ್ರಾಮೀಣ ಕುಟುಂಬಗಳ ವೆಚ್ಚದ ಸರಾಸರಿಯಲ್ಲಿ ಕರ್ನಾಟಕವು ಕೊನೆಯ ಸ್ಥಾನದಲ್ಲಿದೆ.

- ಗ್ರಾಮೀಣ ಕುಟುಂಬಗಳಿರಲಿ, ನಗರ ಕುಟುಂಬಗಳಿರಲಿ ಆಹಾರೇತರ ಪದಾರ್ಥಗಳಿಗೇ ಹೆಚ್ಚಿನ ವೆಚ್ಚ ಮಾಡುತ್ತಿವೆ. ಶಿಕ್ಷಣಕ್ಕೆ ಕುಟುಂಬಗಳು ಮಾಡುತ್ತಿರುವ ವೆಚ್ಚ ಗಮನಿಸಿದರೆ, ಗ್ರಾಮೀಣ ಕುಟುಂಬಗಳು ಈ ವಿಷಯಕ್ಕೆ ಹೆಚ್ಚಿನ ವೆಚ್ಚ ಮಾಡುತ್ತಿಲ್ಲ. ಇತರೆ ವೆಚ್ಚಗಳಿಗೆ ಹೋಲಿಸಿದರೆ, ಬಟ್ಟೆ, ಚಾದರ ಮತ್ತು ಚಪ್ಪಲಿ ಖರೀದಿಗೆ ನಗರ ಪ್ರದೇಶದ ಜನರು ಮಾಡುವ ವೆಚ್ಚ ಕಡಿಮೆ

ನಗರ ಪ್ರದೇಶ
ಗ್ರಾಮೀಣ ಪ್ರದೇಶ
(ಸಮೀಕ್ಷೆ ನಡೆದ ಅವಧಿ 2023 ಆಗಸ್ಟ್–2024 ಜುಲೈ)

ಮಾಹಿತಿ: ಸುಕೃತ ಎಸ್. ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

- ಆಹಾರ ಪದಾರ್ಥಗಳ ವಿಷಯದಲ್ಲಿ ನಗರ ಹಾಗೂ ಗ್ರಾಮೀಣ ಜನರ ವೆಚ್ಚವು ಕಡಿಮೆಯೇ ಇದೆ. ಅಡುಗೆ ಎಣ್ಣೆಗಾಗಿ ನಗರ ಪ್ರದೇಶದ ಜನರು ತೀರಾ ಕಡಿಮೆ ಪ್ರಮಾಣದ ವೆಚ್ಚ ಮಾಡುತ್ತಿದ್ದಾರೆ. ಗ್ರಾಮೀಣ ಭಾಗದ ಜನರು ನಗರದ ಜನರಿಗಿಂತ ತುಸು ಹೆಚ್ಚು ವ್ಯಯಿಸುತ್ತಾರೆ. ಇನ್ನು ಪಾನೀಯಗಳ ವಿಚಾರದಲ್ಲಿ ನಗರ ಹಾಗೂ ಗ್ರಾಮೀಣ ಭಾಗದ ಜನರು ಹೆಚ್ಚಿನ ವೆಚ್ಚ ಮಾಡುತ್ತಿದ್ದಾರೆ





ಮನಮೋಹನ ಸಿಂಗ್ ಅವರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆಗಾಗಿ ಎಐಸಿಸಿ ಕಚೇರಿಯಿಂದ ನಿಗಮ್ ಬೋಧ್ ಘಾಟ್‌ಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು —ಪಿಟಿಐ ಚಿತ್ರ

'ಅರ್ಥಮಾಂತ್ರಿಕ'ನಿಗೆ ದೇಶದ ಕಣ್ಣೀರಿನ ವಿದಾಯ

ಮನಮೋಹನ ಅಮರ್ ರಹೇ...

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಇನ್ನು ಜನಮಾನಸದಲ್ಲಿ ಜೀವಿಸುವರು. ಭಾರತದ ಆರ್ಥಿಕತೆಗೆ ಹೊಸ ದಿಶೆಯನ್ನು ತೋರಿಸಿ, ಜನಪರ ಯೋಜನೆಗಳ ಮೂಲಕ ಭಾರತೀಯರ ಹೃದಯವನ್ನು ಪ್ರವೇಶಿಸಿದ 'ಅರ್ಥಮಾಂತ್ರಿಕ'ನಿಗೆ ದೇಶವು ಶನಿವಾರ ಕಣ್ಣೀರಿನ ವಿದಾಯ ಹೇಳಿತು.

ಗುರುವಾರ ನಿಧನರಾದ ಮನಮೋಹನ ಸಿಂಗ್ ಅವರ ಅಂತ್ಯಕ್ರಿಯೆ ನವದೆಹಲಿಯ ನಿಗಮ್ ಬೋಧ್ ಘಾಟ್‌ನಲ್ಲಿ ಸ್ತೋತ್ರಗಳ ಪಠಣದ ನಡುವೆ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. ಅವರ ಹಿರಿಯ ಪುತ್ರಿ ಉಪಿಂದರ್ ಸಿಂಗ್, ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಈ ವೇಳೆ ಹಲವರ ಕಣ್ಣಾಲಿಗಳು ತೇವಗೊಂಡವು.

ಅಲ್ಲಿ ನೆರೆದಿದ್ದ ಅವರ ಅಭಿಮಾನಿಗಳು 'ಮನಮೋಹನ ಸಿಂಗ್ ಅಮರ್ ರಹೇ', 'ಜಬ್ ತಕ್ ಸೂರಜ್ ಚಾಂದ್ ರಹೇಗಾ, ತಬ್ ತಕ್ ತೇರಾ ನಾಮ್ ರಹೇಗಾ' ('ಮನಮೋಹನ ಸಿಂಗ್ ಅಮರರಾಗಿದ್ದಾರೆ', 'ಸೂರ್ಯ ಮತ್ತು ಚಂದ್ರ ಇರುವವರೆಗೂ ನಿಮ್ಮ ಹೆಸರು ಅಜರಾಮರ') ಎಂಬ ಘೋಷಣೆಗಳನ್ನು ಮೊಳಗಿಸಿದರು.

7ನೇ ಪುಟ ನೋಡಿ

ಮಾಜಿ ಪ್ರಧಾನಿಗೆ ಅವಮಾನ: ರಾಹುಲ್

ಮನಮೋಹನ ಸಿಂಗ್ ಅವರ ಅಂತ್ಯಕ್ರಿಯೆಗೆ ಸರ್ಕಾರವು ನಿಗಮ್ ಬೋಧ್ ಘಾಟ್‌ನಲ್ಲಿ ಸ್ಥಳ ನಿಗದಿ ಮಾಡಿದ್ದು ವಿವಾದ ಹುಟ್ಟುಹಾಕಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿವೆ.

ನರೇಂದ್ರ ಮೋದಿ ಸರ್ಕಾರವು ಮಾಜಿ ಪ್ರಧಾನಿ ಮತ್ತು ಸಿಖ್ ಸಮುದಾಯವನ್ನು 'ಅವಮಾನಿಸಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಆದರೆ ಕಾಂಗ್ರೆಸ್ ಆರೋಪಕ್ಕೆ ಬಿಜೆಪಿ ತಿರುಗೇಟು ನೀಡಿದೆ.

'ಸಿಂಗ್ ಅವರನ್ನು ಎಂದಿಗೂ ಗೌರವಿಸದ ಕಾಂಗ್ರೆಸ್, ಇದೀಗ ಅವರ ಮರಣದ ನಂತರ ರಾಜಕೀಯದಲ್ಲಿ ತೊಡಗಿರುವುದು ದುಃಖಕರ' ಎಂದು ಬಿಜೆಪಿ ಹಿರಿಯ ನಾಯಕ ಸುಧಾಂಶು ತ್ರಿವೇದಿ ಟೀಕಿಸಿದ್ದಾರೆ.

7ನೇ ಪುಟ ನೋಡಿ

ನಿತೀಶ್ ಕುಮಾರ್ ರೆಡ್ಡಿ ಶತಕ ದೂರವಾದ ಭಾರತದ ಆತಂಕ

ರನ್	105*
ಎಸೆತ	176
ಬೌಂಡರಿ	10
ಸಿಕ್ಸರ್	1

ಮೆಲ್ಬರ್ನ್: ವಿಶಾಖಪಟ್ಟಣದ ನಿತೀಶ್ ಕುಮಾರ್ ರೆಡ್ಡಿ ಮತ್ತು ಚೆನ್ನೈನ ವಾಷಿಂಗ್ಟನ್ ಸುಂದರ್ ಅವರ ಎಂಟನೇ ವಿಕೆಟ್ ಜೊತೆಯಾಟದಿಂದಾಗಿ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ನಾಲ್ಕನೇ ಟೆಸ್ಟ್‌ನಲ್ಲಿ ಫಾಲೋ ಆನ್ ತಪ್ಪಿಸಿಕೊಂಡಿತು. ನಿತೀಶ್ ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಗಳಿಸಿದರು.

171 ನಿತೀಶ್ ಶತಕ ಪೂರೈಸಲು ಆಡಿದ ಎಸೆತಗಳು. ಆಸ್ಟ್ರೇಲಿಯಾದಲ್ಲಿ 8ನೇ ಕ್ರಮಾಂಕದಲ್ಲಿ ಶತಕ ದಾಖಲಿಸಿದ ಭಾರತದ ಮೊದಲ ಬ್ಯಾಟರ್

285 ನಿತೀಶ್ ಮತ್ತು ವಾಷಿಂಗ್ಟನ್ 127 ರನ್ ಸೇರಿಸಲು ಎದುರಿಸಿದ ಒಟ್ಟು ಎಸೆತಗಳು.

ವಾಷಿಂಗ್ಟನ್ ಸುಂದರ್

ರನ್	50
ಎಸೆತ	162
ಬೌಂಡರಿ	1

ವಿವರ ಪುಟ 14

ಗೆಜೆಟೆಡ್ ಪ್ರೊಬೇಷನರಿ: ಮರು ಪರೀಕ್ಷೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಡಿ.29ರಂದು ಪೂರ್ವಭಾವಿ ಮರು ಪರೀಕ್ಷೆ ನಡೆಸುತ್ತಿದ್ದು, ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಪರೀಕ್ಷಾ ಕೇಂದ್ರವಾಗಿ 214 ಸರ್ಕಾರಿ, 189 ಅನುದಾನಿತ ಹಾಗೂ 161 ಖಾಸಗಿ ಶಾಲಾ–ಕಾಲೇಜುಗಳನ್ನು ಬಳಸಿಕೊಳ್ಳಲಾಗುತ್ತಿದೆ.

7ನೇ ಪುಟ ನೋಡಿ

'ಬ್ಯಾಕ್‌ಲಾಗ್' ಭರ್ತಿಗೆ ದ್ವಿಮುಖ ನೀತಿ!

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರದ ದ್ವಿಮುಖ ನೀತಿಯಿಂದಾಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ನಡೆಸುವ ಕಾಲೇಜುಗಳಲ್ಲಿ ಸಾವಿರಕ್ಕೂ ಹೆಚ್ಚು ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾಗದೆ ಖಾಲಿ ಉಳಿದಿವೆ.

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಕಾಲೇಜು ಶಿಕ್ಷಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದ ಅನುದಾನಿತ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಕಾರಣಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳ ಭರ್ತಿಗೆ 2002 ಮತ್ತು 2012ರಲ್ಲಿ ಅನುಮತಿ ನೀಡಿ, ನೇಮಕಾತಿ ಆದೇಶ ನೀಡಿದ್ದ ಉನ್ನತ ಶಿಕ್ಷಣ ಇಲಾಖೆ, ಈಗ 2001ರ ನಿಯಮ ಅನ್ವಯಿಸಿ 2019–2020ನೇ ಸಾಲಿನ ನೇಮಕಾತಿ ಪ್ರಕ್ರಿಯೆ ತಡೆಹಿಡಿದೆ. ಐದು ವರ್ಷಗಳಿಂದ ಹುದ್ದೆಗಳ ಭರ್ತಿ ನನೆಗುದಿಗೆ ಬಿದ್ದಿದೆ.

2018–19ನೇ ಸಾಲಿನ ನಂತರ ಇದುವರೆಗೂ ಶಿಕ್ಷಣ ಸಂಸ್ಥೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ರಾಜ್ಯದ ಅನುದಾನಿತ ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು 2019–20ನೇ ಸಾಲಿನಲ್ಲಿ ಸರ್ಕಾರ ನೀಡಿದ್ದ ಅನುಮತಿಯೂ ಪೂರ್ಣಗೊಂಡಿಲ್ಲ.

6ನೇ ಪುಟ ನೋಡಿ

ಸಂಪುಟ ಉಪ ಸಮಿತಿಗೂ ಇಲ್ಲ ಮನ್ನಣೆ

ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಪಟ್ಟಿಗೆ 2021ರಲ್ಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿತ್ತು. ಆದರೆ, ಉನ್ನತ ಶಿಕ್ಷಣ ಇಲಾಖೆ ಕಡತವನ್ನು ಮತ್ತೆ ಹಿಂದಿರುಗಿಸಿತ್ತು.

ನೇಮಕಾತಿ ವಿಳಂಬದ ವಿಚಾರವಾಗಿ ಜನವರಿ 2022ರಲ್ಲಿ ಮಧ್ಯ ಪ್ರವೇಶ ಮಾಡಿದ್ದ ಬ್ಯಾಕ್‌ಲಾಗ್ ಕುರಿತ ಸಚಿವ ಸಂಪುಟ ಉಪ ಸಮಿತಿ ಸಭೆ ಪ್ರಕರಣವನ್ನು ಪರಿಶೀಲಿಸಿ, ಮೂರು ತಿಂಗಳ ಒಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ, ಸಮಾಜ ಕಲ್ಯಾಣ ಇಲಾಖೆಗೆ ವರದಿ ನೀಡುವಂತೆ ತಾಕೀತು ಮಾಡಿತ್ತು. ಅದಾಗಿ ಮೂರು ವರ್ಷಗಳಾದರೂ ನೇಮಕಾತಿ ಆದೇಶ ದೊರೆತಿಲ್ಲ. ಈ ಕುರಿತು ಸಮಾಜ ಕಲ್ಯಾಣ ಇಲಾಖೆ ಹಲವು ಬಾರಿ ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ.

ಪ್ರಿಯಾಂಕ್ ಆಪ್ತನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ರಾಜು

ಕಲಬುರಗಿ: ಆಂದೋಲಾ ಸಿದ್ದಲಿಂಗ ಸ್ವಾಮೀಜಿ, ಬಿಜೆಪಿಯ ಮೂವರು ಮುಖಂಡರ ಹತ್ಯೆಗೆ ಸುಪಾರಿ ನೀಡಿದ ಆರೋಪದಡಿ ಪಂಚಾಯತ್‌ರಾಜ್ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ರಾಜು ಕಪನೂರ ಸೇರಿ ಆರು ಮಂದಿ ವಿರುದ್ಧ ಸ್ಟೇಷನ್ ಬಜಾರ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಮುಖಂಡರಾದ ರಾಜು ಕಪನೂರ, ನಂದಕುಮಾರ ನಾಗಭುಜಂಗೆ, ಗೋರಖನಾಥ ಸಜ್ಜನ್, ರೌಡಿಶೀಟರ್ ಪ್ರತಾಪ್ ಧೀರ ಪಾಟೀಲ (ಪಪ್ಪು ಪಾಟೀಲ), ಸೊಲ್ಲಾಪುರದ ಕಾರ್ಪೊರೇಟರ್ ಮನೋಜ್ ಸೆಜವಾಲ್ ಮತ್ತು ರಾಮನಗೌಡ ಪಾಟೀಲ ವಿರುದ್ಧ ಬಿಎನ್‌ಎಸ್ ಕಲಂ 351 (2) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

7ನೇ ಪುಟ ನೋಡಿ

ಗುತ್ತಿಗೆದಾರನ ಮನೆಗೆ ಬಿಜೆಪಿ ಮುಖಂಡರ ಭೇಟಿ

ಬೀದರ್: ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಮನೆಗೆ ಬೀದರ್ ಹಾಗೂ ಕಲಬುರಗಿ ಜಿಲ್ಲೆಯ ಬಿಜೆಪಿ ನಾಯಕರ ಪ್ರತ್ಯೇಕ ತಂಡ ಶನಿವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿತು.

ಬೀದರ್ ಜಿಲ್ಲೆಯ ತಂಡದ ನೇತೃತ್ವವನ್ನು ಶಾಸಕ ಶರಣು ಸಲಗರ ಹಾಗೂ ಕಲಬುರಗಿ ಜಿಲ್ಲೆಯ ತಂಡದ ನೇತೃತ್ವವನ್ನು ಶಾಸಕ ಬಸವರಾಜ ಮತ್ತಿಮಡು ವಹಿಸಿದ್ದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ಬಿಜೆಪಿಯ ಹಲವು ಮುಖಂಡರು ಭಾನುವಾರ ಸಚಿನ್ ಪಾಂಚಾಳ್ ಅವರ ಮನೆಗೆ ಭೇಟಿ ನೀಡಲಿದ್ದಾರೆ.

ಆರು ರಾಜ್ಯಗಳಲ್ಲಿ 'ನಂದಿನಿ' ಕ್ಷೀರಧಾರೆ

ಮಂಡ್ಯ: ಗುಣಮಟ್ಟಕ್ಕೆ ಹೆಸರುವಾಸಿಯಾಗಿರುವ 'ನಂದಿನಿ ಹಾಲು' ಈಗ 6 ರಾಜ್ಯಗಳಲ್ಲಿ ಮಾರುಕಟ್ಟೆ ವಿಸ್ತರಿಸಿಕೊಂಡಿದೆ. ದೆಹಲಿಗೆ ಮಂಡ್ಯದಿಂದ, ಮುಂಬೈಗೆ ತುಮಕೂರಿನಿಂದ ಹಾಲು ಪೂರೈಕೆಯಾಗುತ್ತಿದೆ. 6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸೌಹಾರ್ದ ಸಾರಿದ ಮುಸ್ಲಿಂ ಸಮಾಜದ ಮುಖಂಡ

ಅಯ್ಯಪ್ಪ ಭಕ್ತರಿಗೆ ಮುಸ್ಲಿಮರಿಂದ ಆತಿಥ್ಯ

ಪ್ರಜಾವಾಣಿ ವಾರ್ತೆ

ಕವಿತಾಳದ ಮುಸ್ಲಿಂ ಸಮಾಜದ ಮುಖಂಡ ಬಿ.ಎ.ಕರೀಂಸಾಬ್ ಶನಿವಾರ ತಮ್ಮ ಮನೆಯಲ್ಲಿ ಅಯ್ಯಪ್ಪ ಭಕ್ತರಿಗೆ ಊಟ ಬಡಿಸಿದರು



ಕವಿತಾಳ (ರಾಯಚೂರು ಜಿಲ್ಲೆ): ಪಟ್ಟಣದ ಮುಸ್ಲಿಂ ಸಮಾಜದ ಮುಖಂಡ ಬಿ.ಎ.ಕರೀಂಸಾಬ್ ಅವರು ತಮ್ಮ ಮನೆಯಲ್ಲಿ ಅಯ್ಯಪ್ಪ ಮಾಲಾಧಾರಿಗಳಿಗೆ ಶನಿವಾರ ಪ್ರಸಾದ ವ್ಯವಸ್ಥೆ ಮಾಡುವ ಮೂಲಕ ಭಾವೈಕ್ಯ ಮೆರೆದರು.

ಪೂಜಾ ಕಾರ್ಯಕ್ರಮ ಮುಗಿಸಿ ಕೊಂಡು ಮನೆಗೆ ಬಂದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಬಿ.ಎ. ಕರೀಂಸಾಬ್ ಸ್ವತಃ ಊಟ ಬಡಿಸಿದರು. ಹೋಳಿಗೆ, ಲಡ್ಡು, ಚಪಾತಿ, ಪಲ್ಯ, ಹಸಿ ತರಕಾರಿ, ಅನ್ನ, ಸಾಂಬಾರು ಉಣಬಡಿಸಿದರು.

'ಅಯ್ಯಪ್ಪ ಸ್ವಾಮಿ ಭಕ್ತರಾಗಲು ಯಾವುದೇ ಜಾತಿ, ಧರ್ಮದ ಭೇದವಿಲ್ಲ. ಹೀಗಾಗಿ ಕಳೆದ ಮೂರು ವರ್ಷಗಳಿಂದ ಅಯ್ಯಪ್ಪಸ್ವಾಮಿ ಭಕ್ತರಿಗೆ ಮನೆಯಲ್ಲಿ ಭೋಜನ ವ್ಯವಸ್ಥೆ ಮಾಡುತ್ತಿದ್ದೇನೆ. ಧರ್ಮ, ಜಾತಿ ಎಣಿಸದೇ ಮಾನವಕುಲಕ್ಕೆ ಒಳಿತನ್ನು ಬಯಸುವುದು ಶ್ರೇಷ್ಠ ಎಂಬುದು ನನ್ನ ನಂಬಿಕೆ' ಎಂದು ಕರೀಂಸಾಬ್ ಹೇಳಿದರು.

'ಅಯ್ಯಪ್ಪ ಭಕ್ತರಿಗೆ ಯಾವುದೇ ಜಾತಿ, ಧರ್ಮದ ಭೇದ–ಭಾವ ಇಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ ಹೀಗೆ ಯಾವುದೇ ಧರ್ಮದವರ ಮನೆಯಲ್ಲಿ ಪೂಜೆ ಮಾಡಲು ಮತ್ತು ಪ್ರಸಾದ ಸ್ವೀಕರಿಸಲು ಅವಕಾಶವಿದೆ. ಭಕ್ತಿಯಿಂದ ಆಹ್ವಾನ ನೀಡಿದರೆ ನಾವು ತಿರಸ್ಕರಿಸು ವುದಿಲ್ಲ' ಎಂದು ಗುರುಸ್ವಾಮಿ ಚನ್ನಯ್ಯ ಹೇಳಿದರು.

'ಅಯ್ಯಪ್ಪ ಮಾಲೆ ಧರಿಸಿದ ಭಕ್ತರಿಗೆ ಸ್ವಚ್ಛತೆ ಮತ್ತು ಮಡಿಯಿಂದ ಅಡುಗೆ ಮಾಡಿ ಬಡಿಸುವುದು ಮುಖ್ಯ. ಕೆಲವು ಮನೆಗಳಲ್ಲಿ ಅಡುಗೆ ಸಾಮಾನುಗಳನ್ನು ನಮಗೇ ನೀಡಿ ಅಡುಗೆ ತಯಾರಿಸಲು ಹೇಳುತ್ತಾರೆ. ಈ ಭಾಗದಲ್ಲಿ ಬಿ.ಎ.ಕರೀಂಸಾಬ್ ಅವರು ಮೂರು ವರ್ಷಗಳಿಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಯ್ಯಪ್ಪಸ್ವಾಮಿ ಭಕ್ತರಾದ ಯಮನಪ್ಪ ಯಾದವ, ಗಂಗಪ್ಪ ದಿನ್ನಿ, ತಾಯಣ್ಣ ಯಾದವ, ಪಂಪಾಪತಿ, ಸಂಜು, ವೆಂಕಟೇಶ, ಕೃಷ್ಣ, ವಿಜಯ ಸೇರಿದಂತೆ ಕವಿತಾಳ ಮತ್ತು ಪಾತಾಪುರ ಅಯ್ಯಪ್ಪ ಪೀಠದ ಸ್ವಾಮಿ ಭಕ್ತರು ಭೋಜನ ಕೂಟದಲ್ಲಿ ಪಾಲ್ಗೊಂಡಿದ್ದರು.

ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ಒಂದೂವರೆ ವರ್ಷದಲ್ಲಿ ನಿರ್ಮಾಣದ ಗುರಿ

ತಾಯಿ–ಮಗು ಪ್ರಕರಣ ನಿರ್ವಹಣೆಗೆ ಆಸ್ಪತ್ರೆ

• ವರುಣ ಹೆಗಡೆ

ಬೆಂಗಳೂರು: ತಾಯಿ–ಮಗು ಚಿಕಿತ್ಸೆಗೆ ಶಿಫಾರಸು (ರೆಫರಲ್) ಆಧಾರದಲ್ಲಿ ನಗರಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ, ಈ ಪ್ರಕರಣಗಳ ನಿರ್ವಹಣೆಗೆ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ಒಂದೂವರೆ ವರ್ಷದಲ್ಲಿ ಹೈಟೆಕ್ ಆಸ್ಪತ್ರೆ ತಲೆಯೆತ್ತಲಿದೆ.

ಮಲ್ಲೇಶ್ವರದಲ್ಲಿರುವ ಕೆ.ಸಿ. ಜನರಲ್ ಆಸ್ಪತ್ರೆ 13.5 ಎಕರೆ ವಿಸ್ತೀರ್ಣ ಹೊಂದಿದೆ. ಇಲ್ಲಿ ಸ್ತ್ರೀ ಮತ್ತು ಪ್ರಸೂತಿ ವಿಭಾಗವಿದ್ದು, ನೂರು ಹಾಸಿಗೆಗಳನ್ನು ಒಳಗೊಂಡಿದೆ. ರೋಗಿಗಳ ದಟ್ಟಣೆ ಹಾಗೂ ಸಂಕೀರ್ಣ ಪ್ರಕರಣಗಳ ನಿರ್ವಹಣೆ ಹಾಲಿ ವ್ಯವಸ್ಥೆಯಡಿ ಕಷ್ಟಸಾಧ್ಯವಾದ್ದರಿಂದ, ವಾಣಿವಿಲಾಸ ಆಸ್ಪತ್ರೆಗೆ ಕೆಲ ಪ್ರಕರಣಗಳನ್ನು ಶಿಫಾರಸು ಮಾಡಲಾಗುತ್ತಿದೆ. ಇದರಿಂದ ತಾಯಂದಿರಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ಆಸ್ಪತ್ರೆ ಆವರಣದಲ್ಲಿಯೇ 200 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಿಸಲಾಗುತ್ತಿದೆ.

ಸೆಪ್ಟೆಂಬರ್‌ನಲ್ಲಿಯೇ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆ ಮಾಡಲಾಗಿದೆ. ಬಳ್ಳಾರಿಯಲ್ಲಿ ಬಾಣಂತಿಯರ ಸರಣಿ

ಮಲ್ಲೇಶ್ವರದಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆಯ ಹೊರನೋಟ ಚಿತ್ರ:ರಂಜು ಪಿ

ಸಾವು ಪ್ರಕರಣಗಳು ವರದಿಯಾದ ಬಳಿಕ, ಆರೋಗ್ಯ ಇಲಾಖೆಯು ಈ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ವೇಗ ನೀಡಲು ಸೂಚಿಸಿದೆ. ₹ 66.78 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗುತ್ತಿರುವ ಈ ಆಸ್ಪತ್ರೆ, ಒಟ್ಟು 12,824 ಚದರ ಮೀಟರ್ ವಿಸ್ತೀರ್ಣ ಹೊಂದಿದೆ. ಇದರಲ್ಲಿ ಕಟ್ಟಡದ ಅಡಿಪಾಯದ ವಿಸ್ತೀರ್ಣ 2,131 ಚದರ ಮೀಟರ್ ಇರಲಿದ್ದು, ನಾಲ್ಕು ಮಹಡಿಗಳನ್ನು ಹೊಂದಿರಲಿದೆ.

ದಟ್ಟಣೆ ಇಳಿಕೆ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ವಾಣಿವಿಲಾಸ ಆಸ್ಪತ್ರೆಯು ರಾಜ್ಯದ ಅತಿ ದೊಡ್ಡ ತಾಯಿ–ಮಗುವಿನ ಆಸ್ಪತ್ರೆಯಾಗಿದೆ. ತಿಂಗಳಿಗೆ 8 ಸಾವಿರದಿಂದ 9 ಸಾವಿರ ಹೊರರೋಗಿಗಳು ಈ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದು, ತಿಂಗಳಿಗೆ 1,300ರಿಂದ 1,500 ಹೆರಿಗೆಗಳನ್ನು ನಡೆಸಲಾಗುತ್ತಿದೆ.

50 ಹಾಸಿಗೆಗಳ ಟ್ರಾಮಾಕೇರ್ ಸೆಂಟರ್

ಆಸ್ಪತ್ರೆ ಆವರಣದಲ್ಲಿ ₹35 ಕೋಟಿ ವೆಚ್ಚದಲ್ಲಿ 50 ಹಾಸಿಗೆಗಳ ಟ್ರಾಮಾಕೇರ್ ಸೆಂಟರ್ ನಿರ್ಮಾಣವಾಗುತ್ತಿದೆ. ಮುಂಬರುವ ಮಾರ್ಚ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗಡುವು ನೀಡಲಾಗಿದೆ. ಇದು ಪ್ರಾರಂಭವಾದ ಬಳಿಕ ಆಸ್ಪತ್ರೆಯಲ್ಲಿನ ತುರ್ತು ನಿಗಾ ಘಟಕವನ್ನು ಟ್ರಾಮಾಕೇರ್ ಸೆಂಟರ್‌ಗೆ ಸ್ಥಳಾಂತರಿಸುವ ಬಗ್ಗೆ ಆಸ್ಪತ್ರೆ ಚಿಂತನೆ ನಡೆಸಿದೆ.

ಆಸ್ಪತ್ರೆಯಲ್ಲಿ 790 ಚದರ ಮೀಟರ್ ವಿಸ್ತೀರ್ಣದಲ್ಲಿ, ₹4.28 ಕೋಟಿ ವೆಚ್ಚದಲ್ಲಿ ಶವಾಗಾರ ಕೊಠಡಿಯೂ ನಿರ್ಮಾಣವಾಗುತ್ತಿದೆ. 230 ಚದರ ಮೀಟರ್ ವಿಸ್ತೀರ್ಣದಲ್ಲಿ, ₹1.77 ಕೋಟಿ ವೆಚ್ಚದಲ್ಲಿ ಅಡುಗೆ ಮನೆ ಕಟ್ಟಡ ನಿರ್ಮಾಣ ಕಾಮಗಾರಿಯೂ ನಡೆಯುತ್ತಿದೆ.

ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಟ್ರಾಮಾ ಸೆಂಟರ್ ಸೇರಿ ವಿವಿಧ ಕಾಮಗಾರಿಗಳು ನಡೆಯುತ್ತಿವೆ. ರೋಗಿಗಳಿಗೆ ಗುಣಮಟ್ಟದ ಸೇವೆ ಒದಗಿಸಲು ಇವು ಸಹಕಾರಿಯಾಗಲಿವೆ

ಡಾ.ಬಿ.ಆರ್. ಮೋಹನ್

ಕೆ.ಸಿ. ಜನರಲ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ

ಈ ಆಸ್ಪತ್ರೆಗೆ ವಿವಿಧ ಜಿಲ್ಲೆಗಳ ಆಸ್ಪತ್ರೆಗಳ ಜತೆಗೆ ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್, ಬಿಬಿಎಂಪಿಯ 26 ಹೆರಿಗೆ ಆಸ್ಪತ್ರೆಗಳು ಸೇರಿ ವಿವಿಧ ಆಸ್ಪತ್ರೆಗಳಿಂದ ಸಂಕೀರ್ಣ ಪ್ರಕರಣಗಳು ಶಿಫಾರಸು ಆಧಾರದಲ್ಲಿ ಬರುತ್ತಿವೆ. ಇದರಿಂದ ಆಸ್ಪತ್ರೆಯಲ್ಲಿ ತಾಯಂದಿರ ದಟ್ಟಣೆ ಉಂಟಾಗುತ್ತಿದೆ. ಕೆ.ಸಿ.ಜನರಲ್ ಆಸ್ಪತ್ರೆ ಆವರಣಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣವಾದ ಬಳಿಕ ವಾಣಿವಿಲಾಸ ಆಸ್ಪತ್ರೆಯಲ್ಲಿ ದಟ್ಟಣೆ ಕಡಿಮೆಯಾಗುವ ಸಾಧ್ಯತೆಯಿದೆ.

'ಆಸ್ಪತ್ರೆಗೆ ಪ್ರತಿನಿತ್ಯ 800ರಿಂದ 1,000 ಮಂದಿ ಭೇಟಿ ನೀಡುತ್ತಿದ್ದಾರೆ. ಇರುವ ವ್ಯವಸ್ಥೆಯಡಿ ಸೇವೆ ನೀಡಲಾಗುತ್ತಿದೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಸೇರಿ ₹150 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳು ಆಸ್ಪತ್ರೆಯಲ್ಲಿ ನಡೆಯುತ್ತಿವೆ' ಎಂದು ಆಸ್ಪತ್ರೆಯ ವೈದ್ಯಾಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ವಿಶೇಷ ಪುಸ್ತಕ ಪ್ರದರ್ಶನ ಮಾರಾಟ ಮೇಳಕ್ಕೆ ಚಾಲನೆ

ಬೆಂಗಳೂರು: ಬಸವನಗುಡಿಯ ರಾಮಕೃಷ್ಣ ಮಠದಲ್ಲಿ ಆಯೋಜಿಸಿರುವ ವಿಶೇಷ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಸ್ವಾಮಿ ನಿತ್ಯಸ್ಥಾನಂದಜೀ ಅವರು ಶನಿವಾರ ಚಾಲನೆ ನೀಡಿದರು.

ಈ ಮೇಳವು ಡಿಸೆಂಬರ್ 28ರಿಂದ ಜನವರಿ 14ರವರೆಗೆ ನಡೆಯಲಿದ್ದು, ಶೇಕಡ 10 ರಿಂದ 50ರವರೆಗೆ ರಿಯಾಯಿತಿ ಇರಲಿದೆ.

ಮೇಳದಲ್ಲಿ ರಾಮಕೃಷ್ಣ, ವಿವೇಕಾನಂದ ಹಾಗೂ ವೇದಾಂತ ಸಾಹಿತ್ಯ, ಧ್ಯಾನ, ಯೋಗದ ಕುರಿತ ಗ್ರಂಥಗಳು, ವ್ಯಕ್ತಿತ್ವ ವಿಕಸನ, ಚಾರಿತ್ರ್ಯ ನಿರ್ಮಾಣದ ಪುಸ್ತಕಗಳು, ಮಕ್ಕಳಿಗೆ ರಾಮಾಯಣ, ಮಹಾಭಾರತ, ಪುರಾಣ ಕಥೆಗಳ ಚಿತ್ರಕಥೆಗಳ ಪುಸ್ತಕಗಳು ಸೇರಿದಂತೆ ಹಲವಾರು ಪುಸ್ತಕಗಳು ಇವೆ. ಆಸಕ್ತರು ಈ ಪುಸ್ತಕ ಮೇಳದ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

'ಗೋತ್ರ ಪುರುಷ ಮಾದಾರ ಚೆನ್ನಯ್ಯ'

ಬೆಂಗಳೂರು: 'ಅಂಬಲಿಯಿಂದ ಶಿವನನ್ನೇ ಕೃತಾರ್ಥನನ್ನಾಗಿ ಮಾಡಿದ ಮಾದಾರ ಚೆನ್ನಯ್ಯನವರು ಬಸವಣ್ಣನವರಿಂದ 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ' ಎಂಬ ಸ್ತುತಿ ಪಡೆದ ಬಸವ ಧರ್ಮದ ಗೋತ್ರಪುರುಷ' ಎಂದು ಉದ್ಯಮಿ ಸಿದ್ದೇಶ್ ನಾಗೇಂದ್ರ ಹೇಳಿದರು.

ವಚನಜ್ಯೋತಿ ಬಳಗವು ವಿಜಯನಗರದ ಭೈರವ ರಾಗ ಅಂಗಳದಲ್ಲಿ ಆಯೋಜಿಸಿದ್ದ ಮಾದಾರ ಚೆನ್ನಯ್ಯ ಜಯಂತಿಯಲ್ಲಿ ಅವರು ಮಾತನಾಡಿದರು.

ಬಸವಣ್ಣ ಕಟ್ಟಿದ ಕಲ್ಯಾಣ ಸಮಾಜವು ಅದೇ ಹಾದಿಯಲ್ಲಿ ಮುಂದುವರೆದಿದ್ದರೆ ಈ ನಾಡಿನ ಚಿತ್ರಣವೇ ಬೇರೆಯಾಗುತ್ತಿತ್ತು. ದುರದೃಷ್ಟವಶಾತ್ ವಚನ ಸಾಹಿತ್ಯ ಮರೆಯಾಯಿತು. ವಿಚಾರಶೀಲ ಧರ್ಮ ಸಂಪ್ರದಾಯಿಗಳ ಕೈವಶವಾಗಿ ಇದೀಗ ಮರುಹುಟ್ಟು ಪಡೆಯುತ್ತಿದೆ ಎಂದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, 'ಬಸವಣ್ಣನವರ ನಡೆಯಿಂದ ಆಕರ್ಷಿತರಾಗಿ ಕಲ್ಯಾಣಕ್ಕೆ ಬಂದ ಚೆನ್ನಯ್ಯನವರು, ಅಣ್ಣನವರ ಜೊತೆಯಾಗಿ ನಿಂತು ಅಪ್ಪನೆಂಬ ಅಭಿದಾನಕ್ಕೆ ಪಾತ್ರರಾಗಿದ್ದು ಅವರ ಘನ ವ್ಯಕ್ತಿತ್ವಕ್ಕೆ ಸಾಕ್ಷಿ' ಎಂದರು.

ಉಪನ್ಯಾಸ ನೀಡಿದ ಕವಿ ಗುಂಡೀಗೆರೆ ವಿಶ್ವನಾಥ್ ಅವರು, ಚೆನ್ನಯ್ಯನವರ ಜೀವನ ಚರಿತ್ರೆಯನ್ನು ತಿಳಿಸಿ, ಅರಿನಿಜಾತ್ಮ ರಾಮ ರಾಮ ಅಂಕಿತದಲ್ಲಿ ಪ್ರಕಟಿತ ಹತ್ತು ವಚನಗಳ ಅರ್ಥ ವಿವರಿಸಿದರು.

ಪುಟಾಣಿಗಳಾದ ಶ್ರಾವಣಿ ಹಣ್ಣಿ, ಸಿದ್ದು ಧವನ್, ಪೂರ್ಣಿಕ ಆರಾಧ್ಯ, ಹವ್ಯಾಸಿ ಗಾಯಕಿ ಚಂದ್ರಮತಿ ಮಜ್ಜಿ, ಮುಕ್ತಾಯಕ್ಕ ಬಳಗ ಹಾಗೂ ವಚನ ಕಲಿಕೆ ತರಗತಿ ವಿದ್ಯಾರ್ಥಿಗಳು ವಚನ ಗಾಯನ ಮಾಡಿದರು. ಮಾದಾರ ಚೆನ್ನಯ್ಯ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಎಂ.ನಂಜಪ್ಪ ಅವರನ್ನು ಅಭಿನಂದಿಸಲಾಯಿತು.

ಸತಿ ಪದ್ಧತಿಯ ಮೇಲೆ ಬೆಳಕು ಚೆಲ್ಲಿದ ಕಲ್ಬುರ್ಗಿ: ಸುಭಾಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸತಿಪದ್ಧತಿಯು ಬ್ರಾಹ್ಮಣರಲ್ಲಿ ಮಾತ್ರವೇ ಇದೆ ಎಂಬ ಅಭಿಪ್ರಾಯವಿತ್ತು. ಆದರೆ ರಾಜ್ಯದಲ್ಲಿ ಸತಿಪದ್ಧತಿ ಶೂದ್ರ ಸಮುದಾಯಗಳಲ್ಲಿ ಮಾತ್ರವೇ ಇದೆ ಎಂಬುದನ್ನು ಬಸವರಾಜ ಕಲ್ಬುರ್ಗಿ ಅವರು ತೋರಿಸಿಕೊಟ್ಟರು' ಎಂದು ಪ್ರಾಧ್ಯಾಪಕ ಸುಭಾಷ್ ರಾಜಮಾನೆ ಹೇಳಿದರು.

ಸುಮೇರು ಟ್ರಸ್ಟ್ ಮತ್ತು ಐಸಿರಿ ಪ್ರಕಾಶನವು ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಬಸವರಾಜ ಕಲ್ಬುರ್ಗಿ ಮತ್ತು ಎಚ್.ಬಿ.ಶಿವಲೀಲಾ ದಂಪತಿ ಗುರುಗೌರವ ಸಮರ್ಪಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅವರ ಸಂಶೋಧನೆಯು ರಾಜ್ಯದಲ್ಲಿನ ಸತಿಪದ್ಧತಿಯ ನೈಜ ಸ್ವರೂಪದ ಮೇಲೆ ಬೆಳಕು ಚೆಲ್ಲಿತು' ಎಂದರು.

'ಕನ್ನಡದ ಸಂದರ್ಭದಲ್ಲಿ ಸತಿಪದ್ಧತಿಯ ಕುರಿತಾದ ಹಲವು ಸಂಶೋಧನೆಗಳು ನಡೆದಿದ್ದವು. ಆದರೆ ಆ ಸಂಶೋಧನೆಗಳ ಹಾದಿಯಲ್ಲಿದ್ದ ಅಪಾಯಗಳನ್ನು ಬಸವರಾಜ ಕಲ್ಬುರ್ಗಿ ಅರಿತಿದ್ದರು. ಹೀಗಾಗಿಯೇ ಅವುಗಳಿಗಿಂತ ಭಿನ್ನವಾದ ಹಾದಿಯಲ್ಲಿ ಅವರು ಸಂಶೋಧನೆ ನಡೆಸಿದರು. ಈ ಪದ್ಧತಿ ಕುರಿತಾದ ಅಧ್ಯಯನಕ್ಕೆ ಅವರ 'ಸತಿಪದ್ಧತಿ ಆಚರಣೆ' ಕೃತಿ ಮಹತ್ವದ ಆಕರ' ಎಂದರು.

'ಕಲ್ಬುರ್ಗಿ ಅವರ ವಿಮರ್ಶೆಯೂ ಒಂದು ಸೃಜನಶೀಲ ಕ್ರಿಯೆಯೇ ಆಗಿರುತ್ತದೆ. ಅವರ ಪತ್ನಿ ಶಿವಲೀಲಾ ಅವರು ಪ್ರಾಧ್ಯಾಪಕಿಯಾಗಿ, ಆಹಾರ ತಜ್ಞೆಯಾಗಿ ಸಮಾಜಕ್ಕೆ ಸೇವೆ ಸಲ್ಲಿಸಿದ್ದಾರೆ' ಎಂದು ಹೇಳಿದರು.

ಮಂಜುನಾಥ್ ಪಾಳ್ಯ ಅವರ ಕವನ ಸಂಕಲನ, 'ಹೆಪ್ಪುಗಟ್ಟಿದ ಮಾತುಗಳು' ಅನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿಕೆ

'4 ತಿಂಗಳಲ್ಲಿ 60 ಸಾವಿರ ಹುದ್ದೆ ಭರ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈಲ್ವೆ ಇಲಾಖೆಗೆ ಮುಂದಿನ ನಾಲ್ಕು ತಿಂಗಳಲ್ಲಿ 60 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತದೆ' ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಶನಿವಾರ ಆಯೋಜಿಸಿದ್ದ 'ಹೆಸರಾಯಿತು ಕರ್ನಾಟಕ–50ರ ಸಂಭ್ರಮ' ಮತ್ತು ಪ್ರತಿಜ್ಞಾ ಸ್ವೀಕಾರ ಸಮಾವೇಶದಲ್ಲಿ ಅವರು ಮಾತನಾಡಿದರು.

'ರೈಲ್ವೆ ಇಲಾಖೆಯ ನೇಮಕಾತಿಗಳಿಗೆ ಹಿಂದಿ ಭಾಷೆಯಲ್ಲಿ ಮಾತ್ರ ಪರೀಕ್ಷೆಗಳು ನಡೆಯುತ್ತಿದ್ದವು. ನಾನು ಸಚಿವನಾದ ಮೇಲೆ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಯಿತು. ಈ ಸೌಲಭ್ಯ ಲಭ್ಯವಾಗಲು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ಅವರ

'ಹೆಸರಾಯಿತು ಕರ್ನಾಟಕ– 50'ರ ಸಂಭ್ರಮದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ ಗೌಡ ಅಭಿನಂದಿಸಿದರು. ವಿನಯ್ ಗುರೂಜಿ, ಸಾಹಿತಿ ಆರ್.ಕೆ. ನಲ್ಲೂರು ಪ್ರಸಾದ್ ಉಪಸ್ಥಿತರಿದ್ದರು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ನಿರಂತರ ಹೋರಾಟವೂ ಕಾರಣ. ಇದನ್ನು ಬಳಸಿಕೊಂಡು ಶೇ 20ರಿಂದ ಶೇ 25ರಷ್ಟು ಕನ್ನಡಿಗರು ಆಯ್ಕೆಯಾದರೆ ಹೋರಾಟದ ಶ್ರಮ ಸಾರ್ಥಕವಾಗುತ್ತದೆ' ಎಂದು ಸಚಿವ ಸೋಮಣ್ಣ ಹೇಳಿದರು.

'ಕನ್ನಡ, ಕರ್ನಾಟಕಕ್ಕಾಗಿ ನಾರಾಯಣಗೌಡರು ಮೂರು ದಶಕಗಳಿಂದ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಅವರ ಹೋರಾಟದ ಫಲವಾಗಿ ಅನೇಕ ಸವಲತ್ತುಗಳು ಕನ್ನಡಿಗರಿಗೆ ದಕ್ಕಿವೆ. ರಕ್ಷಣಾ ವೇದಿಕೆ ಮತ್ತು ಗೌಡರ ದೂರದೃಷ್ಟಿ ಮತ್ತು ಚಿಂತನೆಗಳ ಸಾಕಾರಕ್ಕೆಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಯಾವತ್ತೂ ಸ್ಪಂದಿಸುತ್ತದೆ' ಎಂದು ಹೇಳಿದರು.

ರೈಲ್ವೆ ಇಲಾಖೆಯ ವಿವಿಧ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಿರುವ ವಿ.ಸೋಮಣ್ಣ ಅವರಿಗೆ ವಿಶೇಷ ಅಭಿನಂದನೆ ಸಲ್ಲಿಸಲಾಯಿತು. ಡಂಬಳ-ಗದಗದ ತೋಂಟದ ಸಿದ್ಧರಾಮ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರು ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹಾಗೂ ಗೌರಿಗದ್ದೆಯ ಸ್ವರ್ಣ ಪೀಠಿಕಾಪುರದ ವಿನಯ್ ಗುರೂಜಿ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಆರ್.ಕೆ. ನಲ್ಲೂರು ಪ್ರಸಾದ್ ಉಪಸ್ಥಿತರಿದ್ದರು.

ಮೂಲಸೌಕರ್ಯ ವಿಳಂಬ: ಪಿವಿಸಿ ಕಾರ್ಯಕರ್ತರಿಂದ ಪ್ರತಿಭಟನೆ

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಚಿಕ್ಕಬನಹಳ್ಳಿಯ ಅಂಬೇಡ್ಕರ್ ನಗರಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ವಂಚನೆ ಮಾಡುತ್ತಿರುವ ಗ್ರಾಮ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ' ಆಗ್ರಹಿಸಿ ಪ್ರಜಾ ವಿಮೋಚನಾ ಚಳವಳಿಯ (ಪಿವಿಸಿ) ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ನಗರದಿಂದ ದೊಡ್ಡಬನಹಳ್ಳಿಯ ಪಂಚಾಯಿತಿವರೆಗೆ ಕಾಲ್ನಡಿಗೆ ಜಾಥಾ ಮೂಲಕ ಮೆರವಣಿಗೆಯಲ್ಲಿ ತೆರಳಿದ ಕಾರ್ಯಕರ್ತರು ಗ್ರಾಮ ಪಂಚಾಯಿತಿ ಅಧ್ಯಕ್ಷ ಕೊನದಾಸಪುರ ಎನ್.ಲೋಕೇಶ್ ಅವರಿಗೆ ಮನವಿ ಸಲ್ಲಿಸಿದರು.

'ಚಿಕ್ಕಬನಹಳ್ಳಿಯ ಅಂಬೇಡ್ಕರ್ ನಗರದಲ್ಲಿ ಹಲವು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇಲ್ಲಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತರ 200ಕ್ಕೂ ಹೆಚ್ಚು ಮನೆಗಳಿವೆ. ಆದರೆ, ಇಲ್ಲಿ ಕುಡಿಯುವ ನೀರು,

ಪಿವಿಸಿಯ ಕಾರ್ಯಕರ್ತರು ಗ್ರಾ.ಪಂ. ಅಧ್ಯಕ್ಷ ಕೊನದಾಸಪುರ ಎನ್. ಲೋಕೇಶ್ ಅವರಿಗೆ ಮನವಿ ಸಲ್ಲಿಸಿದರು

ರಸ್ತೆ, ಚರಂಡಿಯಂತಹ ಮೂಲ ಸೌಲಭ್ಯಗಳ ಕೊರತೆ ಇದೆ. ವಿದ್ಯುತ್ ಸಂಪರ್ಕಕ್ಕೆ ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ನೀಡದೆ ಅಧಿಕಾರಿಗಳು ವಂಚಿಸುತ್ತಿದ್ದಾರೆ' ಎಂದು ಪ್ರಜಾ ವಿಮೋಚನಾ ಚಳವಳಿಯ ರಾಜ್ಯ ಘಟಕದ ಅಧ್ಯಕ್ಷ ಆನೇಕಲ್ ಕೃಷ್ಣಪ್ಪ ಅವರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಅದೂರು.ಕೆ.ದೇವರಾಜ್, 'ಅಂಬೇಡ್ಕರ್ ನಗರಕ್ಕೆ ಮೂಲಸೌಕರ್ಯಗಳನ್ನು ಒದಗಿಸಲು ಗ್ರಾಮ ಪಂಚಾಯಿತಿ ಪಿಡಿಒ ಮತ್ತು ಕಾರ್ಯದರ್ಶಿ ಮೀನಮೇಷ ಎಣಿಸುತ್ತಿದ್ದಾರೆ. ಈ ಬಗ್ಗೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಣಾಧಿಕಾರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಇದೇ ರೀತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಪಂಚಾಯಿತಿ ಅಧ್ಯಕ್ಷ ಲೋಕೇಶ್, 'ಗ್ರಾಮ ಪಂಚಾಯಿತಿಯ ಮುಂದಿನ ಸಾಮಾನ್ಯ ಸಭೆಯಲ್ಲಿ ಮೂಲಸೌಕರ್ಯ ಒದಗಿಸುವ ಕುರಿತು ಸದಸ್ಯರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಪಿವಿಸಿ ಪದಾಧಿಕಾರಿಗಳಾದ ಎಸ್.ಕೆ.ಮಾದೇಶ್, ಗಣೇಶ್, ಹೆಬ್ಬಾಳ ಮುನಿರಾಜ್, ಹೊನ್ನಪ್ಪ, ವಿಜಯಕುಮಾರ್, ರವಿಕುಮಾರ್, ರಜಿಯಾಬೇಗಂ, ಗುಲಾಬ್ ಜಾನ್ ಸೇರಿದಂತೆ ಸ್ಥಳೀಯರು ಭಾಗವಹಿಸಿದ್ದರು.

ಬಾಗಲೂರು ಗ್ರಾ.ಪಂ ನೂತನ ಕಟ್ಟಡ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬಿಬಿಎಂಪಿ ವಿಶೇಷ ಅನುದಾನದಡಿಯಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆಯ ಶನಿ ಮಹಾತ್ಮಸ್ವಾಮಿ ದೇವಾಲಯದ ಮುಂಭಾಗದಲ್ಲಿ ನಿರ್ಮಿಸಿರುವ ಬಾಗಲೂರು ಗ್ರಾಮ ಪಂಚಾಯಿತಿಯ ನೂತನ ಕಟ್ಟಡವನ್ನು ಉದ್ಘಾಟಿಸಲಾಯಿತು.

ಒಟ್ಟು ಅಂದಾಜು ₹75 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ನೂತನ ಪಂಚಾಯಿತಿ ಕಟ್ಟಡದಲ್ಲಿ ಸಭಾಂಗಣ, ಅಧ್ಯಕ್ಷ, ಉಪಾಧ್ಯಕ್ಷರ ಕೊಠಡಿ, ಕಾರ್ಯದರ್ಶಿ, ಕರವಸೂಲಿಗಾರ, ಗಣಕಯಂತ್ರ ನಿರ್ವಾಹಕರ ಮತ್ತು ಅಭಿಲೇಖಾಲಯ ಕೊಠಡಿಗಳು ಹಾಗೂ ಶೌಚಾಲಯ ವ್ಯವಸ್ಥೆಯಿದೆ.

ಈ ವೇಳೆ ಮಾತನಾಡಿದ ಗ್ರಾಮಪಂಚಾಯಿತಿ ಅಧ್ಯಕ್ಷ ಎ.ಕೆಂಪೇಗೌಡ, ಒಟ್ಟು 26 ಸದಸ್ಯಬಲ ಹೊಂದಿರುವ ಪಂಚಾಯಿತಿಯ ಕಟ್ಟಡ ಇಲ್ಲಿಯವರೆಗೆ ಬಹಳ ಕಿರಿದಾಗಿತ್ತು. ಇದರಿಂದ ಸದಸ್ಯರ ಕಾರ್ಯಕಲಾಪಗಳು ಹಾಗೂ ಸಾರ್ವಜನಿಕರ ಕೆಲಸಗಳಿಗೂ ಸಮಸ್ಯೆಯಾಗುತ್ತಿತ್ತು. ಇದೀಗ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿರುವುದರಿಂದ ಹಲವು ವರ್ಷಗಳ ಸಮಸ್ಯೆಗೆ ಪರಿಹಾರ

ಫಲಾನುಭವಿಗಳಿಗೆ ಸಹಾಯಧನದ ಚೆಕ್ ವಿತರಿಸಲಾಯಿತು

ಸಿಕ್ಕಂತಾಗಿದೆ ಎಂದು ತಿಳಿಸಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣ ಸಮೀಪವಿರುವುದರಿಂದ ಬಾಗಲೂರು ಗ್ರಾಮವು ಇತ್ತೀಚೆಗೆ ವೇಗವಾಗಿ ಅಭಿವೃದ್ಧಿಹೊಂದುತ್ತಿದೆ. ಜನಸಂಖ್ಯೆಯೂ ಹೆಚ್ಚಾಗಿರುವುದರಿಂದ ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾದ ಅಗತ್ಯವಿದೆ. ಈ ದಿಸೆಯಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗಿದೆ. ಶೆಲ್ ಇಂಡಿಯಾ ಮಾರ್ಕೆಟ್ ಪ್ರೈ. ಲಿಮಿಟೆಡ್, ಸಾಹಸ್ ಸಂಸ್ಥೆ ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ನಿರ್ಮಿಸಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಚಾಲನೆ ನೀಡಲಾಗಿದ್ದು, ಕಸ ವಿಲೇವಾರಿ ಸಮಸ್ಯೆಗೆ ನಿವಾರಣೆ ಆಗಲಿದೆ ಎಂದರು.

ಗ್ರಾಮಪಂಚಾಯಿತಿ ಉಪಾಧ್ಯಕ್ಷೆ ರಫಿಯಾ ಸುಲ್ತಾನ್ ದಸ್ತಗಿರ್, ಸದಸ್ಯರಾದ ಬಿ.ಸಿ.ನಾಗರಾಜು, ಬಿ.ಎಸ್.ಪ್ರಭುಸ್ವಾಮಿ, ಹೇಮಲತಾ ಅನಿಲ್‌ಕುಮಾರ್, ಸೈಯದ್ ಶಬ್ಬೀರ್, ಪದ್ಮಾವತಿ ವೆಂಕಟರಾಜು, ಬಿ.ಸಿ. ಲೋಕೇಶ್, ನಾಗವೇಣಿ ಪಿಳ್ಳೇಗೌಡ, ಮಾಜಿ ಅಧ್ಯಕ್ಷರಾದ ಡಿ.ಜಗನ್ನಾಥ್, ವಿ.ನಂಜೇಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಿ.ಎ.ಗಿರೀಶ್, ಕೆಡಿಪಿ ಸದಸ್ಯ ಬಿ.ಕೆ.ನಾರಾಯಣಸ್ವಾಮಿ, ಭೂನ್ಯಾಯಮಂಡಳಿ ಸದಸ್ಯ ಮಾರೇನಹಳ್ಳಿ ನಾಗರಾಜು, ಸ್ಥಳೀಯ ಮುಖಂಡರಾದ ಸಿಂಗಹಳ್ಳಿ ವೆಂಕಟೇಶ್, ರಾಜಕುಮಾರ್ ಮತ್ತಿತರರು ಇದ್ದರು.

ಸವಲತ್ತು ವಿತರಣೆ

ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟನೆ ನಂತರ ಗ್ರಾಮ ಪಂಚಾಯಿತಿಯ 2024-25ನೇ ಸಾಲಿನ ಮೊದಲಸುತ್ತಿನ ಗ್ರಾಮ ಸಭೆಯಲ್ಲಿ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಿಸಲಾಯಿತು.

ಜಕ್ಕೂರಿನ ಎಂ.ಶ್ರೀನಿವಾಸ್ ಕುಟುಂಬದವರು ಕೊಡುಗೆಯಾಗಿ ನೀಡಿದ್ದ ಟ್ರ್ಯಾಕ್ಟರ್ ಅನ್ನು ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಡಿ.ಜಗನ್ನಾಥ್, ಪಂಚಾಯಿತಿಗೆ ಹಸ್ತಾಂತರಿಸಿದರು. ಅಲ್ಲದೆ ದಾನಿಗಳಿಂದ ಕೊಡುಗೆಯಾಗಿ ನೀಡಲಾದ ಚಿರಶಾಂತಿ ವಾಹನ, ಕಸವಿಲೇವಾರಿ ವಾಹನ ಹಾಗೂ ಗ್ರಾಮವಿಕಾಸ್ ಯೋಜನೆಯಡಿ ಶಾಸಕರ ಅನುದಾನದಡಿ ಟ್ರ್ಯಾಕ್ಟರ್ ಮತ್ತು ಟಾಟಾ ಏಸ್ ವಾಹನವನ್ನು ಇದೇ ವೇಳೆ ಪಂಚಾಯಿತಿಗೆ ಹಸ್ತಾಂತರಿಸಲಾಯಿತು. ವಿಶ್ವ ಶೌಚಾಲಯ ದಿನದ ಪ್ರಯುಕ್ತ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: CAO/CN/BNC/41/2024

ದಿನಾಂಕ: 23.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಶಿವಮೊಗ್ಗ – ಶಿಕಾರೀಪುರ ವಿಭಾಗದಲ್ಲಿರುವ ಶಿವಮೊಗ್ಗ ಟೌನ್ (ಟೈಪ್–2=60 ಘಟಕಗಳು, ಟೈಪ್–3=04 ಘಟಕಗಳು, ಟೈಪ್–4=01 ಘಟಕ), ಕೋಟೆಗಂಗೂರು (ಟೈಪ್–2=04 ಘಟಕಗಳು, ಟೈಪ್–3=01 ಘಟಕ), ರಾಮನಗರ (ಟೈಪ್–2=04 ಘಟಕಗಳು, ಟೈಪ್–3=01 ಘಟಕ), ಮಲ್ಲಾಪುರ (ಟೈಪ್–2=02 ಘಟಕಗಳು, ಟೈಪ್–3=01 ಘಟಕ), ಕೊರಳಹಟ್ಟಿ (ಟೈಪ್–2=02 ಘಟಕಗಳು, ಟೈಪ್–3=01 ಘಟಕ), ಶಿಕಾರೀಪುರ (ಟೈಪ್–2=12 ಘಟಕಗಳು, ಟೈಪ್–4=01 ಘಟಕ) ಇಲ್ಲಿ ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣಕ್ಕಾಗಿ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಸಂಯುಕ್ತ ಟೆಂಡರು ಹಾಗೂ ಕೋಟೆಗಂಗೂರಿನಲ್ಲಿ ಟವರ್ ವೇಗನ್ ಶೆಡ್ ಮತ್ತು ಟ್ರಾಕ್ ಮಶೀನ್ ರೆಸ್ಟ್ ರೂಮ್‌ಗಳ ನಿರ್ಮಾಣ (ಟೆಂಡರು ಉಲ್ಲೇಖ ಸಂ.: SMET-RNR-05)	ರೂ. 42,43,14,754/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.01.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು

PUB/665/AAF/PRB/SWR/2024-25

South Western Railway - SWR | SWRRLY | SWRRLY

ಕಲಬುರಗಿ: ಶಿಕ್ಷಕನಿಗೆ ₹53 ಲಕ್ಷ ವಂಚನೆ

ಕಲಬುರಗಿ: ಸರ್ಕಾರಿ ಕೆಲಸ ಹಾಗೂ ಎಲೆಕ್ಟ್ರಿಕ್ ಮೀಟರ್ ಗುತ್ತಿಗೆ ಕೊಡಿಸುವುದಾಗಿ ಶಿಕ್ಷಕನಿಗೆ ಆಮಿಷವೊಡ್ಡಿ, ಆತನಿಂದ ₹53.55 ಲಕ್ಷ ಪಡೆದು ವಂಚಿಸಿದ ಆರೋಪದಡಿ ಇಬ್ಬರ ವಿರುದ್ಧ ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತೋಷ ಕಾಲೊನಿ ನಿವಾಸಿ, ಖಾಸಗಿ ಶಾಲೆಯ ಶಿಕ್ಷಕ ಪುಂಡಲೀಕ ರಾಠೋಡ ಹಣ ಕಳೆದುಕೊಂಡ ಸಂತ್ರಸ್ತ. ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ರಾಜನಕೋಳೂರಿನ ಶಿವಪ್ಪ ಶಿವಾನಂದ ಹಾಗೂ ಸುರಪುರದ ರಾಯಪ್ಪ ಯಾದವ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 52/2024, ದಿನಾಂಕ: 23.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8246920	ಡ್ರಾಯಿಂಗ್ ನಂ. ಐಸಿಎಫ್/ಎಸ್‌ಕೆ3–5–6–014 ಆಲ್ಟ್ ಹೆಚ್ ಐಟಂ ನಂ. 5 ರಂತೆ ಮೆ. ಡೊರ್ಮಾ, ಮಾಡೆಲ್ ನಂ. ಐಟಿಎಸ್96 ಇಎನ್ 2–4 (ಅಥವಾ) ಮೆ. ಗೇಝ್ ಡೋರ್ ಟೆಕ್ನಾಲಜಿ ಮತ್ತು ಗ್ಲಾಸ್ ಸಿಸ್ಟಮ್ಸ್, ಗೇಝ್ ಬಾಕ್ಸರ್ ಗ್ರೇ.2–4 (ಅಥವಾ) ಮೆ. ಯೇಲ್, ಮಾಡೆಲ್ ನಂ. ವೈಐಸಿ 5324 ಸ್ಲಿಮ್ (ಅಥವಾ) ಸಾಮ್ರಾಟ್ ಎಸ್‌ಎಂಡಿಟಿಎಸ್96ವಿ ಮೇಕ್ ಓವರ್‌ಹೆಡ್ ಡಬಲ್ ಆಕ್ಟಿಂಗ್ ಕನ್ಸೀಲ್ಡ್ ಡೋರ್ ಕ್ಲೋಸರ್ ಉಪಕರಣದ ಪೂರೈಕೆ. (ಪರಿಮಾಣ: 1100 ನಂ.)

ಬಿಡ್‌ಗಳನ್ನು ಸಲ್ಲಿಸಲು/ ಬಿಡ್‌ನ ಕೊನೆಯ ದಿನಾಂಕ: 06.01.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/664/AAF/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಗಾಳಿ ಬಂದಾಗ ತ್ಯಾಜ್ಯದಿಂದ ಕಿರಿಕಿರಿ: ವಾಹನ ಸವಾರರ ದೂರು

ದಾಬಸ್ ಪೇಟೆ: ಕಸದ ಸಮಸ್ಯೆಗಿಲ್ಲ ಮುಕ್ತಿ!

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಪಟ್ಟಣದ ಆಜುಬಾಜಿನ ರಸ್ತೆ ಇಕ್ಕೆಲಗಳಲ್ಲಿ ಕಸ, ಅಲ್ಲಿ ಬೀದಿ ನಾಯಿಗಳು, ಬೀಡಾಡಿ ದನಗಳು ಆಹಾರ ಹುಡುಕುವುದು, ಕಿತ್ತಾಡುತ್ತಾ ರಸ್ತೆಗೆ ಬರುವುದು, ಗಾಳಿ ಬಂದಾಗ ತ್ಯಾಜ್ಯದಿಂದ ವಾಹನ ಸವಾರರಿಗೆ ಕಿರಿಕಿರಿ... ಈ ಎಲ್ಲ ಸಮಸ್ಯೆಗಳಿಗೆ ಬೇಗ ಮುಕ್ತಿ ಸಿಗಲಿ ಎಂದು ದಾಬಸ್‌ಪೇಟೆ ನಿವಾಸಿಗಳು ಆಗ್ರಹಿಸುತ್ತಿದ್ದಾರೆ.

ಪಟ್ಟಣದಿಂದ ಬೇರೆ ಬೇರೆ ಕಡೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗಳಲ್ಲಿ ಜನರು ಕಸ ತಂದು ಹಾಕುತ್ತಿದ್ದಾರೆ. ಅದು ವೇಗವಾಗಿ ಬೆಳೆಯುತ್ತಿದೆ. ಎಷ್ಟೇ ದಿನಗಳಾದರೂ ಆ ಕಸವನ್ನು ತೆರವು ಮಾಡುವತ್ತ ಪಂಚಾಯಿತಿಗಳು ಮುಂದಾಗುತ್ತಿಲ್ಲ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡಬೇಕಾದ ಸ್ಥಿತಿ ಇದೆ.

ಮಧುಗಿರಿ ರಸ್ತೆಯ ಲಕ್ಕೂರಿನ ರೈಲ್ವೆ ಬ್ರಿಡ್ಜ್ ಹತ್ತಿರ, ಶಿವಗಂಗೆ ಮಾರ್ಗದ ಎಸ್‌ಎಲ್‌ವಿ ಸೂಪರ್ ಮಾರ್ಕೆಟ್

ಲಕ್ಕೂರು ಬಳಿ ಕಸದಲ್ಲಿ ನಾಯಿಗಳು ಹಾಗೂ ಕರು

ಸಮೀಪ, ಬೆಂಗಳೂರು ರಸ್ತೆಯ ನೀಲಗಿರಿ ತೋಪಿನ ಬಳಿ, ತುಮಕೂರು ರಸ್ತೆಯ ವೇ ಬ್ರಿಡ್ಜ್‌ಗಳ ಸುತ್ತಮುತ್ತ ಕಸ ಬಿದ್ದಿರುತ್ತದೆ ನಿಡವಂದ ಗ್ರಾಮದ ಬಳಿ ಸರ್ವೀಸ್ ರಸ್ತೆ, ಎಲೆಕ್ಯಾತನಹಳ್ಳಿ ರಸ್ತೆಗಳಲ್ಲಿಯೂ ತ್ಯಾಜ್ಯ ಅವ್ಯಾಹತವಾಗಿ ಬಿದ್ದಿರುತ್ತದೆ.

'ಈ ಪ್ರದೇಶಗಳು ದಾಬಸ್ ಪೇಟೆ, ಆಗಲಕುಪ್ಪೆ ಹಾಗೂ ಹೊನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುತ್ತವೆ. ಮೂರು ಪಂಚಾಯಿತಿಗಳೂ ಕಸ ವಿಲೇವಾರಿ ಮಾಡಲು ವಿಫಲವಾಗಿವೆ' ಎನ್ನುತ್ತಾರೆ ಸಾರ್ವಜನಿಕರು.

'ಕಸ ಹಾಕಿದ ಜಾಗದಿಂದ ಒಂದೆರಡು ದಿನಗಳಲ್ಲಿ ಕಸ ಎತ್ತಬೇಕು. ಆದರೆ ವಾರ, ಹದಿನೈದು ದಿನ ಆದರೂ ಕಸ ಅಲ್ಲೇ ಬಿದ್ದಿರುತ್ತೆ' ಎಂದು

ಕಸ ಹೆಚ್ಚಾಗುತ್ತಿರುವ ಜಾಗದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಬೇಕು. ಹೊರಗಿನಿಂದ ಬಂದವರು, ಬ್ಯಾಚುಲರ್‌ಗಳು ರಾತ್ರಿ ಕಸ ಎಸೆಯುತ್ತಾರೆ

ರಾಮ್ ಕುಮಾರ್

ಸ್ಥಳೀಯ ನಿವಾಸಿ

ಮಾರುತಿ ದೂರಿದರು.

'ಮುಖ್ಯರಸ್ತೆ, ಗಲ್ಲಿ ರಸ್ತೆಗಳ ಬದಿ, ಖಾಲಿ ನಿವೇಶನಗಳು, ಸರ್ಕಾರಿ ಕಚೇರಿಗಳ ಜಾಗಗಳಲ್ಲಿ ಕಸದ ರಾಶಿಯ ದರ್ಶನವಾಗುತ್ತಿದೆ. ಹೋಬಳಿ ಕೇಂದ್ರವನ್ನು ಸ್ವಚ್ಛವಾಗಿಡಲು ಪಂಚಾಯಿತಿಗಳ ಆಡಳಿತವು ತಾತ್ಸಾರ ತೋರುತ್ತಿದೆ' ಎಂದು ಕಾರ್ಮಿಕ ರವಿಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

'ರಸ್ತೆ ಬದಿಗಳಲ್ಲಿ ಬಿದ್ದಿರುವ ತ್ಯಾಜ್ಯಕ್ಕೆ ರಾತ್ರಿ ವೇಳೆಯಲ್ಲಿ ಬೆಂಕಿ ಇಡಲಾಗುತ್ತಿದೆ. ಇದರಿಂದ ಕಸವೆಲ್ಲ ಸುಡುತ್ತಾ ಸುತ್ತಮುತ್ತ ಕೆಟ್ಟ ವಾಸನೆ ಸೂಸುತ್ತದೆ' ಎಂದು ಸಾರ್ವಜನಿಕರು ಆರೋಪಿಸಿದರು.

'ಕನ್ನಡದಲ್ಲಿ ಪ್ರಬಂಧ ಸಾಹಿತ್ಯದ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದಲ್ಲಿ ಪ್ರಬಂಧ ಸಾಹಿತ್ಯದ ಕೊರತೆ ತೀವ್ರವಾಗಿದೆ. ಹೊಸ ತಲೆಮಾರಿನ ಬರಹಗಾರರು ಸಾಹಿತ್ಯದ ಈ ಪ್ರಕಾರದತ್ತ ಗಮನ ಹರಿಸಬೇಕು' ಎಂದು ಲೇಖಕ ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಸಪ್ನ ಬುಕ್ ಹೌಸ್ ನಗರದಲ್ಲಿ ಶನಿವಾರ ಆಯೋಜಿಸಿದ್ದ 69 ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಹೊಸತಾಗಿ ಸಂಶೋಧನಾ ಕೃತಿಗಳನ್ನು ಬರೆಯುವವರಲ್ಲಿ ಸ್ಪಷ್ಟತೆ, ವಿಷಯದ ಖಚಿತತೆ ಕೊರತೆ ಕಾಣುತ್ತಿದೆ. ಇವೆರಡರಲ್ಲೂ ಸುಧಾರಣೆ ಕಾಣಬೇಕು' ಎಂದರು.

'ಹೊಸ ತಲೆಮಾರಿನ ಲೇಖಕರಲ್ಲಿ ಆತುರ ಕಾಣುತ್ತದೆ. ಕಥಾ ಸಂಕಲನ, ಕಾದಂಬರಿ, ಕವನ ಸಂಕಲನಗಳನ್ನು ಬರೆದು ಪ್ರಕಟಿಸುವಾಗಲೂ ಕರಡು ತಿದ್ದುವ ಪರಿಪಾಟ ಅವರಲ್ಲಿ ಇಲ್ಲ. ಪುಸ್ತಕ ಪ್ರಕಟಣೆಯಲ್ಲಿ ಈ ಅಂಶಗಳಿಗೂ ಗಮನ ನೀಡಬೇಕು' ಎಂದರು.

ರಾಜ್ಯದ ವಿವಿಧ ಭಾಗಗಳ, ವಿವಿಧ ಕ್ಷೇತ್ರಗಳ ಒಟ್ಟು 69 ಲೇಖಕರನ್ನು ಆಯ್ಕೆ ಮಾಡಿಕೊಂಡು, ಪ್ರಕಟಿಸಲಾಗಿರುವ 69 ಕೃತಿಗಳನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಚಿನ್ನದಂಗಡಿ ಮಾಲಕಿಗೆ ₹9.82 ಕೋಟಿ ಮೌಲ್ಯದ ಚಿನ್ನ ವಂಚನೆ ಪ್ರಕರಣ

ಐಶ್ವರ್ಯಾ, ಪತಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ತಂಗಿ ಎಂದು ನಂಬಿಸಿ ಚಿನ್ನ ಪಡೆದು ವಂಚಿಸಿದ ಪ್ರಕರಣದ ಆರೋಪಿಗಳಾದ ಐಶ್ವರ್ಯಾ ಗೌಡ ಹಾಗೂ ಆಕೆಯ ಪತಿ ಕೆ.ಎನ್. ಹರೀಶ್ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ವಿಚಾರಣೆಗೆ ಹಾಜರಾಗಿದ್ದ ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದ ಚಂದ್ರಾ ಲೇಔಟ್ ಠಾಣೆ ಪೊಲೀಸರು ಕೋರಮಂಗಲದ ರಾಷ್ಟ್ರೀಯ ಕ್ರೀಡಾ ಗ್ರಾಮದಲ್ಲಿರುವ ನ್ಯಾಯಾಧೀಶರ ನಿವಾಸಕ್ಕೆ ತೆರಳಿ ಹಾಜರುಪಡಿಸಿದ್ದರು. ಇಬ್ಬರೂ ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ.

ವನಿತಾ ಎಸ್. ಐತಾಳ್ ಅವರಿಗೆ ಕರೆ ಮಾಡಿ ಡಿ.ಕೆ.ಸುರೇಶ್ ಅವರ ಧ್ವನಿಯಲ್ಲಿ ಮಾತನಾಡಿದ ಆರೋಪ ಎದುರಿಸುತ್ತಿರುವ ಕನ್ನಡ ನಟ ಧರ್ಮೇಂದ್ರ, ಬಂಧನದ ಭೀತಿಯಿಂದ ತಲೆಮರೆಸಿಕೊಂಡಿದ್ದು, ಪೊಲೀಸರು ಶೋಧ ಆರಂಭಿಸಿದ್ದಾರೆ.

‘ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಿ’

‘ನನಗೂ, ಐಶ್ವರ್ಯಾ ಗೌಡಗೂ ಯಾವುದೇ ಸಂಬಂಧವಿಲ್ಲ. ಯಾವುದೇ ವ್ಯವಹಾರವನ್ನೂ ನಡೆಸುತ್ತಿಲ್ಲ. ನನಗೆ ಇರುವುದು ಒಬ್ಬರೇ ತಂಗಿ’ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿಳಿಸಿದ್ದಾರೆ.

‘ನನ್ನ ಹೆಸರು ದುರುಪಯೋಗಪಡಿಸಿಕೊಂಡು ವಂಚನೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳನ್ನು ನೋಡಿದ್ದೇನೆ. ಯಾರೇ ಈ ರೀತಿ ಮಾಡಿದ್ದರೂ ಆ ಬಗ್ಗೆ ಸಮಗ್ರ ತನಿಖೆ ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು. ಯಾರಿಗೆ ಅನ್ಯಾಯ ಆಗಿದೆಯೋ ಅವರಿಗೆ ನ್ಯಾಯ ಕೊಡಿಸುವಂತೆ ಎರಡು-ಮೂರು ದಿನಗಳಲ್ಲಿ ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆಯುತ್ತೇನೆ’ ಎಂದು ಹೇಳಿದರು.

‘ಅಣ್ಣಮ್ಮದೇವಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದರಿಂದ ಭಾಗವಹಿಸಿದ್ದೆ. ಅದನ್ನು ಹೊರತು ಪಡಿಸಿದರೆ ಅವರ ಸಂಪರ್ಕ ಇಲ್ಲ’ ಎಂದರು.

ಅಪರಾಧ ಸುದ್ದಿ

ದೂರುದಾರರಾದ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿಯ ಮಾಲಕಿ ವನಿತಾ ಎಸ್. ಐತಾಳ್ ಅವರು ಸಹ ವಿಚಾರಣೆಗೆ ಹಾಜರಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿದರು. ಚಿನ್ನ ಖರೀದಿಗೆ ಸಂಬಂಧಿಸಿದಂತೆ ದಾಖಲೆಗಳು ಹಾಗೂ ಆಡಿಯೊ ಕ್ಲಿಪಿಂಗ್‌ಗಳನ್ನು ಪೊಲೀಸರಿಗೆ ನೀಡಿರುವುದಾಗಿ ತಿಳಿಸಿದರು.

ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿಯೆಂದು ನಂಬಿಸಿ ಖರೀದಿ ನೆಪದಲ್ಲಿ ₹9.82 ಕೋಟಿ ಮೌಲ್ಯದ 14 ಕೆ.ಜಿ. 660 ಗ್ರಾಂ ಚಿನ್ನ ವಂಚಿಸಿದ್ದಾರೆ ಎಂದು ವನಿತಾ ಎಸ್. ಐತಾಳ್ ಅವರು ನೀಡಿದ ದೂರಿನನ್ವಯ ಐಶ್ವರ್ಯಾ ಗೌಡ, ಹರೀಶ್ ಕೆ. ಎನ್ ಹಾಗೂ ಧರ್ಮೇಂದ್ರ ಬಿ. ವಿರುದ್ಧ ಚಂದ್ರಾ ಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

‘ಸುಟ್ಟ ಕೂದಲು ವಾಪಸ್ ಬಂತಾ?’

ಬೆಂಗಳೂರು: ‘ಮೊಟ್ಟೆ ಎಸೆದ ಪ್ರಕರಣದಲ್ಲಿ ಶಾಸಕ ಮುನಿರತ್ನ ಅವರನ್ನು ಪರೀಕ್ಷೆ ಮಾಡಿದ್ದ ದೊಡ್ಡ ಡಾಕ್ಟರ್, ಕೂದಲು ಸುಟ್ಟಿದೆ ಎಂದಿದ್ದರು. ನಿನ್ನೆ ಅವರ ವಿಡಿಯೊದಲ್ಲಿ ಕೂದಲು ಇತ್ತು. ಅದು ಹೇಗೆ ವಾಪಸ್ ಬಂತು’ ಎಂದು ಸಂಸದ ಡಿ.ಕೆ. ಸುರೇಶ್ ಪ್ರಶ್ನಿಸಿದರು.

ಡಿ.ಕೆ. ಸುರೇಶ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುನಿರತ್ನ ಅವರು ಸಿ.ಟಿ. ರವಿ ಅವರನ್ನು ಭೇಟಿ ಮಾಡಿ ಅವರ ಮನೆಯಿಂದ ಹೊರಗೆ ಬಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದಾಗ ಅವರಿಗೆ ಕೂದಲು ಇತ್ತು. ತಲೆಗೆ ಟೋಪನ್ ಹಾಕಿದ್ದಾರೋ ಅಥವಾ ನಿಜವಾದ ಕೂದಲು ಇಟ್ಟುಕೊಂಡಿದ್ದಾರೋ ಪರೀಕ್ಷೆಯಾಗಲಿ’ ಎಂದು ಹೇಳಿದರು.

‘ಬಿಜೆಪಿ ಶಾಸಕರು, ನನ್ನ ಮೇಲೆ, ನನ್ನ ಸಹೋದರ ಹಾಗೂ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಕುಸುಮಾ ಹಾಗೂ ಅವರ ತಂದೆ ವಿರುದ್ಧ ನೇರ ಆರೋಪ ಮಾಡಿದ್ದಾರೆ. ಈ ವಿಡಿಯೊ ಅತ್ಯುತ್ತಮವಾಗಿ ಮೂಡಿ ಬಂದಿದೆ. ಆ್ಯಸಿಡ್ ದಾಳಿ ಎಂದ ಮೂರು ಸೆಕೆಂಡ್‌ನಲ್ಲಿ ಮೊಟ್ಟೆ ಎಸೆಯಲಾಗಿದೆ. ಚಿತ್ರಕಥೆ ತಿರುಚುವ ಕೆಲಸ ಮಾಡಿದ್ದ ನಿರ್ಮಾಪಕ ಮುನಿರತ್ನ, ಈಗ ತಾವೇ ನಟನೆಗೂ ಇಳಿದಿದ್ದಾರೆ. ಮುನಿರತ್ನ ಅಭಿನಯದ ‘ಆ್ಯಸಿಡ್ ಮೊಟ್ಟೆ’ ಸಿನಿಮಾವನ್ನು ನೂರು ದಿನ ಓಡಿಸಿ’ ಎಂದರು.

‘ಈ ಪ್ರಕರಣವನ್ನು ಸಿಬಿಐಗೆ ನೀಡಲಿ. ಗೃಹಮಂತ್ರಿಗೆ ಪತ್ರ ಬರೆದು ಎಸ್‌ಪಿಜಿ ಭದ್ರತೆಯನ್ನೇ ಪಡೆಯಲಿ. ಅವರ ಬಳಿಯಿದ್ದ ರಘು ಎಂಬ ಚಾಲಕ ಏನಾದ ಎಂದು ತಿಳಿಯಬೇಕಲ್ಲವೇ? ಮತ್ತೊಬ್ಬ ಮಲ್ಲತ್ತಹಳ್ಳಿ ರಂಜಿತ್ ಎಂಬ ಹುಡುಗನ ಕೈ- ಕಾಲು ಮುರಿಯಲಾಗಿದೆ. ಈ ಪ್ರಕರಣಗಳ ಬಗ್ಗೆಯೂ ಸಿಬಿಐ ತನಿಖೆಯಾಗಲಿ’ ಎಂದರು.



RAMRAJ COTTON SHOWROOMS
BANGALORE : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR • MARATHAHALLI • KR PURAM KENGERI • HESARAGATTA • YELHANKA • NELAMANGALA • DEVANAHALLI • CHINTAMANI • KANAKAPURA • RAMNAGARA • TUMKUR CHANDAPURA • CHAMBENAHALLI (SARJAPURA MAIN ROAD) • ATTIBELE • SINGANAIKANAHALLI • NEW THIPPASANDRA
Available at Ramraj Showrooms and All Leading Textile Shops | shop online @ www.ramrajcotton.in

ಬ್ಯಾಂಕ್ ವ್ಯವಸ್ಥಾಪಕ ಸೇರಿ ನಾಲ್ವರ ಸೆರೆ

17 ಖಾತೆಗಳಿಗೆ ₹12.50 ಕೋಟಿ ವರ್ಗಾವಣೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿಯ ಇಂಟರ್‌ನೆಟ್ ಆ್ಯಕ್ಸೆಸ್ ಕಳವು ಮಾಡಿ ₹12.50 ಕೋಟಿ ವಂಚನೆ ಎಸಗಿದ್ದ ಆರೋಪದಡಿ ಎಕ್ಸಿಸ್ ಬ್ಯಾಂಕ್ ವ್ಯವಸ್ಥಾಪಕ ಸೇರಿ ನಾಲ್ವರು ಆರೋಪಿಗಳನ್ನು ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುಜರಾತ್‌ನ ನೇಹಾ ಬೆನ್, ಶುಭಂ, ವೈಭವ್ ಪಿತಾಡಿಯಾ, ಶೈಲೇಶ್ ಅವರನ್ನು ಬಂಧಿಸಿ, ಎರಡು ಮೊಬೈಲ್, ನಕಲಿ ಸಿಐಬಿ (ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್) ಫಾರಂ ಮತ್ತು ₹1.83 ಕೋಟಿ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಮೂಲದ ಸಿಆರ್‌ಇಡಿ ಕಂಪನಿಯ ನೋಡಲ್ ಮತ್ತು ಕರೆಂಟ್ ಬ್ಯಾಂಕ್ ಖಾತೆಗಳು, ಎಕ್ಸಿಸ್ ಬ್ಯಾಂಕ್ ಇಂದಿರಾನಗರ ಶಾಖೆಯಲ್ಲಿವೆ. ಈ ಖಾತೆಗಳಿಗೆ ಲಿಂಕ್ ಇರುವ ಇ-ಮೇಲ್ ಮತ್ತು ಮೊಬೈಲ್ ನಂಬರ್ ಹಾಗೂ ಕಂಪನಿಯ ಮಾಹಿತಿಯ ದತ್ತಾಂಶವನ್ನು ಆರೋಪಿಗಳು ಕಳವು ಮಾಡಿದ್ದರು. ಬಳಿಕ ಸಿಐಬಿ ಫಾರ್ಮ್‌ಗಳನ್ನು ನಕಲು ಮಾಡಿ, ಈ ಫಾರ್ಮ್‌ಗಳಲ್ಲಿ ಸಹಿ ಮತ್ತು ಸೀಲುಗಳನ್ನು ಸಹ ನಕಲು ಮಾಡಿ ಕಂಪನಿಗೆ ಸಂಬಂಧಿಸಿದ ₹12.51 ಕೋಟಿ ಅನ್ನು 17 ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದರು. ಈ ವಿಚಾರ ಗೊತ್ತಾಗಿ ಕಂಪನಿಯ ಮುಖ್ಯಸ್ಥರು ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು.

ತನಿಖೆ ಕೈಗೊಂಡ ಪೊಲೀಸರಿಗೆ ಆರೋಪಿ ವೈಭವ್ ಗುಜರಾತ್‌ನಲ್ಲಿ ಎಕ್ಸಿಸ್ ಬ್ಯಾಂಕ್‌ನ ಕಾರ್ಪೊರೇಟ್ ವಿಭಾಗದ ಮ್ಯಾನೇಜರ್ ಆಗಿದ್ದಾರೆಂದು ಗೊತ್ತಾಯಿತು. ದೂರುದಾರರ ಕಂಪನಿಯ ಖಾತೆಗಳ ದತ್ತಾಂಶವನ್ನು ಆರೋಪಿಗಳು ಕಳವು ಮಾಡಿ, ಇತರೆ ಆರೋಪಿಗಳೊಂದಿಗೆ ಸೇರಿಕೊಂಡು ನಕಲಿ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಫಾರ್ಮ್ ಹಾಗೂ ಕಂಪನಿಯ ಬೋರ್ಡ್ ರೆಸಲ್ಯೂಷನ್ ದಾಖಲೆ ಸೃಷ್ಟಿಸಿರುವುದು ಪತ್ತೆಯಾಗಿತ್ತು.

ನಂತರ ಬರೂಚ್ ಜಿಲ್ಲೆಯ ಅಂಕಲೇಶ್ವರದ ಎಕ್ಸಿಸ್ ಬ್ಯಾಂಕ್‌ನಲ್ಲಿ ಸಲ್ಲಿಸಿದ್ದರು. ಅಲ್ಲಿಂದ ದೂರುದಾರರ ಕಂಪನಿಯ ನೋಡಲ್ ಬ್ಯಾಂಕ್ ಖಾತೆಗಳ ಇಂಟರ್‌ನೆಟ್ ಬ್ಯಾಂಕಿಂಗ್ ವಶಕ್ಕೆ ತೆಗೆದುಕೊಂಡು, ಗುಜರಾತ್ ಮತ್ತು ರಾಜಸ್ಥಾನದ 17 ಬ್ಯಾಂಕ್ ಖಾತೆಗಳಿಗೆ ಒಟ್ಟು ₹12.50 ಕೋಟಿ ವರ್ಗಾಯಿಸಿಕೊಂಡು ಮೋಸ ಮಾಡಿರುವುದು ತನಿಖೆಯಲ್ಲಿ ಕಂಡು ಬಂದಿತ್ತು.

ಆರೋಪಿತರನ್ನು ಗುಜರಾತ್‌ನಲ್ಲಿ ವಶಕ್ಕೆ ಪಡೆದು ನಗರಕ್ಕೆ ಕರೆತಂದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂವರು ಸಬ್ ರಿಜಿಸ್ಟ್ರಾರ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯಮ ಮೀರಿ ಆಸ್ತಿ ನೋಂದಣಿ ಮಾಡಿದ ಆರೋಪದ ಮೇಲೆ ಬೆಂಗಳೂರು ನಗರ ವ್ಯಾಪ್ತಿಯ ಮೂವರು ಉಪ ನೋಂದಣಾಧಿಕಾರಿಗಳನ್ನು ಅಮಾನತು ಮಾಡಿ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಜಿಗಣಿಯ ಅಂಜಲಿ, ಹೆಸರಘಟ್ಟದ ಮಂಜುನಾಥ್ ಹಾಗೂ ಕಾಚರಕನಹಳ್ಳಿಯ ರೂಪ ಅಮಾನತುಗೊಂಡವರು.

ನೋಂದಣಿ ಮಾಡದಂತೆ ಸುಪ್ರೀಂ ಕೋರ್ಟ್ ಆದೇಶವಿದ್ದರೂ ಅಂಜಲಿ ಅವರು ಖಾಸಗಿ ಸಂಸ್ಥೆಯೊಂದಕ್ಕೆ ಸ್ವತ್ತು ನೋಂದಣಿ ಮಾಡಿಕೊಟ್ಟಿದ್ದಾರೆ. ಮಂಜುನಾಥ್ ಹಾಗೂ ರೂಪ ಅವರು ಇ-ಖಾತಾ ಕಡ್ಡಾಯ ಆದೇಶವನ್ನು ಪಾಲಿಸದೆ ಹಳೆಯ ವ್ಯವಸ್ಥೆ ಅಡಿ ನೋಂದಣಿ ಮಾಡುವ ಮೂಲಕ ಖಾಸಗಿ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ಆದೇಶದಲ್ಲಿ ವಿವರಿಸಲಾಗಿದೆ.

ಹೂತಿದ್ದ ಶವ ಹೊರತೆಗೆದು ಮರಣೋತ್ತರ ಪರೀಕ್ಷೆ

ಚಿಂತಾಮಣಿ: ತಾಲ್ಲೂಕಿನ ಕೈವಾರದಲ್ಲಿ ಹೂತಿಟ್ಟಿದ್ದ ಶವವನ್ನು ಹೊರತೆಗೆದು ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಿದರು.

ಪತಿಯ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಪೋಷಕರೇ ಪತಿಯನ್ನು ಕೊಲೆ ಮಾಡಿದ್ದಾರೆ ಎಂದು ಪತ್ನಿ ಜಿಲ್ಲಾ ಎಸ್ಪಿಗೆ ದೂರು ನೀಡಿದ್ದ ಹಿನ್ನೆಲೆಯಲ್ಲಿ ಪರೀಕ್ಷೆ ನಡೆಸಲಾಗಿದೆ.

ಕೈವಾರ ಗ್ರಾಮದ ಚೌಡಪ್ಪ ಅವರ ಮಗ ಶಶಿಕುಮಾರ್‌ಗೆ ಕುಡಿತದ ಚಟವಿತ್ತು. ಆತ ಪೋಷಕರೊಡನೆ ಜಗಳ ಮಾಡಿಕೊಂಡು ಅ.20 ರಂದು ಗ್ರಾಮದ ಹೊರವಲಯದಲ್ಲಿ ಮೃತಪಟ್ಟಿದ್ದರು.

ಪೋಷಕರು ಪೊಲೀಸರ ಗಮನಕ್ಕೆ ತಾರದೆ ಅಂತ್ಯಸಂಸ್ಕಾರ ನಡೆಸಿದ್ದರು. ಪತ್ನಿಗೆ ₹2 ಲಕ್ಷ ನೀಡುವುದಾಗಿ ಸಮಾಧಾನಪಡಿಸಿ ತವರು ಮನೆಗೆ ಕಳುಹಿಸಿದ್ದರು. ಪತ್ನಿಗೆ ಅನುಮಾನ ಬಂದು ಚಿಕ್ಕಬಳ್ಳಾಪುರ ಎಸ್ಪಿಗೆ ದೂರು ನೀಡಿದ್ದರು.

वित्त मंत्रालय
MINISTRY OF FINANCE
सत्यमेव जयते

ಜಿಎಸ್‌ಟಿ ತೆರಿಗೆ ಪಾವತಿದಾರರೇ

ಗಮನಿಸಿ!

ದಯವಿಟ್ಟು ನಿಮ್ಮ ಹ.ವ. 2023–2024ನೇ ಸಾಲಿನ ವಾರ್ಷಿಕ ರಿಟರ್ನ್ ಅನ್ನು ಫಾರಂ ಜಿಎಸ್‌ಟಿಆರ್–9* ಮತ್ತು ಫಾರಂ ಜಿಎಸ್‌ಟಿಆರ್–9ಸಿ# ನಮೂನೆಯಲ್ಲಿ ಸಲ್ಲಿಸಿರಿ

ಕೊನೆಯ ದಿನಾಂಕ
ಡಿಸೆಂಬರ್ 31
2024

CBC 15502/13/0004/2425

*ಫಾರಂ ಜಿಎಸ್‌ಟಿಆರ್–9 ನಮೂನೆಯಲ್ಲಿ ಸಲ್ಲಿಸಬೇಕಾದ ತೆರಿಗೆ ಪಾವತಿದಾರರು	*ಫಾರಂ ಜಿಎಸ್‌ಟಿಆರ್–9ಸಿ ನಮೂನೆಯಲ್ಲಿ ಸಲ್ಲಿಸಬೇಕಾದ ತೆರಿಗೆ ಪಾವತಿದಾರರು
ವಾರ್ಷಿಕ ಸರಾಸರಿ ರೂ.2 ಕೋಟಿಗೂ ಮೇಲ್ಪಟ್ಟ ವಹಿವಾಟು ಹೊಂದಿರುವ (ಹ.ವ. 2023–2024ರ ಅವಧಿಯಲ್ಲಿ) ಎಲ್ಲಾ ಜಿಎಸ್‌ಟಿ ತೆರಿಗೆ ಪಾವತಿದಾರರು, ಕೆಳಗಿನವರನ್ನು ಹೊರತುಪಡಿಸಿ: » ಇನ್‌ಪುಟ್ ಸರ್ವೀಸ್ ಡಿಸ್ಟ್ರಿಬ್ಯೂಟರ್ » ಕ್ಯಾಷುಯಲ್ ಟ್ಯಾಕ್ಸೇಬಲ್ ಪರ್ಸನ್ » ಟಿಡಿಸ್ ಡಿಡಕ್ಟರ್ » ಟಿಡಿಎಸ್ ಕಲೆಕ್ಟರ್ » ತೆರಿಗೆಗೆ ಒಳಪಡುವ ಅನಿವಾಸಿ ವ್ಯಕ್ತಿ	ವಾರ್ಷಿಕ ಸರಾಸರಿ ರೂ. 5 ಕೋಟಿಗೂ ಮೇಲ್ಪಟ್ಟ ವಹಿವಾಟು ಹೊಂದಿರುವ (ಹ.ವ. 2023–2024ರ ಅವಧಿಯಲ್ಲಿ) ತೆರಿಗೆ ಪಾವತಿದಾರರು, ತಮ್ಮ ವಾರ್ಷಿಕ ರಿಟರ್ನ್ ಅನ್ನು ಫಾರಂ ಜಿಎಸ್‌ಟಿಆರ್–9 ನಮೂನೆಯಲ್ಲಿ ಸಲ್ಲಿಸುವುದರ ಜೊತೆಗೆ, ಫಾರಂ ಜಿಎಸ್‌ಟಿಆರ್–9ಸಿ ನಮೂನೆಯಲ್ಲಿನ ಸ್ವಯಂ-ಪ್ರಮಾಣೀಕೃತ ಸಮನ್ವಯ ಹೇಳಿಕೆಯನ್ನು ಫೈಲ್ ಮಾಡಬೇಕು.

ಫಾರಂ ಜಿಎಸ್‌ಟಿಆರ್–9 ಮತ್ತು ಫಾರಂ ಜಿಎಸ್‌ಟಿಆರ್–9ಸಿ ಸಲ್ಲಿಕೆ ವಿಳಂಬವಾದಲ್ಲಿ ವಿಳಂಬ ಶುಲ್ಕ ವಿಧಿಸಲಾಗುತ್ತದೆ

ಜಿಎಸ್‌ಟಿ ವಾರ್ಷಿಕ ರಿಟರ್ನ್ ವಿವರಗಳಿಗಾಗಿ ದಯವಿಟ್ಟು ಸ್ಕ್ಯಾನ್ ಮಾಡಿರಿ

Central Board of Indirect Taxes and Customs
@cbicindia @cbic_india @cbicindia @CBICINDIA @CBIC india www.cbic.gov.in

ಚಾಕು ತೋರಿಸಿ ಹಣ, ಚಿನ್ನ ದರೋಡೆ

ಮಹಿಳೆಗೆ ಬೆದರಿಕೆ: ರೌಡಿಶೀಟರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಗೆ ಚಾಕು ತೋರಿಸಿ ಹಣ, ಚಿನ್ನ ಸುಲಿಗೆ ಮಾಡಿದ್ದಲ್ಲದೇ, ಆಕೆಯ ಜತೆಗಿನ ಖಾಸಗಿ ಕ್ಷಣಗಳ ಫೋಟೊ, ವಿಡಿಯೊಗಳನ್ನು ಜಾಲತಾಣದಲ್ಲಿ ಹರಿಯಬಿಡುವುದಾಗಿ ಬೆದರಿಸಿದ ಆರೋಪದ ಮೇಲೆ ರೌಡಿಶೀಟರ್ ಸುರೇಶ್ ವಿರುದ್ಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

37 ವರ್ಷದ ಸಂತ್ರಸ್ತ ಮಹಿಳೆ ನೀಡಿರುವ ದೂರಿನ ಮೇರೆಗೆ ಪ್ರಕರಣವೊಂದರಲ್ಲಿ ಜೈಲಿನಲ್ಲಿರುವ ರೌಡಿಶೀಟರ್ ಸುರೇಶ್ ಅಲಿಯಾಸ್ ಕುಣಿಗಲ್ ಸೂರಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬಾಡಿ ವಾರಂಟ್ ಪಡೆದು ಆರೋಪಿಯ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಜಾಲತಾಣದಲ್ಲಿ ಖಾಸಗಿ ಕ್ಷಣಗಳ ವಿಡಿಯೊ ಹರಿಯ ಬಿಡುವುದಾಗಿ ಬೆದರಿಕೆ
- ಮೊಬೈಲ್ ಫೋನ್, ಕಾರು 18 ಗ್ರಾಂ ಚಿನ್ನದ ಓಲೆ ದೋಚಿ ಪರಾರಿ

‘ಕ್ಯಾಬ್ ಚಾಲಕನೆಂದು ಸುಳ್ಳು ಹೇಳಿ ಸಂತ್ರಸ್ತೆಗೆ ಸೇರಿದ ಮನೆಯನ್ನು ಭೋಗ್ಯಕ್ಕೆ ಪಡೆದು ಹಲವು ವರ್ಷಗಳಿಂದ ಆರೋಪಿ ವಾಸವಿದ್ದ. ಮಹಿಳೆಯ ಸ್ನೇಹ ಸಂಪಾದಿಸಿ ಸಲುಗೆಯಿಂದಿದ್ದ. ಆಕೆಯ ವಿರೋಧದ ನಡುವೆಯೂ ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊ ಸೆರೆಹಿಡಿದುಕೊಂಡಿದ್ದ. ಆರೋಪಿಯ ಮೊಬೈಲ್‌ನಲ್ಲಿ ಹಲವು ಮಹಿಳೆಯರ ಖಾಸಗಿ ವಿಡಿಯೊ, ಫೋಟೊಗಳು ಇರುವುದನ್ನು ಗಮನಿಸಿದ್ದ ಸಂತ್ರಸ್ತೆ, ಆತನೊಂದಿಗೆ ಗಲಾಟೆ ಮಾಡಿಕೊಂಡು ನಿರ್ಲಕ್ಷಿಸಲಾರಂಭಿಸಿದ್ದಳು ಎಂಬುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಇದರಿಂದ ಕೋಪಗೊಂಡ ಆರೋಪಿ, ಮಹಿಳೆಯ ಖಾಸಗಿ ಫೋಟೊ, ವಿಡಿಯೊಗಳನ್ನು ಆಕೆಯ ಪತಿ ಮತ್ತು ಸಂಬಂಧಿಕರಿಗೆ ಕಳುಹಿಸಿ ಮಾನಹಾನಿ ಮಾಡಿದ್ದಾನೆ. ನ. 30 ರಂದು ವಾಲ್ಮೀಕಿ ಸರ್ಕಲ್ ಬಳಿ ಮಹಿಳೆಯನ್ನು ಅಡ್ಡಗಟ್ಟಿದ್ದ ಆರೋಪಿ, ಚಾಕು ತೋರಿಸಿ ಬೆದರಿಸಿ ಮೊಬೈಲ್ ಫೋನ್, ಕಾರು ಹಾಗೂ 18 ಗ್ರಾಂ ಚಿನ್ನದ ಓಲೆ ದೋಚಿ ಪರಾರಿ ಆಗಿದ್ದಾನೆಂದು ದೂರಿನಲ್ಲಿ ತಿಳಿಸಲಾಗಿದೆ.

ಪ್ರಕರಣ ದಾಖಲಿಸಿಕೊಂಡ ಬ್ಯಾಡರಹಳ್ಳಿ ಠಾಣೆ ಪೊಲೀಸರು ಆರೋಪಿ ಸುರೇಶ್ ಹುಡುಕಾಟ ನಡೆಸಿದ್ದಾರೆ. ಈ ಸಂದರ್ಭದಲ್ಲೇ ಆತ ತುಮಕೂರು ನ್ಯಾಯಾಲಯದ ಬಳಿ ತನ್ನ ಸಹೋದರನಿಗೆ ಚಾಕು ಇರಿದ ಪ್ರಕರಣದಲ್ಲಿ ಜೈಲು ಪಾಲಾಗಿರುವುದು ಗೊತ್ತಾಗಿದೆ.



ಬಿಡುಗಡೆ...

‘ಶಿವಶರಣೆಯರು’ ಕೃತಿಯನ್ನು ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಶನಿವಾರ ಬಿಡುಗಡೆ ಮಾಡಿದರು. ಜನಪದ ತಜ್ಞ ಮೀರಾಸಾಬಿಹಳ್ಳಿ ಶಿವಣ್ಣ, ವಿಜಯವಾಣಿ ಸಹಾಯಕ ಸಂಪಾದಕ ರುದ್ರಣ್ಣ ಹರ್ತಿಕೋಟೆ, ಕೃತಿಗಾರ್ತಿ ಸುಜಾತಾ ವಿಶ್ವನಾಥ್, ಮಾತಿನಮನೆಯ ರಾ.ಸು. ವೆಂಕಟೇಶ ಉಪಸ್ಥಿತರಿದ್ದರು

ಕುಡಿತ ಬಿಡು ಎಂದ ಪತ್ನಿ ಕೊಂದ ಪತಿ

ಆನೇಕಲ್: ಕುಡಿತ ಬಿಡು ಎಂದಿದ್ದಕ್ಕೆ ಪತ್ನಿಯನ್ನು ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯ ಮಾಯಸಂದ್ರ ಸಮೀಪದ ಶುಭ್ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ ನಡೆದಿದೆ. ಮಲ್ಲಿಕಾ ಕಾತೂನ್(30) ಕೊಲೆಯಾದ ಮಹಿಳೆ.

ಬಿಹಾರದ ಮಲ್ಲಿಕಾ ಕಾತೂನ್ ತನ್ನ ಪತಿ ಮೊಹಮದ್ ಸೈಯದ್ ಅನ್ಸಾರಿ ಮತ್ತು ಮೂರು ಮಕ್ಕಳೊಂದಿಗೆ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದರು. ಮದ್ಯವ್ಯಸನಿಯಾಗಿದ್ದ ಅನ್ಸಾರಿ ಕುಡಿದು ಬಂದು ಪತ್ನಿಯೊಂದಿಗೆ ನಿತ್ಯ ಗಲಾಟೆ ಮಾಡುತ್ತಿದ್ದ. ಶನಿವಾರ ಬೆಳಗ್ಗೆ ಇದೇ ವಿಚಾರಕ್ಕಾಗಿ ದಂಪತಿ ನಡುವೆ ಜಗಳವಾಗಿದೆ. ಕುಪಿತಗೊಂಡ ಅನ್ಸಾರಿ ಮಕ್ಕಳ ಎದುರೇ ಮಾರಕಾಸ್ತ್ರದಿಂದ ಹೊಡೆದದ್ದರಿಂದ ಮಲ್ಲಿಕಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸರ್ಕಲ್ ಇನ್‌ಸ್ಪೆಕ್ಟರ್ ರಾಘವಗೌಡ ತಿಳಿಸಿದ್ದಾರೆ.

ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Security & Detectives

WANTED URGENTLY REQUIRED GENERAL MANAGER AND CEO FOR 35 YEARS OLD SECURITY AGENCY. CONTACT: C N PATIL PHONE: 9844012530

Teachers/ Professors

CHANDAN EDUCATIONAL SOCIETY
SHRI BALAJI COLLEGE OF LAW
Basaveshwaranagar, Bangalore-560079. Ph:08023586865
Affiliated to Karnataka State Law University, Hubballi.
Recognised by Bar Council of India, New Delhi.
Invites Applications for Eligible Candidates for the Post of
Assistant Professor (Law)
Asst. Professor Sociology (MA)
Political Science (MA) & History (MA)
No. Posts - 08
Qualification: LL.M., with Teaching Experience
Preference will be given to Ph.D./NET/SLET Qualified Candidates
The Course offered are: **3 years LL.B. and 5 years BA.LL.B**
Interested candidates may send the application/CV through
Email ID: balajailawcollege@gmail.com
Principal Mob: 9242066363 Secretary Mob: 9845346935

P.S. GOENKA MEMORIAL EDUCATIONAL TRUST
JNANA VIJNANA VIDYAPEETHA
(Affiliated to CBSE, New Delhi)
#11th Main, 6th Cross, R.K. Layout, Padmanabhanagar, Bangalore – 560 062.
Ph. No. 080 – 26391509, Email: jvvp2001@gmail.com
Inviting applications from suitable Lady candidates for the following posts:
High School: Post graduates with B.Ed. and min 3 years experience to teach Social Science and English.
Middle School: Graduates with B.Ed. and min 3 years experience to teach Science and Mathematics.
Primary: Graduates with B.Ed. and min 3 years experience to teach Science, Computers, English, Kannada and Social Science.
Nursery: Montessori trained graduates
Experienced PE Teacher with BPEd.
Qualified Art and Craft teachers.
Apply with copies of documents within two weeks.

WANTED TEACHERS & ADMIN STAFF- B.Ed & D.Ed Trained Female Graduates with teaching experience for Higher Primary & High School for all subjects. Also hiring Admin Staff with school experience. Salary negotiable. Apply/contact in person immediately. PRINCIPAL, HOLY CHILD CONVENT 1133/44, 9th Cross, Ashoknagar, Near VidyaPeeta Circle, Bangalore-560050. Ph: 26608485. Drop your resume or mail to: hcchs1371@yahoo.com

WANTED LADY TEACHERS for Chemistry, Mathematics`and Physics (M.Sc.B.Ed) Computer (M.Sc/BE) Hindi, English,and Kannada (MA.B.Ed) Walk-In`on the following dates-2nd, 3rd,4th and`6th of`January-2025. Between.11:00am and`4:00pm.`The Secretary, Sri`Krishna International School, Bangalore-85. Phone:26690799.

VIDYASHREE HIGH SCHOOL CBSE Anjananagar, Bengaluru-91.Required Trained and Experienced NTT,PRT,TGT and PGT Teachers for the Academic year 2025-26 to teach Mathematics, Science and English for Primary and High school.Walk-in between 9:30am to 4:30pm.Drop your CV @vidyashreehighschool@gmail.com Contact:9035858269

WANTED PRINCIPAL for Panchasheela PU College Rajarajeshwarinagar BHEL Layout Bangalore.98 MA,B.Ed with 5 years experience, can apply Email address ppt535@gmail.com. Contact: 9845655761

Wanted

WANTED ACCOUNTS ASSISTANT cum Typist for an Tax Consultants office @ Jayanagar whatsapp resume to 9448359935

Multiple Vacancy

A LEADING Company engaged from past 28 years in providing Security & House keeping Services, is looking for following Category persons with past experience: (1) AREA GENERAL MANAGER- Bangalore South. (2) AREA FIELD OFFICER'S- Bangalore South & Electronic city. Candidates can contact Director: 9900596738 or email resume to: info@networkda.com

REAL ESTATE SELLING

Sites

Banashankari

"COMMERCIAL SITE Banashankari 3rd Stage 40x50 close to Ring Road & upcoming Metro station. "Sri.Ganesh Estates"- 9845286505, 8884125555"

BANASHANKARI 6TH Stage, 2nd BLOCK, BDA attached BBMP 'A' Shashidar Layout 20×30 SALE, N/Facing. 9611105595

"AVAILABLE"BDA SITE Banashankari 6th Stage,2nd Block,40x60,West Facing Genuine Buyers Contact: 9844216344

Gnanabharathi

DIRECT OWNER 30x40 E/F BDA Site Sale 'JNANABHARATHI' Nagadevanahalli 2nd Block, Close to Ring-Road. 9886634578

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560| +91 9901641752
+91 9886213331
+91 9731810277 | +91 9900428036
080-45557163/164
*Conditions apply

Mysore Road

"RAMOHALLI 30X40 BDA Approved Gated Community Near KempeGowda BDA Layout Bus Route ₹4200/- P.Sft. 9845178335"

Rajarajeshwari Nagar

RAJARAJESHWARI NAGAR 1500 Square A Khatha Price 12500 Immediate Settlement Suitable for Apartment Call:8951240669

"AVAILABLE 30X50 West facing Site Shanthi Vidhya Layout Attached Bangalore University, Good location. 9845500019/ 7019314962"

Jakkur

JUDICIAL LAYOUT JAKKUR 50x80 BDA Site East Facing 40 Feet Road For Sale Contact: 9341260828

SITE FOR SALE: BDA Near jakkur Aerodrome Vidanasowda layout 30X50, North East Corner. Contact:7899389264.

Jayanagar

SALE JAYANAGAR 1st Block 55x85 on 40 and 30feet Road Excellent Location ct: 9844134068 8073859758

J P Nagar

JP.NAGAR_2ND 3rd- House`45x61 South 7.50Cr`45x47 East`door A`Kath Income`2.8Lac Rs.7.30Cr 60x90`East 17.40Cr and`30x50 Jayanagar`8th Block-5.50Cr -9008481314

SALE 40X60-BDA Prime Semi Comercial Corner Property-on 60feet`Road JPNagar 2nd Phase Near Innisfree House School Genuine Buyers Call:9986490019

Koramangala

KORAMANGALA 5TH Block, Prime Residential 50x65 East. J.P. Nagar 3rd Phase 60x90 East Sites- 9845036826

Kanakapura Road

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT BDA, Commercial Property East Facing 50×80 Measurement, Only Genuine Buyer Contact. Owner. 9663005859/ 9731594565

KEMPEGOWDA LAYOUT, COMMERCIAL BDA Site for Sale 20x30, 30x40, 40x60, 50x80, Contact: Kumar 9945119449

Magadi Road

FOR SALE: 50x80 (4000 SFT) North Facing Vacant Site No. Old 29/08, New Municipal No. 8, 2nd Main Road, Agrahara Dasarahalli. Contact 9845177455/ 9845454304

Vishweshwariah Layout

"VISVESHWARAIAH LAYOUT 40x60 East & North facing Site for Sale. Genuine Buyers & Sellers Contact: 9845268611"

AVAILABLE 30X40 BDA Site Viswesavaraiah Layout 1st Block Near 100ft Parallel Road Good Location: 9035470616

30X40 SITE Sale Vishveshwaraiah W/F 1st Block & 3rd Block Near 100ft Road Direct Owner: 8310003509

BDA 50X80 North Facing Site For Sale in Smv 6th block,60ft Road,For owner meeting Call-9379776209.

Vidyaranyapura

BEL LAYOUT Prime Location- 60x40 with 4 BHK Duplex house, Garage- Well- S/F. 9844264852/ 9449059015

Chikkaballapura

MARKETING 70 SITES Developed, Approved Layout at Chikkaballapur City, Price 2500/- sft. Advance 1cr. 9980577227.

Gauribidanuru

GOWRIBHIDHANUR 40 Acers Developed Agriculture Land 40 Lakhs Per Acer Negotiable. Contact: 9449655947

House

Banashankari

"BANASHANKARI 6TH- STAGE 3 years old house built on 30x40 Site ₹1.95`Crore "Sri.Ganesh Estate"- 9845286505"

J P Nagar

J.P.NAGAR_3RD, Beautiful Location 60x90, East, close to Mini forest, Jayadeva Hospital & Metro station 18,19,00,000/- 9731775536

J.P.NAGAR_4TH Dollars Layout 50x80, 4 unit House with Lift, 4,70,000/- monthly Rental income, Sale- 11,50,00,000/- 9731775536.

30X40 NORTH Facing Old House Sale, RBI Layout J.P.Nagar 7th Phase. Contact: 9886838644/ 9900706343.

Mallathalli

ITI LAYOUT MALLATHAHALLI 30X50 SOUTH FACING DUPLEX 3 BEDROOM HOUSE 2,65,00,000/- NEGOTIABLE ABHILASHA CONSULTANT. 9480565758

Yelahanka

BAGALUR ROAD close to Airport Road 30*45 Site 4400 Sft Building 2016 Built Good Borewell Water, getting 70k Rent Price 2.40 CR. Contact 9900569524/ 9448461704

Flat

Kanakapura Road

FLAT FOR Sale 2BHK 70 Lakhs Opp KSIT College 500 meters Metro Station Kanakapura Road: 9880161640

M G Road And Around

OPPOSITE OBEROI N/E Corner Apartment 3 BHK /4Toilets /2Car- parking Price 3.5Crores Negotioble:8884501767

Mysore Road

AVAILABLE LEASE or SALE 3BHK WITH CARPARKING APARTMENT TOP FLOOR FLAT MYSORE ROAD 8105273951/ 9738223432

ಕ್ಲಾಸಿಫೈಡ್ಸ್ WEEKEND CORNER

AASTHA INDUSTRIAL CITY
INDUSTRIAL PLOTS FOR SALE
Dabaspete
DC Converted
Bangalore-Mumbai Economic Corridor
Ready For Registration
Clear Title, Bank Loan Available
Call for more details :
7676343099, 9513142299

SCORE HIGH MARKS
ISCE / CBSE
10th SCIENCE, 12th CHEMISTRY
CRASH COURSE
ONE on ONE GOOGLE MEET CLASSES
(1.5 HOURS EACH SESSION)
- Revising Topics and Handling Numericals from Board Exam Perspective
- Last 10 years Board Papers
- Tips to Handle Tricky Questions
- Guidelines to Tackle Board Exam Papers

98400 87459

PRIME COMMERCIAL LAND FOR SALE
20,000 Sq ft, Residential Converted Land Facing
BENGALURU - MYSURU HIGHWAY at BIDADI
Muncipal Corporation Limits.
Contact: **9901430646**

PRM/KA/RERA/1251/310/PR/150223/005721
DS-MAX SAMYAK
LUXURIOUS 2 & 3-BHK APARTMENTS
DS MAX
DR. K V SATISH, CHAIRMAN
ISO 9001:2015 COMPANY
MYSORE ROAD
Just 7 min. from Challaghatta Metro Station
2-BHK HOMES STARTS @ JUST
₹ 49.63 L*
BDA APPROVED | G + 14 FLOORS
*T & C Apply

8880 003 003
www.dsmaxproperties.com

Commercial Land

Kadugodi

330 SFT. One Room, First Floor Flat, No Parking Area , Opposite Sai Baba Ashram at Whitefield (Kadugodi) walking distance to Railway Station,Metro Station BMTC Bus Terminus .Price Rs.17 lakhs(no brokers please) Phones: 9949028871 ,7780277343

SALE, 4/ 6/ 9 Acres Industrial Converted Land Dabaspet 99 Acres Koratagere Road. NAIK: 9141326819

Jayanagar

PRIME COMMERCIAL Properties Sale @ Jayanagar 50x80 E/F & 50X80 N/E Corner 80ft Road Suitable For Hotel/ Nursinghome/ Functionhall Call:"GOLDLINE" 9845033756

Mysore

PRIME LAND: Chamarajanagar-Mysore 4.12 Acres Ideal for Commercial development and Farming near KIADB Indl.Area, NH-150A & Railway Station. Contact: 9620495333

Commerical

Jayanagar

JAYANAGAR_4TH Block Commercial 4 floors Building, 39x56 North, close to Jaynagar Shopping Complex 9,83,00,000/- :9731775536.

J P Nagar

JP-NAGAR 2ND Phase 40x60 SF 26500/- 40x60 SE Corner Commercial Site 30000/- Brockers Excuse 9449655947

Rajajinagar

COMMERCIAL-SALE or JD 60000sft Jodi Kemapura Agrahara Village Okalipuram opposite`to Lulu`Mall, Road Width is 200feet ct: 9844134068 8073859758

Industrial & Factory

Tumkur Road

SALE INDUSTRIAL 15,000sft with shed 40HP power KIADB Sale deed 40feet road East'facing Sompura Industrial Estate 1st Stage, Dabaspet. 8310719986/ 9448061555.

Villas/Bunglows

Kanakapura Road

INDEPENDENT BUNGALOW/ Villa of duplex house for sale on site measuring 2,800 Sq.feet along with 4353 Sq.feet (RCC building) at B.M.Kaval Village, Thathaguni, Bangalore to Kanakapura Main Road, Bangalore South Taluk, Bangalore. Contact: 9902401486

REAL ESTATE BUYING

Joint Development

South

A LEADING ISO 9001 builder required 1- 5 acres clear property for outright/ JV in BBMP limit Bangalore. Contact- 9071712000 Broker excuse

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan`Nagar BCCHS Layout, Gubblala, Agent Excuse. Call: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUILDERS ESSENTIAL

Building Contractors

BUILDIYA PROJECTS Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

YELAHANKA SEMICOMMERCIAL 20000 Sqft Land, Building Suitable Educational Institutes, Hospital, Warehouse, Conventionhall Near Sambhram College: 9035304455

OFFICE SPACE For Rent16,000 sqft HBR layout 4th Block Facing Ring Road 8861817913 / 9008025761

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

OTHERS

Books & Periodicals

The GOD CONCEPT is not a book on any religion. It's all about *Logic v. Faith!*



Let Logic lead your way to Faith!
www.genialsenior.com
WA: 882 803 2258
No one told you the truth before this way!

PUBLIC NOTICE

PUBLIC NOTICE
My clients are negotiating to purchase Residentially converted Schedule Properties from Smt. RADHIKA.S W/o Ramachandra. C, Situated at Kuthugana Halli Village, Sarjapura Hobli, Anekal Taluk, Bangalore Urban District.
If any individual/s or institution/s having any Rights, Claims, Title, Interest or Subsisting charges over the same, it shall be lodged within 15 (Fifteen) days from the date of Publication of this Notice with Documentary Evidence with the undersigned.
SCHEDLUE
Item No. 1- Sy. No. 48/2 - Measuring : 0.10 Guntas, Bounded on : **East by:** Survey No. 48/4 of Smt. Radhika. S **West by :** R. K. Layout **North by :** R.K. Layout **South by :** R.K. Layout
Item No. 2 - Sy. No. 48/4 - Measuring 0.10 Guntas, Bounded on : **East by:** Properties of Sri. B. Prabhakar, Sri. R. Anand and Sri. Bhojaraju **West by :**Survey No. 48/2 of Smt. Radhika. S **North by :** R.K. Layout **South by :** R.K. Layout and Road
S. ANANTHA RAMA REDDY,
Advocate & Consultant,
No. 12, 3rd Floor, 10th Cross,
(Opp. St. Martha's Hospital),
Cubbonpet, Bangalore - 560 002
mail id - ananthareddy2006@hotmail.com
Mobile - 9845049944

PUBLIC NOTICE
Public are hereby notified that my client negotiating to purchase all that property described in the Schedule herein from Mr. B. V. Vijay Sarathy (Owner), who claim to be the owner of the Schedule Property.Any person or persons ascertaining any right, title, interest or claim in the Schedule Property or any part thereof and in any manner whatsoever against the Schedule Property based on the documents pertaining to the Schedule Property or objecting for the proposed development may lodge their objections and/or claims with the undersigned along with supporting documentary evidence within 7 (Seven) days from the date of this publication and objections and/or claims received thereafter will not be binding on my client/s and my client/s will proceed to purchase the below mentioned property as if there are no objections/claims of whatsoever nature with regard to the Schedule Property.
Schedule Property
All that piece and parcel of the Property bearing Site No.157, measuring East to West 50 Feet and North to South 30 Feet, Totally measuring 1500 Sq Feet, carved out of Sy.No. 37/5, vide Conversion order No. B.Dis, ALN.SR(S) 362/1991-92, dated 13.05.1992, issued by Deputy commissioner Bengaluru District, comprising of residential building consisting of Stilt Floor, Ground Floor, First Floor, Second Floor and Terrace Floor Totally measuring 326.50 Sq. Meters of Built-up Area, situated at Junnasandra Village, Varthur Hobli, Bengaluru East Taluk, presently bearing Khatha No. 246/221/157 in the records of Bruhat Bangalore Mahanagara Palike (BBMP) and bounded as follows:

BOUNDARIES:

East by	:30 Feet Road;
West by	:Site No.206;
North by	:Site No.156;
South by	:Site No.158.

ROOPA SHETTY, Advocate
Lex Situs, No.810,
'BILWAPRIYA PLATINA',
2nd Floor, 27th Main Road,
HSR Layout, Sector 1,
Bangalore - 560102.
Phone: 9902026199 and 8088731020;
Email:info@lexsitus.com

MATRIMONIAL

Brides Wanted

Muslim

SUNNI MUSLIM boy, 1991-born, native of Bangalore, Canadian citizen with own house. Affluent family background. Seeking an educated, compatible life partner.' (080-69072074)

SUNNI MUSLIM, 1993-born, MBBS/MS, Surgeon, Divorcee. Established career in a reputed hospital. Serious inquiries only (080-69070635)

Grooms Wanted

Muslim

SUNNI MUSLIM, beautiful girl, born 2003, Bangalore-based, from an affluent family. Seeking a well-settled and compatible match.'(080-69072090)

Tamil

TAMIL POST Graduate working, seeks Bangalore based well educated employed Groom, 31-35 yrs, vjmeena99@gmail.com

Matrimonial Bureaus

BRAHMINS MATRIMONY (Bengaluru) Brides/ Bridegrooms/ Second Marriage/ Personalised/ Confidential Services/ Event Organising call 'SHASTRY' 9141669641

PERSONAL

Change of Name

CHANGE OF NAME
I, **NANCY JOHN** Residing at # 204, 2nd Floor, Swecha Kancharala Grand, 2nd Cross, Kodigehalli Main Road, Sri Sathya Sai Baba Layout, K.R.Puram, Bangalore-560036 have changed my name to **NANCY AMALRAJ** vide affidavit dated 28.12.2024 before Notary G. Rajendra, Bangalore. Henceforth I shall be known as **NANCY AMALRAJ** only.

CHANGE OF NAME
I, **DIVYA SATHEESHCHANDRAN,** D/o. **Satheesh Chandran K,** R/at. GNR Platinum Fort, Flat # B108, Horamavu Agara Main Road, Chikka Nanjunda Reddy Layout, Coconut Grove Layout, Bengaluru-560043, have changed my name from **DIVYA SATHEESHCHANDRAN** to **DIVYA S MENON** vide affidavit dated 27.12.2024 sworn before Advocate and Notary Public, K.P. Ramesh, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ನಗರದ ಎಲ್ಲ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರ ನಿರ್ಬಂಧ • ಸಾರ್ವಜನಿಕರ ಸುರಕ್ಷತೆಗೆ ಒತ್ತು • ಹಲವೆಡೆ ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡು

ಹೊಸ ವರ್ಷಾಚರಣೆ: ಮಧ್ಯರಾತ್ರಿ 1ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಡಿಸೆಂಬರ್ 31ರ ರಾತ್ರಿ 1ರ ವರೆಗೆ ಸಾರ್ವತ್ರಿಕವಾಗಿ ಹೊಸ ವರ್ಷಾಚರಿಸಲು ಅನುಮತಿಯಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಬಿ.ದಯಾನಂದ

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಕೋರಮಂಗಲ, ಇಂದಿರಾನಗರದ 100 ಅಡಿ ರಸ್ತೆ ಮತ್ತಿತರ ಕಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಲಿರುವ ಕಾರಣ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ನಗರದ ಹಲವೆಡೆ ಸಂಚಾರ ವ್ಯವಸ್ಥೆಯಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಲಾಗಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಬಿಬಿಎಂಪಿ, ನಮ್ಮ ಮೆಟ್ರೊ ಮತ್ತು ಇತರ ಸಂಸ್ಥೆಗಳೊಂದಿಗೆ ಸಭೆ ನಡೆಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಓಲಾ ಮತ್ತು ಉಬರ್‌ನ ಪ್ರತಿನಿಧಿಗಳೊಂದಿಗೆ ಪ್ರತ್ಯೇಕ ಸಭೆಗಳನ್ನು ನಡೆಸಿ, ಪಿಕಪ್ ಸ್ಥಳಗಳನ್ನು ವ್ಯವಸ್ಥೆ ಮಾಡಲಾಗಿದೆ. ಪ್ರಯಾಣಿಕರಿಂದ ಹೆಚ್ಚು ಹಣ ಕೇಳಿದರೆ ಸಂಬಂಧಪಟ್ಟ ಪೊಲೀಸರಿಗೆ ದೂರು ನೀಡಬಹುದು. ಯಾವುದೇ ರೀತಿಯ ಮುಖವಾಡ ಧರಿಸಬಾರದು ಎಂದು ಸಾರ್ವಜನಿಕರಿಗೆ ಮನವಿ ಮಾಡಿದರು.

ಅಪಘಾತಗಳು ಸೇರಿ ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಡಿಸೆಂಬರ್ 31 ರಂದು ರಾತ್ರಿ 11 ರಿಂದ ಜನವರಿ 1ರ ಬೆಳಿಗ್ಗೆ 6 ರವರೆಗೆ ನಗರದ ಎಲ್ಲಾ ಮೇಲ್ಸೇತುವೆಗಳಲ್ಲಿ (ಕೆಐಎ ವಿಮಾನ ನಿಲ್ದಾಣಕ್ಕೆ ಹೋಗುವ ಎಲಿವೇಟೆಡ್ ಎಕ್ಸ್‌ಪ್ರೆಸ್‌ವೇ ಹೊರತುಪಡಿಸಿ) ಎಲ್ಲಾ ರೀತಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ವಿಮಾನ ನಿಲ್ದಾಣದ ಎಲಿವೇಟೆಡ್ ಎಕ್ಸ್‌ಪ್ರೆಸ್‌ವೇಯಲ್ಲಿ, ದ್ವಿಚಕ್ರ ವಾಹನಗಳ ಸಂಚಾರವನ್ನು ಡಿಸೆಂಬರ್ 31ರ ರಾತ್ರಿ 10 ರಿಂದ ಜನವರಿ 1ರ ಬೆಳಿಗ್ಗೆ 6 ಗಂಟೆಯವರೆಗೂ ನಿರ್ಬಂಧಿಸಲಾಗಿದೆ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

ಮದ್ಯ, ಮಾದಕ ದ್ರವ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುವವರ ಪತ್ತೆಗೆ ಹಲವೆಡೆ ತಪಾಸಣೆ ಘಟಕ ತೆರೆಯಲಾಗಿದೆ. ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವ ಹಾಗೂ ವ್ಹೀಲಿ ಮಾಡುವ ದ್ವಿಚಕ್ರ ವಾಹನ ಸವಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಂಚಾರ ವಿಭಾಗದ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ನೋ-ಪಾರ್ಕಿಂಗ್ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸಿದ್ದಲ್ಲಿ ಅಂತಹವುಗಳನ್ನು ಟೋಯಿಂಗ್ ಮಾಡಲಾಗುವುದು. ಜನರು ತಮ್ಮ ಸ್ವಂತ ವಾಹನಗಳನ್ನು ಬಳಸದೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಾದ ನಮ್ಮ ಮೆಟ್ರೊ, ಬಿಎಂಟಿಸಿ ಬಸ್, ಆಟೊ ಅಥವಾ ಕ್ಯಾಬ್‌ಗಳನ್ನು ಬಳಸುವಂತೆ ಕೋರಲಾಗಿದೆ.

ವಾಹನ ಸಂಚಾರ ಮತ್ತು ಪಾರ್ಕಿಂಗ್ ನಿಷೇಧ

- **ಡಿ.31, ರಾತ್ರಿ 8 ರಿಂದ ಜ.1ರ** ಬೆಳಗಿನ ಜಾವ 2ರವರೆಗೆ ಈ ಕೆಳಕಂಡ ರಸ್ತೆಗಳಲ್ಲಿ ಪೊಲೀಸ್ ವಾಹನಗಳು ಹಾಗೂ ಕರ್ತವ್ಯ ನಿರತ ತುರ್ತು ಸೇವಾ ವಾಹನ ಹೊರತುಪಡಿಸಿ ಉಳಿದ ವಾಹನಗಳ ಪ್ರವೇಶ ನಿಷೇಧಿಸಲಾಗಿದೆ. ಇದೇ ದಿನದಂದು ಸಂಜೆ 4ರಿಂದ ಜ.1ರ ಬೆಳಿಗ್ಗೆ 3ರವರೆಗೆ ಇದೇ ಪ್ರದೇಶದಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.
- **ಎಂ.ಜಿ.ರಸ್ತೆ:** ಅನಿಲ್ ಕುಂಬ್ಳೆ ವೃತ್ತದಿಂದ ಮೆಯೊ ಹಾಲ್ ಬಳಿಯ ರೆಸಿಡೆನ್ಸಿ ರಸ್ತೆ ಜಂಕ್ಷನ್‌ವರೆಗೆ
- **ಬ್ರಿಗೇಡ್ ರಸ್ತೆ:** ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್‌ವರೆಗೆ
- **ಚರ್ಚ್ ಸ್ಟ್ರೀಟ್:** ಬ್ರಿಗೇಡ್ ರಸ್ತೆ ಜಂಕ್ಷನ್‌ನಿಂದ ಮ್ಯೂಸಿಯಂ ರಸ್ತೆ ಜಂಕ್ಷನ್‌ವರೆಗೆ
- **ಮ್ಯೂಸಿಯಂ ರಸ್ತೆ:** ಎಂ.ಜಿ.ರಸ್ತೆ ಜಂಕ್ಷನ್‌ನಿಂದ ಹಳೇ ಮದ್ರಾಸ್ ಬ್ಯಾಂಕ್ ರಸ್ತೆ (ಎಸ್.ಬಿ.ಐ) ವೃತ್ತದ ವರೆಗೆ.
- **ರೆಸ್ಟ್ ಹೌಸ್ ರಸ್ತೆ:** ಮ್ಯೂಸಿಯಂ ರಸ್ತೆ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆ ಜಂಕ್ಷನ್‌ವರೆಗೆ
- **ರೆಸಿಡೆನ್ಸಿ ಕ್ರಾಸ್ ರಸ್ತೆ:** ರೆಸಿಡೆನ್ಸಿ ರಸ್ತೆ ಜಂಕ್ಷನ್‌ನಿಂದ ಎಂ.ಜಿ ರಸ್ತೆ ಜಂಕ್ಷನ್‌ವರೆಗೆ (ಶಂಕರ್ ನಾಗ್ ಚಿತ್ರಮಂದಿರ)



ಬ್ರಿಗೇಡ್ ರಸ್ತೆಯಲ್ಲಿ ವಾಹನ ಪಾರ್ಕಿಂಗ್ ನಿರ್ಬಂಧಿಸಲು ಸಂಚಾರ ಪೊಲೀಸರು ಬ್ಯಾರಿಕೇಡ್ ಹಾಕಿದ್ದಾರೆ

ಡಿ.31ಕ್ಕೆ ಬಿಎಂಟಿಸಿ ಹೆಚ್ಚುವರಿ ಬಸ್

ಬೆಂಗಳೂರು: ಹೊಸ ವರ್ಷಾಚರಣೆಯ ಪ್ರಯುಕ್ತ ಡಿ.31ರಂದು ರಾತ್ರಿ 11ರಿಂದ 2 ಗಂಟೆಯವರೆಗೆ ವಿವಿಧ ಮಾರ್ಗಗಳಲ್ಲಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸಲು ಬಿಎಂಟಿಸಿ ನಿರ್ಧರಿಸಿದೆ.

ಬ್ರಿಗೇಡ್ ರಸ್ತೆಯಿಂದ ಎಲೆಕ್ಟ್ರಾನಿಕ್ಸ್ ಸಿಟಿ ಮತ್ತು ಜಿಗಣಿಗೆ, ಎಂ.ಜಿ. ರಸ್ತೆಯಿಂದ ಸರ್ಜಾಪುರ, ಕೆಂಗೇರಿ–ಕೆಎಚ್‌ಬಿ ಕ್ವಾರ್ಟರ್ಸ್, ಜನಪ್ರಿಯ ಟೌನ್‌ಶಿಪ್, ನೆಲಮಂಗಲ, ಯಲಹಂಕ ಉಪನಗರ 5ನೇ ಹಂತ, ಯಲಹಂಕ, ಬಾಗಲೂರು, ಹೊಸಕೋಟೆ, ಚನ್ನಸಂದ್ರ, ಕಾಡುಗೋಡಿ, ಬನಶಂಕರಿಗೆ ಹೆಚ್ಚುವರಿ ಬಸ್ ಸಂಚರಿಸಲಿವೆ.

ಇದಲ್ಲದೆ, ಜನದಟ್ಟಣೆ ಇರುವ ಪ್ರಮುಖ ಬಸ್ ನಿಲ್ದಾಣ, ಜಂಕ್ಷನ್‌ಗಳಾದ ಕೆಂಪೇಗೌಡ ಬಸ್ ನಿಲ್ದಾಣ, ಕೆ.ಆರ್. ಮಾರುಕಟ್ಟೆ, ಶಿವಾಜಿನಗರ, ಕೋರಮಂಗಲ, ಕಾಡುಗೋಡಿ, ಕೆಂಗೇರಿ, ಸುಮನಹಳ್ಳಿ, ಗೊರಗುಂಟೆಪಾಳ್ಯ, ಯಶವಂತಪುರ, ಯಲಹಂಕ, ಶಾಂತಿನಗರ, ಬನಶಂಕರಿ, ಹೆಬ್ಬಾಳ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್‌ಗಳಿಂದ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಭದ್ರತೆಗೆ 11 ಸಾವಿರ ಸಿಬ್ಬಂದಿ

ಬೆಂಗಳೂರು: ಹೊಸ ವರ್ಷಾಚರಣೆ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಭದ್ರತೆಗಾಗಿ 11,830 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದ್ದಾರೆ.

ಇಬ್ಬರು ಹೆಚ್ಚುವರಿ ಪೊಲೀಸ್ ಆಯುಕ್ತರು, ಜಂಟಿ ಪೊಲೀಸ್ ಕಮಿಷನರ್, 15 ಡಿಸಿಪಿಗಳು, 44 ಎಸಿಪಿಗಳು, 135 ಇನ್‌ಸ್ಪೆಕ್ಟರ್‌ಗಳು, 530 ಸಬ್ ಇನ್‌ಸ್ಪೆಕ್ಟರ್‌ಗಳು, 655 ಸಹಾಯಕ ಸಬ್ ಇನ್‌ಸ್ಪೆಕ್ಟರ್‌ಗಳು, 4,833 ಕಾನ್‌ಸ್ಟೆಬಲ್‌ಗಳು, 1,048 ಮಹಿಳಾ ಪೊಲೀಸ್ ಸಿಬ್ಬಂದಿ, 597 ಮಫ್ತಿ ಸಿಬ್ಬಂದಿ, 3,170 ಗೃಹರಕ್ಷಕ ದಳದ ಸಿಬ್ಬಂದಿ ನಗರದಾದ್ಯಂತ ಭದ್ರತೆಗಾಗಿ ನಿಯೋಜನೆಗೊಂಡಿದ್ದಾರೆ. ಅದರ ಜೊತೆಗೆ 72 ಕೆಎಸ್‌ಆರ್‌ಪಿ ಪೊಲೀಸ್ ತುಕಡಿಗಳನ್ನು ಹೆಚ್ಚುವರಿಯಾಗಿ ಭದ್ರತೆಗೆ ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಮಹಿಳೆಯರ ಸುರಕ್ಷತೆಗಾಗಿ ಪ್ರಮುಖ ಸ್ಥಳಗಳಲ್ಲಿ ಮಹಿಳಾ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಒಳಗೊಂಡ ಸುರಕ್ಷತಾ ತಾಣವನ್ನು ನಿರ್ಮಿಸಲಾಗಿದೆ. ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸ್ ಕಿಯೋಸ್ಕ್ ಗಳನ್ನು ತೆರೆಯಲಾಗಿದೆ. ಮಕ್ಕಳು ಕಾಣೆಯಾದಲ್ಲಿ ಅಥವಾ ಯಾವುದೇ ರೀತಿಯ ಕಳ್ಳತನಕ್ಕೆ ಸಂಬಂಧಿಸಿದ ದೂರುಗಳನ್ನು ನೀಡಬಹುದಾಗಿದೆ. ಹೆಚ್ಚು ಜನಸಂದಣಿ ಸೇರುವ ಸ್ಥಳಗಳಲ್ಲಿ ಕಣ್ಗಾವಲಿಡಲು ಸಿಬ್ಬಂದಿಗೆ ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿದೆ.

ಡಿ.31ರ ರಾತ್ರಿ 11 ರಿಂದ ಜನವರಿ ಬೆಳಗಿನ ಜಾವ 2 ರವರೆಗೆ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ವಿವಿಧ ಕಡೆಗಳಿಂದ ಬಂದಿಳಿಯಲು ಮಾತ್ರ ಅವಕಾಶ ಇರಲಿದೆ. ಎಂ.ಜಿ. ರಸ್ತೆಯಿಂದ ತೆರಳುವವರು ಟ್ರಿನಿಟಿ ಸರ್ಕಲ್ ಹಾಗೂ ಕಬ್ಬನ್‌ಪಾರ್ಕ್ ಮೆಟ್ರೊ ನಿಲ್ದಾಣಗಳನ್ನು ಬಳಸಬಹುದಾಗಿದೆ.

ಪ್ರಮುಖ ಸ್ಥಳಗಳಲ್ಲಿ ಹೆಚ್ಚುವರಿಯಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಡಿ.31ರ ರಾತ್ರಿ ಡ್ರೋನ್ ಕ್ಯಾಮೆರಾಗಳನ್ನು ಕಾರ್ಯಾಚರಣೆಗೆ ಬಳಸಲಾಗುತ್ತಿದೆ.

ಕಾನೂನು ಬಾಹಿರ ಚಟುವಟಿಕೆಗಳು, ಡ್ರಗ್ಸ್ ಸರಬರಾಜು, ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ಲಭಿಸಿದಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಯಾವುದಾದರೂ ವಾರಸುದಾರರು ಇಲ್ಲದ ವಸ್ತುಗಳು ಕಂಡು ಬಂದಲ್ಲಿ ತಕ್ಷಣ ಸ್ಥಳೀಯ ಪೊಲೀಸರು ಅಥವಾ ಪೊಲೀಸ್ ಸಹಾಯವಾಣಿ ಸಂಖ್ಯೆ 112ಕ್ಕೆ ಮಾಹಿತಿ ನೀಡಲು ಕೋರಲಾಗಿದೆ.

ಸಾರ್ವಜನಿಕರು ಏನು ಮಾಡಬಾರದು..

- ಪಟಾಕಿಗಳನ್ನು ಸಿಡಿಸಬಾರದು
- ಅತಿವೇಗ, ಅಜಾಗರೂಕತೆಯಿಂದ ವಾಹನ ಚಲಾಯಿಸಬಾರದು
- ನಿರ್ಬಂಧಿತ ಪ್ರದೇಶಗಳಿಗೆ ಪ್ರವೇಶಿಸಬಾರದು
- ಮೋಜಿಗಾಗಿ ತುರ್ತು ಕರೆಗಳಿಗೆ ಸಂಪರ್ಕಿಸಬಾರದು
- ಅನವಶ್ಯಕವಾಗಿ ಗುಂಪುಗೂಡಬಾರದು

ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ

- ಡಿ.31 ರಂದು ರಾತ್ರಿ 8 ಗಂಟೆಯ ಬಳಿಕ ಎಂ.ಜಿ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದ ಕಡೆಯಿಂದ ಹಲಸೂರು ಹಾಗೂ ಮುಂದಕ್ಕೆ ಹೋಗುವ ಚಾಲಕರು ಅನಿಲ್ ಕುಂಬ್ಳೆ ವೃತ್ತದಲ್ಲಿ ಎಡ ತಿರುವು ಪಡೆದು ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಸಾಗಿ ಬಿ.ಆರ್.ವಿ ಜಂಕ್ಷನ್‌ನಲ್ಲಿ ಬಲ ತಿರುವು ತೆಗೆದುಕೊಂಡು ಕಬ್ಬನ್ ರಸ್ತೆ ಮೂಲಕ ಸಂಚರಿಸಿ ವೆಬ್ ಜಂಕ್ಷನ್ ಬಳಿ ಎಂ.ಜಿ ರಸ್ತೆ ಸೇರಿ ಮುಂದೆ ಸಾಗಬಹುದು.
- ಹಲಸೂರು ಕಡೆಯಿಂದ ಕಂಟೋನ್ಮೆಂಟ್ ಕಡೆಗೆ ಸಾಗುವ ವಾಹನಗಳು ಟ್ರಿನಿಟಿ ವೃತ್ತದಲ್ಲಿ ಬಲ ತಿರುವು ಪಡೆದುಕೊಂಡು ಹಲಸೂರು ರಸ್ತೆ ಡಿಕನ್ಸನ್ ರಸ್ತೆ ಮಾರ್ಗವಾಗಿ ಸಂಚರಿಸಿ ಕಬ್ಬನ್ ರಸ್ತೆ ಸೇರಿ ಮುಂದೆ ಸಾಗುವುದು. ಕಾಮರಾಜ್ ರಸ್ತೆಯಲ್ಲಿ, ಕಬ್ಬನ್ ರಸ್ತೆ ಜಂಕ್ಷನ್‌ನಿಂದ ಕಮರ್ಷಿಯಲ್ ಸ್ಟ್ರೀಟ್ ಜಂಕ್ಷನ್‌ವರೆಗೆ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.
- ಈಜಿಪುರ ಕಡೆಯಿಂದ ಬರುವ ವಾಹನಗಳು ಇಂಡಿಯಾ ಗ್ಯಾರೇಜ್ ಬಳಿ ಬಲತಿರುವು ಪಡೆದು, ಎ.ಎಸ್.ಸಿ. ಸೆಂಟರ್‌ನಲ್ಲಿ ಎಡತಿರುವು ಪಡೆದು ಟ್ರಿನಿಟಿ ಮೂಲಕ ಮುಂದೆ ಸಾಗುವುದು. ಎಚ್.ಎ.ಎಲ್. ಕಡೆಯಿಂದ ಬರುವ ವಾಹನಗಳು ಎ.ಎಸ್.ಸಿ ಸೆಂಟರ್‌ನಲ್ಲಿ ಬಲತಿರುವು ಪಡೆದು ಟ್ರಿನಿಟಿ ಮೂಲಕ ತೆರಳಬಹುದು.
- ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ರೆಸ್ಟ್ ಹೌಸ್ ರಸ್ತೆ, ಚರ್ಚ್ ಸ್ಟ್ರೀಟ್ ರೆಸಿಡೆನ್ಸಿ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆಗಳಲ್ಲಿ ನಿಲ್ಲಿಸಿದಂತಹ ವಾಹನಗಳ ಚಾಲಕರು, ಮಾಲೀಕರು ತಮ್ಮ ವಾಹನಗಳನ್ನು ಡಿ.31 ರಂದು ಸಂಜೆ 4 ಗಂಟೆಯೊಳಗೆ ತೆರುವುಗೊಳಿಸದಿದ್ದರೆ ದಂಡ ವಿಧಿಸಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.
- **ಪಾರ್ಕಿಂಗ್ ವ್ಯವಸ್ಥೆ :** ಶಿವಾಜಿನಗರ ಬಿ.ಎಂ.ಟಿ.ಸಿ ಶಾಪಿಂಗ್ ಕಾಂಪ್ಲೆಕ್ಸ್‌ನ 1ನೇ ಮಹಡಿ, ಯು.ಬಿ. ಸಿಟಿ, ಗರುಡಾ ಮಾಲ್, ಕಬ್ಬನ್‌ಪಾರ್ಕ್(ಬಾಲಭವನ)

ಪಾರ್ಕಿಂಗ್ ನಿರ್ಬಂಧ

- **ಇಂದಿರಾ ನಗರ:** ಇಂದಿರಾನಗರ 100 ಅಡಿ ರಸ್ತೆಯ ಹಳೆ ಮದ್ರಾಸ್ ರಸ್ತೆ ಜಂಕ್ಷನ್‌ನಿಂದ ದೊಮ್ಮಲೂರು ಮೇಲ್ಸೇತುವೆ ಜಂಕ್ಷನ್‌ವರೆಗೆ ಹಾಗೂ ಇಂದಿರಾನಗರ 12ನೇ ಮುಖ್ಯ ರಸ್ತೆಯ 80 ಅಡಿ ರಸ್ತೆಯಿಂದ ಇಂದಿರಾನಗರ ಡಬಲ್ ರೋಡ್ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.
- **ಮಹದೇವಪುರ:** ಐ.ಟಿ.ಪಿ.ಎಲ್ ಮುಖ್ಯರಸ್ತೆ ಬಿ.ನಾರಾಯಣಪುರ ಶೆಲ್ ಪೆಟ್ರೋಲ್ ಬಂಕ್‌ನಿಂದ ಗರುಡಚಾರ್ ಪಾಳ್ಯ ಡೆಕತ್ಲಾನ್‌ವರೆಗೆ, ಹೂಡಿ ಮೆಟ್ರೊ ಸ್ಟೇಷನ್‌ನಿಂದ ಗ್ರ್ಯಾಫೈಟ್ ಇಂಡಿಯಾ ಜಂಕ್ಷನ್‌ವರೆಗೆ ಹಾಗೂ ಐ.ಟಿ.ಪಿ.ಎಲ್ ರಸ್ತೆ ಮೆಡಿಕವರ್ ಆಸ್ಪತ್ರೆಯಿಂದ ಬಿಗ್‌ಬಜಾರ್ ಜಂಕ್ಷನ್‌ರೆಗೂ ಎರಡೂ ಬದಿಯಲ್ಲಿ ವಾಹನ ನಿಲುಗಡೆ ಮಾಡುವಂತಿಲ್ಲ.
- **ಕೋರಮಂಗಲ:** ನ್ಯಾಷನಲ್ ಗೇಮ್ಸ್ ವಿಲೇಜ್‌ನಿಂದ ಯುಕೋ ಬ್ಯಾಂಕ್ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ರಾತ್ರಿ 11ರಿಂದ ಬೆಳಗಿನ ಜಾವ 2ರವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಕೋರಮಂಗಲ ವೈ.ಡಿ ಮಠ ರಸ್ತೆಯಲ್ಲಿ ಸುಖಸಾಗರ ಜಂಕ್ಷನ್‌ನಿಂದ ಮೈಕ್ರೋಲ್ಯಾಂಡ್ ಜಂಕ್ಷನ್‌ವರೆಗೆ, ಜೆ.ಎನ್.ಸಿ ರಸ್ತೆ, 4ನೇ ಬಿ ಕ್ರಾಸ್ ರಸ್ತೆ, ಟಾನಿಕ್ ಹಿಂಭಾಗದ ರಸ್ತೆ, 17ನೇ ಎಚ್ ಮುಖ್ಯ ರಸ್ತೆಗಳಲ್ಲಿ ನಿರ್ಬಂಧ ಇರಲಿದೆ.

ಇವರೆ... ಇದು ಅವರೆ..

ನಗರದ ಬಸವನಗುಡಿಯ ನ್ಯಾಷನಲ್ ಕಾಲೇಜು ಆಟದ ಮೈದಾನದಲ್ಲಿ ಆಯೋಜಿಸಿರುವ 'ಅವರೆ ಬೇಳೆ ಮೇಳ'ಕ್ಕೆ ಶನಿವಾರ ಜನರು ಮುಗಿಬಿದ್ದರು ಚಿತ್ರ: ರಂಜು ಪಿ.

ನಿದ್ದೆಗೆ ಜಾರಿದ ಚಾಲಕ; ಕ್ಯಾಬ್ ಓಡಿಸಿದ ಪ್ರಯಾಣಿಕ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶನಿವಾರ ಬೆಳಗಿನ ಜಾವ 3ಕ್ಕೆ ಬೆಂಗಳೂರಿಗೆ ಹೊರಟಿದ್ದ ಕ್ಯಾಬ್ ಚಾಲಕ ನಿದ್ರೆಗೆ ಜಾರುತ್ತಿರುವುದನ್ನು ಗಮನಿಸಿದ ಪ್ರಯಾಣಿಕರೊಬ್ಬರು ತಾನೇ ಕ್ಯಾಬ್ ಚಾಲನೆ ಮಾಡಿಕೊಂಡು ಮನೆಗೆ ತಲುಪಿದ್ದಾರೆ.

ಪ್ರಯಾಣಿಕ ಮಿಲಿಂದ್ ಚಂದ್ವಾನಿ ಇನ್‌ಸ್ಟಾಗ್ರಾಂನಲ್ಲಿ ಈ ಕುತೂಹಲಕಾರಿ ವಿಡಿಯೊ ಹಂಚಿಕೊಂಡಿದ್ದಾರೆ. ಎಂಬಿಎ ಪದವೀಧರರಾದ ಅವರು, 'ಜೀವನದಲ್ಲಿ ಕೆಲವೊಮ್ಮೆ ನಾವು ಅಸಹಜ ಕೆಲಸ ಮಾಡಬೇಕಾದ ಸಂದರ್ಭ ಒದಗಿ ಬರುತ್ತದೆ' ಎಂದು ಬರೆದುಕೊಂಡಿದ್ದಾರೆ.

'ವಿಮಾನ ನಿಲ್ದಾಣದಿಂದ ಕ್ಯಾಬ್ ಏರಿ ಬೆಂಗಳೂರಿಗೆ ಹೊರಟಾಗ ಕ್ಯಾಬ್ ಚಾಲಕ ತೂಕಡಿಸುತ್ತಿದ್ದ. ಇದನ್ನು ಗಮನಿಸಿದ ನಾನು, ಮಾರ್ಗಮಧ್ಯೆ ಕ್ಯಾಬ್ ನಿಲ್ಲಿಸಿ ಇಬ್ಬರೂ ಟೀ ಕುಡಿದೆವು. ಆದರೂ ನಿದ್ದೆ ಆತನನ್ನು ಬಿಡಲಿಲ್ಲ. ಹಾಗಾಗಿ ನಾನೇ ಕ್ಯಾಬ್ ಚಾಲನೆ ಮಾಡುವುದಾಗಿ ಹೇಳಿದೆ. ಆಗ ಕ್ಯಾಬ್ ಚಾಲಕ 'ಗೂಗಲ್ ಮ್ಯಾಪ್ ತೋರಿಸಿದ ಮಾರ್ಗದಲ್ಲಿ ಹೋಗಿ ಎಂದು ಹೇಳಿ ಕಾರಿನ ಕೀ ಕೊಟ್ಟು ಚಾಲಕನ ಪಕ್ಕದ ಸೀಟ್ ಹಿಂದಕ್ಕೆ ಸರಿಸಿ ನೆಮ್ಮದಿಯಿಂದ ನಿದ್ರೆಗೆ ಜಾರಿದ' ಎಂದು ಮಿಲಿಂದ್ ಬರೆದುಕೊಂಡಿದ್ದಾರೆ.

'ಕೊನೆಗೆ ಕ್ಯಾಬ್ ಚಾಲಕನಿಗೆ ಆ್ಯಪ್‌ನಲ್ಲಿ ಐದು ಸ್ಟಾರ್ ರೇಟಿಂಗ್ ನೀಡುವ ಜೊತೆಗೆ ₹100 ಭಕ್ಷೀಸು ಸಹ ಕೊಟ್ಟೆ. ಕಾರು ಚಾಲನೆ ಗೊತ್ತಿದ್ದರೆ, ಕೆಲವೊಮ್ಮೆ ಹೀಗೆ ಕೆಲಸಕ್ಕೆ ಬರುತ್ತದೆ' ಎಂದು ಹೇಳಿದ್ದಾರೆ.

'ಉದ್ಧಟತನದಿಂದ ಸೃಜನಶೀಲ ಸಾಹಿತ್ಯ ಹಾದಿತಪ್ಪುತ್ತದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡುವವರಿಗೆ ಉದ್ಧಟತನ ಮತ್ತು ಸಿನಿಕತನ ಇರಬಾರದು. ಇದರಿಂದ ಸೃಜನಶೀಲ ಸಾಹಿತ್ಯ ಹಾದಿತಪ್ಪುತ್ತದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಪತ್ರಕರ್ತ ತುರುವನೂರು ಮಂಜುನಾಥ ಅವರ 'ಮೊಳಕೆ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಸಾಹಿತ್ಯ ಕ್ಷೇತ್ರದಲ್ಲಿ ವಿನಮ್ರತೆಯಿಂದ ವಿಷಯ ಮತ್ತು ವಿಮರ್ಶೆಗಳ ಮಂಡನೆಯಿಂದ ಬರಹಗಾರನ ಮೌಲಿಕ ಗುಣಗಳು ಕಾಣುತ್ತವೆ. ತುರುವನೂರು ಮಂಜುನಾಥ ಈ ಕೃತಿಯಲ್ಲಿ ವಿನಮ್ರತೆಯಿಂದ ವಿಷಯ ಮಂಡನೆ ಮಾಡಿದ್ದಾರೆ' ಎಂದರು.

'ಹಿಂದಿನ ಸಾಹಿತಿಗಳ ನಡುವೆ ಸಾಹಿತ್ಯ ಸಂವಾದಗಳು ನಡೆಯುತ್ತಿದ್ದ ಕಾರಣ ಗುಣಮಟ್ಟದ ಸಾಹಿತ್ಯ ರಚನೆ ಆಗುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಅಂಥ ವಾತಾವರಣ ಕಡಿಮೆ ಆಗುತ್ತಿದೆ' ಎಂದು ಹೇಳಿದರು.

ಪತ್ರಕರ್ತ ಹುಣಸವಾಡಿ ರಾಜನ್ ಮಾತನಾಡಿ, 'ಪತ್ರಿಕೋದ್ಯಮದಲ್ಲಿ ಇಂದು ಸತ್ಯ ಅಸತ್ಯವಾಗಿ ಹೋಗಿದೆ. ಸತ್ಯದ ಹೆಸರಿನಲ್ಲಿ ಸುಳ್ಳುಗಳನ್ನು ರಾರಾಜಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಪತ್ರಕರ್ತರು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ' ಎಂದರು.

ಪ್ರತಕರ್ತ ಅನಂತ ಚಿನಿವಾರ ಮಾತನಾಡಿ, 'ಪತ್ರಕರ್ತನಾದವನಿಗೆ ಅಹಂ ಮತ್ತು ಸಿನಿಕತನ ಇರಬಾರದು. ಅದರಿಂದ ಸುದ್ದಿಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಹೀಗಾಗಿಯೇ ಇಂದು ಸುದ್ದಿಗಳ ಗುಣಮಟ್ಟ ಕಡಿಮೆಯಾಗುತ್ತಿದೆ' ಎಂದು ವಿಷಾದಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ನಿವೃತ್ತ ಐಎಎಸ್ ಅಧಿಕಾರಿ ಜಿ.ಎನ್. ಶಿವಮೂರ್ತಿ, ಪತ್ರಕರ್ತ ಹನುಮೇಶ್ ಯಾವಗಲ್ ಉಪಸ್ಥಿತರಿದ್ದರು.

ಜಿಗಣಿ: ಕೆರೆಯಲ್ಲಿ ಮಹಿಳೆ ಶವ ಪತ್ತೆ

ಆನೇಕಲ್: ತಾಲ್ಲೂಕಿನ ಜಿಗಣಿ ಪೊಲೀಸ್ ಠಾಣೆ ವ್ಯಾಪ್ತಿಯ ಬೊಮ್ಮಂಡನಹಳ್ಳಿಯ ಕೆರೆಯಲ್ಲಿ ಮಹಿಳೆಯೊಬ್ಬರ ಮೃತದೇಹ ಪತ್ತೆಯಾಗಿದೆ.

ಮೃತ ಮಹಿಳೆಯನ್ನು ನೊಸೇನೂರಿನ ಕಾಂತಮ್ಮ(35) ಎಂದು ಗುರುತಿಸಲಾಗಿದೆ. ಕೌಟುಂಬಿಕ ಕಲಹದಿಂದ ಮನನೊಂದು ಮನೆ ತೊರೆದು ತನ್ನ ತಾಯಿ ಮನೆ ಸೇರಿದ್ದರು. ಇತ್ತೀಚಿಗೆ ಅವರ ತಾಯಿ ಮೃತಪಟ್ಟಿದ್ದರು.

ಒಂಟಿಯಾಗಿದ್ದ ಕಾಂತಮ್ಮ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ ಎನ್ನಲಾಗಿದೆ.ಜಿಗಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನೇಕಲ್‌ನಲ್ಲಿ ಕಾಡಾನೆ ಹಾವಳಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಗಿಹಳ್ಳಿ ಗ್ರಾಮ ಪಂಚಾಯಿತಿಯ ರಾಮನಾಯಕನ ದೊಡ್ಡಿಯ ವಿವಿಧ ಹೊಲಗಳ ಮೇಲೆ ಕಾಡಾನೆಗಳು ಶನಿವಾರ ದಾಳಿ ನಡೆಸಿ ಬೆಳೆ ನಾಶಗೊಳಿಸಿ, ದಾಂದಲೆ ನಡೆಸಿವೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಿರುವ ರಾಗಿಹಳ್ಳಿ ಸಮೀಪದ ರಾಮನಾಯಕನ ದೊಡ್ಡಿಯ ವಿವಿಧೆಡೆ ಶುಕ್ರವಾರ ರಾತ್ರಿ ಮತ್ತು ಶನಿವಾರ ಮುಂಜಾನೆ ಕಾಡಾನೆ ಹಿಂಡು ದಾಳಿ ನಡೆಸಿ ಬೆಳೆ ನಾಶಗೊಳಿಸಿದೆ. ರೈತರಾದ ರಾಮನಾಯಕ್, ರಮೇಶ್ ನಾಯಕ್, ಕಬ್ಬಾಳ್ ನಾಯಕ್ ಎಂಬುವವರ ತೋಟಗಳಲ್ಲಿ ರಾಗಿ, ತೊಗರಿಕಾಯಿ, ರಾಗಿಯ ಮೆದೆ, ತೆಂಗಿನ ಮರ, ಅವರೆಕಾಯಿ ಸೇರಿದಂತೆ ವಿವಿಧ ಬೆಳೆಗಳು ನಾಶವಾಗಿವೆ.

ರಾಗಿಹಳ್ಳಿ ಗ್ರಾಮ ಪಂಚಾಯಿತಿ ರಾಮನಾಯಕನದೊಡ್ಡಿಯಲ್ಲಿ ಕಾಡಾನೆಗಳ ದಾಳಿಯಿಂದ ರಾಗಿ ಮೆದೆ ಹಾಳಾಗಿರುವುದು

ಇದರಿಂದ ಅಸಮಾಧಾನಗೊಂಡಿರುವ ಗ್ರಾಮಸ್ಥರು ಮತ್ತು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವನ್ಯಜೀವಿ ದಾಳಿಯಿಂದ ಆಗುವ ನಷ್ಟಕ್ಕೆ ಪರಿಹಾರವನ್ನು ಬೇಗ ಕೊಡಬೇಕು. ಕಾಡಾನೆ ತೋಟಗಳತ್ತ ಬಾರದಂತೆ ಕ್ರಮ ಕೈಗೊಳ್ಳಬೇಕೆಂದು ರೈತರು ಆಗ್ರಹಿಸಿದ್ದಾರೆ.

'ಫಸ್ಟ್ ಸರ್ಕಲ್' ಉದ್ಯಮಿ ಒಕ್ಕಲಿಗ ಎಕ್ಸ್‌ಪೊ ಜ.3ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವರಿ 3 ರಿಂದ 5ರವರೆಗೆ ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್, ಗಾಯತ್ರಿ ವೃಕ್ಷದಲ್ಲಿ 'ಫಸ್ಟ್ ಸರ್ಕಲ್' ಉದ್ಯಮಿ ಒಕ್ಕಲಿಗ ಎಕ್ಸ್‌ಪೊ ನಡೆಯಲಿದೆ ಎಂದು ಫಸ್ಟ್ ಸರ್ಕಲ್‌ನ ರಾಜ್ಯ ಘಟಕದ ಅಧ್ಯಕ್ಷ ನಂದೀಶ್ ರಾಜೇಗೌಡ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಕ್ಕಲಿಗ ಉದ್ಯಮಿಗಳ ಬೆಳವಣಿಗೆ ಮತ್ತು ಯಶಸ್ವಿಗಾಗಿಯೇ ಮೂರು ದಿನಗಳ ಎಕ್ಸ್‌ಪೊ ರೂಪಿಸಲಾಗಿದೆ. ಇದು ಒಕ್ಕಲಿಗ ಸಮುದಾಯದ ಉದ್ಯಮಶೀಲತೆಗೆ ವೇದಿಕೆ ಕಲ್ಪಿಸುವುದರ ಜೊತೆಗೆ ಇನ್ನೊವೇಶನ್, ನೆಟ್‌ವರ್ಕಿಂಗ್ ಹಾಗೂ ಸಹಭಾಗಿತ್ವಕ್ಕೆ ನೆರವಾಗಲಿದೆ' ಎಂದು ಮಾಹಿತಿ ನೀಡಿದರು.

'ಎಕ್ಸ್‌ಪೊದಲ್ಲಿ ಪಾಲ್ಗೊಳ್ಳುವ ಆಸಕ್ತರು ಎಫ್‌ಸಿ ನೆಕ್ಸ್ಟ್ ಆ್ಯಪ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಇಲ್ಲಿ ರೈತರ ಸಂತೆ, ಗಂಗರು, ಹೊಯ್ಸಳರು, ಕೆಂಪೇಗೌಡರ ಆಳ್ವಿಕೆ, ಬಾಲಗಂಗಾಧರನಾಥ ಸ್ವಾಮೀಜಿ ಅವರ ಶ್ರೀಮಂತ ಪರಂಪರೆಯನ್ನು ಪ್ರದರ್ಶಿಸಲಾಗುತ್ತದೆ. ಉತ್ಪನ್ನಗಳು ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ 200ಕ್ಕೂ ಹೆಚ್ಚು ಮಳಿಗೆಗಳು ಇರಲಿದ್ದು, 1ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ' ಎಂದು ತಿಳಿಸಿದರು.

ನಗರದಲ್ಲಿ ಇಂದು

ತೃತೀಯ ವಿಶ್ವ ಹವ್ಯಕ ಸಮ್ಮೇಳನ: ಬೆಳಿಗ್ಗೆ 9.01ಕ್ಕೆ '81 ಯೋಧರಿಗೆ ಹವ್ಯಕ ದೇಶರತ್ನ' ಪುರಸ್ಕಾರ, ದಿಕ್ಸೂಚಿ ಭಾಷಣ: ಅಜಿತ್ ಹನಮಕ್ಕನವರ್, ಸನ್ಮಾನಿಸುವವರು: ಸಂದೇಶ್ ಎಚ್. ಪಿ. ಟಿ. ಮಡಿಯಾಲ್, ಎಚ್.ಎನ್. ವಿದ್ಯಾಧರ, ಅಶೋಕ್ ಕುಮಾರ್ ರೈ, ಕೆ.ಜಿ. ರಾಘವನ್, ಎಸ್. ರವಿಕುಮಾರ್, ಸುದರ್ಶನ ಚನ್ನಂಗಿಹಳ್ಳಿ, ರಾಘವೇಂದ್ರ ಕೆ. ಹೆಗಡೆ, ಬೆಳಿಗ್ಗೆ 10.16ಕ್ಕೆ 'ಸಹಸ್ರಚಂದ್ರ ಸಭಾ': ಸಾನ್ನಿಧ್ಯ: ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ, ಉಪಸ್ಥಿತಿ: ಜಿ. ಭೀಮೇಶ್ವರ ಜೋಶಿ, ಅತಿಥಿಗಳು: ಜಗದೀಶ್ ಶೆಟ್ಟರ್, ಮಹೇಶ ಜೋಶಿ, ಬಿ.ಎಲ್. ಸಂತೋಷ್, ವಿನಾಯಕ ಭಟ್ಟ ಮೂರೂರು, ಸಂಜೆ 5.01ಕ್ಕೆ ಸಮಾರೋಪ ಸಮಾರಂಭ, 'ಸಹಸ್ರಚಂದ್ರ' ಸ್ಮರಣಸಂಚಿಕೆ ಬಿಡುಗಡೆ: ಸಾನ್ನಿಧ್ಯ: ರಾಘವೇಶ್ವರಭಾರತೀ ಸ್ವಾಮೀಜಿ, ಶಂಕರವಿಜಯೇಂದ್ರ ಸರಸ್ವತೀ ಸ್ವಾಮೀಜಿ, ವಚನಾನಂದ ಸ್ವಾಮೀಜಿ, ಅಭಿನವ ಶಂಕರ ಭಾರತೀ ಸ್ವಾಮೀಜಿ, ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಡಿ.ಕೆ. ಶಿವಕುಮಾರ್, ಆರ್. ಅಶೋಕ, ಎಚ್.ಕೆ. ಪಾಟೀಲ, ಮಂಜುನಾಥ ಗೌಡ, ಸಿ.ಟಿ. ರವಿ, ಅಶೋಕ ಹಾರನಹಳ್ಳಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಆಯೋಜನೆ: ಅಖಿಲ ಹವ್ಯಕ ಮಹಾಸಭಾ, ಸ್ಥಳ: ಗೇಟ್ ನಂ.6, ರಾಯಲ್ ಸೆನೆಟ್, ಗ್ರ್ಯಾಂಡ್ ಕ್ಯಾಸಲ್ ಅರಮನೆ ಮೈದಾನ

ಬಿ. ಪದ್ಮನಾಭ ಸೋಮಯಾಜಿ ಅವರ ನಾಲ್ಕು ಪುಸ್ತಕಗಳು, ಊರ್ಮಿಳಾ ರಾವ್ ಅವರ 'ತೆರೆದ ಪುಸ್ತಕ' ಕೃತಿಗಳ ಬಿಡುಗಡೆ: ಭಾಗವಹಿಸುವವರು: ಮಲ್ಲೇಪುರಂ ಜಿ. ವೆಂಕಟೇಶ್, ವಿ. ಶ್ರೀಶಾನಂದ, ಡಾ.ನಾ. ಸೋಮೇಶ್ವರ, ಗಣಪತಿ ಹೆಗಡೆ, ಗಣಪತಿ ಭಟ್, ಆಯೋಜನೆ: ವಿಕ್ರಮ್ ಪ್ರಕಾಶನ, ಸ್ಥಳ: ನ್ಯಾಷನಲ್ ಕಾಲೇಜು ಸಭಾಂಗಣ, ಉತ್ತರಾದಿಮಠದ ಎದುರು, ಬಸವನಗುಡಿ, ಬೆಳಿಗ್ಗೆ 10.45

ಸೋಮೇಶ್ವರ

ಕುವೆಂಪು ಜನ್ಮದಿನ: ಕುವೆಂಪು ಪ್ರತಿಮೆಗೆ ಮಾಲಾರ್ಪಣೆ: ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಭಾಗವಹಿಸುವವರು: ನಲ್ಲೂರು ಪ್ರಸಾದ ಆರ್.ಕೆ., ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಸಿ.ಕೆ. ರಾಮೇಗೌಡ, ಎಂ. ಪ್ರಕಾಶಮೂರ್ತಿ, ತಾ.ಸಿ. ತಿಮ್ಮಯ್ಯ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಪ್ರತಿಮೆ, ಲಾಲ್‌ಬಾಗ್ ಪಶ್ಚಿಮದ್ವಾರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬೆಳಿಗ್ಗೆ 9

ಕುವೆಂಪು ಜನ್ಮದಿನದ ಅಂಗವಾಗಿ ನಗರ 15 ಸ್ಥಳಗಳಲ್ಲಿರುವ ಕುವೆಂಪು ಅವರ ಪ್ರತಿಮೆಗೆ ಪುಷ್ಪನಮನ: ಎಲ್. ಹನುಮಂತಯ್ಯ, ಅತಿಥಿ: ಫಾಲನೇತ್ರ, ಅಧ್ಯಕ್ಷತೆ: ನಾ. ಶ್ರೀಧರ್, ಉಪಸ್ಥಿತಿ: ಎಂ. ಲಕ್ಷ್ಮೀನರಸಿಂಹ, ಆಯೋಜನೆ: ಕರ್ನಾಟಕ ಜ್ಞಾನವಿಜ್ಞಾನ ಸಮಿತಿ, ಸ್ಥಳ: ನಾಡಪ್ರಭು ಕೆಂಪೇಗೌಡ ಪ್ರತಿಮೆ ಇರುವ ಸ್ಥಳ ಬಿಬಿಎಂಪಿ ಕೇಂದ್ರ ಕಚೇರಿಯ ಮುಂಭಾಗ, ಬೆಳಿಗ್ಗೆ 9

40ನೇ ವರ್ಷಿಕೋತ್ಸವ ಸಂಭ್ರಮ ಮಾಣಿಕ್ಯ ಮಹೋತ್ಸವ, 'ಸಂಗೀತ ಕಲಾರವಿಂದ' ಪ್ರಶಸ್ತಿ ಪ್ರದಾನ: ಮೀನಾಕ್ಷಿ ರವಿ, ಸತೀಶ್ ಹಂಪಿಹೊಳಿ, ಅಧ್ಯಕ್ಷತೆ: ಮುದ್ದುಮೋಹನ್, ಹಿಂದೂಸ್ತಾನಿ ಗಾಯನ: ಮೃತ್ಯುಂಜಯ ಶೆಟ್ಟರ್, ತಬಲಾ: ಸತೀಶ ಹಂಪಿಹೊಳಿ, ಹಾರ್ಮೋನಿಯಂ: ಶಿವಕುಮಾರ್ ಮಹಾಂತ್, ಆಯೋಜನೆ: ಸಂಗೀತ ಕೃಪಾ ಕುಟೀರ, ಸ್ಥಳ: ಸ್ವಾಮಿ ವಿವೇಕಾನಂದ ವಿದ್ಯಾಶಾಲಾ, ಹನುಮಂತನಗರ ಪಿಇಎಸ್ ಕಾಲೇಜು ಹಿಂಭಾಗ, ಬನಶಂಕರಿ ಒಂದನೇ ಹಂತ, ಬೆಳಿಗ್ಗೆ 9.30

ಉಮರ್ ಆಲೀಷಾ ಅವರ 'ವಿಜ್ಞಾನ ಜ್ಯೋತಿ' ಕನ್ನಡ ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಎ.ರಾಧಾಕೃಷ್ಣ ರಾಜು, ಅತಿಥಿಗಳು: ಎಲ್.ಎನ್. ಮುಕುಂದರಾಜ್, ರಾಮಚಂದ್ರ ಮೂರ್ತಿ, ಧನಂಜಯ ಮಾಲೂರು, ಪುಸ್ತಕ ಪರಿಚಯ: ವಿ.ಜಿ. ನಾಗೇಶ್, ಆಯೋಜನೆ: ವಿಶ್ವ ವಿಜ್ಞಾನ ವಿದ್ಯಾ ಆಧ್ಯಾತ್ಮಿಕ ಪೀಠ–ಪೀಠಾಪುರಂ ಬೆಂಗಳೂರು ಶಾಖೆ, ಸ್ಥಳ: ತೆಲುಗು ವಿಜ್ಞಾನ ಸಮಿತಿಯ ಶ್ರೀಕೃಷ್ಣದೇವರಾಯ ಕಲಾಮಂದಿರ, ನಂ. 136, ಸ್ಯಾಂಕಿ ರಸ್ತೆ, ಗಾಯತ್ರಿದೇವಿ ಪಾರ್ಕ್ ಎಕ್ಸ್‌ಟೆನ್ಷನ್, ಕೋದಂಡರಾಮಪುರ, ಬೆಳಿಗ್ಗೆ 10



ಚಂದ್ರಶೇಖರ ಕಂಬಾರ

ವಾರ್ಷಿಕ ಬಳಗಕೂಟ–2024: ಅತಿಥಿಗಳು: ಎಂ.ಎಸ್. ಶ್ರೀಕಂಠಯ್ಯ, ಎಂ.ಎಸ್. ಶೀಲಾ, 'ಬಿ.ಎಂ.ಶ್ರೀ' ಪ್ರಶಸ್ತಿ ಸ್ವೀಕರಿಸುವವರು: ಗುರುರಾಜ ಕರಜಗಿ, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ ಮತ್ತು ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾಂಗಣ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10

ಕುವೆಂಪು ಜಯಂತಿ, ಕುವೆಂಪು ಕವಿತೆಗಳ ಗಾಯನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಸಾ.ರಾ. ಗೋವಿಂದು, ಪಿ. ಮಲ್ಲಿಕಾರ್ಜುನಪ್ಪ, ಎಸ್. ಮಹದೇವಯ್ಯ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ: ಕುವೆಂಪು ಪ್ರತಿಮೆ, ಸ್ವಾತಂತ್ರ್ಯ ಉದ್ಯಾನ, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಳಿಗ್ಗೆ 10

'ಸುಭಾಷಿತಗಳು ಮತ್ತು ಇತರ ಹಿತಗುಚ್ಛಗಳು' ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಪುಸ್ತಕ ಪರಿಚಯ: ಬಿ.ಎಸ್. ಚಂದ್ರಶೇಖರ್, ಎಚ್.ಎ. ರಾಜ ಅಯ್ಯರ್, ಉಪಸ್ಥಿತಿ: ವಸಂತ ಜೋಶಿ, ದ್ವಾರಕಾನಾಥ್ ಎಸ್., ರಾಧಾಕೃಷ್ಣ ರಾವ್ ಪಾಂಗಾಳ, ಆಯೋಜನೆ: ಐಬಿಎಚ್ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಡಾ.ಎಚ್.ಕೆ. ರಂಗನಾಥ್ ಸ್ಮರಣಾರ್ಥ ದತ್ತಿ: 'ಹಾಸ್ಯ ಸಿಂಚನ' ಉಪನ್ಯಾಸ: ಕೃಷ್ಣೇಗೌಡ, ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಭಾರತೀಯ ವಿದ್ಯಾಭವನ, ವಿದ್ಯಾರಣ್ಯ ಪ್ರತಿಷ್ಠಾನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ವಿಶ್ವಮಾನವ ದಿನಾಚರಣೆ–2024: ಓಹಿಲೇಶ ಲಕ್ಷ್ಮಣ, ಎ.ಜೆ. ಸದಾಶಿವ, ಆಯೋಜನೆ ಮತ್ತು ಸ್ಥಳ: ರಂಗಕಹಳೆ ಮಕ್ಕಳ ಮನೆ ಉತ್ತರಹಳ್ಳಿ, ಬೆಳಿಗ್ಗೆ 10.30

ಬಿ.ಜೆ. ಸುವರ್ಣ ಅವರು ಅನುವಾದಿಸಿದ 'ಕೊನೆಯ ಕುಣಿಕೆ', ಪ್ರಕಾಶ್ ರಾಜಗೋಳಿ ಅವರ 'ಪದ ಸರಪಳಿ', 'ಪದಮಾಲೆ', ಸು. ರುದ್ರಮೂರ್ತಿ ಶಾಸ್ತ್ರಿ ಅವರ 'ಮಕ್ಕಳಿಗಾಗಿ ಮತ್ತೊಮ್ಮೆ ಹೇಳಿದ ಕಥೆ ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು', 'ಜೀಮೂತವಾಹನ', 'ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ' ಪುಸ್ತಕಗಳ ಬಿಡುಗಡೆ: ಗಜಾನನ ಶರ್ಮ, ಅತಿಥಿಗಳು: ಎನ್.ಸಿ. ಮಹೇಶ್, ಎನ್. ಪ್ರಭಾ, ಆಯೋಜನೆ: ಅಂಕಿತ ಪುಸ್ತಕ, (ಆನ್‌ಲೈನ್ ಕಾರ್ಯಕ್ರಮ), ಬೆಳಿಗ್ಗೆ 11

ಕುವೆಂಪು ಜನ್ಮದಿನಾಚರಣೆ: ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವವರು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಚ್. ಶಿವರಾಮೇಗೌಡ, ಎಂ. ಪ್ರಕಾಶಮೂರ್ತಿ, ಶ್ರ.ದೇ. ಪಾರ್ಶ್ವನಾಥ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ರಾಷ್ಟ್ರಕವಿ ಕುವೆಂಪು ಪ್ರತಿಮೆ ಮಲ್ಲೇಶ್ವರ ವೃತ್ತ, ಸಂಪಿಗೆ ರಸ್ತೆ, ಮಲ್ಲೇಶ್ವರ, ಮಧ್ಯಾಹ್ನ 12.30

ಸ್ಪರ್ಶ ಕಲಾಶಿಬಿರದ ಸಮಾರೋಪ ಸಮಾರಂಭ: ಅತಿಥಿಗಳು: ಸಿದ್ಧಲಿಂಗ ಸ್ವಾಮಿ ಹಿರೇಮಠ, ಜಿ. ಲಕ್ಷ್ಮೀಪತಿ, ಉಪಸ್ಥಿತಿ: ತುಂಬಾಡಿ ರಾಮಯ್ಯ, ಓ.ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ, ಸಂಜೆ 4

'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶನ: ನಿರ್ದೇಶನ: ರಾಘವೇಂದ್ರ, ಆಯೋಜನೆ: ಕಲಾ ಕೃಷಿ, ಸ್ಥಳ: ಕೆ.ಇ.ಎ. ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

ಕುವೆಂಪು ಜನ್ಮದಿನ, ವಿಶ್ವಮಾನವ ದಿನಾಚರಣೆ: ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಉಪನ್ಯಾಸ: ಎಲ್. ಹನುಮಂತಯ್ಯ, ಆಯೋಜನೆ: ಗಾಂಧಿಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿಪಾರ್ಕ್, ಭಾರತ್ ನಗರ ಎರಡನೇ ಹಂತ, ಸಂಜೆ 5.30

'ಮೋಹಿನಿ ಭಸ್ಮಾಸುರ' ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಕೇಶವ ಹೆಗಡೆ ಕೊಳಗಿ, ಮದ್ದಳೆ: ರಾಜೇಶ್ ಆಚಾರ್, ಚಂಡೆ: ಆದಿತ್ಯ ಕಾಶ್ಯನ್, ಭಸ್ಮಾಸುರ: ಸುಬ್ರಹ್ಮಣ್ಯ ಹೆಗಡೆ ಚಿಟ್ಟಾಣಿ, ಮೋಹಿನಿ: ಅಶ್ವಿನಿ ಹೆಗಡೆ ಕೊಂಡದಕುಳಿ, ಪ್ರಸ್ತುತಿ: ಸುವರ್ಣ ಪ್ರಸಾಧನ ಯಕ್ಷರಂಗ, ಆಯೋಜನೆ: ಸುರಭಾರತೀ ಸಂಸ್ಕೃತ ಪ್ರತಿಷ್ಠಾನಂ, ಸ್ಥಳ: ಒಂಬತ್ತನೇ ಸಿ ಮುಖ್ಯರಸ್ತೆ, ವಾಟರ್ ಟ್ಯಾಂಕ್ ಹತ್ತಿರ, ಒಂದನೇ ಬ್ಲಾಕ್ ಎಚ್‌ಆರ್‌ಬಿಆರ್ ಬಡಾವಣೆ, ಬಾಣಸವಾಡಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

FARNAZ

ಈಡೇರದ ಭರವಸೆ; ನನಸಾಗದ ನಿರೀಕ್ಷೆಗಳು

ಮಸಣದ ಬದುಕು ಹೇಳತೀರದು

• ಎಲ್.ಮಂಜುನಾಥ

ಬೆಂಗಳೂರಿನ ಚಾಮರಾಜಪೇಟೆಯ ಸ್ಮಶಾನದ ನೋಟ — ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಹುಬ್ಬಳ್ಳಿ: 'ಮೃತರನ್ನು ಸ್ಮಶಾನಕ್ಕೆ ತಂದವರು, ಅಂತ್ಯಕ್ರಿಯೆ ನೆರವೇರಿಸಿ ನೋವಿನಲ್ಲೇ ಮನೆಗೆ ಮರಳುತ್ತಾರೆ. ಅವರು ಪದೇ ಪದೇ ಬರಲ್ಲ. ಬಹುತೇಕ ಜನರಿಗೆ ಸ್ಮಶಾನದ ಆಸುಪಾಸಿನಲ್ಲಿ ಓಡಾಡಲು ಹಿಂಜರಿಕೆ. ಹಲವರಿಗೆ ಅದರ ಬಗ್ಗೆ ಮಾತನಾಡಲು ಭಯ. ಆದರೆ, ನಮಗೆ ಅದೇ ಆಸರೆ. ಅದೇ ಬದುಕು. ಒಂದರ್ಥದಲ್ಲಿ ಅದೇ ಎಲ್ಲವೂ...'

ಹೀಗೆ ಹೇಳಿ, ಮಾತು ಮುಂದುವರಿಸಲು ಆಗದೇ ಹುಬ್ಬಳ್ಳಿಯ ಬಸಪ್ಪ ಮೌನವಾದರು. ಅವರಿಗೆ ಸ್ಮಶಾನದ ಜೊತೆಗಿನ ನಂಟು ಹಲವು ವರ್ಷಗಳದ್ದು. ಕುಟುಂಬದ ಸದಸ್ಯರೊಂದಿಗೆ ಬದುಕು ಕಟ್ಟಿಕೊಂಡಿದ್ದು, ಪ್ರತಿದಿನವೂ ಸಾವನ್ನು ಹತ್ತಿರದಿಂದ ಕಂಡಿದ್ದು, ಮನಸ್ಥಿತಿ ಗಟ್ಟಿ ಮಾಡಿಕೊಂಡಿದ್ದು...ಹೀಗೆ ಒಟ್ಟಾರೆ ದುರ್ಗಮ ಹಾದಿಯಲ್ಲೇ ಅವರ ಜೀವನ ಸಾಗಿದೆ.

'ಸ್ಮಶಾನ ಕಾಯುವುದು ಹೊರತುಪಡಿಸಿ, ಬೇರೆ ಏನೂ ಗೊತ್ತಿಲ್ಲ' ಎಂದು ಹೇಳುವಾಗ ಕಣ್ಣಂಚಿನಲ್ಲಿ ನೀರು ಇತ್ತು. ಕಾರಣ, ಅವರದ್ದು ಬದುಕಿದ್ದರೂ ಸತ್ತಂತಹ ಸ್ಥಿತಿ. ಅವರ ಜೀವನ ಸುಧಾರಿಸಿಲ್ಲ. ನೆಮ್ಮದಿ ಜೊತೆಗಿಲ್ಲ. ಸರ್ಕಾರದ ಭರವಸೆ, ಜನಪ್ರತಿನಿಧಿಗಳ ಆಶ್ವಾಸನೆ ಪೂರ್ಣಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ.

ಬಹುತೇಕ ಸ್ಮಶಾನ ಕಾರ್ಮಿಕರ ಸ್ಥಿತಿ ಬಸಪ್ಪಗಿಂತ ಹೆಚ್ಚು ಭಿನ್ನವೇನಿಲ್ಲ. ಶವ ಹೂಳಲು ಕುಣಿ ತೆಗೆಯುವುದು, ಸುಡಲು ಕಟ್ಟಿಗೆ ವ್ಯವಸ್ಥೆ ಮಾಡುವುದು ಮತ್ತು ಸ್ಮಶಾನ ಕಾಯುವುದು ನಿತ್ಯದ ಕಾಯಕ. ಆದರೆ, ಇದಕ್ಕೆ ಪೂರಕವಾಗಿ ಯಾವುದೇ ರೀತಿ ನ್ಯಾಯಯುತ ಫಲಾಪೇಕ್ಷೆ ನಿರೀಕ್ಷಿಸುವಂತಿಲ್ಲ. ಒಂದು ವೇಳೆ ನಿರೀಕ್ಷಿಸಿದರೂ ಅದು ಸುಲಭವಾಗಿ ದಕ್ಕಲ್ಲ.

ರಾಜ್ಯದಲ್ಲಿ ಅಂದಾಜು 50 ಸಾವಿರಕ್ಕೂ ಹೆಚ್ಚು ಸಾರ್ವಜನಿಕ ಸ್ಮಶಾನಗಳಿವೆ. ಲಿಂಗಾಯತ, ಬ್ರಾಹ್ಮಣ, ಮುಸ್ಲಿಂ, ಕ್ರೈಸ್ತ ಧರ್ಮಕ್ಕೆ ಸೇರಿದ ಸಮುದಾಯ ಸ್ಮಶಾನ ಹಾಗೂ ಖಬರಸ್ತಾನಗಳಿವೆ. ಕೆಲ ಕಡೆ ಆಯಾ ಜಾತಿಗಳಿಗೆ ಸೇರಿದ ಸ್ಮಶಾನವೂ ಇದೆ. ಒಟ್ಟಾರೆ 2 ಲಕ್ಷಕ್ಕೂ ಹೆಚ್ಚು ಸ್ಮಶಾನ ಕಾರ್ಮಿಕರು ಇದ್ದಾರೆ. ಕೆಲವರು ಹತ್ತಾರು ವರ್ಷಗಳಿಂದ ಕೆಲಸದಲ್ಲಿದ್ದರೆ, ಇನ್ನೂ ಕೆಲವರಿಗೆ ಇದೇ ಕುಲಕಸುಬು.

ಸಾರ್ವಜನಿಕ ಸ್ಮಶಾನಗಳಲ್ಲಿ ಹಿಂದುಳಿದ ಸಮುದಾಯದವರ ಅಂತ್ಯಕ್ರಿಯೆಗೆ 'ಸ್ಮಶಾನ ಕಾವಲುಗಾರರು' ಇರುತ್ತಾರೆ. ಇವರಲ್ಲಿ ಬಹುತೇಕರು ಪರಿಶಿಷ್ಟ ಸಮುದಾಯಕ್ಕೆ ಸೇರಿದವರು. ಲಿಂಗಾಯತ, ಬ್ರಾಹ್ಮಣ, ಮುಸ್ಲಿಂ, ಕ್ರೈಸ್ತರ ಸ್ಮಶಾನಗಳಲ್ಲಿ ಆಯಾ ಸಮುದಾಯದವರೇ 'ಎಲ್ಲವೂ' ನಿಭಾಯಿಸುತ್ತಾರೆ. ಸ್ಮಶಾನ ಕಾರ್ಮಿಕರು ಸಾಮಾಜಿಕವಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಅತಿ ಹಿಂದುಳಿದ ಸ್ಥಿತಿಯಲ್ಲಿದ್ದಾರೆ. ಇಂತಹ ಜನರಿಗೆ ಮದುವೆಗೆ ಹೆಣ್ಣು ಮತ್ತು ಗಂಡು ಸಿಗುವುದು ಸಹ ದೊಡ್ಡ ಸಮಸ್ಯೆಯಾಗಿದೆ.

ಸಿಗದ ವೇತನ, ಸೌಲಭ್ಯ: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಎಲ್ಲಾ ಸಾರ್ವಜನಿಕ ಸ್ಮಶಾನ, ಚಿತಾಗಾರಗಳಲ್ಲಿನ ಕೆಲಸಗಾರರಿಗೆ ತಿಂಗಳಿಗೆ ₹14 ಸಾವಿರ, ಮಹಾನಗರ ಪಾಲಿಕೆ ವ್ಯಾಪ್ತಿಯ ಮಸಣಗಳಲ್ಲಿನ ಕಾರ್ಮಿಕರಿಗೆ ₹13 ಸಾವಿರ, ನಗರ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ್ಮಶಾನ ಕಾರ್ಮಿಕರಿಗೆ ₹10 ಸಾವಿರ ವೇತನ ನೀಡಬೇಕು ಎಂಬ ಪ್ರಸ್ತಾವ ಸರ್ಕಾರದ ಮುಂದಿದೆ. ಆದರೆ, ಅದು ಜಾರಿಯಾಗಿಲ್ಲ' ಎಂದು ಕರ್ನಾಟಕ ರಾಜ್ಯ ಮಸಣ ಕಾರ್ಮಿಕರ ಸಂಘದ ಸಂಚಾಲಕ ಯು.ಬಸವರಾಜ ಆರೋಪಿಸುತ್ತಾರೆ.

ಸಾರ್ವಜನಿಕ ಸ್ಮಶಾನ ಕಾರ್ಮಿಕರನ್ನು 'ಸತ್ಯ ಹರಿಶ್ಚಂದ್ರ ಬಳಗ' ಎಂದು ಕರೆಯಬೇಕು ಎಂದು ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದ್ದರು. ಅದು ಅನುಷ್ಠಾನವಾಗಲಿಲ್ಲ. '300ಕ್ಕೂ ಹೆಚ್ಚು ಸ್ಮಶಾನ ಕಾರ್ಮಿಕರ ಸೇವೆಯನ್ನು ಕಾಯಂ ಮಾಡಲಾಗುವುದು' ಎಂಬ ಭರವಸೆ ಕೆಲವರಿಗೆ ಮಾತ್ರ ದಕ್ಕಿತು.

ಬಿಬಿಎಂಪಿ, ಮಂಗಳೂರು ಹಾಗೂ ಮೈಸೂರು ಮಹಾನಗರ ಪಾಲಿಕೆ ನಿರ್ವಹಣೆಯ ವಿದ್ಯುತ್ ಚಿತಾಗಾರಗಳಲ್ಲಿ ಕೆಲ ಸಿಬ್ಬಂದಿ ಕಾಯಂ ಆಗಿದ್ದಾರೆ. ಇನ್ನೂ ಕೆಲವರು ಸೇವಾವಧಿ ಆಧಾರಿಸಿ ವೇತನ ಪಡೆಯುತ್ತಾರೆ. ಕೆಲವರು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಾರೆ. ಸಾರ್ವಜನಿಕ ಸ್ಮಶಾನ ಕಾವಲುಗಾರರಿಗೆ ತಿಂಗಳಿಗೆ ಕನಿಷ್ಠ ₹4,800 ರಿಂದ ₹7,275 ವೇತನ ನೀಡಲು ನಗರಾಭಿವೃದ್ಧಿ ಇಲಾಖೆ ಸೂಚಿಸಿದೆ. 2011ರ ಏಪ್ರಿಲ್ 21ರಲ್ಲಿನ ರಾಜ್ಯಪತ್ರದಲ್ಲಿ ಇದರ ಉಲ್ಲೇಖವಿದ್ದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ.

'ಸಾರ್ವಜನಿಕ ಸ್ಮಶಾನಗಳಲ್ಲಿ ಕೆಲಸ ಮಾಡುವವರಿಗೆ ತಿಂಗಳ ಪೂರ್ತಿ ಕೆಲಸವಿರಲ್ಲ. ಹಾಗಾಗಿ ಕಾಯಂ ಮಾಡುವುದು ಕಷ್ಟ' ಎಂಬುದು ರಾಜ್ಯ ಸರ್ಕಾರದ ವಾದ. 'ಸ್ಮಶಾನ ನಿರ್ವಾಹಕರು ಎಂದು ಗುತ್ತಿಗೆ ಆಧಾರದಲ್ಲಿ ನೇಮಿಸಿ, ನಿಗದಿತ ಪ್ರೋತ್ಸಾಹಧನ ಕೊಡಿ' ಎಂಬುದು ಸ್ಮಶಾನ ಕಾರ್ಮಿಕರ ಪ್ರತಿವಾದ.

ಅಸಲಿಗೆ, ಅವರಿಗೆ ಸ್ಮಶಾನದಲ್ಲಿ ಕೂರಲು, ನಿಲ್ಲಲು ಅಥವಾ ಇರಲು ಕನಿಷ್ಠ ಕೊಠಡಿಯೂ ಇಲ್ಲ. ಕೋಲಾರದ ರುದ್ರಭೂಮಿಯ ಪುಟ್ಟ ಕೊಠಡಿಯಲ್ಲಿ ಜನಿಸಿದ ಆನಂದ ಅವರಿಗೆ 'ಸ್ಮಶಾನ'ದ ಸಂಕೋಲೆಯಿಂದ ಹೊರ ಬರಲು ಸಾಧ್ಯವಾಗಿಲ್ಲ. ಅವರ ತಂದೆ ವೆಂಕಟೇಶ ಮತ್ತು ಅಜ್ಜ ಮುನಿಯಪ್ಪ ಅವರಿಗೂ ಸ್ಮಶಾನವೇ ಆಸರೆ ಆಗಿತ್ತು. ಬರೋಬ್ಬರಿ 60ಕ್ಕೂ ಹೆಚ್ಚು ವರ್ಷಗಳಿಂದ ಈ ಕುಟುಂಬ ಈ ಸ್ಮಶಾನದಲ್ಲೇ ಬದುಕು ಸವೆಸಿದೆ.

'ಕಾವಲುಗಾರರಾಗಿ ಸ್ಮಶಾನ ಸ್ವಚ್ಛಗೊಳಿಸುವುದು ಸೇರಿ ಹಲವು ಕೆಲಸ ಮಾಡುತ್ತೇವೆ. ಆದರೆ, ನಮಗೆ ಇರಲು ಸರಿಯಾದ ಮನೆ ಇಲ್ಲ. ಹೆಣ ತರುವವರಿಗೆ ಪೂಜೆ ಮಾಡಲೆಂದು ಕಟ್ಟಿಸಿದ ಪುಟ್ಟ ಕೊಠಡಿಯಲ್ಲೇ ವಾಸವಿದ್ದೇವೆ. ಅಮ್ಮ ಮುನಿವೆಂಕಟಮ್ಮ, ಪತ್ನಿ ನಳಿನಿ, ಮಕ್ಕಳು, ಸಹೋದರರು ಜೊತೆಗಿದ್ದಾರೆ' ಎಂದು ಆನಂದ್ ತಿಳಿಸಿದರು.

ಆನಂದ್ ಅವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಬೇರೆಯೊಂದು ಕ್ಷೇತ್ರದಲ್ಲಿ ಸಾಧನೆ ಮಾಡಲಿ ಎಂಬ ಗುರಿ ಹೊಂದಿದ್ದಾರೆ. 'ಅನಕ್ಷರತೆ ಕಾರಣ ನಮ್ಮ ತಾತಾ, ತಂದೆ ಸ್ಮಶಾನ ಕಾಯ್ದರು. ನಾನೂ ಕೂಡ ಓದು–ಬರಹ ಕಲಿಯಲಿಲ್ಲ. ಸ್ಮಶಾನ ಕಾಯುವ ಕೆಲಸದಲ್ಲಿ ಶ್ರದ್ಧೆಯಿದೆ. ಆದರೆ, ಸೌಲಭ್ಯಗಳು ಇಲ್ಲದೆ ಮತ್ತು ನಿಯಮಿತ ವೇತನವಿಲ್ಲದೇ ಕುಟುಂಬ ನಿರ್ವಹಣೆ ತುಂಬಾನೇ ಕಷ್ಟ. ಅನಾರೋಗ್ಯ ಉಂಟಾದರೆ, ಚಿಕಿತ್ಸೆಗೆ ಹಣ ಇರಲ್ಲ' ಎಂದು ಅವರು ಕಣ್ಣೀರಿಟ್ಟರು.

ವಿಜಯನಗರದ ಸಾರ್ವಜನಿಕ ಸ್ಮಶಾನದಲ್ಲಿ ಕರ್ನಾಟಕ ರಾಜ್ಯ ಮಸಣ ಕಾರ್ಮಿಕರ ಸಂಘದವರು ವಿವಿಧ ಬೇಡಿಕೆಗಳ ಈಡೇರಿಕೆ ಸಂಬಂಧ ಇತ್ತೀಚೆಗೆ ಪ್ರತಿಭಟನೆ ನಡೆಸಿದರು

ಈ ಎಲ್ಲದರ ಮಧ್ಯೆ ದುಡಿಮೆಗಾಗಿ ಬಹುತೇಕ ಜನ ಅದರಲ್ಲೂ ಯುವಜನರು ಮಹಾನಗರಗಳಿಗೆ ಮತ್ತು ಹೊರರಾಜ್ಯಗಳಿಗೆ ಗುಳೆ ಹೋಗುತ್ತಾರೆ. ಕುಟುಂಬಕ್ಕೆ ಆಧಾರಸ್ತಂಭ ಆಗಬೇಕಾದ ಯುವಜನರೇ ಮನೆಯಿಂದ ಹೊರಟರೆ, ಕುಟುಂಬ ಸದಸ್ಯರು ಸೇರಿದಂತೆ ಹಿರಿಯರು ಅನಾಥಸ್ಥಿತಿ ಅನುಭವಿಸುತ್ತಾರೆ. ಅವರು ಮೃತಪಟ್ಟರೆ, ಸ್ಮಶಾನಕ್ಕೆ ಒಯ್ದು ಮಣ್ಣು ಮಾಡಲು ಜನ ಇರಲ್ಲ. ಗುಳೆ ಹೋದವರು ಆರ್ಥಿಕ ಸಂಕಷ್ಟದಿಂದ ಊರುಗಳಿಗೆ ಮರಳಲು ಆಗುವುದಿಲ್ಲ.

'ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕ ಪ್ರದೇಶದಲ್ಲಿನ ಪರಿಸ್ಥಿತಿ ತುಂಬಾ ಬಿಗಡಾಯಿಸಿದೆ. ಉದ್ಯೋಗಾವಕಾಶಗಳಿಲ್ಲ. ಉನ್ನತ ಶಿಕ್ಷಣ ಪಡೆದರೂ ಕೆಲಸ ಸಿಗಲ್ಲ. ಸ್ಮಶಾನ ಕಾಯುವ ಕೆಲಸದಿಂದ ಬಿಡುಗಡೆ ಆಗಬೇಕೆಂದು ಬಯಸಿದರೂ ಬೇರೆ ಬೇರೆ ಕಾರಣದಿಂದ ಸಾಧ್ಯವಾಗುವುದಿಲ್ಲ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದರೂ ಅವರಿಗೆ ಉದ್ಯೋಗ ಸಿಗದಿದ್ದರೆ, ನಮ್ಮಂತೆಯೇ ಅನಿವಾರ್ಯವಾಗಿ ಸ್ಮಶಾನ ಕಾಯಬೇಕಾಗುತ್ತದೆ' ಎಂದು ಯಾದಗಿರಿಯ ಬಸಣ್ಣ ಹೇಳಿದರು.

ಸುಸ್ಥಿತಿಯಲ್ಲಿ ಇಲ್ಲ ಸ್ಮಶಾನ: ಸ್ಮಶಾನ ಕಾಯುವ ಕಾರ್ಮಿಕರಷ್ಟೇ ಅಲ್ಲ, ಸ್ಮಶಾನಗಳು ಸಹ ಸುಸ್ಥಿತಿಯಲ್ಲಿ ಇಲ್ಲ. ಬಹುತೇಕ ಸಾರ್ವಜನಿಕ ಸ್ಮಶಾನಗಳಲ್ಲಿ ಕುಡಿಯುವ ನೀರು ಸೌಲಭ್ಯ ಇಲ್ಲ. ಸ್ವಚ್ಛತೆ ಇಲ್ಲ. ಕೆಲ ಕಡೆ ಸ್ಮಶಾನ ಒತ್ತುವರಿಯಾಗಿದ್ದರೆ, ಕೆಲ ಕಡೆ ಶವಗಳ ಮೇಲೆ ಶವಗಳನ್ನು ಹೂಳಲಾಗುತ್ತದೆ. ನಿರ್ಜನ ವಾತಾವರಣ ಇರುವ ಕಾರಣ ಸ್ಮಶಾನ ಕೆಲ ಬಾರಿ ಮದ್ಯವ್ಯಸನಿಗಳ ತಾಣವಾಗಿಯೂ ಮಾರ್ಪಡುತ್ತದೆ. ಎಲ್ಲಿ ಬೇಕೆಂದಲ್ಲಿ ಮದ್ಯದ ಬಾಟ್ಲಿ, ಸಿಗರೇಟು, ಬೀಡಿ ಮುಂತಾದವು ಎಸೆದು, ಮನಬಂದಂತೆ ಗಲೀಜು ಮಾಡುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಉಮಳೆಜೂಗ್ ಎಂಬ ದ್ವೀಪ ಗ್ರಾಮವು ಕಾಳಿನದಿ ಮಧ್ಯೆ ಇದೆ. ಅಲ್ಲಿ ಸಮರ್ಪಕ ಸೇತುವೆ ವ್ಯವಸ್ಥೆ ಇಲ್ಲ, ಸಂಪರ್ಕ ರಸ್ತೆಯೂ ಇಲ್ಲ. ಸ್ಮಶಾನವೂ ಇಲ್ಲ. ಆ ಗ್ರಾಮದಲ್ಲಿ ಯಾರಾದರೂ ಮೃತರಾದರೆ ದೇಹವನ್ನು ದೋಣಿಯ ಮೂಲಕ ಸಮೀಪದ ಊರಿಗೆ ಒಯ್ದು ಅಲ್ಲಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ಮಾಡುತ್ತಾರೆ.

ಗುಡ್ಡಗಾಡು, ಅರಣ್ಯ ಭೂಮಿ, ಸಮುದ್ರ ಆವರಿಸಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯ ನೂರಾರು ಗ್ರಾಮಗಳಲ್ಲಿ ಸ್ಮಶಾನದ ವ್ಯವಸ್ಥೆ ಇಲ್ಲ. ಕೆಲವೇ ಗ್ರಾಮಗಳಲ್ಲಿ ಸ್ಮಶಾನಕ್ಕೆ ವ್ಯವಸ್ಥಿತ ಶೆಡ್, ಕಾಂಪೌಂಡ್ ಗೋಡೆಗಳಿವೆ. ಇನ್ನುಳಿದಂತೆ ನೂರಾರು ಗ್ರಾಮಗಳಲ್ಲಿ ಗ್ರಾಮದ ಹೊರವಲಯದ ಕಾಡು, ಕೆಲವೆಡೆ ಮೃತರ ಕುಟುಂಬಕ್ಕೆ ಸೇರಿದ ಜಮೀನುಗಳೇ ಸ್ಮಶಾನವಾಗಿದೆ. ಊರಾಚೆಗಿನ ಸ್ಮಶಾನಕ್ಕೆ ತೆರಳಲು ಸರಿಯಾದ ರಸ್ತೆ ಇಲ್ಲ. ಕೊರಕಲು ಬಿದ್ದ ಹಳ್ಳ ಕೊಳ್ಳ ದಾಟಿ, ಗುಡ್ಡಗಳನ್ನು ಏರಿ ಶವಗಳ ಅಂತ್ಯಕ್ರಿಯೆ ಮಾಡಬೇಕು.

ರಾಜ್ಯದ ಇನ್ನೂ ಹಲವು ನಗರ, ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿ ಸ್ಮಶಾನಗಳಿಲ್ಲ. ಜಮೀನು, ಹೊಳೆಯ ಬದಿ ಅಥವಾ ಊರು ಹೊರಗಿನ ಪ್ರದೇಶದಲ್ಲಿ ಅಂತ್ಯಕ್ರಿಯೆ ಮಾಡಬೇಕು. ಬೆಳಗಾವಿ ಜಿಲ್ಲೆಯ 233 ಗ್ರಾಮಗಳಲ್ಲಿ ಸ್ಮಶಾನಭೂಮಿ ಇಲ್ಲ. ಇಲ್ಲಿ ವಿವಿಧ ಸಮುದಾಯಗಳ ಜನರು ಶವಗಳ ಅಂತ್ಯಕ್ರಿಯೆಗೆ ಪರದಾಡುತ್ತಾರೆ. ಊರಿಗೆ ಅಥವಾ ಗ್ರಾಮಕ್ಕೆ ಸ್ಮಶಾನ ಭೂಮಿ ಮಂಜೂರು ಮಾಡುವಂತೆ ಪದೇ ಪದೇ ಒತ್ತಾಯಿಸಿದರೂ ಅದಕ್ಕೆ ಮನ್ನಣೆ ಸಿಕ್ಕಿಲ್ಲ. ಕೆಲ ಗ್ರಾಮಗಳಲ್ಲಿ ಸ್ಥಳೀಯ ಮುಖಂಡರು ಅಂತ್ಯಕ್ರಿಯೆ ನಡೆಸಲು ಮತ್ತು ಸ್ಮಶಾನದ ಸಲುವಾಗಿ ತಮ್ಮ ಹೊಲಗಳನ್ನು ಬಿಟ್ಟುಕೊಟ್ಟಿದ್ದಾರೆ. ಕೆಲ ಕಡೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಭೂಮಿ ಅಭಿವೃದ್ಧಿ ಮಾಡಿ, ಸ್ಮಶಾನದ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಸುಳೇಬಾವಿ, ಚಚಡಿ, ಮಾರಿಹಾಳ, ಮುನವಳ್ಳಿ, ಬೆಟಗೇರಿ, ಸಾಂಬ್ರಾ, ಖಾನಾಪುರ, ಸದಲಗಾ, ಮಂಗಾವತಿ, ತೋಪಿನಕಟ್ಟಿ, ಅವರಗೋಳ, ಪಾರಿಶ್ವಾಡ, ಗುಡಸ್, ರಕ್ಷಿ, ಮುದೇನೂರ, ಮುಗಳಖೋಡ ಗ್ರಾಮಗಳಲ್ಲಿ ಪರಿಶಿಷ್ಟ ಸಮುದಾಯದವರ ಸ್ಮಶಾನಕ್ಕೆ ಇನ್ನೂ ಹೋರಾಟಗಳು ನಡೆದಿವೆ. 'ಜಿಲ್ಲೆಯಲ್ಲಿ ಸ್ಮಶಾನಗಳ ಅಭಿವೃದ್ಧಿಗಾಗಿ, ಪ್ರತಿ ಸ್ಮಶಾನಕ್ಕೆ ₹5 ಲಕ್ಷದಂತೆ ₹2 ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ' ಎಂದು ಸಚಿವ ಸತೀಶ ಜಾರಕಿಹೊಳಿ ಸೂಚಿಸಿದ್ದರು. ಆದರೆ, ಅದು ಕಾರ್ಯರೂಪಕ್ಕೆ ಬಂದಿಲ್ಲ.

ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ 43 ಸೇರಿ ಜಿಲ್ಲೆಯಾದ್ಯಂತ 879 ಸ್ಮಶಾನಗಳಿವೆ. ಈ ಸ್ಮಶಾನಗಳ ಅಭಿವೃದ್ಧಿಗೆ ಕೋಟ್ಯಂತರ ರೂಪಾಯಿ ಅನುದಾನ ಬಂದರೂ ಕುಡಿಯುವ ನೀರು, ಕನಿಷ್ಠ ಸೌಕರ್ಯ ಒದಗಿಸಿಲ್ಲ. ಗದಗ ತಾಲ್ಲೂಕಿನ ಎಂಟು ಗ್ರಾಮಗಳಿಗೆ ಸ್ಮಶಾನಗಳೇ ಇಲ್ಲ. ರೋಣ, ನರಗುಂದ, ಶಿರಹಟ್ಟಿ, ಮುಂಡರಗಿ, ಲಕ್ಷ್ಮೇಶ್ವರ ಹಾಗೂ ಗಜೇಂದ್ರಗಡ ತಾಲ್ಲೂಕಿನ ಕೆಲ ಗ್ರಾಮಗಳಲ್ಲೂ ಇದೇ ಸ್ಥಿತಿ ಇದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಮಶಾನಗಳಿಗೆ ಹೋಗಲು ರಸ್ತೆಗಳಿಲ್ಲ. ಬಹುತೇಕ ಒತ್ತುವರಿಯಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಂದುಕೊರತೆ ಸಭೆಯಲ್ಲಿ ಈ ವಿಚಾರವನ್ನು ಮುಖಂಡರು ಅಧಿಕಾರಿಗಳ ಗಮನಕ್ಕೆ ತರುತ್ತಲೇ ಇದ್ದಾರೆ. ಆದರೆ, ಸಮಸ್ಯೆ ಬಗೆಹರಿದಿಲ್ಲ. ಚಿಕ್ಕಬಳ್ಳಾಪುರದ ನಕ್ಕಲಕುಂಟೆ ಮತ್ತಿತರ ಸ್ಮಶಾನಗಳಲ್ಲಿ ಜಾಗ ಇಲ್ಲ. ವಿದ್ಯುತ್ ಚಿತಾಗಾರ ನಿರ್ಮಾಣವಾಗಿ ವರ್ಷವಾದರೂ ಉದ್ಘಾಟನೆ ಆಗಿಲ್ಲ.

'ಸ್ಮಶಾನಕ್ಕೆ ಜಾಗ ಕಲ್ಪಿಸಿಕೊಡುವುದು ಮತ್ತು ಸ್ಮಶಾನ ಸ್ಥಳವು ಸಮಾಧಿಗಳಿಂದ ತುಂಬಿದ್ದರೆ, ಪರ್ಯಾಯ ರೂಪದಲ್ಲಿ ಮತ್ತೊಂದು ಸ್ಥಳವನ್ನು ಗುರುತಿಸಿ ಅಂತ್ಯಕ್ರಿಯೆ ಮಾಡಲು ಜನರಿಗೆ ಅನುಕೂಲ ಮಾಡಬೇಕು. ಸಾರ್ವಜನಿಕ ಸ್ಮಶಾನಗಳಿಗೆ ಸೌಲಭ್ಯ ಕಲ್ಪಿಸಿ, ಸ್ವಚ್ಛತೆಗೆ ಆದ್ಯತೆ ನೀಡಬೇಕು. ಈ ಹೊಣೆಗಾರಿಕೆ ನಿಭಾಯಿಸುವುದು ಆಯಾ ಸ್ಥಳೀಯ ಸಂಸ್ಥೆಗಳ ಕರ್ತವ್ಯ ಎಂದು ಮುನ್ಸಿಪಲ್ ಕಾರ್ಪೊರೇಷನ್ ಆಕ್ಟ್ (ಕೆಎಂಸಿ) ನಲ್ಲಿ ಸೂಚಿಸಲಾಗಿದೆ. ಆದರೆ, ಇದಾಗುತ್ತಿಲ್ಲ. ಎಲ್ಲಿಯವರೆಗೆ ಹೋರಾಡಬೇಕೋ ತಿಳಿಯದು' ಎಂಬುದು ರಾಜ್ಯ ಮಸಣ ಕಾರ್ಮಿಕರ ಸಂಘದವರ ಅಳಲು.

ಪೂರಕ ಮಾಹಿತಿ: ಪ್ರಜಾವಾಣಿ ಬ್ಯೂರೋಗಳಿಂದ

ಸ್ಮಶಾನ ಕಾರ್ಮಿಕರನ್ನು ನೇಮಿಸಿ, ಕನಿಷ್ಠ ವೇತನ ನೀಡುವುದರ ಜೊತೆಗೆ ಅಗತ್ಯ ಸೌಲಭ್ಯ ಹಾಗೂ ಗುಂಡಿ ತೋಡುವ ಪರಿಕರ ನೀಡಬೇಕು. ಸ್ಮಶಾನ ಹೊಂದಿರದ ಊರುಗಳಲ್ಲಿ ಅದಕ್ಕಾಗಿ ಜಾಗ ಮೀಸಲಿಡಬೇಕು ಎಂದು ಕೋರಿ ವರ್ಷಗಳಿಂದ ಹೋರಾಟ ನಡೆದಿದೆ. ಸ್ಪಂದನೆ ಸಿಕ್ಕಿಲ್ಲ.

ಯು.ಬಸವರಾಜ, ಸಂಚಾಲಕ, ಕರ್ನಾಟಕ ರಾಜ್ಯ ಮಸಣ ಕಾರ್ಮಿಕರ ಸಂಘ

ಸಾರ್ವಜನಿಕ ಸ್ಮಶಾನಗಳಲ್ಲಿ ಕಾರ್ಯ ನಿರ್ವಹಿಸಲು ಅಗತ್ಯ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕು. ಸ್ಮಶಾನ ಸಮಸ್ಯೆ ಇರುವ ಕಡೆ ಸರ್ಕಾರದ ಖರಾಬು ಭೂಮಿ ನೀಡಬೇಕು ಎಂಬ ನಿಯಮವಿದೆ. ಆದರೆ, ಯಾವುದೂ ಅನುಷ್ಠಾನವಾಗಿಲ್ಲ. ಸಂಪೂರ್ಣ ನಿರ್ಲಕ್ಷ್ಯ ತೋರಲಾಗುತ್ತಿದೆ.

ಕೆ.ಸಿ.ರಾಜಾಕಾಂತ, ದಸಂಸ ಮುಖಂಡ. ಚಿಕ್ಕಬಳ್ಳಾಪುರ.

ಕೋವಿಡ್‌ನಲ್ಲಿ ಹಣವನ್ನು ಕವರ್‌ನಲ್ಲಿ ಎಸೆಯುತ್ತಿದ್ದರು...

'ನಮ್ಮ ಕೆಲಸಕ್ಕೆ ಸಮಯ ಎಂಬುದು ಇಲ್ಲ. ಅಮಾವಾಸ್ಯೆ–ಹುಣ್ಣಿಮೆ ಏನನ್ನೂ ಲೆಕ್ಕಿಸದೆ ಯಾವಾಗ ಕರೆದರೂ ಪಿಕಾಸಿ, ಗುದ್ದಲಿ, ಹಾರೆ ಹಿಡಿದು ಕೆಲಸಕ್ಕೆ ಸಿದ್ಧರಾಗುತ್ತೇವೆ. ಶವಗಳು ಬಂದರಷ್ಟೇ ನಮ್ಮ ಜೀವನ. ನಮ್ಮ ಬದುಕಿಗೆ ಭದ್ರತೆ ಇಲ್ಲ. ಸೂರಿಲ್ಲ. ಈಗ ರಟ್ಟೆಯಲ್ಲಿ ಶಕ್ತಿ ಇದೆ ಮಾಡುತ್ತೇವೆ. ಮುಂದೆ ವಯಸ್ಸಾದ ಮೇಲೆ ನಮಗ್ಯಾರು ಆಸರೆ? ನಮ್ಮನ್ನೇ ನಂಬಿರುವ ಕುಟುಂಬದವರ ಗತಿಯೇನು' ಎಂಬುದು ದಾವಣಗೆರೆಯ ಗಾಂಧಿನಗರದ ರುದ್ರಭೂಮಿಯ ಸ್ಮಶಾನ ಕಾರ್ಮಿಕರಾದ ವೈ.ಮೈಲಪ್ಪ, ಎಚ್.ಮಂಜಪ್ಪ, ಪಿ.ಮಹಾಂತೇಶ್, ಎ.ನಾಗರಾಜ ಅವರ ಆತಂಕ.

'ಕೋವಿಡ್ ಸಮಯದಲ್ಲಿ ದಿನಕ್ಕೆ 15 ರಿಂದ 20 ಶವ ಬರುತಿತ್ತು. ವಾಹನಗಳಲ್ಲಿ ಇಲ್ಲವೇ ಗೇಟ್ ಮುಂದೆ ಶವಗಳನ್ನು ಇರಿಸಿ, ಹಣವನ್ನು ಕವರ್‌ನಲ್ಲಿ ಇಟ್ಟು ಬಿಸಾಡಿ ಹೋಗುತ್ತಿದ್ದರು. ಆ ದಿನಗಳನ್ನು ನೆನಪಿಸಿಕೊಂಡರೆ, ಈಗಲೂ ಭಯ, ಆತಂಕ ಮತ್ತು ಅನಿಶ್ಚಿತತೆ ಕಾಡುತ್ತದೆ. ರಾತ್ರಿ, ಹಗಲೆನ್ನದೆ ಕೆಲಸ ಮಾಡುವುದರ ಜೊತೆಗೆ ಯಾವಾಗ, ಯಾರಿಗೆ ಕೊರೊನಾ ಬರುತ್ತೆಂದು ಹೆದರಿಕೆ ಆಗುತಿತ್ತು. ಕೋವಿಡ್ ದಿನಗಳಲ್ಲಿ ಅಲ್ಲದೇ ನಂತರದ ದಿನಗಳಲ್ಲಿ ಕಷ್ಟಪಟ್ಟು ದುಡಿದರೂ ನಮ್ಮ ಬದುಕು ಮಾತ್ರ ಸುಧಾರಣೆ ಕಾಣುತ್ತಿಲ್ಲ' ಎಂದು ಮೈಲಪ್ಪ ತಿಳಿಸಿದರು.

ಯಾರು? ಏನು ಹೇಳುತ್ತಾರೆ...

ಪರಿಕರ ವಿತರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಸಾರ್ವಜನಿಕ ಸ್ಮಶಾನ ಕಾರ್ಮಿಕರು ಮನವಿ ಸಲ್ಲಿಸಿದರೆ ಪರಿಶೀಲಿಸುವೆ. ಇತರೆ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಮತ್ತು ಸಂಬಂಧಪಟ್ಟ ಸಚಿವರ ಮೇಲೆ ಒತ್ತಡ ಹೇರುವೆ.

ಸಂತೋಷ್ ಲಾಡ್, ಕಾರ್ಮಿಕ ಇಲಾಖೆ ಸಚಿವ

ಗ್ರಾಮೀಣ ಭಾಗದಲ್ಲಿ ಮಸಣ ಕಾರ್ಮಿಕರನ್ನು ಗುರುತಿಸಿ ಸೌಲಭ್ಯ ನೀಡಲು ಮತ್ತು ಹಾಗೂ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಶವ ಹೂಳಲು ಕುಣಿ ತೋಡುವ ಕೆಲಸ ಸೇರಿಸಲು ಕೋರಿಕೆ ಇದೆ. ಇದಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ಬೇಕು. ಇದರ ಬಗ್ಗೆ ಪರಿಶೀಲಿಸಿ, ಕ್ರಮ ಕೈಗೊಳ್ಳುವೆ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ಸ್ಮಶಾನಕ್ಕೆ ಮೀಸಲಿಟ್ಟ ಅನುದಾನ ಬೇರೆ ಕಾಮಗಾರಿಗೆ ಬಳಕೆ ಆಗುತ್ತಿದೆ. ಎಲ್ಲ ಸ್ಮಶಾನಗಳ ಅಭಿವೃದ್ಧಿಗೆ ಪ್ರತ್ಯೇಕ ಪ್ಯಾಕೇಜ್ ಮಾಡಿ ಅನುದಾನ ನೀಡಬೇಕು. ಸ್ಮಶಾನಗಳಲ್ಲಿ ಅಂತ್ಯಕ್ರಿಯೆಗಳು ಸುಗಮವಾಗಿ ನಡೆಯಬೇಕು. ಯಾವುದೇ ಸಮಸ್ಯೆಗೆ ಆಸ್ಪದ ನೀಡಬಾರದು.

ವಹಿದಾಖಾನಂ ಕಿತ್ತೂರು, ಸದಸ್ಯೆ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ

ಸ್ಮಶಾನ ಕಾರ್ಮಿಕರ ಮಕ್ಕಳಿಗೆ ವಿಶೇಷ ಪ್ರವರ್ಗ-ಗಳಡಿ ವಸತಿ ಶಾಲೆಗಳಲ್ಲಿ ಪ್ರವೇಶ ಪರೀಕ್ಷೆಯ ವಿನಾಯಿತಿ ನೀಡಿ, ಶೇ 5ರಷ್ಟು ಸ್ಥಾನಗಳಿಗೆ 6ನೇ ತರಗತಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಅವರು 'ಮಸಣ ಕಾರ್ಮಿಕ ಕುಟುಂಬದವರು' ಎಂಬ ಪ್ರಮಾಣ ಪತ್ರ ನೀಡಬೇಕು. ಸಮಸ್ಯೆ ತಲೆದೋರಿದರೆ, ಇಲಾಖೆಯ ಸಹಾಯವಾಣಿಗೆ (9482300400) ಸಂಪರ್ಕಿಸಬಹುದು.

ಪಿ.ಮಣಿವಣ್ಣನ್, ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ರಾಜ್ಯ ಮಸಣ ಕಾರ್ಮಿಕರ ಸಂಘದ ಹಕ್ಕೊತ್ತಾಯ...

- ಪ್ರತಿ ಸಾರ್ವಜನಿಕ ಮಸಣಕ್ಕೆ ಒಬ್ಬರಂತೆ 'ಮಸಣ ನಿರ್ವಾಹಕರು' ನೇಮಕಾತಿ ಆಗಬೇಕು.
- ಮಸಣ ಕಾರ್ಮಿಕರ ಹಾಗೂ ಅವರ ಕುಟುಂಬಗಳ ಸದಸ್ಯರ ಗಣತಿ ಕಾರ್ಯ ನಡೆಸಬೇಕು.
- 45 ವರ್ಷ ಮೇಲ್ಪಟ್ಟ ಸ್ಮಶಾನ ಕಾರ್ಮಿಕರಿಗೆ ಸಹಾಯಧನ, ₹3 ಸಾವಿರ ಪಿಂಚಣಿ ನೀಡಬೇಕು.
- ಕುಣಿ ಅಗೆಯುವ, ಮುಚ್ಚುವ ಕಾರ್ಮಿಕರಿಗೆ ಅಗತ್ಯ ಸಲಕರಣೆ ಒದಗಿಸಬೇಕು.
- ಈ ಕಾರ್ಮಿಕರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಬೇಕು.
- ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ದಲಿತ ಸಮುದಾಯದ ಸ್ಮಶಾನಕ್ಕೆ ಜಾಗ ಮೀಸಲಿಡಬೇಕು.
- ಉದ್ಯೋಗ ಖಾತ್ರಿ ಯೋಜನೆಯಡಿ ಕುಣಿ ಅಗೆಯುವ, ಮುಚ್ಚುವ ಕೆಲಸವನ್ನು ತಂದು ಆಯಾ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ₹ 3,500 ಕೂಲಿ ಪಾವತಿಸಬೇಕು.

ಆರು ಎಕರೆ ಜಾಗ ದಾನ

ಸ್ಮಶಾನದ ಸಮಸ್ಯೆ ಕಾಡದಿರಲಿಯೆಂದು ದಾವಣಗೆರೆಯ ಲೇಬರ್ ಕಾಲೊನಿಯಲ್ಲಿ ರಾಜನಹಳ್ಳಿ ಭೀಮರಾಯಪ್ಪ ಹನುಮಂತಪ್ಪ ಅವರ ಕುಟುಂಬದವರು ಸ್ಮಶಾನಕ್ಕಾಗಿ ಆರು ಎಕರೆ ಜಾಗವನ್ನು ದಾನ ನೀಡಿದ್ದಾರೆ. ಇಲ್ಲಿ ಶವವನ್ನು ಸುಡುವ ವ್ಯವಸ್ಥೆ ಮಾತ್ರ ಇದ್ದು, ಅಂತ್ಯಕ್ರಿಯೆಗೆ ನೆರವಾಗಲು ವ್ಯಕ್ತಿಯೊಬ್ಬರನ್ನು ನೇಮಿಸಿ ಸಂಬಳವನ್ನೂ ನೀಡುತ್ತಿದ್ದಾರೆ. ವಾಸಕ್ಕೆ ಸ್ಮಶಾನದ ಆವರಣದಲ್ಲೇ ಮನೆಯನ್ನೂ ಕಟ್ಟಿಸಿಕೊಟ್ಟಿದ್ದಾರೆ. ವಿದ್ಯುತ್, ನೀರಿನ ಬಿಲ್‌ಗಳನ್ನು ರಾಜನಹಳ್ಳಿ ಕುಟುಂಬದವರೇ ಪಾವತಿಸುತ್ತಾರೆ.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 29-12-1999

• ಸಿಸೇರಿಯನ್ ಆದರೂ ಪರವಾಗಿಲ್ಲ ಜನವರಿ ಒಂದರಂದೇ ಹಡೆಯಲು ಕಾತರ

ಬೆಂಗಳೂರು, ಡಿ. 28– ಸಹಸ್ರಮಾನವನ್ನು ಸ್ವಾಗತಿಸಲು ಮೋಜಿನ ತಾಣಗಳ ಮುಂಗಡ ಕಾಯ್ದಿರಿಸುವಿಕೆ ಹೆಚ್ಚುತ್ತಿರುವಂತೆ, ಜನವರಿ ಒಂದರಂದೇ ಶಿಶುವಿಗೆ ಜನ್ಮ ನೀಡಲು ಬಯಸುವ ಭಾವಿ ತಾಯಂದಿರ ತವಕವನ್ನು ಪ್ರೋತ್ಸಾಹಿಸಲು ವಿವಿಧ ಆಸ್ಪತ್ರೆಗಳು ಸಜ್ಜಾಗಿವೆ.

ಪ್ರತಿಭಾ ಶ್ರೀಹರಿ ಎಂಬವರು ಸಿಸೇರಿಯನ್ ಮೂಲಕ ಜ.1ರಂದು ಅವಳಿ ಮಕ್ಕಳಿಗೆ ಜನ್ಮ ನೀಡಲು ಉತ್ಸುಕರಾಗಿದ್ದಾರೆ. ವೈದ್ಯರು ನೀಡಿರುವ ಹೆರಿಗೆ ದಿನಾಂಕದ ಪ್ರಕಾರ ಅವರು ಜನವರಿ 8ರಂದು ಅವಳಿ ಮಕ್ಕಳಿಗೆ ಜನ್ಮ ನೀಡಬೇಕಿತ್ತು.

50 ವರ್ಷಗಳ ಹಿಂದೆ

ಭಾನುವಾರ, 29-12-1974

• ರಾಜ್ಯದಲ್ಲಿ ಕೃಷಿ ಕೈಗಾರಿಕಾ ಕೇಂದ್ರ ಸ್ಥಾಪನೆ: ರಾಂ

ಬೆಂಗಳೂರು, ಡಿ. 28– ಬಲ್ಗೇರಿಯಾ ಸಹಕಾರದಿಂದ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಅನುಕೂಲವಾಗುವ ಕೃಷಿ– ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ವ್ಯವಸಾಯ ಸಚಿವ ಜಗಜೀವನರಾಂ ಅವರು ಇಂದು ಇಲ್ಲಿ ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಕೂಡಲೇ ಲಾಭಕರ ಉದ್ಯೋಗಾವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ಇಂತಹ ಕೇಂದ್ರಗಳನ್ನು ತ್ವರಿತವಾಗಿ ಪ್ರಾರಂಭಿಸಲು ಯೋಚಿಸಿದೆ ಎಂದು ಅವರು ಬೆಂಗಳೂರಿನ ಹೆಬ್ಬಾಳದಲ್ಲಿರುವ ಕೃಷಿ ವಿಶ್ವವಿದ್ಯಾಲಯದಲ್ಲಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಡಿಸೆಂಬರ್ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ದಶಿ ಗಂ. 28-02 ನಕ್ಷತ್ರ: ಜ್ಯೇಷ್ಠ ಗಂ. 23-22 ಯೋಗ: ಗಂಡ ಗಂ. 21-41 ಕರಣ: ವಿಷ್ಟಿ ಗಂ. 15-52, ಧನು ಮಾಸದ 13 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 1.
ರಾಹುಕಾಲ: ಸಾಯಂಕಾಲ 04-30–06-00
ಸೂರ್ಯೋದಯ: 06-56 ಸೂರ್ಯಾಸ್ತ: 06-09
ಮುಸ್ಲಿಂ ದಿನಾಂಕ: 26 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 7, 12

ಮೇಷ: ಕಾರ್ಯರಂಗದಲ್ಲಿ ಪರಿವರ್ತನೆ ಕಂಡು ಬರುವುದರಿಂದ ದುಡುಕದೆ ಕೆಲವೊಂದು ವಿಚಾರಗಳ ಬಗ್ಗೆ ಮತ್ತೆ ಮತ್ತೆ ಆಲೋಚನೆ ಮಾಡುವುದು ಉತ್ತಮ. ಇಂದು ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು.

ವೃಷಭ: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರದಿಂದ ಲಾಭ ಗಳಿಸುವಿರಿ. ಮದುವೆ ಮುಂತಾದ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ ಬರಲಿದೆ. ಮನೆಗೆ ಹೊಸ ವಸ್ತುಗಳನ್ನು ಕೊಳ್ಳುವ ಯೋಗವಿದೆ.

ಮಿಥುನ: ನಿಮ್ಮ ದೈನಂದಿನ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವ ಆಲೋಚನೆ ಕೈಗೂಡಲಿದೆ. ಕೃಷಿಯ ವರ್ಗದವರಿಗೆ ಹೆಚ್ಚಿನ ಕೆಲಸಗಳು ಪ್ರಾರಂಭವಾಗುವುದು.

ಕರ್ಕಾಟಕ: ಖರ್ಚಿಗೆ ಹೊಸ ದಾರಿಗಳು ಹುಟ್ಟುಕೊಳ್ಳುವುದರಿಂದ ಅನಗತ್ಯ ವಸ್ತು ಖರೀದಿಸುವುದನ್ನು ಕಡಿಮೆ ಮಾಡುವುದು ಉತ್ತಮ. ರಾಜಕೀಯ ವಲಯದಲ್ಲಿ ನಿರೀಕ್ಷಿತ ಕೆಲಸಗಳು ಸಮರ್ಪಕವಾಗಿ ನೆರವೇರುವುದು.

ಸಿಂಹ: ಮಾತಿನಿಂದ ಕಾರ್ಯ ಸಾಧಿಸುವ ನಿಮ್ಮ ಗುಣದಿಂದ ಅನುಕೂಲಕರ ವಾತಾವರಣ ಕಾಣುವಿರಿ. ಸಾಲ ತೆಗೆದುಕೊಂಡ ಹಣವನ್ನು ಹಿಂದಿರುಗಿಸುವ ಬಗ್ಗೆ ಯೋಚಿಸಿ. ಸಾಹಿತ್ಯ ಕ್ಷೇತ್ರದಲ್ಲಿ ಭಾಗಿಯಾಗಿ ಸಂತೋಷವಾಗುವುದು.

ಕನ್ಯಾ: ವ್ಯವಹಾರದಲ್ಲಿ ಅಧಿಕ ಲಾಭ ಗಳಿಸುವ ಉದ್ದೇಶದಿಂದ ಕೈ ಸುಡುವ ಕೆಲಸವನ್ನು ಮಾಡದಿರಿ. ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರ ಬರಲಿದೆ. ಸೂಕ್ಷ್ಮ ವಿಚಾರಗಳನ್ನು ಕಡೆಗಣಿಸದಿರಿ.

ತುಲಾ: ನೀವು ಅನಾವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನ, ಕೆಟ್ಟ ಆಲೋಚನೆಯನ್ನು ತೆಗೆದುಹಾಕಿ. ರಹಸ್ಯವಾಗಿ ಸಿಗುವ ಬೆಂಬಲದಿಂದ ಕನಸು ನನಸಾಗಲಿದೆ. ವೃತ್ತಿಯಲ್ಲಿ ಸಂಚಾರದಿಂದ ಅಧಿಕ ಲಾಭವಿರುವುದು.

ವೃಶ್ಚಿಕ: ಸ್ವಯಂಕೃತ ಅಪರಾಧದಿಂದ ಇಂದು ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ. ವಿಶ್ವಾಸದಲ್ಲಿ ಯಾರಿಗೂ ಹಣವನ್ನು ನೀಡಬೇಡಿ. ನಿಮ್ಮ ಪರಿಶ್ರಮದಿಂದ ಆರ್ಥಿಕ ಸ್ಥಿತಿ ಕ್ರಮೇಣವಾಗಿ ಉತ್ತಮಗೊಳ್ಳಲಿದೆ.

ಧನು: ಯಾವುದೇ ಗೊಂದಲಗಳಿಗೆ ಒಳಗಾಗದೇ ನಿಮ್ಮ ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗಲಿದೆ. ಶುಭ ಕಾರ್ಯಗಳಿಗೆ ಹೆಚ್ಚು ಹಣ ವಿನಿಯೋಗವಾಗುವುದು. ಮಕ್ಕಳಿಗಾಗಿ ವಿಶೇಷ ವಸ್ತು ಕೊಳ್ಳುವಿರಿ.

ಮಕರ: ಅಸಾಧ್ಯ ಕಾರ್ಯಗಳನ್ನೂ ಸಹ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಆದರೆ ಆ ಛಲವನ್ನು ಒಳ್ಳೆಯ ಮಾರ್ಗದಲ್ಲಿ ಉಪಯೋಗಿಸಿಕೊಳ್ಳಿರಿ. ಹೆಚ್ಚಿನ ಪರಿಶ್ರಮದಿಂದ ಎಲ್ಲಾ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು.

ಕುಂಭ: ನಿಮ್ಮ ಭವಿಷ್ಯದ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಎದುರಾಗುವುದು. ತಂದೆ ತಾಯಿಯ ಇಷ್ಟಾರ್ಥ ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ. ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಿರಿ.

ಮೀನ: ಚಿಂತನೆಗಳು ಕಾರ್ಯರೂಪಕ್ಕೆ ಬರುವಂತೆ ನಿಮ್ಮನ್ನು ಹುರಿದುಂಬಿಸಲಿದೆ. ಆದರೆ ಆಕಸ್ಮಿಕ ಕೆಲಸದಿಂದ ಧರ್ಮಸಂಕಟದಲ್ಲಿ ಸಿಲುಕುವಂತಾಗಲಿದೆ. ಹಗಲು ರಾತ್ರಿಯ ವ್ಯತ್ಯಾಸವಿಲ್ಲದೇ ಶ್ರಮ ಪಡಬೇಕಾಗಲಿದೆ.

ಪದಬಂಧ 5906 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಿವಿಯಿಂದ ಕಿವಿಗೆ ಹರಡುವ ಮಾತು (5)
2.ಗರ್ಭಿಣಿ ಸ್ತ್ರೀ ಗೆ ಉಂಟಾಗುವ ಆಸೆ (3)
4.ತುಡುಗು ಮಾಡುವವನು ಇಲ್ಲಿದ್ದಾನೆ (2)
5.ಪದ ಹೇಳಿ ಗಳಿಸಿಕೊಂಡಿರುವ ಡಿಗ್ರಿ (3)
7.ಅಗಲು ನುಂಗುವಾಗ ಕಾಣಿಸಿದ ಅಶ್ರು (2)
8.ಜನರಿಂದ ಆರಿಸಲ್ಪಟ್ಟವನು (6)
10.ತನ್ನದೇ ಅದುದನ್ನು ಹೀಗೆನ್ನಿ (2)
12.ಕವಲಾಗಿರುವ ಮರದ ಕೋಲು (2)
13.ಹನ್ನೆರಡನೇ ಶತಮಾನದಲ್ಲಿ ನಡೆದ ಕಲ್ಯಾಣಕ್ರಾಂತಿಯ ಪಟ್ಟಣ ಇಂದು ಬೀದರ ಜಿಲ್ಲೆಯ ತಾಲೂಕು (6)
16.ಕುಟಿಲನ ವಂಶ! (2)
17.ಈತ ಹಾಡುಗಾರ (3)
19.ಯವಜನ ನೋಡಿರುವ ಕಾಡು (2)
20.ಇದು ಕನ್ನಡಿಗನ ಲೆನ್ಸು (3)
21.ಹಳೆಯದನ್ನು ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ

1.ಗುಂಪು ಸೇರಿದಾಗ ನವಿಲುಗರಿ ಕಾಣಿಸಿತೇ? (3)
2.ನಾಲ್ಕು ಸೇರಿನ ಅಳತೆ (2)
3.ಕೆರ ನೋಡಿದಾಗ ಹೀಗೆ ಸಿಟ್ಟಾಗು (3)
4.ಬಣ್ಣದ ದಾರದಿಂದ ಬಟ್ಟೆಯ ಮೇಲೆ ಮಾಡಿದ ಹೆಣಿಗೆ ಅಲಂಕಾರ (3)
6.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
7.ಹೆಚ್ಚಳವನ್ನು ಹೀಗೆನ್ನಿ (3)
9.ಪ್ರತೀ ಸಲ ಕಾಣಿಸುವ ಚಿಹ್ನೆ (3)
11.ಬಲವುಳ್ಳವ ಬಾರಿಸಿದ ಚರ್ಮವಾದ್ಯ (3)
14.ವನದಲ್ಲಿರುವ ಉಡುಗೆ ಕಾಣುತ್ತಿದೆಯೇ (3)
15.ಎಣ್ಣೆ ಅಥವಾ ಕಬ್ಬಿನ ರಸವನ್ನು ತೆಗೆಯುವ ಯಂತ್ರ ತಿರುವುಮುರುವಾಗಿದೆ (2)
16.ಯಾವ ವಸ್ತುವೂ ಸಿಗದ ಹಳ್ಳಿ (3)
18.ಕಣದಲ್ಲಿ ನಡೆದ ಮದುವೆ (3)
19.ವಠಾರದಲ್ಲಿರುವ ಮದುವೆ ಗಂಡು (2)



5905ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ತಡಸಲು 5.ಮಧುಕರಿ 6.ಶುಕ 7.ದಸ್ತಗಿರಿ 9.ಕಾಕ 11.ಜತು 12.ಕಟುನುಡಿ 14.ಕಾಷ್ಠ 16.ಉದಾಸೀನ 17.ಕಾರ್ಯಕ್ಷೇತ್ರ

ಮೇಲಿಂದ ಕೆಳಕ್ಕೆ:
1.ಗಮಕ 2.ಮಕರಂದ 3.ತರಾತುರಿ 4.ಲುಬ್ಧಕ 6.ಶುಕ್ತಿಜ 8.ಗಿಲೀಟು 10.ಕನಿಷ್ಠ 12.ಕಟಿಸೂತ್ರ 13.ಡಿಕ್ರಿದಾರ 14.ಕಾಯಕಾ 15.ವಾನರಿ

ಸುಡೊಕು 6291

2		6					5	
	4		5		6	3		2
3		5					6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6290 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davangere, Mysuru and Hospete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಎಪಿ ವಿರುದ್ಧ ಕ್ರಮಕ್ಕೆ ಸೂಚನೆ

ಬಿಜೆಪಿ ವಿರುದ್ಧ ಹರಿಹಾಯ್ದ ಅರವಿಂದ ಕೇಜ್ರಿವಾಲ್: ಮತ್ತೆ ಸಂಘರ್ಷಕ್ಕೆ ನಾಂದಿ

ಶೆಮಿನ್ ಜಾಯ್

ಮುಖ್ಯಾಂಶಗಳು

- ಸಕ್ಸೇನಾ ಸೂಚನೆಯಿಂದ ಇನ್ನೊಂದು ಸುತ್ತಿನ ಸಂಘರ್ಷ?
- ಉಚಿತ ಸೌಲಭ್ಯದ ಯೋಜನೆಗಳಿಗೆ ಬಿಜೆಪಿ ವಿರುದ್ಧ: ಕೇಜ್ರಿವಾಲ್
- ಯೋಜನೆಗೆ ವಿವರ ಸಂಗ್ರಹಿಸುವುದರ ವಿರುದ್ಧ ಕಾಂಗ್ರೆಸ್ ದೂರು

ನವದೆಹಲಿ: ಎಎಪಿ ಪಕ್ಷವು ಹಿರಿಯ ನಾಗರಿಕರಿಗೆ ಹಾಗೂ ಮಹಿಳೆಯರಿಗೆ ಘೋಷಿಸಿರುವ ಚುನಾವಣಾ ಭರವಸೆಗಳಿಂದ ದೆಹಲಿ ಸರ್ಕಾರದ ಎರಡು ಇಲಾಖೆಗಳು ಅಂತರ ಕಾಯ್ದುಕೊಂಡ ಒಂದು ವಾರದ ನಂತರ, ಸೌಲಭ್ಯಗಳಿಗೆ ನೋಂದಣಿ ಮಾಡಿಸಿಕೊಳ್ಳುವ 'ವಂಚನೆಯ ಉದ್ದೇಶದ' ಅಭಿಯಾನ ನಡೆಸುತ್ತಿರುವ ಎಎಪಿ ಕಾರ್ಯಕರ್ತರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೆಹಲಿ ಪೊಲೀಸರಿಗೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಸೂಚಿಸಿದ್ದಾರೆ.

ದೆಹಲಿ ವಿಧಾನಸಭೆಗೆ ಚುನಾವಣೆ ಹತ್ತಿರವಾಗಿರುವ ಈ ಸಂದರ್ಭದಲ್ಲಿ ಲೆಫ್ಟಿನೆಂಟ್ ಗವರ್ನರ್ ನೀಡಿರುವ ಈ ಸೂಚನೆಯು ಇನ್ನೊಂದು ಸುತ್ತಿನ ಸಂಘರ್ಷಕ್ಕೆ ಕಾರಣವಾಗಲಿದೆ ಎಂದು ಹೇಳಲಾಗಿದೆ.

ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಎಎಪಿ ನಡೆಸುವ ಚಟುವಟಿಕೆಗಳ ಬಗ್ಗೆ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಬೇಕು ಎಂದು ಕೂಡ ಸಕ್ಸೇನಾ ಅವರು ದೆಹಲಿಯ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಇದಕ್ಕೆ ಮಾತಿನ ತಿರುಗೇಟು ನೀಡಿರುವ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು, ಮತಗಳಿಗಾಗಿ ಹಣ ಹಂಚುತ್ತಿದ್ದ ಎನ್ನಲಾದ ಬಿಜೆಪಿ ನಾಯಕರೊಬ್ಬರ ವಿರುದ್ಧ ಸಕ್ಸೇನಾ ಅವರು ಏಕೆ ಕ್ರಮ ಜರುಗಿಸಿಲ್ಲ ಎಂದು ಪ್ರಶ್ನಿಸಿದ್ದಾರೆ. ಎಎಪಿಯ ಜನಪರ ಕ್ರಮಗಳಿಗೆ ಅಡ್ಡಿ ಮಾಡಲು ಬಿಜೆಪಿಯು ತೀರ್ಮಾನಿಸಿಬಿಟ್ಟಿದೆ ಎಂದು ಕೇಜ್ರಿವಾಲ್ ದೂರಿದ್ದಾರೆ.

ಬಿಜೆಪಿಯ ಪರಿಸ್ಥಿತಿ ಹೇಗಿದೆಯೆಂದರೆ, ಅವರು ತಮ್ಮನ್ನು ರಕ್ಷಿಸಿ ಎಂದು ಕಾಂಗ್ರೆಸ್ಸಿನ ಮುಂದೆ ಗೋಗರೆಯುತ್ತಿದ್ದಾರೆ

ಅರವಿಂದ ಕೇಜ್ರಿವಾಲ್
ಎಎಪಿ ನಾಯಕ

ಮಹಿಳೆಯರಿಗೆ ಪ್ರತಿ ತಿಂಗಳಿಗೆ ₹1,000 ನೀಡುವ ಯೋಜನೆಗೆ ನೋಂದಣಿ ಮಾಡಿಸುವ ಹೆಸರಿನಲ್ಲಿ ಎಎಪಿ ಕಾರ್ಯಕರ್ತರು ಮಹಿಳೆಯರ ವಿವರಗಳನ್ನು ಹಾಗೂ ಸಹಿಗಳನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಕಾಂಗ್ರೆಸ್ಸಿನ ಸಂದೀಪ್ ದೀಕ್ಷಿತ್ ನೀಡಿರುವ ದೂರು ಆಧರಿಸಿ ಸಕ್ಸೇನಾ ಅವರು ಈ ತೀರ್ಮಾನ ತೆಗೆದುಕೊಂಡಿದ್ದಾರೆ. ಮೊತ್ತವನ್ನು ಚುನಾವಣೆಯ ನಂತರ ₹2,100ಕ್ಕೆ ಹೆಚ್ಚಿಸುವುದಾಗಿ ಎಎಪಿ ಭರವಸೆ ನೀಡಿದೆ.

ಸರ್ಕಾರದ ಭಾಗವಾಗಿಲ್ಲದ ವ್ಯಕ್ತಿಗಳು ಜನರ ವೈಯಕ್ತಿಕ ಮಾಹಿತಿ ಪಡೆದುಕೊಂಡಿರುವುದರ ಬಗ್ಗೆ ವಿಭಾಗೀಯ ಆಯುಕ್ತರಿಂದ ವಿಚಾರಣೆ ನಡೆಸಬೇಕು ಎಂಬುದು ಲೆಫ್ಟಿನೆಂಟ್ ಗವರ್ನರ್ ಅವರ ಬಯಕೆ ಎಂದು ಅವರ ಪ್ರಧಾನ ಕಾರ್ಯದರ್ಶಿ ಬರೆದಿರುವ ಪತ್ರದಲ್ಲಿ ಹೇಳಲಾಗಿದೆ.

ಸವಲತ್ತುಗಳನ್ನು ಕೊಡುವ ಹೆಸರಿನಲ್ಲಿ ಸಾರ್ವಜನಿಕರ ಖಾಸಗಿತನವನ್ನು ಉಲ್ಲಂಘಿಸಿದ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸುವಂತೆ ಪೊಲೀಸ್ ಆಯುಕ್ತರಿಗೆ ಸೂಚಿಸಲಾಗಿದೆ.

'ಉಚಿತ ವಿದ್ಯುತ್, ಉಚಿತ ನೀರು, ಉಚಿತ ಚಿಕಿತ್ಸೆಯನ್ನು ನಿಲ್ಲಿಸುವ ಉದ್ದೇಶ ಬಿಜೆಪಿಗೆ ಇದೆ. ನೀವು ತಪ್ಪಾಗಿ ಬಿಜೆಪಿಗೆ ಮತ ಚಲಾಯಿಸಿದರೆ ನೀವು ದೆಹಲಿ ತೊರೆಯಬೇಕಾಗುತ್ತೆ. ದೆಹಲಿಯು ಬದುಕಲು ಯೋಗ್ಯವಾಗಿ ಉಳಿಯುವುದಿಲ್ಲ' ಎಂದು ಕೇಜ್ರಿವಾಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದ್ದಾರೆ. ಹೆಸರು ನೋಂದಾಯಿಸಲು ಆರಂಭಿಸಿರುವ ಶಿಬಿರಗಳನ್ನು ಹೇಗಾದರೂ ಮಾಡಿ ಮುಚ್ಚಿಸಬೇಕು ಎಂಬುದು ಬಿಜೆಪಿಯ ಉದ್ದೇಶ ಎಂದು ದೂರಿದ್ದಾರೆ.

ಡಲ್ಲೇವಾಲ್ ಉಪವಾಸ: ಆಸ್ಪತ್ರೆಗೆ ದಾಖಲಿಸಲು ಸೂಚನೆ

ಪಂಜಾಬ್ ಸರ್ಕಾರಕ್ಕೆ ತರಾಟೆ

ನವದೆಹಲಿ (ಪಿಟಿಐ): ಒಂದು ತಿಂಗಳಿಗೂ ಹೆಚ್ಚಿನ ಅವಧಿಯಿಂದ ಉಪವಾಸಕ್ಕೆಗೊಂಡಿರುವರೈತಮುಖಂಡಜಗಜೀತ್‌ಸಿಂಗ್‌ಡಲ್ಲೇವಾಲ್ ಅವರ ಮನವೊಲಿಸಿ, ಆಸ್ಪತ್ರೆಗೆ ದಾಖಲಿಸಲು ಪಂಜಾಬ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಡಿಸೆಂಬರ್ 31ರವರೆಗೆ ಸಮಯ ನೀಡಿದೆ.

ಡಲ್ಲೇವಾಲ್ ಅವರಿಗೆ ವೈದ್ಯಕೀಯ ನೆರವು ಒದಗಿಸಬೇಕು ಎಂದು ಈ ಹಿಂದೆ ನೀಡಿದ್ದ ಸೂಚನೆಯನ್ನು ಪಾಲಿಸದೆ ಇದ್ದುದಕ್ಕಾಗಿ, ಪರಿಸ್ಥಿತಿ ಬಿಗಡಾಯಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಸುಧಾಂಶು ಧುಲಿಯಾ ಅವರು ಇರುವ ರಜಾಕಾಲದ ವಿಭಾಗೀಯ ಪೀಠವು ಪಂಜಾಬ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ಅಸಹಾಯಕತೆಯನ್ನು ವ್ಯಕ್ತಪಡಿಸಿದ ಪಂಜಾಬ್ ಸರ್ಕಾರವು, ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ರೈತರಿಂದ ಭಾರಿ ಪ್ರತಿರೋಧ ಎದುರಾಗುತ್ತಿದೆ ಎಂದು ತಿಳಿಸಿತು. ರೈತರು ಡಲ್ಲೇವಾಲ್ ಅವರನ್ನು ಸುತ್ತುವರಿದಿದ್ದಾರೆ, ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ಬಿಡುತ್ತಿಲ್ಲ ಎಂದು ಮಾಹಿತಿ ನೀಡಿತು.

ಪ್ರತಿಭಟನೆ ನಡೆಯುತ್ತಿರುವ ಸ್ಥಳಕ್ಕೆ ವೈದ್ಯರ ತಂಡವೊಂದು ಭೇಟಿ ನೀಡಿತ್ತು, ಡಲ್ಲೇವಾಲ್ ಅವರ ಮನವೊಲಿಸಿ ಅವರನ್ನು ಆಸ್ಪತ್ರೆಗೆ ದಾಖಲಿಸಲು ಯತ್ನಿಸಿತ್ತು ಎಂದು ಪಂಜಾಬ್‌ನ ಅಡ್ವೊಕೇಟ್ ಜನರಲ್ ಗುರ್ಮಿಂದರ್ ಸಿಂಗ್ ತಿಳಿಸಿದರು. ಆದರೆ ಯಾವುದೇ ವೈದ್ಯಕೀಯ ನೆರವು ಪಡೆಯಲು ಅವರು ನಿರಾಕರಿಸಿದ್ದಾರೆ ಎಂದು ಸಿಂಗ್ ಹೇಳಿದರು.

ಈ ವಿವರಣೆ ಕೇಳಿ ಅಸಮಾಧಾನ ವ್ಯಕ್ತಪಡಿಸಿದ ಪೀಠವು, ಪರಿಸ್ಥಿತಿಯನ್ನು ನಿಯಂತ್ರಿಸಲು ಪಂಜಾಬ್ ಸರ್ಕಾರ ಅಗತ್ಯ ಕೆಲಸ ಮಾಡುತ್ತಿಲ್ಲ ಎಂದು ಹೇಳಿತು. ಡಲ್ಲೇವಾಲ್ ಅವರನ್ನು ಆಸ್ಪತ್ರೆಗೆ ದಾಖಲಿಸಲು ಅಡ್ಡಿ ಉಂಟುಮಾಡುತ್ತಿರುವ ರೈತ ಮುಖಂಡರು ಆತ್ಮಹತ್ಯೆಗೆ ಪ್ರಚೋದನೆ ನೀಡುವ ಕ್ರಿಮಿನಲ್ ಕೃತ್ಯದಲ್ಲಿ ತೊಡಗಿದ್ದಾರೆ ಎಂದಿತು.

'ಅವರಿಗೆ ಡಲ್ಲೇವಾಲ್ ಜೀವದ ಬಗ್ಗೆ ಕಾಳಜಿ ಇದೆಯೇ ಅಥವಾ ಬೇರೆ ಯಾವುದಾದರೂ ವಿಷಯದ ಬಗ್ಗೆ ಕಾಳಜಿಯೇ? ನಾವು ಹೆಚ್ಚು ಮಾತನಾಡಲು ಬಯಸುವುದಿಲ್ಲ. ಪಂಜಾಬ್ ಸರ್ಕಾರವು ನಮ್ಮ ನಿರ್ದೇಶನವನ್ನು ಪಾಲಿಸುತ್ತದೆ ಎಂದು ನಿರೀಕ್ಷಿಸುತ್ತೇವೆ' ಎಂದು ಪೀಠ ಹೇಳಿತು.

ಪತ್ನಿಯ ಗರ್ಭಪಾತಕ್ಕೆ ಕಾರಣನಾದ ಪತಿಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಪತ್ನಿಯ ಜೊತೆ ಅಸಹಜ ಅಪರಾಧ ಎಸಗಿದ ಹಾಗೂ ಆಕೆಯ ಸಹಮತ ಇಲ್ಲದೆಯೇ ಗರ್ಭಪಾತಕ್ಕೆ ಕಾರಣನಾದ ಆರೋಪ ಎದುರಿಸುತ್ತಿರುವ ಪತಿಯ ಜಾಮೀನು ಅರ್ಜಿಯನ್ನು ಇಲ್ಲಿನ ನ್ಯಾಯಾಲಯ ವೊಂದು ವಜಾಗೊಳಿಸಿದೆ. ಪತಿಯ ವಿರುದ್ಧದ ಆರೋಪಗಳು ಗಂಭೀರ ವಾಗಿವೆ ಎಂದು ಕೋರ್ಟ್ ಹೇಳಿದೆ.

ಪತಿಯ ವಿರುದ್ಧ ಅಸಹಜ ಅಪರಾಧ, ಮಹಿಳೆಯ ಸಮ್ಮತಿ ಇಲ್ಲದೆ ಗರ್ಭಪಾತ ಉಂಟು ಮಾಡುವುದು ಹಾಗೂ ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಾಗಿದೆ. ಪತಿಯು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದ. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಾಧೀಶ ಸುನಿಲ್ ಕುಮಾರ್ ನಡೆಸಿದ್ದರು. 'ದೂರುದಾರೆಯ ಹೇಳಿಕೆಗಳನ್ನು ಗಮನಿಸಿದರೆ, ಆರೋಪಗಳು ಬಹಳ ಸತ್ಯ ಎಂದು ಅನ್ನಿಸುತ್ತವೆ. ಹೀಗಾಗಿ ಈ ಜಾಮೀನು ಅರ್ಜಿಯನ್ನು ಮಾನ್ಯ ಮಾಡಲು ಆಧಾರಗಳು ಇಲ್ಲ' ಎಂದು ಡಿ.26ರಂದು ನೀಡಿರುವ ಆದೇಶದಲ್ಲಿ ಹೇಳಿದ್ದಾರೆ. ಆರೋಪಿಯು ಸಂತ್ರಸ್ತೆಯ ಮುಖದ ಮೇಲೆ ಬಿಯರ್ ಬಾಟಲಿ ಎಸೆದು, ಆಕೆಯ ದೇಹದ ಮೇಲೆ ಸಿಗರೇಟಿನಿಂದ ಸುಡಲಾಗಿದೆ ಎಂದು ದೂರುದಾರೆ ಪರ ವಕೀಲರು ನ್ಯಾಯಾಧೀಶರಿಗೆ ಹೇಳಿದ್ದರು.

ಅಣ್ಣಾ ವಿ.ವಿ: ಮಹಿಳಾ ಸದಸ್ಯರ ಎಸ್‌ಐಟಿ ರಚನೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಎರಡು ಪ್ರಕರಣಗಳ ತನಿಖೆಗೆ ಮಹಿಳಾ ಅಧಿಕಾರಿಗಳು ಮಾತ್ರ ಇರುವ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಮದ್ರಾಸ್ ಹೈಕೋರ್ಟ್ ಶನಿವಾರ ರಚಿಸಿದೆ.

ಲೈಂಗಿಕ ದೌರ್ಜನ್ಯ ಹಾಗೂ ನಂತರ ಅದಕ್ಕೆ ಸಂಬಂಧಿಸಿದ ಎಫ್‌ಐಆರ್ ಸೋರಿಕೆ ಆಗಿದ್ದರ ಬಗ್ಗೆ ಎಸ್‌ಐಟಿ ತನಿಖೆ ನಡೆಸಬೇಕು. ಪ್ರಕರಣ ನಿಭಾಯಿಸಿದ ರೀತಿಯ ಕುರಿತು ನ್ಯಾಯಮೂರ್ತಿಗಳಾದ ಎಸ್.ಎಂ. ಸುಬ್ರಮಣಿಯಂ ಮತ್ತು ವಿ. ಲಕ್ಷ್ಮೀನಾರಾಯಣನ್ ಅವರು ಇರುವ ವಿಭಾಗೀಯ ಪೀಠವು ಚೆನ್ನೈ ಪೊಲೀಸರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

ಸೂಕ್ಷ್ಮವಾದ ಈ ಪ್ರಕರಣದ ಪ್ರಮುಖ ಅಂಶಗಳನ್ನು ಪತ್ರಿಕಾಗೋಷ್ಠಿಮೂಲಕ ಬಹಿರಂಗಪಡಿಸಿದ್ದಕ್ಕಾಗಿ ಗ್ರೇಟರ್ ಚೆನ್ನೈ ಪೊಲೀಸ್ ಆಯುಕ್ತ ಎ. ಅರುಣ್ ರನ್ನು ಪೀಠವು ಟೀಕಿಸಿದೆ. ಎಫ್‌ಐಆರ್ ಸೋರಿಕೆಯ ಪರಿಣಾಮವಾಗಿ ಯುವತಿ ಮತ್ತು ಆಕೆಯ ಕುಟುಂಬ ಅನುಭವಿಸಿದ ಮಾನಸಿಕ ಸಂಕಟಕ್ಕೆ ಪ್ರತಿಯಾಗಿ ₹25 ಲಕ್ಷ ಪರಿಹಾರ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ರಾಮರಾವ್‌ಗೆ ಇ.ಡಿ ಸಮನ್ಸ್

ಹೈದರಾಬಾದ್ (ಪಿಟಿಐ): ಹೈದರಾಬಾದ್‌ನಲ್ಲಿ ನಡೆದಿದ್ದ ಫಾರ್ಮುಲಾ ಇ-ರೇಸ್‌ಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಜ.7ರಂದು ವಿಚಾರಣೆಗೆ ಹಾಜರಾಗುವಂತೆ ಭಾರತ್ ರಾಷ್ಟ್ರ ಸಮಿತಿ ನಾಯಕ ಕೆ.ಟಿ.ರಾಮರಾವ್ ಮತ್ತು ಇತರೆ ಕೆಲವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಸಮನ್ಸ್ ನೀಡಿದೆ.

ಕೆ.ಟಿ. ರಾಮರಾವ್

ತೆಲಂಗಾಣದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ದೂರು ಆಧರಿಸಿ, ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣದ ಮಾಹಿತಿ ವರದಿ (ಇಸಿಐಆರ್) ದಾಖಲಿಸಿತ್ತು.

ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಪುತ್ರ, ಬಿಆರ್‌ಎಸ್ ಕಾರ್ಯಾಧ್ಯಕ್ಷ ರಾಮರಾವ್ ಅವರಿಗೆ ಜ.7ರಂದು ಹೇಳಿಕೆ ದಾಖಲಿಸಲು ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೇಣಿಗೆ ಸಂಗ್ರಹ ತೀವ್ರ ಕುಸಿತ

PM CARES
Prime Minister's Citizen Assistance and Relief in Emergency Situations Fund

ನವದೆಹಲಿ (ಪಿಟಿಐ): 2020ರ ಮಾರ್ಚ್‌ನ ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ಥಾಪಿಸಿದ 'ಪಿಎಂ ಕೇರ್ಸ್' ಎಂಬ ಚಾರಿಟೆಬಲ್ ಟ್ರಸ್ಟ್‌ನಲ್ಲಿ ಸಂಗ್ರಹವಾಗುತ್ತಿರುವ ಹಣವು ವರ್ಷದಿಂದ ವರ್ಷಕ್ಕೇ ತೀವ್ರ ಕುಸಿತ ಕಾಣುತ್ತಿದೆ. ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ದೇಣಿಗೆ ನೀಡುತ್ತಿರುವ ಪ್ರಮಾಣವು ಕುಸಿತ ಕಂಡಿದ್ದರೆ, ವಿದೇಶಿಯರು ನೀಡುತ್ತಿರುವ ದೇಣಿಗೆ ಪ್ರಮಾಣವಂತೂ ತೀವ್ರ ಕುಸಿತ ಕಂಡಿದೆ. 'ಪಿಎಂ ಕೇರ್ಸ್' ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದ ಆದಾಯ ಹಾಗೂ ಖರ್ಚುಗಳ ವರದಿಗಳನ್ನು ಇಟ್ಟುಕೊಂಡು ಆಡಿಟ್ ವರದಿಯೊಂದನ್ನು ಬಿಡುಗಡೆ ಮಾಡಲಾಗಿದೆ. ವೆಬ್‌ಸೈಟ್‌ನಲ್ಲಿ 2022–23ರ ಅವಧಿಯವರೆಗಿನ ಮಾಹಿತಿ ಮಾತ್ರ ಲಭ್ಯವಿದೆ.



ದೆಹಲಿ: 101 ವರ್ಷದ ದಾಖಲೆ ಮಳೆ

ನವದೆಹಲಿ (ಪಿಟಿಐ): ಶನಿವಾರ ಬೆಳಿಗ್ಗೆ 8.30ಕ್ಕೆ ಮುಕ್ತಾಯಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ದೆಹಲಿಯಲ್ಲಿ 4.1 ಸೆ.ಮೀ ಮಳೆಯಾಗಿದೆ. ಇದು ಕಳೆದ 101 ವರ್ಷಗಳಲ್ಲಿಯೇ ಡಿಸೆಂಬರ್ ತಿಂಗಳಲ್ಲಿ ಸುರಿದ ಗರಿಷ್ಠ ಮಳೆಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

1923ರ ಡಿ.3ರಂದು ದೆಹಲಿಯಲ್ಲಿ ಒಂದೇ ದಿನ 7.57 ಸೆ.ಮೀ ದಾಖಲೆಯ ಮಳೆಯಾಗಿತ್ತುಎಂದುಐಎಂಡಿತಿಳಿಸಿದೆ.

'ಸಫ್ದರ್‌ಜಂಗ್‌ನಲ್ಲಿ ಶನಿವಾರ ಬೆಳಿಗ್ಗೆ ವರೆಗೂ ಸುರಿದ ಮಳೆಯ ಒಟ್ಟು ಪ್ರಮಾಣವು 1901ರ ಬಳಿಕ ಎರಡನೇ ಗರಿಷ್ಠ ಪ್ರಮಾಣವಾಗಿದೆ. ಮಾಸಿಕ ಮಳೆಯ ಲೆಕ್ಕಾಚಾರದ ಪ್ರಕಾರ, ಐದನೇ ಗರಿಷ್ಠದ್ದಾಗಿದೆ' ಎಂದು ಐಎಂಡಿಯ ಅಧಿಕಾರಿಯೊಬ್ಬರು ತಿಳಿಸಿದರು.

ದೆಹಲಿಯಲ್ಲಿ ಶನಿವಾರ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಯಲ್ಲೋ ಅಲರ್ಟ್ ಸೂಚನೆ ನೀಡಿತ್ತು. ಶನಿವಾರ ಕನಿಷ್ಠ ತಾಪಮಾನ 12.7 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಮಳೆಯಿಂದ ಗಾಳಿಯ ಮಟ್ಟ 'ಮಧ್ಯಮ' ಮಟ್ಟಕ್ಕೆ ತಲುಪಿದ್ದರೂ, ಬೆಳಿಗ್ಗೆ 9 ಗಂಟೆಗೆ ವಾಯು ಗುಣಮಟ್ಟ ಸೂಚ್ಯಂಕವು 152ರಷ್ಟಿತ್ತು ಎಂದು ಮಾಲಿನ್ಯ ಮಂಡಳಿ ಅಂಕಿಅಂಶಗಳಿಂದ ತಿಳಿದು ಬಂದಿದೆ.

ಸಂಕ್ಷಿಪ್ತ ಸುದ್ದಿ

ನಟಿ ಕೊಠಾರೆ ಕಾರು ಡಿಕ್ಕಿ: ಕಾರ್ಮಿಕ ಸಾವು

ಮುಂಬೈ (ಪಿಟಿಐ): ಮರಾಠಿ ನಟಿ ಊರ್ಮಿಳಾ ಕೊಠಾರೆ ಪ್ರಯಾಣಿಸುತ್ತಿದ್ದ ಕಾರು ಡಿಕ್ಕಿ ಹೊಡೆದು ಕಾರ್ಮಿಕರೊಬ್ಬರು ಮೃತಪಟ್ಟಿದ್ದು, ಮತ್ತೊಬ್ಬ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಶೂಟಿಂಗ್ ಮುಗಿಸಿಕೊಂಡು ಮನೆಗೆ ಮರಳುತ್ತಿದ್ದಾಗ, ಮುಂಬೈನ ಕಾಂದಿವಲಿ ಪ್ರದೇಶದಲ್ಲಿ ಶನಿವಾರ ಮುಂಜಾನೆ ನಡೆದ ಅಪಘಾತದಲ್ಲಿ ನಟಿ ಹಾಗೂ ಕಾರು ಚಾಲಕ ಸಹ ಗಾಯಗೊಂಡಿದ್ದಾರೆ.

ಕಾರಿನಲ್ಲಿನ ಏರ್‌ಬ್ಯಾಗ್ ತೆರೆದುಕೊಂಡಿದ್ದರಿಂದ ಕೊಠಾರೆಗೆ ಹೆಚ್ಚಿನ ಅಪಾಯವಾಗಿಲ್ಲ ಎಂದು ಸಮ್ತಾ ನಗರ ಪೊಲೀಸರು ತಿಳಿಸಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿದ ಕಾರು, ರಸ್ತೆ ಬದಿಯಲ್ಲಿ ಮೆಟ್ರೊ ಕಾಮಗಾರಿಯಲ್ಲಿ ತೊಡಗಿದ್ದ ಕಾರ್ಮಿಕರಿಗೆ ಡಿಕ್ಕಿ ಹೊಡೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಬಾಂಗ್ಲಾ: 13 ಅಕ್ರಮ ವಲಸಿಗರ ಬಂಧನ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ವಿಶೇಷ ಕಾರ್ಯಾಚರಣೆ ನಡೆಸಿ ಬಾಂಗ್ಲಾದೇಶದ 13 ಜನ ಅಕ್ರಮ ವಲಸಿಗರನ್ನು ಬಂಧಿಸಿರುವುದಾಗಿ ತಿಳಿಸಿದೆ. ನವಿ ಮುಂಬೈ, ಠಾಣೆ ಹಾಗೂ ಸೋಲಾಪುರದಲ್ಲಿ ಪೊಲೀಸರ ಸಹಾಯದಿಂದ ಕಾರ್ಯಾಚರಣೆ ನಡೆಸಿದ್ದು, 7 ಪುರುಷರು ಹಾಗೂ 6 ಮಹಿಳೆಯರನ್ನು ಬಂಧಿಸಲಾಗಿದೆ. ಬಂಧಿತರು ಬಾಂಗ್ಲಾದೇಶದ ಪ್ರಜೆಗಳಾಗಿದ್ದು ಇವರು ಆಧಾರ್ ಕಾರ್ಡ್ ಸೇರಿದಂತೆ ನಕಲಿ ದಾಖಲೆಗಳನ್ನು ಪಡೆದುಕೊಂಡು ಅಕ್ರಮವಾಗಿ ನೆಲೆಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರೈಲಿನಡಿ ಅವಿತು ಪ್ರಯಾಣ; ಸುಳ್ಳು ವರದಿ– ರೈಲ್ವೆ

ನವದೆಹಲಿ(ಪಿಟಿಐ): ರೈಲಿನ ಬೋಗಿಯ ಕೆಳಗೆ ಅಡಗಿಕೊಂಡು ವ್ಯಕ್ತಿಯೊಬ್ಬರು ಇಟಾರಸಿಯಿಂದ ಜಬಲ್‌ಪುರಕ್ಕೆ 250 ಕಿ.ಮೀ. ದೂರ ಪ್ರಯಾಣಿಸಿದ್ದಾರೆ ಎಂಬ ವರದಿಯನ್ನು ರೈಲ್ವೆ ಸಚಿವಾಲಯವು ಶುಕ್ರವಾರ ತಳ್ಳಿಹಾಕಿದೆ.

ನಿಂತಿದ್ದ ರೈಲಿನ ಬೋಗಿಯ ಕೆಳಗಿಳಿದು ಹೊರಬಂದ ವ್ಯಕ್ತಿಯ ವಿಡಿಯೊವನ್ನು ಯಾರೊ ಚಿತ್ರೀಕರಿಸಿದ್ದು, ಟಿಕೆಟ್ ಖರೀದಿಗೆ ಹಣವಿಲ್ಲದಿದ್ದರಿಂದ, ಈ ವ್ಯಕ್ತಿ ಬೋಗಿಯ ಕೆಳಗೆ ಅಡಗಿ ಪ್ರಯಾಣಿಸಿದ್ದಾರೆ ಎಂಬ ತಪ್ಪು ಮಾಹಿತಿಯೊಂದಿಗೆ ಪ್ರಸಾರ ಮಾಡಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

'ಈ ವರದಿಯು ಸುಳ್ಳು ಮತ್ತು ಆಧಾರ ರಹಿತವಾದದ್ದು' ಎಂದು ರೈಲ್ವೆ ಮಂಡಳಿಯ ಮಾಹಿತಿ ಮತ್ತು ಪ್ರಚಾರ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ದಿಲೀಪ್ ಕುಮಾರ್ ತಿಳಿಸಿದ್ದಾರೆ.

'ನಿಲ್ದಾಣದಲ್ಲಿ ರೈಲು ನಿಂತಿದ್ದಾಗ, ಆ ವ್ಯಕ್ತಿಯು ಬೋಗಿಯ ಕೆಳಗೆ ಅಡಗಿಕೊಂಡಿದ್ದ. ರೈಲು ಚಲಿಸುವಾಗ ಅಲ್ಲಿ ಅವಿತುಕೊಳ್ಳಲು ಯಾರಿಗೂ ಸಾಧ್ಯವಿಲ್ಲ' ಎಂದಿದ್ದಾರೆ.

ಈ ವಿಡಿಯೊದ ಸತ್ಯಾಸತ್ಯತೆಯನ್ನು ಪರಿಶೀಲಿಸದೆ, ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

'ನಿತೀಶ್‌ರನ್ನು ಆಪ್ತರು ಹಿಡಿದಿಟ್ಟುಕೊಂಡಿದ್ದಾರೆ'

ತೇಜಸ್ವಿ ಯಾದವ್

ಪಟ್ನಾ (ಪಿಟಿಐ): ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಸಹಜವಾಗಿ ಕರ್ತವ್ಯ ನಿರ್ವಹಿಸಲು ಆಗುತ್ತಿಲ್ಲ, ಅವರನ್ನು ಕೆಲವು ನಿಕಟವರ್ತಿಗಳು 'ಹಿಡಿದಿಟ್ಟುಕೊಂಡಿದ್ದಾರೆ' ಎಂದು ಆರ್‌ಜೆಡಿ ನಾಯಕ, ಬಿಹಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಶನಿವಾರ ಆರೋಪಿಸಿದ್ದಾರೆ.

ತೇಜಸ್ವಿ ಯಾದವ್ ಅವರು ಈ ಹಿಂದೆ ನಿತೀಶ್ ನೇತೃತ್ವದ ಮೈತ್ರಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದರು. 'ನಿತೀಶ್ ಅವರಿಗೆ ಏನೂ ಗೊತ್ತಾಗುತ್ತಿಲ್ಲ. ಅವರು ಬಿಹಾರವನ್ನು ಮುನ್ನಡೆಸಲು ಅಸಮರ್ಥರಾಗಿದ್ದಾರೆ' ಎಂದು ತೇಜಸ್ವಿ ಅವರು ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರವಾಗಿ ಹೇಳಿದ್ದಾರೆ.

'ನಿತೀಶ್ ಅವರು ತಾವಾಗಿಯೇ ನಿರ್ಧಾರಗಳನ್ನು ಕೈಗೊಳ್ಳುತ್ತಿಲ್ಲ. ಅವರ ಪಕ್ಷದ ನಾಲ್ಕು ಮಂದಿ ನಾಯಕರು, ದೆಹಲಿಯ ಇಬ್ಬರು ಹಾಗೂ ಇಲ್ಲಿನ ಇನ್ನುಳಿದವರು ನಿತೀಶ್ ಅವರನ್ನು ಹಿಡಿದಿಟ್ಟುಕೊಂಡಿದ್ದಾರೆ. ಅವರೇ ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ' ಎಂದು ತೇಜಸ್ವಿ ಅವರು ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದಾರೆ ಎಂಬ ಆರೋಪವನ್ನು ಉಲ್ಲೇಖಿಸಿ, ಬಿಜೆಪಿಗೆ ನೀಡಿರುವ ಬೆಂಬಲದ ಬಗ್ಗೆ ಮರುಚಿಂತನೆ ನಡೆಸುವಂತೆ ಕೋರಿ ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರು ನಿತೀಶ್ ಅವರಿಗೆ ಪತ್ರ ಬರೆದಿದ್ದರು. ಆದರೆ ಈ ಪತ್ರಕ್ಕೆ ಸಂಜಯ್ ಝಾ ಅವರಿಂದ ಉತ್ತರ ಬಂದಿದೆ. ಪತ್ರಕ್ಕೆ ಉತ್ತರಿಸಲು ಝಾ ಯಾರು ಎಂದು ತೇಜಸ್ವಿ ಪ್ರಶ್ನಿಸಿದ್ದಾರೆ.

ಕಾಶ್ಮೀರದಲ್ಲಿ ಭಾರಿ ಹಿಮಪಾತ; ಮಾರ್ಗಮಧ್ಯೆ ಸಿಲುಕಿದ ವಾಹನಗಳು

ಪ್ರವಾಸಿಗರಿಗೆ ಮಸೀದಿಯಲ್ಲಿ ಆಶ್ರಯ

ಶ್ರೀನಗರ (ಪಿಟಿಐ): ಕಾಶ್ಮೀರದ ಶ್ರೀನಗರ– ಸೋನಾಮಾರ್ಗ್‌ನಲ್ಲಿ ವ್ಯಾಪಕ ಹಿಮಪಾತದಿಂದ ಸಂಕಷ್ಟಕ್ಕೆ ಸಿಲುಕಿದ ಪ್ರವಾಸಿಗರಿಗೆ ಮಸೀದಿಯಲ್ಲಿ ಆಶ್ರಯ ನೀಡುವ ಮೂಲಕ ಕಾಶ್ಮೀರದ ಹೃದಯಸ್ಪರ್ಶಿ ಆತಿಥ್ಯಕ್ಕೆ ಸಾಕ್ಷಿಯಾಯಿತು.

ಸೋನಾಮಾರ್ಗ್‌ನಿಂದ ಹಿಂತಿರುಗುವ ಮಾರ್ಗದ ಮಧ್ಯೆ ಹಿಮಪಾತಉಂಟಾಗಿದ್ದರಿಂದಡಜನ್‌ಗೂ ಅಧಿಕ ಪ್ರವಾಸಿಗರು ಮಾರ್ಗಮಧ್ಯೆ ಸಿಲುಕಿಕೊಂಡರು. ಅವರ ವಾಹನಗಳು ಮುಂದೆ ಚಲಿಸಲು ಸಾಧ್ಯವಾಗಲಿಲ್ಲ. ಹತ್ತಿರದಲ್ಲಿದ್ದ ಹೋಟೆಲ್, ಮನೆಗಳು ಚಿಕ್ಕದಾಗಿದ್ದರಿಂದ ಎಲ್ಲರಿಗೂ ಆಶ್ರಯ ನೀಡುವ ವ್ಯವಸ್ಥೆ ಹೊಂದಿರಲಿಲ್ಲ. ಹೀಗಾಗಿ, ರಾತ್ರಿ ವೇಳೆ ಪ್ರವಾಸಿಗರು ತಂಗಲು ಗುಂಡ್ ಪ್ರದೇಶದ ನಿವಾಸಿಗಳು ಮಸೀದಿ ಬಾಗಿಲು ತೆರೆದು ವಾಸ್ತವ್ಯ ಕಲ್ಪಿಸಿದರು.

ಶ್ರೀನಗರದಲ್ಲಿ ಹಿಮಪಾತ ಆಗುತ್ತಿದ್ದು, ಸುರಿಯುವ ಹಿಮದ ನಡುವೆ ಛತ್ರಿ ಹಿಡಿದು ಸಾಗಿದ ಮಹಿಳೆ –ಪಿಟಿಐ ಚಿತ್ರ

'ಪ್ರವಾಸಿಗರಿಗೆ ಉಳಿಯಲು ಮಸೀದಿಯಲ್ಲೇ ಅವಕಾಶ ಕಲ್ಪಿಸುವುದೊಂದೇ ಅತ್ಯುತ್ತಮ ಪರಿಹಾರವಾಗಿತ್ತು. ಆ ಜಾಗವೂ ಇಡೀ ರಾತ್ರಿ ಬಿಸಿಯಾಗಿರುತ್ತದೆ' ಎಂದು ಸ್ಥಳೀಯ ನಿವಾಸಿ ಬಷೀರ್ ಅಹಮದ್ ತಿಳಿಸಿದರು.

ಅ. 20ರಂದು ಗಾಂದರಬಲ್ ಜಿಲ್ಲೆಯ ಗಗನ್‌ಗೀರ್ ಪ್ರದೇಶದ ಸುರಂಗ ನಿರ್ಮಾಣ ಸ್ಥಳದ ಬಳಿ ಉಗ್ರರು ನಡೆಸಿದ ದಾಳಿಯಿಂದ ಗುಂಡ್ ಪ್ರದೇಶವು 10 ಕಿ.ಮೀ ದೂರದಲ್ಲಿದೆ. ದುಷ್ಕೃತ್ಯದಲ್ಲಿ ಸ್ಥಳೀಯ ವೈದ್ಯರು ಮತ್ತು ಆರು ಜನ ಸ್ಥಳೀಯೇತರ ಕಾರ್ಮಿಕರು ಮೃತಪಟ್ಟಿದ್ದರು.

ಮಸೀದಿಯಲ್ಲಿ ಪ್ರವಾಸಿಗರು ತಂಗಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ರಾತ್ರಿ ವೇಳೆ ಆತಿಥ್ಯ ಕಲ್ಪಿಸಿದ್ದಕ್ಕೆ ಪ್ರವಾಸಿಗರು ಧನ್ಯವಾದ ಸಲ್ಲಿಸಿದ್ದಾರೆ. ಸಂಕಷ್ಟದಲ್ಲಿ ಸಿಲುಕಿರುವ ಪ್ರವಾಸಿಗರ ನೆರವಿಗೆ ಧಾವಿಸಿರುವ ಪೊಲೀಸರು ಹಾಗೂ ಸ್ಥಳೀಯಾಡಳಿತವು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಿದೆ.

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
#16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,
ವಸಂತನಗರ, ಬೆಂಗಳೂರು–560052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003ರ ಪರಿಚ್ಛೇದ 62 ಮತ್ತು 64ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ವಿನಿಮಯಗಳು, 2000 ಹಾಗೂ ತಿದ್ದುಪಡಿಗಳು ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು, 2006 ಮತ್ತು ತಿದ್ದುಪಡಿಗಳು ಪ್ರಕಾರ ಆರ್ಥಿಕ ವರ್ಷ 2023–24ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎ.ಪಿ.ಆರ್) ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರೀಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024ರ ಪ್ರಕಾರ 2025–26, 2026–27 ಮತ್ತು 2027–28ರ ಆರ್ಥಿಕ ವರ್ಷಗಳಿಗೆ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಮತ್ತು ಪ್ರಸರಣ ಜಕಾತಿಯ ಅರ್ಜಿಯನ್ನು ಅನುಮೋದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560 009. ..... **ಅರ್ಜಿದಾರರು**

ಅಧಿಸೂಚನೆ

ಕವಿಪ್ರನಿನಿಯ ಎಪಿಆರ್ 2023–24 ಮತ್ತು ಎ.ಆರ್.ಆರ್ 2025–26, 2026–27 ಮತ್ತು 2027–28ರ ಅಧಿಸೂಚನೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006ರ ಮತ್ತು ಕಾಲಕಾಲಕ್ಕೆ ಆದ ಅದರ ತಿದ್ದುಪಡಿಗಳ ಪ್ರಕಾರ, ಆರ್ಥಿಕ ವರ್ಷ 2023–24ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರೀಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024ರ ಪ್ರಕಾರ 2025–26, 2026–27 ಮತ್ತು 2027–28ರ ಆರ್ಥಿಕ ವರ್ಷಗಳಿಗೆ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಹಾಗೂ ತತ್ಸಂಬಂಧಿ ವಿದ್ಯುತ್ ಪ್ರಸರಣ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತದೆ. ಕವಿಪ್ರನಿನಿಯ ಅರ್ಜಿಗಳು ಗೌರವಾನ್ವಿತ ಆಯೋಗದ ಪರಿಗಣನೆಯಲ್ಲಿರುತ್ತದೆ.

2.0 ಆರ್ಥಿಕ ವರ್ಷ 2023–24ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿಯಲ್ಲಿ, ಕವಿಪ್ರನಿನಿಯು ಪರಿಷ್ಕೃತ ವಾರ್ಷಿಕ ಆದಾಯದ ಅಗತ್ಯತೆ ರೂ. 5849.45 ಕೋಟಿಯಾಗಿರುತ್ತದೆ. ಆದಾಯದ ಕೊರತೆಯು ರೂ. 254.85 ಕೋಟಿಗಳಾಗಿರುತ್ತದೆ. ಈ ಕೊರತೆಯನ್ನು ಆರ್ಥಿಕ ವರ್ಷ 2025–26ರ ಅವಧಿಯಲ್ಲಿ ವಸೂಲಾತಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ಆರ್ಥಿಕ ವರ್ಷ 2025–26, 2026–27 ಮತ್ತು 2027–28ರ ಆರ್ಥಿಕ ವಾರ್ಷಿಕ ಆದಾಯದ ಅಗತ್ಯತೆಯಾದ ರೂ. 10,522.91 ಕೋಟಿ, ರೂ. 10,954.71 ಕೋಟಿ ಮತ್ತು ರೂ. 12,158.05 ಕೋಟಿಗಳನ್ನು ಪ್ರಸ್ತಾವಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ, ಕ್ರಮವಾಗಿ ರೂ. 2,62,254/–, ರೂ. 2,54,270/–, ರೂ. 2,71,283/–ರಂತೆ ವಸೂಲಿ ಮಾಡಲು ಪ್ರಸ್ತಾಪಿಸಿದೆ.

ಪ್ರಸ್ತಾವಿತ ಪ್ರಸರಣ ಶುಲ್ಕಗಳು–ಲೆಕ್ಕಾಚಾರ

(ಮೊತ್ತ ರೂ. ಕೋಟಿಗಳಲ್ಲಿ)

Particulars		FY2025-26	FY2026-27	FY2027-28
A. Estimated Annual Revenue Requirement				
(a) O&M Charges		2697.12	2898.75	3399.67
(b) Depreciation		1914.23	2143.93	2401.21
(c) Interest & Finance Charges		1424.79	1628.23	1808.03
(d) Return on Equity		1627.17	1903.21	2226.06
(e) Other Charges		87.53	89.28	91.06
(f) Less: Other Income		180.97	206.30	235.19
(g) Government Portion of Contribution to P&G Trust payable by consumers, as per the decision of the Government.		2812.83	2845.75	2860.97
(h) Interest, Finance Charges and Other Expenses Capitalised		-307.96	-348.14	-393.76
(I) Amortized regulatory Asset as per KERC order dated 09.10.2020		193.32	-	-
(j) Revenue Gap for FY24		254.85	-	-
Annual Revenue Requirement:		**10522.91**	**10954.71**	**12158.05**
B. Estimated Expected Revenue from Charges @ existing tariff rates				
(a) Transmission Charges (in Rs/MW/Month)		262254	254270	271283
(b) Miscellaneous Charges		-	-	-
Total:		**262254**	**254270**	**271283**
Revenue Deficit	Government Portion of Contribution to P&G Trust payable by consumers, as per the decision of the Government.	2812.83	2845.75	2860.97
	Due to other components of estimated Annual Revenue Requirement	7710.08	8108.96	9297.08
	Total:	**10522.91**	**10954.71**	**12158.05**

C. Transmission Tariff / MW /Month:

Particulars	As Existing for FY2024-25	As Proposed for FY2025-26	As Proposed for FY2026-27	As Proposed for FY2027-28
Government Portion of Contribution to P&G Trust payable by consumers, as per the decision of the Government.	-	70,102	66,053	63,837
Other components of estimated Annual Revenue Requirement	1,63,760	1,92,152	1,88,217	2,07,446
Total:	**1,63,760**	**2,62,254**	**2,54,270**	**2,71,283**

4.0 ವಿದ್ಯುಚ್ಛಕ್ತಿ ಕಾಯಿದೆ 2003ರ ನಿಬಂಧನೆಗಳಿಗೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿಗಳು 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು 2006 ಮತ್ತು ತಿದ್ದುಪಡಿ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರೀಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024ರ ಪ್ರಕಾರ, ಮೇಲಿನ ಅರ್ಜಿಗಳಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ಅವರಿಗೆ ಸಲ್ಲಿಸಬಹುದು.**

5.0 ಆಸಕ್ತಿಯುಳ್ಳವರು ಕವಿಪ್ರನಿನಿಯ ಎ.ಪಿ.ಆರ್. ಮತ್ತು ಎ.ಆರ್.ಆರ್. ಅರ್ಜಿಗಳ ಪ್ರತಿಗಳನ್ನು ಪರಾಮರ್ಶಿಸಲು ಅಥವಾ ಖರೀದಿಸಲು ಈ ಕೆಳಗೆ ತಿಳಿಸಿದ ಕಛೇರಿಗಳಲ್ಲಿ ಲಭ್ಯವಿರುತ್ತದೆ.

1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯಗಳು, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

6.0 ಎ.ಪಿ.ಆರ್./ಎ.ಆರ್.ಆರ್. ಪ್ರತಿಗಳನ್ನು ಖರೀದಿಸಲು ಇಚ್ಛಿಸುವವರು ಎ.ಪಿ.ಆರ್.ನ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 116/–** ರಂತೆ ಮತ್ತು ಎ.ಆರ್.ಆರ್. ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 213/–** ಹಾಗೂ ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 214/–** ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ **ರೂ. 1/–** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in**ನಲ್ಲಿ ಸಹ ಲಭ್ಯವಿರುತ್ತದೆ.

7.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ, ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣಾದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ ದಿನಾಂಕದಿಂದ **30 ದಿನದೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಜ.3ರಂದು ಕೆಎಲ್ಇ ಕ್ಯಾನ್ಸರ್ ಆಸ್ಪತ್ರೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿ ಕೆಎಲ್ಇ ಸಂಸ್ಥೆ ನಿರ್ಮಿಸಿದ ಡಾ.ಸಂಪತಕುಮಾರ ಶಿವಣಗಿ ಕ್ಯಾನ್ಸರ್ ಆಸ್ಪತ್ರೆ ಉದ್ಘಾಟನೆ ಕಾರ್ಯಕ್ರಮ 2025ರ ಜನವರಿ 3ಕ್ಕೆ ಮುಂದೂಡಲಾಗಿದೆ.

'ಡಿಸೆಂಬರ್ 30ರಂದು ಆಸ್ಪತ್ರೆ ಉದ್ಘಾಟನೆ ನೆರವಾಗಬೇಕಿತ್ತು. ಆದರೆ, ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನದ ಹಿನ್ನೆಲೆಯಲ್ಲಿ ಜನವರಿ 3ರಂದು ಸಂಜೆ 4ಕ್ಕೆ ಮರು ನಿಗದಿಪಡಿಸಿದ್ದೇವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸುವರು' ಎಂದು ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಶೋಕಾಚರಣೆ: ಹೊಸ ವರ್ಷಾಚರಣೆ ರದ್ದುಗೊಳಿಸಿ'

ಬಾಗಲಕೋಟೆ: 'ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಘೋಷಿಸಿದ ಏಳು ದಿನಗಳ ಶೋಕಾಚರಣೆ ಜನವರಿ 1ಕ್ಕೆ ಮುಗಿಯಲಿದೆ. ಆದ್ದರಿಂದ ಡಿಸೆಂಬರ್ 31ರಂದು ಹೋಟೆಲ್, ಬಾರ್‌ನಲ್ಲಿ ಹೊಸ ವರ್ಷಾಚರಣೆಗೆ ಅವಕಾಶ ನೀಡಬಾರದು. ಆ ದಿನಗಳಲ್ಲಿ ಮದ್ಯ ಮಾರಾಟ ನಿಷೇಧಿಸಬೇಕು' ಎಂದು ಶ್ರೀರಾಮ ಸೇನೆ ರಾಷ್ಟ್ರೀಯ ಘಟಕದ ಅಧ್ಯಕ್ಷ ಪ್ರಮೋದ ಮುತಾಲಿಕ್ ಆಗ್ರಹಿಸಿದರು.

ಅರಸಿನಕೇರಿ, ಹಿರೇಬೆಣಕಲ್ ಭಾಗದಲ್ಲಿ ಜಾಗ ಪರಿಶೀಲನೆ; ನೈಸರ್ಗಿಕ ಸಂಪತ್ತು ಹಾಳಾಗುವ ಆತಂಕ

ಅಣು ಸ್ಥಾವರಕ್ಕೆ ಭೂಮಿ: ವಿರೋಧ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಜಿಲ್ಲೆಯಲ್ಲಿ ಸಮತಟ್ಟಾದ ಒಂದೇ ಕಡೆ ಇರುವ 1,200 ಎಕರೆ ಭೂಮಿ ಹುಡುಕುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ತಹಶೀಲ್ದಾರ್‌ಗಳಿಗೆ ಸೂಚಿಸಿದ್ದು, ಸ್ಥಾವರ ಸ್ಥಾಪನೆಗೆ ಜನರಿಂದ ವಿರೋಧ ವ್ಯಕ್ತವಾಗಿದೆ.

ಕೊಪ್ಪಳ ತಾಲ್ಲೂಕಿನ ಅರಸನಕೇರಿ ಬಳಿ ಜಾಗ ಪರಿಶೀಲನೆ ಮಾಡಿದ್ದಕ್ಕೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿತ್ತು. ವಾಸ್ತವದಲ್ಲಿ ಅಲ್ಲಿ ಒಂದೇ ಕಡೆ 600 ಎಕರೆಗಿಂತಲೂ ಹೆಚ್ಚಿನ ಭೂಮಿ ಲಭ್ಯವಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಆದ್ದರಿಂದ ಜನ ಹೋರಾಟವನ್ನೂ ಕೈ ಬಿಟ್ಟರು. ಈಗ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್–ಎಡೆಹಳ್ಳಿ ಗ್ರಾಮಗಳ ಸುತ್ತಲು ಭೂಮಿ ಹುಡುಕಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಗಂಗಾವತಿ ತಹಶೀಲ್ದಾರ್ ಯು. ನಾಗರಾಜ, 'ಹಿರೇಬೆಣಕಲ್ ಸುತ್ತಲು ಭೂಮಿ ಪರಿಶೀಲಿಸಲಾಗಿದೆ. ಅಲ್ಲಿ ಒಂದೇ ಕಡೆ 1200 ಎಕರೆ ಭೂಮಿ ಇದ್ದು, ಅದು ಕಾಯ್ದಿಟ್ಟ ಅರಣ್ಯ ಪ್ರದೇಶ ವ್ಯಾಪ್ತಿಗೆ ಬರುತ್ತದೆ. ಈ ಕುರಿತು ಜಿಲ್ಲಾಧಿಕಾರಿಗೆ ಪ್ರಾಥಮಿಕ ವರದಿ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಹಿರೇಬೆಣಕಲ್ ಮತ್ತು ಸುತ್ತಮುತ್ತಲ ಪ್ರದೇಶ ಐತಿಹಾಸಿಕ ಹಾಗೂ ಪಾರಂಪರಿಕವಾಗಿ ಪ್ರಾಮುಖ್ಯತೆ ಪಡೆದಿದೆ. ಅಲ್ಲಿ ಸ್ಥಾವರ ಸ್ಥಾಪಿಸುವುದಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ

ಎಚ್.ಆರ್. ಶ್ರೀನಾಥ್
ವಿಧಾನಪರಿಷತ್ ಮಾಜಿ ಸದಸ್ಯ

ವಿರೋಧ: ಜಿಲ್ಲೆಯ ಕೆಲ ತಾಲ್ಲೂಕುಗಳಲ್ಲಿ ಅಧಿಕಾರಿಗಳು ಭೂಮಿ ಹುಡುಕಾಟಕ್ಕೆ ಮುಂದಾಗಿದ್ದಕ್ಕೆ ಸಾರ್ವಜನಿಕರು ಆತಂಕಗೊಂಡಿದ್ದು, 'ನಮ್ಮಲ್ಲಿ ಪರಮಾಣು ಸ್ಥಾವರ ಸ್ಥಾಪನೆ ಮಾಡುವುದು ಬೇಕಿಲ್ಲ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ' ಎಂದು ಹೇಳಿದ್ದಾರೆ.

ಹಿರೇಬೆಣಕಲ್ ಭಾಗದಲ್ಲಿ ಭೂಮಿ ಗುರುತಿಸಿ ವರದಿ ಸಲ್ಲಿಸಿದ್ದಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಗಂಗಾವತಿಯ ಎಚ್.ಆರ್. ಶ್ರೀನಾಥ್ ವಿರೋಧ ವ್ಯಕ್ತಪಡಿಸಿದ್ದು, 'ಹಿರೇಬೆಣಕಲ್ ಹಾಗೂ ಸುತ್ತಮುತ್ತಲ ಭಾಗದಲ್ಲಿ ಅನೇಕ ಐತಿಹಾಸಿಕ ಸ್ಥಳಗಳಿವೆ. ಕೆಲವೇ ಕಿ.ಮೀ.ಗಳ ದೂರದಲ್ಲಿ ಐತಿಹಾಸಿಕ ಹಂಪಿಯೂ ಇದೆ. ಇಂಥ ಮಹತ್ವದ ಪ್ರದೇಶದಲ್ಲಿ ಪರಮಾಣು ಸ್ಥಾವರ ಸ್ಥಾಪಿಸಿದರೆ ನೈಸರ್ಗಿಕ ಸಂಪತ್ತು ಹಾಳಾಗುತ್ತದೆ' ಎಂದಿದ್ದಾರೆ.

'ಅಧಿಕಾರಿಗಳು ರಾತ್ರೋ ರಾತ್ರಿ ಸರ್ವೆ ಮಾಡಿ ಸ್ಥಾವರ ಸ್ಥಾಪಿಸುವಂತೆ ವರದಿ ಸಲ್ಲಿಸಿದರೆ ಆ ಭಾಗದ ಜನರ ಬದುಕು ದುರ್ಬರವಾಗುತ್ತದೆ. ಆದ್ದರಿಂದ ಈಗಿನಿಂದಲೇ ಹೋರಾಟ ಮಾಡಲಾಗುತ್ತಿದೆ' ಎಂದರು.

ಸ್ಥಾವರ ಸ್ಥಾಪನೆ ಅಂತಿಮವಾಗಿಲ್ಲ: ಜಿಲ್ಲಾಧಿಕಾರಿ ಅತುಲ್

'ಅಣು ವಿದ್ಯುತ್ ಸ್ಥಾವರಕ್ಕೆ ಭೂಮಿ ಗುರುತಿಸುವಂತೆ ಕೇಂದ್ರದಿಂದ ಪತ್ರ ಬಂದಿದ್ದರಿಂದ ತಹಶೀಲ್ದಾರ್‌ಗಳಿಗೆ ಪತ್ರ ಬರೆಯಲಾಗಿದೆ. ಅದಿನ್ನು ಪ್ರಾಥಮಿಕ ಹಂತದಲ್ಲಿದೆಯೇ ಹೊರತು ಸ್ಥಾವರ ಸ್ಥಾಪನೆಗೆ ಯಾವುದೇ ಜಾಗ ಅಂತಿಮವಾಗಿಲ್ಲ.

ನಲಿನ್ ಅತುಲ್

ಈ ಬಗ್ಗೆ ಜನ ಆತಂಕಗೊಳ್ಳುವ ಅಗತ್ಯವೂ ಇಲ್ಲ' ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಸ್ಪಷ್ಟಪಡಿಸಿದರು.

'ರಾಜ್ಯದಲ್ಲಿ ಕೊಪ್ಪಳ ಮಾತ್ರವಲ್ಲದೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಸ್ಥಾವರ ಸ್ಥಾಪನೆಗೆ ಭೂಮಿ ಹುಡುಕಲಾಗುತ್ತಿದೆ. ಯಾವುದೇ ಜಾಗ ಇನ್ನೂ ಅಂತಿಮವಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

2038ರ ತನಕ ಪ್ರಸ್ತಾಪವೇ ಇಲ್ಲ: ಪುರಾಣಿಕ

ಕೊಪ್ಪಳ: 'ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ನಿರ್ಮಾಣ ಹಂತದಲ್ಲಿರುವ 20 ಅಣು ವಿದ್ಯುತ್ ಸ್ಥಾವರಗಳ ಹೊರತಾಗಿ, ಕೇಂದ್ರ ಸರ್ಕಾರ 2038ರ ವರೆಗೆ ಪರಮಾಣು ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕಾಗಿ ದೇಶದಾದ್ಯಂತ ಇನ್ನೂ 28 ಸ್ಥಳಗಳನ್ನು ಗುರುತಿಸಿದೆ. ಅದರಲ್ಲಿ ಯಾವುದೂ ಕರ್ನಾಟಕದಲ್ಲಿಲ್ಲ' ಎಂದು ಕೊಪ್ಪಳ ಮೂಲದ ವಿಜ್ಞಾನಿ ಉದಯಶಂಕರ ಪುರಾಣಿಕ 'ಪ್ರಜಾವಾಣಿ'ಗೆ ತಿಳಿಸಿದರು.

'ಜಾಗ ಗುರುತಿಸುವಂತೆ ದೇಶದ ಎಲ್ಲ ರಾಜ್ಯಗಳಿಗೂ ಕೇಂದ್ರ ಪತ್ರ ಬರೆದಿದೆ. ಹೀಗಾಗಿ ಆಯಾ ಜಿಲ್ಲಾಧಿಕಾರಿಗಳು ಜಾಗ ಹುಡುಕುವಂತೆ ಹೇಳಿದ್ದಾರೆಯೇ ವಿನಾ ಸ್ಥಾವರ ಸ್ಥಾಪನೆ ಎಲ್ಲಿಯೂ ಅಂತಿಮವಾಗಿಲ್ಲ. ರಾಜ್ಯದಲ್ಲಿ ಕೈಗಾದಲ್ಲಿ ಮಾತ್ರ ಇನ್ನೆರಡು ಘಟಕಗಳ ಸ್ಥಾಪನೆ ಮಾಡುವುದಾಗಿ ಕೇಂದ್ರ ಹೇಳಿದೆ' ಎಂದರು.

'ಪರಮಾಣು ಶಕ್ತಿ ಸಂಸ್ಥೆಯ ಅಂದಾಜಿನ ಪ್ರಕಾರ ಪರಮಾಣು ಸ್ಥಾವರದ ಮೂಲಕ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ 1,514 ಲಕ್ಷದಿಂದ 2,725 ಲಕ್ಷ ಲೀಟರ್ ನೀರು ಬೇಕಾಗುತ್ತದೆ. ಈಗ ಗುರುತಿಸಿರುವ ಜಾಗದಲ್ಲಿ ಅಂಥ ದೊಡ್ಡ ಪ್ರಮಾಣದ ನೀರಿನ ಲಭ್ಯತೆಯೇ ಇಲ್ಲ' ಎಂದು ತಿಳಿಸಿದರು.



ಉದಯಶಂಕರ ಪುರಾಣಿಕ

ಸುದ್ದಿ 2 ನಿಮಿಷ

ಜ. 5ರಂದು ಬೈಲಕುಪ್ಪೆಗೆ ದಲೈಲಾಮ ಭೇಟಿ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ಟಿಬೆಟ್ ಧರ್ಮಗುರು ದಲೈಲಾಮ ಅವರು ವಿಶ್ರಾಂತಿಗಾಗಿ ಜ. 5ರಂದು ಬೈಲಕುಪ್ಪೆಗೆ ಆಗಮಿಸಲಿದ್ದಾರೆ ಎಂದು ಟಿಡಿಎಲ್ ಮುಖ್ಯಸ್ಥ ಟಸಿ ತುಂಡುಪೊ ತಿಳಿಸಿದ್ದಾರೆ.

'ತಾಲ್ಲೂಕಿನ ಬೈಲಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಕ್ಷ್ಮಿಪುರ ಟಿಬೆಟನ್ ಪ್ರಾರ್ಥನಾ ಮಂದಿರವಾದ ತಾಷಿ ಲುಂಪೊ ಮೋನಾಸ್ಟ್ರಿಯಲ್ಲಿ ಒಂದು ತಿಂಗಳು ವಿಶ್ರಾಂತಿ ಪಡೆಯಲು ನಿರ್ಧರಿಸಿದ್ದಾರೆ. ಟಿಬೆಟನ್ ಬೌದ್ಧ ಸನ್ಯಾಸಿಗಳೊಂದಿಗೆ ಪ್ರಾರ್ಥನೆಯಲ್ಲಷ್ಟೇ ಭಾಗವಹಿಸಲಿದ್ದು, ಸಾರ್ವಜನಿಕ ಸಭೆ, ಸಮಾರಂಭ ಮತ್ತು ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ' ಎಂದು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಸೂಕ್ತ ಭದ್ರತೆ ಕಲ್ಪಿಸಲಾಗುವುದು' ಎಂದು ಬೈಲಕುಪ್ಪೆ ಪೊಲೀಸ್ ಪಿಎಸ್ಐ ಅಜಯ್ ಕುಮಾರ್ ತಿಳಿಸಿದ್ದು, ಪ್ರಾರ್ಥನಾ ಮಂದಿರದ ಸುತ್ತಮುತ್ತ ಸ್ವಚ್ಛತೆ ಕಾರ್ಯ ಬಿರುಸಿನಿಂದ ನಡೆಯುತ್ತಿದೆ.

ತಿಪಟೂರು ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿ ಸಾವು

ತಿಪಟೂರು (ತುಮಕೂರು): ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಸೇರಿಯನ್ ಹೆರಿಗೆ ನಂತರ ಫಿರ್ದೋಸ್ (26) ಎಂಬ ಬಾಣಂತಿ ಶನಿವಾರ ಮೃತಪಟ್ಟಿದ್ದಾರೆ.

ಬೆಂಗಳೂರಿನ ಡಿ.ಜೆ.ಹಳ್ಳಿ ಬಡಾವಣೆ ನಿವಾಸಿ ಫಿರ್ದೋಸ್ ಹೆರಿಗೆಗಾಗಿ ತಿಪಟೂರಿನ ತವರು ಮನೆಗೆ ಬಂದಿದ್ದರು. ಶುಕ್ರವಾರ ಹೆರಿಗೆ ನೋವು ಕಾಣಿಸಿಕೊಂಡ ನಂತರ ಅವರನ್ನು ಸ್ಥಳೀಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಧ್ಯಾಹ್ನ 1 ಗಂಟೆಗೆ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಲಾಗಿತ್ತು. ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಶನಿವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ. ಪ್ರತಿಕ್ರಿಯೆಗೆ ಬಾಣಂತಿ ಕುಟುಂಬದವರು ಲಭ್ಯರಾಗಿಲ್ಲ.

'ಶ್ವಾಸಕೋಶದ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟಿ(ಪಲ್ಮನರಿ ಎಂಬಾಲಿಸಮ್) ಬಾಣಂತಿ ಮೃತಪಟ್ಟಿದ್ದಾರೆ' ಎಂದು ಆಸ್ಪತ್ರೆ ಆಡಳಿತ ಅಧಿಕಾರಿ ಶಿವಕುಮಾರ್ ಹೇಳಿದ್ದಾರೆ.

ಪಾಂಡವಪುರ ಠಾಣೆಯಲ್ಲೇ ಕಾನ್‌ಸ್ಟೆಬಲ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಪಟ್ಟಣದ ಪೊಲೀಸ್ ಠಾಣೆಯಲ್ಲಿ ಯುವಕನೊಬ್ಬ ಕಾನ್‌ಸ್ಟೆಬಲ್ ಅಭಿಷೇಕ್ ಎಂಬವರ ಕೊರಳಪಟ್ಟಿ ಹಿಡಿದು ಹಲ್ಲೆ ಮಾಡಿದ ಘಟನೆ ಶನಿವಾರ ನಡೆದಿದೆ. ಆ ಸಂದರ್ಭದಲ್ಲಿ ಇತರೆ ಪೊಲೀಸ್ ಸಿಬ್ಬಂದಿಯೊಂದಿಗೂ ತಳ್ಳಾಟವಾಗಿದ್ದು, ಘಟನೆಯ ವಿಡಿಯೊ ಶನಿವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಪಟ್ಟಣದ ಹಿರೋಡೆ ಬೀದಿಯ ಪಿ.ಎಸ್.ಜಗದೀಶ್ ಅವರ ಪುತ್ರ ಸಾಗರ್ (30) ಆರೋಪಿ. ಜಮೀನು ವಿವಾದದ ಸಂಬಂಧ ಪಟ್ಟಣದ ಲಕ್ಷ್ಮೀನಾರಾಯಣ ಎಂಬವರು ಆರೋಪಿ ವಿರುದ್ಧ ದೂರು ದಾಖಲಿಸಿದ್ದರಿಂದ, ಇಬ್ಬರನ್ನೂ ಠಾಣೆಗೆ ಕರೆಸಿದ ವೇಳೆ ಘಟನೆ ನಡೆದಿದೆ.

'ಠಾಣೆಯ ಆವರಣದಲ್ಲಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುವ ವಿಚಾರದಲ್ಲಿ ಇಬ್ಬರ ಮಧ್ಯೆ ವಾಗ್ವಾದ ನಡೆದಿತ್ತು. ಆಗ ಮಧ್ಯಪ್ರವೇಶಿಸಿದ ಕಾನ್‌ಸ್ಟೆಬಲ್ ಅಭಿಷೇಕ್, ಆರೋಪಿಯನ್ನು ಸಮಾಧಾನಪಡಿಸಲು ಯತ್ನಿಸಿದ್ದರು. ಅದರಿಂದ ಮತ್ತಷ್ಟು ಕೋಪಗೊಂಡ ಆರೋಪಿಯು ಅವರ ಕೊರಳಪಟ್ಟಿಯನ್ನೇ ಹಿಡಿದು ಹಲ್ಲೆ ನಡೆಸಿದ. ಅಲ್ಲಿಯೇ ಕರ್ತವ್ಯದಲ್ಲಿದ್ದ ಕಾನ್‌ಸ್ಟೆಬಲ್‌ಗಳಾದ ಲಕ್ಷ್ಮೀ ಮತ್ತು ಆನಂದ ಅವರು ಜಗಳ ಬಿಡಿಸಲು ಮುಂದಾದಾಗಲೂ, ಅವರಿಗೂ ಎಚ್ಚರಿಕೆ ನೀಡಿದ್ದ. ಕುಡಿಯುವ ನೀರಿನ ಕ್ಯಾನ್ ಎತ್ತಿಕೊಂಡು ಬಿಸಾಡಿದ್ದರಿಂದ, ಟೇಬಲ್ ಮೇಲಿದ್ದ ದಾಖಲೆಗಳೂ ಹಾಳಾಗಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಅಭಿಷೇಕ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿ, ಆರೋಪಿಯನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ' ಎಂದಿದ್ದಾರೆ.

ಪಾಂಡವಪುರ ಪೊಲೀಸ್ ಠಾಣೆ ಆವರಣದಲ್ಲಿ ಕಾನ್‌ಸ್ಟೆಬಲ್ ಅಭಿಷೇಕ್ ಅವರ ಕೊರಳಪಟ್ಟಿ ಹಿಡಿದು ಹಲ್ಲೆ ನಡೆಸಿದ ಆರೋಪಿ ಸಾಗರ್

6 ರಾಜ್ಯಗಳಲ್ಲಿ 'ನಂದಿನಿ' ಕ್ಷೀರಧಾರೆ

ತಿಂಗಳಿಗೆ ₹ 75 ಕೋಟಿ ವಹಿವಾಟು: ಹಾಲು ಸಂಗ್ರಹದಲ್ಲಿ ಮಂಡ್ಯಕ್ಕೆ 4ನೇ ಸ್ಥಾನ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಗುಣಮಟ್ಟಕ್ಕೆ ಹೆಸರುವಾಸಿಯಾಗಿರುವ 'ನಂದಿನಿ ಹಾಲು' ಈಗ 6 ರಾಜ್ಯಗಳಲ್ಲಿ ಮಾರುಕಟ್ಟೆ ವಿಸ್ತರಿಸಿಕೊಂಡಿದೆ.

ಈಗ ಹಳ್ಳಿಯಿಂದ ದಿಲ್ಲಿವರೆಗೂ 'ನಂದಿನಿ' ಕ್ಷೀರಧಾರೆ ಹರಿಯುತ್ತಿದೆ. ದೆಹಲಿಗೆ ಮಂಡ್ಯದಿಂದ, ಮುಂಬೈಗೆ ತುಮಕೂರಿನಿಂದ ಹಾಲು ಪೂರೈಕೆಯಾಗುತ್ತಿದೆ.

ಹೈದರಾಬಾದ್‌ಗೆ ಹಾಸನದಿಂದ, ಚೆನ್ನೈ ಮತ್ತು ಕೇರಳಕ್ಕೆ ಮೈಸೂರಿನಿಂದ, ತಮಿಳುನಾಡಿನ ನೀಲಗಿರಿ ಮತ್ತು ಕೇರಳಕ್ಕೆ ಚಾಮರಾಜನಗರದಿಂದ, ಗೋವಾ ಮತ್ತು ಪುಣೆಗೆ ಬೆಳಗಾವಿಯಿಂದ, ವಿದರ್ಭ ಮತ್ತು ಸೊಲ್ಲಾಪುರಕ್ಕೆ (ಮಹಾರಾಷ್ಟ್ರ) ವಿಜಯಪುರದಿಂದ ಹಾಲು ಪೂರೈಕೆಯಾಗುತ್ತಿದೆ.

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ (ಕೆ.ಎಂ.ಎಫ್) 'ನಂದಿನಿ ಬ್ರ್ಯಾಂಡ್' ವಿಸ್ತರಿಸುವ ಉದ್ದೇಶದಿಂದ ರಾಜ್ಯದ ವಿವಿಧ ಹಾಲು ಉತ್ಪಾದಕರ ಒಕ್ಕೂಟಗಳಿಂದ 6 ರಾಜ್ಯಗಳಿಗೆ ನಿತ್ಯ 4.35 ಲಕ್ಷ ಲೀಟರ್ ಹಾಲು, 66 ಸಾವಿರ ಲೀಟರ್ ಮೊಸರು ಪೂರೈಸುತ್ತಿದೆ. ಇದರಿಂದ ನಿತ್ಯ 2.47 ಕೋಟಿ ವಹಿವಾಟು ನಡೆಸುತ್ತಿದೆ. ತಿಂಗಳಿಗೆ ಸರಾಸರಿ ₹75 ಕೋಟಿ ವಹಿವಾಟು ಇದೆ.

ನಂದಿನಿ ಹಾಲು

ರಾಜ್ಯದ ಹೆಮ್ಮೆಯ ನಂದಿನಿ ಹಾಲಿಗೆ ದೆಹಲಿಯಲ್ಲಿ ಉತ್ತಮ ಬೇಡಿಕೆ ಇದೆ. ಪ್ರಬಲ ಪೈಪೋಟಿ ನಡುವೆಯೂ ಗುಣಮಟ್ಟದಿಂದ ಮಾರುಕಟ್ಟೆ ವಿಸ್ತರಿಸಿಕೊಳ್ಳುತ್ತಿದೆ

ಬಿ.ಬೋರೇಗೌಡ
ಅಧ್ಯಕ್ಷ, ಮನ್‌ಮುಲ್, ಮಂಡ್ಯ

26 ಲಕ್ಷ ಹಾಲು ಉತ್ಪಾದಕರು: ರಾಜ್ಯದ 15 ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳಡಿ, ಗ್ರಾಮೀಣ ಮಟ್ಟದಲ್ಲಿ ಕಾರ್ಯಾಚರಣೆಯಲ್ಲಿರುವ 15,779ಕ್ಕೂ ಹೆಚ್ಚಿನ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕೆಎಂಎಫ್ 26.89 ಲಕ್ಷ ಹಾಲು ಉತ್ಪಾದಕರನ್ನು ಹೊಂದಿದೆ.

'ಗೋವಿನಿಂದ ಗ್ರಾಹಕರ ವರೆಗೆ ಗುಣಮಟ್ಟದ ಶ್ರೇಷ್ಠತೆ' ಎಂಬುದು ಕೆಎಂಎಫ್ ಧ್ಯೇಯವಾಕ್ಯ. ಪ್ರಸ್ತುತ, ದೇಶದಲ್ಲಿಯೇ ಸಹಕಾರಿ ಹೈನು ಉದ್ಯಮದಲ್ಲಿ ಕೆಎಂಎಫ್ ಎರಡನೇ ಸ್ಥಾನದಲ್ಲಿದ್ದು, ದಕ್ಷಿಣ ಭಾರತದಲ್ಲಿ ಹಾಲು ಶೇಖರಣೆ ಹಾಗೂ ಮಾರಾಟದಲ್ಲಿ ಮೊದಲ ಸ್ಥಾನದಲ್ಲಿದೆ.

ಮಂಡ್ಯಕ್ಕೆ 4ನೇ ಸ್ಥಾನ: ನಿತ್ಯ ಹಾಲು ಸಂಗ್ರಹಣೆಯಲ್ಲಿ ರಾಜ್ಯದಲ್ಲಿರುವ 15 ಹಾಲು ಒಕ್ಕೂಟಗಳ ಪೈಕಿ ಬೆಂಗಳೂರು (ಪ್ರಥಮ), ಹಾಸನ (ದ್ವಿತೀಯ), ಕೋಲಾರ (ತೃತೀಯ) ಹಾಗೂ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್‌ಮುಲ್) 4ನೇ ಸ್ಥಾನದಲ್ಲಿದೆ.

ಮೈಸೂರು 6ನೇ ಸ್ಥಾನ ಮತ್ತು ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ 9ನೇ ಸ್ಥಾನದಲ್ಲಿದೆ.

ಮನ್‌ಮುಲ್ ಉತ್ಪನ್ನಗಳು

ಉತ್ಪನ್ನ	ಪ್ರತಿದಿನದ ಉತ್ಪಾದನೆ (ಕೆ.ಜಿ.ಗಳಲ್ಲಿ)
ಬೆಣ್ಣೆ	25,000
ತುಪ್ಪ	12,000
ಮೊಸರು	60,000
ಮಸಾಲ ಮಜ್ಜಿಗೆ	15,000
ಪೇಡಾ	300
ಖೋವಾ	4,000
ಹಾಲಿನ ಬರ್ಫಿ	60
ಸ್ಪೆಷಲ್ ಮಿಲ್ಕ್ ಬರ್ಫಿ	60
ಜಾಗರಿ ಬರ್ಫಿ	60
ಪನ್ನೀರ್	2000
ಪನ್ನೀರ್ ನಿಪ್ಪಟ್ಟು	50
ಖೋವಾ ಲಾಡು	60

ಹಾಲು ಸಂಗ್ರಹಣೆಯಲ್ಲಿ ಹಾಲು ಒಕ್ಕೂಟಗಳ ಶ್ರೇಯಾಂಕ

ಹಾಲು ಒಕ್ಕೂಟ	ಹಾಲು ಸಂಗ್ರಹಣೆ (ದಿನವಹಿ ಲಕ್ಷ ಕೆ.ಜಿ.ಗಳಲ್ಲಿ)
ಬೆಂಗಳೂರು	15.51
ಹಾಸನ	13.04
ಕೋಲಾರ	11.34
ಮಂಡ್ಯ	10.29
ತುಮಕೂರು	8.82
ಮೈಸೂರು	8.35
ಶಿವಮೊಗ್ಗ	7.23
ದಕ್ಷಿಣ ಕನ್ನಡ	3.43
ಚಾಮರಾಜನಗರ	2.68
ಬಳ್ಳಾರಿ	2.12
ಬೆಳಗಾವಿ	1.96
ವಿಜಯಪುರ	1.65
ಧಾರವಾಡ	1.50
ಹಾವೇರಿ	1.49
ಕಲಬುರ್ಗಿ	0.66
ಒಟ್ಟು	90.06

ಕಾರ್ಮಿಕ ಅಧಿಕಾರಿ ಸಹಿತ ಮೂವರ ಸಾವು

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಗೋಂದೋಲು ಪೂಜೆ ಮುಗಿಸಿಕೊಂಡು ವಾಪಸ್ ಬರುತ್ತಿದ್ದಾಗ ಕಾರು ರಸ್ತೆ ಬದಿ ಪ್ರಪಾತಕ್ಕೆ ಉರುಳಿ ತಂದೆ, ಮಗ ಸೇರಿ ಮೂವರು ಸ್ಥಳದಲ್ಲೇ ಮೃತಪಟ್ಟ ಘಟನೆ ನಗರದ ಬೈಪಾಸ್ ರಸ್ತೆಯ ಪರ್ಲಡ್ಕ ಸಮೀಪ ಶನಿವಾರ ನಸುಕಿನಲ್ಲಿ ನಡೆದಿದೆ.

ಸುಳ್ಯ ತಾಲ್ಲೂಕಿನ ಜಟ್ಟಿಪಳ್ಳ ಸಮೀಪದ ಕಾನತ್ತಿಲ ನಿವಾಸಿ, ನಿವೃತ್ತ ಪೋಸ್ಟ್ ಮಾಸ್ಟರ್ ಅಣ್ಣು ನಾಯ್ಕ ಯಾನೆ ಮೋಹನ್ ನಾಯ್ಕ (85), ಅವರ ಪುತ್ರ ಚಿಕ್ಕಮಗಳೂರಿನಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಯಾದ ಚಿದಾನಂದ ನಾಯ್ಕ (58), ಕಾನತ್ತಿಲ ನಿವಾಸಿ, ಪ್ಲಂಬರ್ ರಮೇಶ್ ನಾಯ್ಕ್ (67) ಮೃತಪಟ್ಟವರು.

ಅಣ್ಣು ನಾಯ್ಕ ಅವರ ಪತ್ನಿಯ ಸಂಬಂಧಿಕರಾದ ಬಂಟ್ವಾಳ ತಾಲ್ಲೂಕಿನ ಪುಣಚ ಗ್ರಾಮದ ದಂಬೆಗೌರಿ ಮೂಲೆಯ ನಾರಾಯಣ ನಾಯ್ಕ್ ಅವರ ಮನೆಯಲ್ಲಿ ಶುಕ್ರವಾರ ರಾತ್ರಿ ಗೋಂದೋಲು ಪೂಜೆ ನಡೆದಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಣ್ಣು, ಚಿದಾನಂದ ಮತ್ತು ರಮೇಶ್ ನಾಯ್ಕ ಅವರು ಜಟ್ಟಿಪ್ಪಳಕ್ಕೆ ಹಿಂತಿರುಗುತ್ತಿದ್ದಾಗ ನಸುಕಿನ 4.15ರ ವೇಳೆ ಅವಘಡ ನಡೆದಿದೆ. ಹತ್ತಿರದಲ್ಲಿನ ಮನೆಯವರಿಗೆ ಶಬ್ದ ಕೇಳಿದೆ. ಏನೆಂಬುದು ಆಗ ತಿಳಿಯದೆ ಸುಮ್ಮನಾಗಿದ್ದರು. ಕಾರು ಪಲ್ಟಿಯಾಗಿರುವುದು ಶನಿವಾರ ಬೆಳಿಗ್ಗೆ ಗಮನಕ್ಕೆ ಬಂದಿದೆ. ಆಗಲೇ ಮೂವರೂ ಮೃತಪಟ್ಟಿದ್ದರು. ಪುತ್ತೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಪುತ್ತೂರು ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಜ. 5ಕ್ಕೆ ಚಿತ್ರಸಂತೆ: ಕಲಾವಿದರ ಪ್ರತಿಭೆ ಅನಾವರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ಆಯೋಜಿಸಿರುವ 22ನೇ ಚಿತ್ರಸಂತೆ ಜನವರಿ 5ರಂದು ಕುಮಾರಕೃಪಾ ರಸ್ತೆಯಲ್ಲಿರುವ ಪರಿಷತ್ತಿನ ಆವರಣದಲ್ಲಿ ನಡೆಯಲಿದೆ.

ಬಿ.ಎಲ್.ಶಂಕರ್

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, 'ಈ ಬಾರಿಯ ಚಿತ್ರಸಂತೆಯನ್ನು ಹೆಣ್ಣು ಮಗುವಿಗೆ ಸಮರ್ಪಣೆ ಮಾಡಲಾಗಿದೆ' ಎಂದು ತಿಳಿಸಿದರು.

'ಚಿತ್ರಸಂತೆಯಲ್ಲಿ ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸಲಾಗುತ್ತದೆ. ಕಲಾವಿದರಿಂದ ಯಾವುದೇ ರೀತಿಯ ಶುಲ್ಕವನ್ನು ಪಡೆದುಕೊಳ್ಳುವುದಿಲ್ಲ' ಎಂದು ಮಾಹಿತಿ ನೀಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಿಗ್ಗೆ 10.30ಕ್ಕೆ ಚಿತ್ರಸಂತೆಯನ್ನು ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಲಾ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಚಿತ್ರಕಲಾ ಪರಿಷತ್ತಿನ ಗ್ಯಾಲರಿಗಳಲ್ಲಿ ಕರ್ನಾಟಕದ ಹಿರಿಯ ಕಲಾವಿದರು ರಚಿಸಿದ ಕಲಾಕೃತಿಗಳ ಪ್ರದರ್ಶನ ಇರಲಿದೆ' ಎಂದರು.

'ವಿವಿಧ ರಾಜ್ಯಗಳ 1,500 ಕಲಾವಿದರು ಚಿತ್ರ ಸಂತೆಯಲ್ಲಿ ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಈ ಬಾರಿ ಚಿತ್ರ ಸಂತೆಯನೋಂದಣಿ,ಶುಲ್ಕಪಾವತಿ,ಕಲಾವಿದರ ಆಯ್ಕೆ, ಮಳಿಗೆಗಳ ವಿತರಣೆಯಂತಹ ಎಲ್ಲ ಪ್ರಕ್ರಿಯೆಗಳು ಆನ್‌ಲೈನ್ ಮೂಲಕ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ನೇರ ಖರೀದಿಗೆ ಅವಕಾಶ: 'ಚಿತ್ರಸಂತೆಯಲ್ಲಿ ₹ 100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಇರಲಿವೆ. ಕಲಾವಿದರಿಂದ ನೇರವಾಗಿ ಕಲಾಕೃತಿಗಳನ್ನು ಖರೀದಿಸಬಹುದು' ಎಂದು ಬಿ.ಎಲ್. ಶಂಕರ್ ವಿವರಿಸಿದರು.

'ಹೊರಗಿನಿಂದ ಬರುವ 400ಕ್ಕೂ ಅಧಿಕ ಕಲಾವಿದರಿಗೆ ಉಚಿತ ವಸತಿ ವ್ಯವಸ್ಥೆ ಮಾಡಲಾಗಿದೆ. ಆವರಣದ ಹೊರಗೆ ಕೆನರಾ ಬ್ಯಾಂಕ್ ಹಾಗೂ ಎಸ್‌ಬಿಐ ಬ್ಯಾಂಕ್‌ನ ಸಂಚಾರಿ ಎಟಿಎಂ ಮತ್ತು ಸ್ವೈಪಿಂಗ್ ಯಂತ್ರಗಳ ವ್ಯವಸ್ಥೆ ಮಾಡಲಾಗುವುದು' ಎಂದು ಹೇಳಿದರು.

5 ಮಂದಿಗೆ ಚಿತ್ರಕಲಾ ಸಮ್ಮಾನ್ ಪ್ರಶಸ್ತಿ

'ಕರ್ನಾಟಕ ಚಿತ್ರಕಲಾ ಪರಿಷತ್ತು ನೀಡುವ ಚಿತ್ರಕಲಾ ಸಮ್ಮಾನ್ ಪ್ರಶಸ್ತಿಗೆ ಕಲಾವಿದರಾದ ಎಂ.ಎಸ್. ಮೂರ್ತಿ (ಡಿ. ದೇವರಾಜು ಅರಸು ಪ್ರಶಸ್ತಿ), ಎ. ರಾಮಕೃಷ್ಣಪ್ಪ (ಕೆ.ಎಸ್. ನಾಗರತ್ನಮ್ಮ ಪ್ರಶಸ್ತಿ), ಜಿ.ಎಲ್. ಭಟ್ (ವೈ. ಸುಬ್ರಮಣ್ಯರಾಜು ಪ್ರಶಸ್ತಿ), ಸೂರ್ಯಪ್ರಕಾಶ್ ಗೌಡ (ಎಚ್.ಕೆ. ಕೇಜ್ರಿವಾಲ್ ಪ್ರಶಸ್ತಿ), ಸಿ.ಎಸ್. ನಿರ್ಮಲಾ ಕುಮಾರಿ (ಎಂ. ಆರ್ಯಮೂರ್ತಿ ಪ್ರಶಸ್ತಿ) ಆಯ್ಕೆಯಾಗಿದ್ದಾರೆ. ಪ್ರಶಸ್ತಿ ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿದೆ. ಜ. 4ರಂದು ಸಚಿವ ಎಚ್.ಕೆ. ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಬಿ.ಎಲ್. ಶಂಕರ್ ಮಾಹಿತಿ ನೀಡಿದರು.

'ಕೃಷ್ಣಾಪುರ ಅರಣ್ಯಕ್ಕೆ ಅಕ್ರಮ ಪ್ರವೇಶ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಖಾನಾಪುರ ತಾಲ್ಲೂಕಿನ ಭೀಮಗಡ ಅಭಯಾರಣ್ಯದ ವಜ್ರಪೋಹ ಜಲಪಾತ ಪ್ರದೇಶದಲ್ಲಿ ಡ್ರೋನ್ ಹಾರಾಟ, ಅಕ್ರಮ ನುಸುಳುವಿಕೆ ಕುರಿತು ಅರಣ್ಯ ಇಲಾಖೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೇ, ಕರ್ನಾಟಕ-ಗೋವಾ ಗಡಿಯ ದಟ್ಟ ಅರಣ್ಯದೊಳಗೆ ಇರುವ ಕೃಷ್ಣಾಪುರವನ್ನೂ ಪ್ರವಾಸಿಗರು ಅಕ್ರಮವಾಗಿ ಪ್ರವೇಶಿಸಿ ಮೋಜು–ಮಸ್ತಿಯಲ್ಲಿ ತೊಡಗಿರುವುದು ಗೊತ್ತಾಗಿದೆ.

'ಅರಣ್ಯ ಇಲಾಖೆ ನಿರ್ಲಕ್ಷ್ಯದಿಂದ ಪ್ರವಾಸಿಗರು ದಟ್ಟ ಅರಣ್ಯದೊಳಗೆ ಇರುವ ಕೃಷ್ಣಾಪುರಕ್ಕೆ ಅಕ್ರಮವಾಗಿ ನುಸುಳಿ, ಅಲ್ಲಿಯೇ ಅಡುಗೆ ಮಾಡುತ್ತಾರೆ. ಪ್ಲಾಸ್ಟಿಕ್ ಎಸೆಯುತ್ತಾರೆ. ಸಂಗೀತ ಹಚ್ಚಿ ಕುಣಿಯುತ್ತಾರೆ. ಇದರಿಂದ ವನ್ಯಜೀವಿಗಳಿಗೆ ಕಂಟಕ ಎದುರಾಗಿದೆ. ನಿಷೇಧಿತ ಪ್ರದೇಶದಲ್ಲಿ ರ‍್ಯಾಲಿ ಜೀಪ್‌ಗಳಿಂದ ಆಫ್ ರೋಡಿಂಗ್ ನಡೆದಿದೆ' ಎಂದು ಮಾಹಿತಿ ಹಕ್ಕು ಕಾರ್ಯಕರ್ತ ರಾಘವೇಂದ್ರ ಆರೋಪಿಸಿದ್ದಾರೆ.

ದಟ್ಟ ಅರಣ್ಯದೊಳಗೆ ಇರುವ ಖಾನಾಪುರ ತಾಲ್ಲೂಕಿನ ಕೃಷ್ಣಾಪುರ ಪ್ರದೇಶದಲ್ಲಿ ಪ್ರವಾಸಿಗರು ಅಕ್ರಮವಾಗಿ ಪ್ರವೇಶಿಸಿ ಟೆಂಟ್ ಹಾಕಿ ವಾಸ್ತವ್ಯ ಹೂಡಿರುವುದು

'ಭೀಮಗಡ ಅಭಯಾರಣ್ಯವು ವಿಶಿಷ್ಟ ರೋಟನ್ ಫ್ರೀಟೈಲ್ಡ್ ಬಾವಲಿ, ಹುಲಿ, ಕಪ್ಪುಚಿರತೆ, ಕರಡಿಯಂಥ ವನ್ಯಜೀವಿಗಳಿಗೆ ಆಶ್ರಯ ತಾಣವಾಗಿದೆ.ಜೊತೆಗೆ ಕೃಷ್ಣಾಪುರ ವಿಶಿಷ್ಟವಾದ ಮಹಶೀರ್ ಮೀನುಗಳಿಗೆ ತಾಣ. ಮಹಶೀರ್ ಮೀನುಗಳನ್ನು ಪರಿಸರ ಸಂರಕ್ಷಣೆಗಾಗಿ ಇರುವ ಅಂತರರಾಷ್ಟ್ರೀಯ ಒಕ್ಕೂಟವಾದ ಐಯುಸಿಎನ್ ವತಿಯಿಂದ ಅಳಿವಿನಂಚಿನಲ್ಲಿರುವ ಜೀವಿಗಳೆಂದು ಪಟ್ಟಿ ಮಾಡಲಾಗಿದೆ. ಆದರೆ, ಇಲ್ಲಿಗೆ ಬರುವ ಪ್ರವಾಸಿಗರು ಮಹಶೀರ್ ಮೀನುಗಳಿಗೆ ಆಹಾರ ನೀಡುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಇದನ್ನು ತಡೆಗಟ್ಟಬೇಕು' ಎಂದು ಒತ್ತಾಯಿಸಿದ್ದಾರೆ.

'ಚೆಕ್‌ಪೋಸ್ಟ್‌ಗೆ ಚಿಂತನೆ'

'ಖಾನಾಪುರ ತಾಲ್ಲೂಕಿನ ಅಭಯಾರಣ್ಯದೊಳಗೆ ಪ್ರವಾಸಿಗರು ಅಕ್ರಮವಾಗಿ ಪ್ರವೇಶಿಸಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಪರಿಶೀಲಿಸಿ ವರದಿ ಕೊಡುವಂತೆ, ಖಾನಾಪುರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಅವರಿಗೆ ಸೂಚಿಸಿದ್ದೇನೆ. ಅವರು ನೀಡುವ ವರದಿ ಆಧರಿಸಿ ಕ್ರಮ ವಹಿಸುತ್ತೇವೆ. ಕರ್ನಾಟಕ–ಗೋವಾ ಗಡಿಯಲ್ಲಿ ಚೆಕ್‌ಪೋಸ್ಟ್ ತೆರೆಯುವ ಬಗ್ಗೆಯೂ ಯೋಜಿಸುತ್ತಿದ್ದೇವೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಮರಿಯ ಕ್ರಿಸ್ತು ರಾಜಾ ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ವಿಶ್ವ ಹವ್ಯಕ ಸಮ್ಮೇಳನದ 'ಸಾಕ್ಷಾತ್ಕಾರ ಸಭಾ'ದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಅಡಿಕೆಗೆ ಸಮಸ್ಯೆ ತಂದಿಟ್ಟ ರೆಡ್ ಆಕ್ಸೈಡ್ ಕಲಬೆರಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಿಕೆ ಕ್ಯಾನ್ಸರ್‌ಕಾರಕ ವಲ್ಲ. ಆದರೆ, ಉತ್ತಮ ಬಣ್ಣಕ್ಕಾಗಿ ಅಡಿಕೆಗೆ ರೆಡ್ ಆಕ್ಸೈಡ್ ಸೇರಿಸುವುದರಿಂದ ತೊಂದರೆ ಉಂಟಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಎರಡನೇ ದಿನವಾದ ಶನಿವಾರ 'ಸಾಕ್ಷಾತ್ಕಾರ ಸಭಾ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದಕ್ಷಿಣ ಕನ್ನಡದಲ್ಲಿ ಹಣ್ಣಡಿಕೆಯನ್ನು ಒಣಗಿಸುವುದರಿಂದ ಅಲ್ಲಿ ಸಮಸ್ಯೆ ಇಲ್ಲ. ಅಡಿಕೆ ಬೇಯಿಸುವ ಪದ್ಧತಿ ಇರುವಲ್ಲಿ ರೆಡ್ ಆಕ್ಸೈಡ್ ಮಿಶ್ರಣ ನಡೆಯುತ್ತದೆ. ಅಲ್ಲದೇ ದೆಹಲಿ ಮತ್ತಿತರ ಕಡೆಗಳಲ್ಲಿ ಗುಟ್ಕಾವನ್ನೇ ಅಡಿಕೆ ಎಂದು ಭಾವಿಸಿರುವುದು ಕೂಡ ಸಮಸ್ಯೆಗೆ ಕಾರಣವಾಗಿದೆ. ಅಡಿಕೆ ಬಗೆಗಿನ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಅಡಿಕೆ ಬೆಳೆಗಾರರ ಪರ ಪ್ರಧಾನಿ ನರೇಂದ್ರ ಮೋದಿಯವರಿದ್ದಾರೆ. ಅವರ ನಿರ್ದೇಶನದಂತೆ ಸುಪ್ರೀಂ ಕೋರ್ಟ್‌ನಲ್ಲಿ ರೈತರ ಪರ ವಾದ ಮಾಡಲಾಗುತ್ತಿದೆ ಎಂದು ಹೇಳಿದರು.

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, 'ಹವ್ಯಕ ಸಮುದಾಯದ ಮೂರು ಮಠಗಳಷ್ಟು ಪ್ರಭಾವಿ ಮಠಗಳು ಬೇರೆ ಇಲ್ಲ. ಸಣ್ಣ ಸಮಾಜಗಳು ಗುರುತಿಸಿಕೊಳ್ಳಲು ಜಾತಿ ಸಂಘಟನೆ ಮಾಡಿಕೊಳ್ಳುವುದು ಅವಶ್ಯ' ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಹವ್ಯಕ ಸಮುದಾಯದಲ್ಲಿ ಮಾತ್ರವಲ್ಲ, ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತರು ಸೇರಿದಂತೆ ಎಲ್ಲ ಜಾತಿ–ಧರ್ಮಗಳಲ್ಲಿ ಜನಸಂಖ್ಯೆ ಕಡಿಮೆಯಾಗುತ್ತಿದೆ. ಉತ್ತರ ಭಾರತದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಸಿದ್ಧಾಪುರ ಶ್ರೀಮನ್ನೆಲೆಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಅರಬೈಲು ಶಿವರಾಮ ಹೆಬ್ಬಾರ್, ಉದಯವಾಣಿ ಸಂಪಾದಕ ರವಿಶಂಕರ್ ಕೆ. ಭಟ್ ಭಾಗವಹಿಸಿದ್ದರು.

ವೈದಿಕ ವಿದ್ವಾಂಸರಿಗೆ 'ಹವ್ಯಕ ವೇದರತ್ನ', ಶಿಕ್ಷಕರಿಗೆ 'ಹವ್ಯಕ ಶಿಕ್ಷಕರತ್ನ', ವಿದ್ಯಾರ್ಥಿಗಳಿಗೆ 'ಹವ್ಯಕ ವಿದ್ಯಾರತ್ನ' ಸನ್ಮಾನ ನಡೆಯಿತು. 'ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆ', 'ಆಡಳಿತಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು', 'ಸ್ವ ಉದ್ಯಮದಿಂದ ಉದ್ಯೋಗಾವಕಾಶ' ಗೋಷ್ಠಿಗಳು ನಡೆದವು.

ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಎರಡನೇ ದಿನದ ಸಾಕ್ಷಾತ್ಕಾರ ಸಭಾಕ್ಕೆ ಸಮ್ಮೇಳನ ಸಮಿತಿ ಗೌರವಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀಮನ್ನೆಲೆಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಉದಯವಾಣಿ ಸಂಪಾದಕ ರವಿಶಂಕರ್ ಕೆ. ಭಟ್ ಮೆರವಣಿಗೆಯಲ್ಲಿ ಆಗಮಿಸಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

₹ 12 ಕೋಟಿ ಮೌಲ್ಯದ ಭೂದಾನ

ಬೆಂಗಳೂರಿನ ಕಮರ್ಷಿಯಲ್ ರಸ್ತೆಯ ಸಮೀಪದಲ್ಲಿರುವ ₹ 12 ಕೋಟಿ ಮೌಲ್ಯದ ಜಾಗವನ್ನು ಮುಲಕನಾಡು ಬ್ರಾಹ್ಮಣ ಸಮುದಾಯದ ಶ್ರೀನಿವಾಸನ್ ಕೆ.ಎಲ್. ಅವರು ಹವ್ಯಕ ಮಹಾಸಭಾಕ್ಕೆ ದಾನ ಮಾಡಿದ್ದಾರೆ. ಅಲ್ಲಿ 'ತರ್ಪಣ ಭವನ' ನಿರ್ಮಿಸುವ ಉದ್ದೇಶವಿದೆ ಎಂದು ಸಮ್ಮೇಳನದ ಪ್ರಧಾನ ಸಮಿತಿ ಅಧ್ಯಕ್ಷ ಡಾ. ಗಿರಿಧರ ಕಜೆ ಹೇಳಿದರು.

ಬ್ರಾಹ್ಮಣ್ಯವನ್ನು ಉಳಿಸಿ ಬೆಳೆಸುತ್ತಿರುವವರಲ್ಲಿ ಹವ್ಯಕ ಸಮಾಜ ಮುಂಚೂಣಿಯಲ್ಲಿದೆ. ಸಂಸ್ಕೃತ - ಸಂಸ್ಕೃತಿ - ಸಂಸ್ಕಾರಕ್ಕೆ ಈ ಹವ್ಯಕ ಸಮಾಜ ನೀಡಿದ ಕೊಡುಗೆ ಅನುಪಮವಾದುದು. ಬೆಂಗಳೂರಿನಲ್ಲಿ ಇರುವ 15 ಸಾವಿರಕ್ಕೂ ಅಧಿಕ ಪುರೋಹಿತರಲ್ಲಿ 5 ಸಾವಿರ ಮಂದಿ ಹವ್ಯಕರು. ಅದಕ್ಕಾಗಿ ಭೂದಾನ ಮಾಡುತ್ತಿರುವುದಾಗಿ ಶ್ರೀನಿವಾಸನ್ ಕೆ.ಎಲ್. ಅವರು ಹೇಳಿದರು.

'ಬ್ಯಾಕ್‌ಲಾಗ್' ಭರ್ತಿಗೆ ದ್ವಿಮುಖ ನೀತಿ!

ಒಂದನೇ ಪುಟದಿಂದ...

ಸರ್ಕಾರದ ಅನುಮತಿ ದೊರೆತ ನಂತರ ಬೆಂಗಳೂರಿನ ಡಾ.ಅಂಬೇಡ್ಕರ್ ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯ, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಿಎಂಎಸ್ (ಸಂಜೆ) ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯ, ಹಾಸನದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಮಂಡ್ಯದ ಪಿಇಎಸ್ ಎಂಜಿನಿಯರಿಂಗ್ ಕಾಲೇಜು, ಮೈಸೂರಿನ ನ್ಯಾಷನಲ್ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆ, ಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು, ಕಲಬುರಗಿಯ ದೊಡ್ಡಪ್ಪ ಅಪ್ಪ ತಾಂತ್ರಿಕ ಮಹಾವಿದ್ಯಾಲಯ, ಬಾಗಲಕೋಟೆಯ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿಯ ಬಿ.ವಿ. ಭೂಮರಡ್ಡಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಇದ್ದ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿತ್ತು.

ನಿಯಮದಂತೆ ವಯೋಮಿತಿ ಮತ್ತು ಅಂಕಗಳ ಅರ್ಹತೆಯ ಆಧಾರದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿದ್ದ ಆಯಾ ಕಾಲೇಜುಗಳ ಆಡಳಿತ ಮಂಡಳಿಗಳು ಕಡತವನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ಸಲ್ಲಿಸಿದ್ದವು. ಆದರೆ, ವರ್ಷಗಳಾದರೂ ನೇಮಕಾತಿ ಪ್ರಕ್ರಿಯೆ ಮಾತ್ರ ಪೂರ್ಣಗೊಳ್ಳಲಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಅನುಮತಿ ನೀಡಿದ ಐದು ವರ್ಷಗಳ ನಂತರ ಉನ್ನತ ಶಿಕ್ಷಣ ಇಲಾಖೆ 2001ರ ನಿಯಮ ಉಲ್ಲೇಖಿಸಿದೆ. 2002, 2012ರಲ್ಲಿ ಬ್ಯಾಕ್‌ಲಾಗ್ ಭರ್ತಿ ಮಾಡಿದಾಗ ನಿಯಮ ಇರಲಿಲ್ಲವೇ? ಈಗ ಏಕೆ ಇಂತಹ ದ್ವಿಮುಖ ನೀತಿ?

ಕೃಷ್ಣದಾಸ್, ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಜಾತಿ, ವರ್ಗಗಳ ಪದವೀಧರರ ಒಕ್ಕೂಟ

ಹಿಂದಿನ ಸರ್ಕಾರ 2023ರವರೆಗೂ ಕ್ರಮಕೈಗೊಳ್ಳದೆ ವಿಳಂಬ ಮಾಡಿತ್ತು. ತಾಂತ್ರಿಕ ಶಿಕ್ಷಣದಲ್ಲಿ ಬೋಧಕೇತರ ಹುದ್ದೆಗಳೂ ಅಗತ್ಯವಿರುವ ಕಾರಣ ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಹೊಸದಾಗಿ ಪ್ರಸ್ತಾವ ಸಲ್ಲಿಸಿದ್ದೇವೆ. ಶೀಘ್ರ ಸಮಸ್ಯೆ ಬಗೆಹರಿಸುತ್ತೇವೆ

ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ

ಐದು ವರ್ಷಗಳ ನಂತರ ಪ್ರತಿಕ್ರಿಯೆ: ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿ, ಪ್ರಕ್ರಿಯೆಗಳು ಪೂರ್ಣಗೊಂಡರೂ, ನೇಮಕಾತಿ ಆದೇಶ ನೀಡಲು ಉನ್ನತ ಶಿಕ್ಷಣ ಇಲಾಖೆ ನಾಲ್ಕು ವರ್ಷ ಸತಾಯಿಸಿತ್ತು.

ಈಚೆಗೆ ಸ್ಪಷ್ಟನೆ ನೀಡಿರುವ ಇಲಾಖೆ, '2003ರಲ್ಲಿ ಪ್ರಕಟಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮ 2001ರ ಪ್ರಕಾರ ಖಾಲಿಯಾದ ಬೋಧಕೇತರ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶ ಇಲ್ಲ. ಒಂದೇ ಕಡತದಲ್ಲಿ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಅನುಮೋದನೆ ಕೋರಲಾಗಿದೆ. ಎರಡನ್ನೂ ಪ್ರತ್ಯೇಕಿಸಿ, ಮರು ಕಡತ ಮಂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

ಉನ್ನತ ಶಿಕ್ಷಣ ಇಲಾಖೆಯ ಈ ವಾದವನ್ನು ಒಪ್ಪದ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ವಿವಿಧ ಸಂಘಟನೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಬ್ಯಾಕ್‌ಲಾಗ್ ಹುದ್ದೆಗಳಿಗೂ 2001ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಕ್ಕೂ ಸಂಬಂಧವಿಲ್ಲ. ಹುದ್ದೆ ಭರ್ತಿಗೆ ಅನುಮತಿ ನೀಡಿ, ಎಲ್ಲ ಪ್ರಕ್ರಿಯೆ ಪೂರ್ಣಗೊಂಡ ನಂತರ ಇಂತಹ ಧೋರಣೆ ಸರಿಯಲ್ಲ. ಬ್ಯಾಕ್‌ಲಾಗ್ ವಿಶೇಷ ನೇಮಕಾತಿ ನಿಯಮಗಳ ಅನ್ವಯ ನೇಮಕಾತಿ ಆದೇಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಆರ್‌ಪಿಎಫ್ ಕಾರ್ಯಾಚರಣೆ • ನಿಲ್ದಾಣ, ರೈಲುಗಳಲ್ಲಿ ಪತ್ತೆ • ಮನೆ ಬಿಡಲು ಇವೆ ನಾನಾ ಕಾರಣ

ಮನೆ ತೊರೆದ 290 ಮಕ್ಕಳ ರಕ್ಷಣೆ

• ಕೆ.ಎಸ್.ಸುನಿಲ್

ಬೆಂಗಳೂರು: ಬಡತನ, ಶೋಷಣೆ, ಪರೀಕ್ಷೆಯಲ್ಲಿ ಅನುತ್ತೀರ್ಣ ಸೇರಿದಂತೆ ವಿವಿಧ ಕಾರಣಗಳಿಂದ ಮನೆ ತೊರೆದ 250 ಬಾಲಕರು ಸೇರಿದಂತೆ 290 ಮಕ್ಕಳನ್ನು ರೈಲ್ವೆ ಸುರಕ್ಷಾ ಪಡೆ (ಆರ್‌ಪಿಎಫ್) ರಕ್ಷಿಸಿದೆ.

ಈ ವರ್ಷದಲ್ಲಿ ಬೆಂಗಳೂರು ವಿಭಾಗವೊಂದರಲ್ಲಿಯೇ ರೈಲ್ವೆ ಸುರಕ್ಷಾ ಪಡೆ ರಕ್ಷಿಸಿರುವ ಮಕ್ಕಳ ಸಂಖ್ಯೆಯಾಗಿದೆ.

ನಗರ ಹಾಗೂ ಗ್ರಾಮೀಣ ಪ್ರದೇಶದ ಈ ಮಕ್ಕಳು 18 ವರ್ಷದ ಒಳಗಿನವರಾಗಿದ್ದು, ಇದರಲ್ಲಿ 14 ರಿಂದ 16 ವರ್ಷದೊಳಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ರಾಜ್ಯದ ಮಕ್ಕಳು ಸೇರಿದಂತೆ ಹೊರ ರಾಜ್ಯದವರು ಸಹ ಇದ್ದಾರೆ.

'ಕಲಿಕೆಯಲ್ಲಿ ನಿರಾಸಕ್ತಿ, ಪೋಷಕರೊಂದಿಗೆ ಜಗಳ, ಹೊರಗಿನ ಪ್ರಪಂಚ ನೋಡುವ ಆಸೆ, ಕೌಟುಂಬಿಕ ವಿವಾದ, ಉತ್ತಮ ಅವಕಾಶಗಳನ್ನು ಅರಸುತ್ತಾ ಹಾಗೂ ಅಧಿಕ ಕೂಲಿ ಆಸೆ ಸೇರಿದಂತೆ ವಿವಿಧ ಕಾರಣಗಳಿಂದ ಮಕ್ಕಳು ಮನೆ ತೊರೆದು ಬಂದಿದ್ದಾರೆ' ಎಂದು ಆರ್‌ಪಿಎಫ್ ಮೂಲಗಳು ತಿಳಿಸಿವೆ.

ಮಕ್ಕಳ ರಕ್ಷಣೆಗಾಗಿ 2018ರ ಮೇ ತಿಂಗಳಲ್ಲಿ 'ನನ್ಹೆ ಫರಿಶ್ತೆ' ಕಾರ್ಯಕ್ರಮ ಅನುಷ್ಠಾನಗೊಳಿಸಲಾಯಿತು. ದೇಶದಾದ್ಯಂತ ಈವರೆಗೆ 84,110 ಮಕ್ಕಳನ್ನು ರಕ್ಷಣೆ ಮಾಡಿದೆ. ಕಳೆದ ವರ್ಷ 11,794 ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಬೆಂಗಳೂರು ವಿಭಾಗದಲ್ಲಿ 2023 ರಲ್ಲಿ 50 ಬಾಲಕಿಯರು ಸೇರಿದಂತೆ ಒಟ್ಟು 237 ಮಕ್ಕಳನ್ನು ರಕ್ಷಿಸಲಾಗಿತ್ತು.

'ಮನೆ ತೊರೆದು ಬಂದ ಈ ಮಕ್ಕಳನ್ನು ಸಂಭಾವ್ಯ ಶೋಷಣೆಯಿಂದ ರಕ್ಷಿಸಲಾಗಿದೆ. ನಾಪತ್ತೆಯಾಗಿರುವ ಮಕ್ಕಳ ಕುರಿತು ದೂರು ದಾಖಲಾದ ತಕ್ಷಣ, ಅವರ ಪತ್ತೆ ಕಾರ್ಯಕ್ಕೆ ಚುರುಕು ನೀಡಲಾಗುತ್ತದೆ. ಎಲ್ಲೆಡೆ ಇರುವ ಆರ್‌ಪಿಎಫ್ ಠಾಣೆಗಳು ಹಾಗೂ ಕಚೇರಿಗಳಿಗೆ ಸಂದೇಶಗಳನ್ನು ರವಾನಿಸುವ ಮೂಲಕ ಕ್ಷಿಪ್ರ ಕಾರ್ಯಾಚರಣೆಗೆ ಸಮನ್ವಯ ಸಾಧಿಸಲಾಗುತ್ತದೆ' ಎಂದು ಆರ್‌ಪಿಎಫ್ ಅಧಿಕಾರಿಗಳು ತಿಳಿಸಿದರು.

'ಮೊದಲು ಮಕ್ಕಳಿಗೆ ಆಪ್ತ ಸಮಾಲೋಚನೆ ಮಾಡಲಾಗುತ್ತದೆ. ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಹಸ್ತಾಂತರಿಸಲಾಗುತ್ತದೆ. ಬಳಿಕ ಅವರು ಈ ಪ್ರಕರಣಗಳನ್ನು ಮಕ್ಕಳ ಕಲ್ಯಾಣ ಸಮಿತಿಗೆ (ಸಿಡಬ್ಲ್ಯುಸಿ) ಶಿಫಾರಸು ಮಾಡುತ್ತಾರೆ. ಸಿಡಬ್ಲ್ಯುಸಿಯು ಸಮಗ್ರ ಸಮಾಲೋಚನೆಯ ನಂತರ, ಮಕ್ಕಳನ್ನು ಅವರ ಪೋಷಕರೊಂದಿಗೆ ಕಳುಹಿಸಬೇಕೋ ಅಥವಾ ಹೆಚ್ಚಿನ ಆರೈಕೆ ಮತ್ತು ರಕ್ಷಣೆಗಾಗಿ ಪುನರ್ವಸತಿ ಕೇಂದ್ರಕ್ಕೆ ಕಳುಹಿಸಬೇಕೋ ಎಂಬುದನ್ನು ನಿರ್ಧರಿಸುತ್ತದೆ' ಎಂದು ಹೇಳಿದರು.

2022ರಲ್ಲಿ ಆರ್‌ಪಿಎಫ್, ಎಲ್ಲ ರೈಲು ನಿಲ್ದಾಣಗಳಲ್ಲಿ ಮಾನವ ಕಳ್ಳ ಸಾಗಣೆ ನಿಗ್ರಹ ಘಟಕಗಳನ್ನು (ಎಎಚ್‌ಟಿಯು) ಸ್ಥಾಪಿಸಿತು. ಮಹಿಳಾ ಅಧಿಕಾರಿಗಳನ್ನೂ ಹೊಂದಿರುವ ಈ ಘಟಕಗಳು ದಿನದ 24 ಗಂಟೆ ಕಾರ್ಯ ನಿರ್ವಹಿಸುತ್ತವೆ.

ಅಂಕಿ ಅಂಶ

84,110 ದೇಶದಲ್ಲಿ ಈವರೆಗೆ ರಕ್ಷಿಸಲಾದ ಮಕ್ಕಳು

11,794 ಕಳೆದ ವರ್ಷ ರಕ್ಷಿಸಲಾದ ಮಕ್ಕಳು

237 ಬೆಂಗಳೂರು ವಿಭಾಗದಲ್ಲಿ 2023ರಲ್ಲಿ ರಕ್ಷಿಸಲಾದ ಮಕ್ಕಳು

ಪತ್ತೆಯಾಗದ 1,200 ಮಕ್ಕಳು

ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ನಾಪತ್ತೆಯಾಗಿರುವ 11,300 ಮಕ್ಕಳ (18 ವರ್ಷದೊಳಗಿನವರು) ಪೈಕಿ 1,200 ಮಕ್ಕಳು ಈವರೆಗೂ ಪತ್ತೆಯಾಗಿಲ್ಲ.

'ಬಡತನ, ಕೌಟುಂಬಿಕ ಕಲಹ ಸೇರಿದಂತೆ ನಾನಾ ಕಾರಣಗಳಿಗೆ ಮಕ್ಕಳು ಮನೆ ಬಿಟ್ಟು ಹೋಗುತ್ತಿದ್ದಾರೆ. ನಾಪತ್ತೆಯಾಗಿದ್ದ 1,200 ಮಕ್ಕಳು ಇನ್ನೂ ಪತ್ತೆಯಾಗಿಲ್ಲ. ಮನೆಯಲ್ಲಿ ಬಡತನವಿದ್ದರೆ ಮಕ್ಕಳನ್ನು ವಸತಿ ಶಾಲೆ, ಬಾಲ ಮಂದಿರಕ್ಕೆ ದಾಖಲಿಸಬಹುದು. ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತದೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ 'ಪ್ರಜಾವಾಣಿ'ಗೆ ತಿಳಿಸಿದರು.

ಮುನಿರತ್ನ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ

'ಅತ್ಯಾಚಾರ ಆರೋಪ ನಿಜ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಆರೋಪ ತನಿಖೆಯಲ್ಲಿ ರುಜುವಾಗಿದೆ ಎಂದು ನಗರದ 42ನೇ ಎ.ಸಿ.ಜೆ.ಎಂ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವಿಶೇಷ ತನಿಖಾ ತಂಡ (ಎಸ್‌ಐಟಿ) ಆರೋಪ ಪಟ್ಟಿ ಸಲ್ಲಿಸಿದೆ.

ಎಚ್‌ಐವಿ ಸೋಂಕಿತರನ್ನು ಬಳಸಿಕೊಂಡು ತಮ್ಮ ವಿರೋಧಿಗಳನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿ ಕಾಯಿಲೆ ಹರಡುವಿಕೆಗೆ ಶಾಸಕರು ದುಷ್ಕೃತ್ಯ ಎಸಗಿದ್ದರು ಎಂಬ ಆರೋಪ ಸಹ ಸಾಬೀತಾಗಿದೆ ಎಂದು ಎಸ್‌ಐಟಿ ಹೇಳಿದೆ. ಈ ಆರೋಪವನ್ನು ಐಪಿಸಿ 270ರ ಅಡಿ (ಅಪಾಯಕಾರಿ ರೋಗ ಹರಡುವಿಕೆ) ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಕರಣದಲ್ಲಿ ಒಟ್ಟು 146 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಆರೋಪಿಯ ವಿರುದ್ಧ 850 ದಾಖಲೆಗಳನ್ನು ಒಳಗೊಂಡ ಒಟ್ಟು 2481 ಪುಟಗಳ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದೆ. ಎಂಟು ಮಂದಿ ಸಾಕ್ಷಿದಾರರು ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ್ದಾರೆ.

ಮುನಿರತ್ನ (ಎ1) , ಆರ್.ಸುಧಾಕರ್ (ಎ3), ಪಿ.ಶ್ರೀನಿವಾಸ (ಎ7) ಮತ್ತು ಬಿ.ಐಯ್ಯಣ್ಣರೆಡ್ಡಿ (ಎ8) ಅವರ ವಿರುದ್ಧದ ಆರೋಪ ಸಾಬೀತಾಗಿರುವುದರಿಂದ ಐಪಿಸಿ 354ಎ (ಲೈಂಗಿಕ ಕಿರುಕುಳ), 354ಸಿ (ಅನುಮತಿ ಇಲ್ಲದೆ ಮಹಿಳೆಯ ಅಶ್ಲೀಲ ದೃಶ್ಯಾವಳಿ ಚಿತ್ರೀಕರಣ), 376(2)ಎನ್ (ನಿರಂತರ ಅತ್ಯಾಚಾರ), 308 (ಸಂತ್ರಸ್ತೆಯ ಕೊಲ್ಲುವ ಉದ್ದೇಶ), 120 ಬಿ(ಅಪರಾಧಿಕ ಸಂಚು), 504 (ಉದ್ದೇಶ ಪೂರ್ವಕ ಅವಮಾನ), 506 (ಜೀವ ಬೆದರಿಕೆ), 270 (ಅಪಾಯಕಾರಿ ರೋಗ ಹರಡುವಿಕೆ) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಸೇರಿ ಇತರೆ ಪರಿಚ್ಛೇದಗಳಡಿ ಆರೋಪ ಪಟ್ಟಿ ಸಲ್ಲಿಕೆಯಾಗಿದೆ. ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವ ಸಲುವಾಗಿ ಕಲಂ 193 (8) ಬಿಎನ್‌ಎಸ್‌ಎಸ್ 2023 ಅಡಿ ತನಿಖೆ ಮುಂದುವರಿಸಲಾಗಿದೆ ಎಂದು ತನಿಖಾ ತಂಡ ತಿಳಿಸಿದೆ.

ಸೆಪ್ಟೆಂಬರ್‌ನಲ್ಲಿ ಬಿಜೆಪಿ ಕಾರ್ಯಕರ್ತೆಯೊಬ್ಬರು ತನ್ನ ಮೇಲೆ ಶಾಸಕ ಮುನಿರತ್ನ ಮತ್ತು ಸಹಚರರು ಅತ್ಯಾಚಾರ ಮಾಡಿದ್ದಾರೆ ಎಂದು ಆರೋಪಿಸಿ ಕಗ್ಗಲೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಮುನಿರತ್ನ ವಿರುದ್ಧ ಅತ್ಯಾಚಾರ, ಜಾತಿ ನಿಂದನೆ, ಬೆದರಿಕೆ ಹಾಗೂ ಹನಿಟ್ರ್ಯಾಪ್ ಯತ್ನ ಸೇರಿ ನಾಲ್ಕು ಪ್ರಕರಣ ದಾಖಲಾಗಿದ್ದವು. ಈ ಪೈಕಿ ಬಿಬಿಎಂಪಿ ಮಾಜಿ ಸದಸ್ಯ ವೇಲು ನಾಯ್ಕರ್‌ಗೆ ಜಾತಿ ನಿಂದನೆ ಹಾಗೂ ಬಿಜೆಪಿ ಕಾರ್ಯಕರ್ತೆ ಮೇಲಿನ ಅತ್ಯಾಚಾರ ಪ್ರಕರಣಗಳನ್ನು ಪೂರ್ಣಗೊಳಿಸಿ ಎಸ್‌ಐಟಿ ಆರೋಪ ಪಟ್ಟಿ ಸಲ್ಲಿಸಿದೆ.

> **ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಕುರಿತು ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿಯವರ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇನೆ**
> **ಯು.ಟಿ.ಖಾದರ್,** ವಿಧಾನಸಭಾಧ್ಯಕ್ಷ

'ನಮ್ಮದು ಯತ್ನಾಳ ಬಣವಲ್ಲ; ಬಿಜೆಪಿ ಬಣ'

ಹೊಸಪೇಟೆ(ವಿಜಯನಗರ): 'ನಮ್ಮದು ಯತ್ನಾಳ ಬಣವಲ್ಲ. ನಾವೆಲ್ಲರೂ ಬಿಜೆಪಿ ಬಣ. ಆದರೆ, ಕೆಲ ಮಾಧ್ಯಮಗಳು ಅಂಥದ್ದು ಸೃಷ್ಟಿಸುತ್ತಿವೆ' ಎಂದು ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

'ವಕ್ಫ್ ಕಾಯ್ದೆ ಸಂಪೂರ್ಣ ರದ್ದಾಗಬೇಕು ಎಂಬ ಬೇಡಿಕೆಯೊಂದಿಗೆ ಪಕ್ಷಾತೀತ ಮತ್ತು ಜಾತ್ಯತೀತ ಹೋರಾಟದ ಭಾಗವಾಗಿ, ಜನವರಿ 4ರಂದು ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮಾಜಿ ಸಚಿವ ಆನಂದ ಸಿಂಗ್, ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರೂ ಬರಲಿ. ಕಾಂಗ್ರೆಸ್‌ನವರೂ ಬರಲಿ' ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸಿ.ಟಿ.ರವಿ ಹಾಗೂ ಮುನಿರತ್ನ ಪ್ರಕರಣಗಳ ವಿಚಾರವಾಗಿ ರಾಜಕಾರಣದಲ್ಲಿ ಎಲ್ಲವೂ ಎದುರಿಸಬೇಕಿದೆ. ತನಿಖೆ ನಡೆದಿದೆ. ಈ ವಿಷಯದಲ್ಲಿ ಪಕ್ಷದ ವರಿಷ್ಠರು ಮಾತನಾಡಿದ್ದಾರೆ. ಅವರೊಂದು ನಾವೊಂದು ಮಾತನಾಡೋದು ಸರಿಯಲ್ಲ' ಎಂದರು

ಗೆಜೆಟೆಡ್ ಪ್ರೊಬೇಷನರಿ ಮರು ಪರೀಕ್ಷೆ ಇಂದು

ಒಂದನೇ ಪುಟದಿಂದ...

ಸುಸೂತ್ರವಾಗಿ ಪರೀಕ್ಷೆಗಳನ್ನು ನಡೆಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸೂಕ್ತ ಸಿದ್ಧತೆ ಮಾಡಿಕೊಂಡಿದ್ದಾರೆ. ಪರೀಕ್ಷೆ ನಡೆಯುವ ಎಲ್ಲ ಕೇಂದ್ರಗಳಲ್ಲೂ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ. ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ಇದೇ ವರ್ಷದ ಆಗಸ್ಟ್ 27ರಂದು ನಡೆಸಿದ್ದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಕನ್ನಡ ಭಾಷಾಂತರದಲ್ಲಿನ ದೋಷಗಳಿಗೆ ಸಾಕಷ್ಟು ಆಕ್ಷೇಪಗಳು ವ್ಯಕ್ತವಾಗಿದ್ದವು. ನಂತರ ಸರ್ಕಾರದ ಸೂಚನೆ ಮೇರೆಗೆ ಪರೀಕ್ಷೆ ರದ್ದು ಮಾಡಲಾಗಿತ್ತು.

ಅಭ್ಯರ್ಥಿಗಳಿಗೆ ಸೂಚನೆ: ಕೆಪಿಎಸ್‌ಸಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡ ಭಾವಚಿತ್ರವಿರುವ ಪ್ರವೇಶ ಪತ್ರದ ಜತೆಗೆ, ಮೂಲ ಗುರುತಿನ ಚೀಟಿ ಹೊಂದಿರಬೇಕು (ಚುನಾವಣಾ ಗುರುತುಪತ್ರ, ಆಧಾರ್ ಕಾರ್ಡ್, ಚಾಲನಾ ಪರವಾನಗಿ, ಪಾನ್‌ಕಾರ್ಡ್ ಸೇರಿ ಯಾವುದಾದರೂ ಒಂದು). ಮೊಬೈಲ್, ಸ್ಮಾರ್ಟ್‌ವಾಚ್, ಬ್ಲೂಟೂತ್, ವೈಟ್ ಫ್ಲೂಯಿಡ್, ವೈರ್‌ಲೆಸ್ ಸೆಟ್ ಮತ್ತಿತರ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ತರುವಂತಿಲ್ಲ. ಶೂ, ಸಾಕ್ಸ್, ಸ್ವೆಟರ್ ಮತ್ತು ಜರ್ಕಿನ್, ತುಂಬು ತೋಳಿನ ಶರ್ಟ್ ಮತ್ತು ಮಾಸ್ಕ್ ಧರಿಸುವುದನ್ನು ನಿಷೇಧಿಸಲಾಗಿದೆ. ಸಾಧಾರಣ ಚಪ್ಪಲಿ ಧರಿಸಿ ಪರೀಕ್ಷೆಗೆ ಹಾಜರಾಗಬೇಕು ಎಂದು ಕೆಪಿಎಸ್‌ಸಿ ಸೂಚಿಸಿದೆ.

ಅಂಕಿ ಅಂಶಗಳು

384 ಲಭ್ಯವಿರುವ ಹುದ್ದೆಗಳು

564 ಪರೀಕ್ಷೆ ನಡೆಯುವ ಕೇಂದ್ರಗಳು

ಪತ್ರಿಕೆ	ಸಮಯ
ಪತ್ರಿಕೆ–1	ಬೆಳಿಗ್ಗೆ 10ರಿಂದ 12ರವರೆಗೆ
ಪತ್ರಿಕೆ–2	ಮಧ್ಯಾಹ್ನ 2ರಿಂದ ಸಂಜೆ 4ರವರೆಗೆ

'ಕಲಬುರಗಿ ಅಭಿವೃದ್ಧಿಯ ರಿಪಬ್ಲಿಕ್: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಬುರಗಿ ಅಭಿವೃದ್ಧಿಯ ರಿಪಬ್ಲಿಕ್ ಆಗಿದೆ ವಿನಃ ಬಳ್ಳಾರಿ ರಿಪಬ್ಲಿಕ್ ರೀತಿಯಲ್ಲಿ ಅಲ್ಲ. ಬಿಜೆಪಿ ನಾಯಕರಿಗೆ ಕಲಬುರಗಿ ಅಭಿವೃದ್ಧಿ ಸಹಿಸಲು ಆಗುತ್ತಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರಿಯಾಂಕ್ ಖರ್ಗೆ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಕಾಂಗ್ರೆಸ್ 2023ರಲ್ಲಿ ಅಧಿಕಾರಕ್ಕೆ ಬಂದ ನಂತರ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸಾಕಷ್ಟು ಅನುದಾನ ಮೀಸಲಿಟ್ಟಿದೆ. ಜಯದೇವ ಆಸ್ಪತ್ರೆ ಸ್ಥಾಪಿಸಲಾಗಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಕ ಹಳ್ಳಿಹಳ್ಳಿಗೂ ಶುದ್ಧ ಕುಡಿಯುವ ನೀರು ಕಲ್ಪಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳ ಪ್ರಗತಿಗೆ ನಾಂದಿ ಹಾಡಲಾಗಿದೆ. ಇಂತಹ ಕಾರ್ಯಗಳನ್ನು ಸಹಿಸದ ಬಿಜೆಪಿ ಅಪಪ್ರಚಾರದಲ್ಲಿ ತೊಡಗಿದೆ ಎಂದು ದೂರಿದರು.

'ಕಾಂಗ್ರೆಸ್ ಬಗ್ಗೆ ಮಾತನಾಡುವ ಮೊದಲು ಕಲಬುರಗಿಯ ಬಿಜೆಪಿ ನಾಯಕರ ಇತಿಹಾಸವನ್ನೊಮ್ಮೆ ತೆರೆದು ನೋಡಲಿ. ಐಪಿಎಲ್ ಬೆಟ್ಟಿಂಗ್, ಮರಳು ಮಾಫಿಯಾ, ಅಂಗನವಾಡಿ ಹಾಲಿನ ಪೌಡರ್, ಪಡಿತರ ಅಕ್ಕಿ ಕಳ್ಳಸಾಗಣೆ ವಿರುದ್ಧ ಯಾರ ಮೇಲೆ ಪ್ರಕರಣಗಳು ದಾಖಲಾಗಿವೆ. ಅಂತಹ ಮಹಾನುಭಾವರು ಯಾವ ಪಕ್ಷ ಎಂದು ಮೊದಲು ತಿಳಿದುಕೊಳ್ಳಲಿ' ಎಂದರು.

ಕಾಂಗ್ರೆಸ್ ಸರ್ಕಾರದ ಸಚಿವರ ರಾಜೀನಾಮೆ ಕೇಳುವುದು ಬಿಜೆಪಿಗರಿಗೆ ಫ್ಯಾಷನ್ ಆಗಿದೆ. ಚಿತ್ತಾಪುರ ಬಿಜೆಪಿ ಅಭ್ಯರ್ಥಿ ಮೇಲೆ ಹಲ್ಲೆ ನಡೆದಿದೆ ಎಂದು ಬಿಜೆಪಿ ನಾಯಕರು ಹಿಂದೆಯೂ ನನ್ನ ರಾಜೀನಾಮೆಗೆ ಆಗ್ರಹಿಸಿದ್ದರು. ತನಿಖೆಯ ನಂತರ ಕುಡಿದು ಅಪಘಾತ ಮಾಡಿಕೊಂಡಿರುವುದು ಬಯಲಾಗಿತ್ತು. ಕೆಕೆಆರ್‌ಡಿಬಿ ಉಪ ಗುತ್ತಿಗೆದಾರರೊಬ್ಬರ ಆತ್ಮಹತ್ಯೆಯಲ್ಲೂ ರಾಜೀನಾಮೆ ಕೇಳಿದ್ದರು. ನಂತರ ಅವರ ಸಾವಿಗೆ ಅವರದೇ ಪಕ್ಷದ ಶಾಸಕರೊಬ್ಬರು ಕಾರಣ ಎನ್ನುವುದು ತಿಳಿಯಿತು. ಇದು ಬಿಜೆಪಿ ನಾಯಕರ ವರ್ತನೆ ಎಂದು ಟೀಕಿಸಿದರು.

'ಮೃತ ಗುತ್ತಿಗೆದಾರ ಸಚಿನ್ ಪ್ರಕರಣದಲ್ಲೂ ನನ್ನ ಹಾಗೂ ಸರ್ಕಾರದ ಪಾತ್ರವಿಲ್ಲ. ಈ ಕುರಿತು ತನಿಖೆ ನಡೆಯುತ್ತಿದೆ. ಬೇರೆ ಸಂಸ್ಥೆಗೆ ವಹಿಸಲೂ ಸರ್ಕಾರ ಸಿದ್ಧವಿದೆ. ತನಿಖೆಯ ನಂತರ ಸತ್ಯ ಗೊತ್ತಾಗಲಿದೆ. ಒಬ್ಬರ ಸಾವನ್ನೂ ರಾಜಕೀಯ ಕಾರಣಕ್ಕೆ ಬಳಸಿಕೊಳ್ಳುವುದು, ಠಾಣೆಗೆ ನುಗ್ಗಿ ಗೂಂಡಾಗಿರಿ ಮಾಡುವುದು ಬಿಜೆಪಿಗೆ ಅಭ್ಯಾಸವಾಗಿದೆ. ಅವರಿಗೆ ಕಾನೂನು, ಸಂವಿಧಾನದ ಅರಿವಿಲ್ಲ. ಮುನಿರತ್ನ, ಸಿ.ಟಿ. ರವಿ, ಬಿ.ಎಸ್. ಯಡಿಯೂರಪ್ಪ ಅವರ ಪ್ರಕರಣ ಮುಚ್ಚಿಹಾಕಲು ಇಂತಹ ಪ್ರಕರಣವನ್ನು ದೊಡ್ಡದು ಮಾಡುತ್ತಿದ್ದಾರೆ' ಎಂದು ದೂರಿದರು.

ಪ್ರಿಯಾಂಕ್ ಆಪ್ತನ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'ಸಿದ್ದಲಿಂಗ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮಡು, ಮಣಿಕಂಠ ರಾಠೋಡ ಹಾಗೂ ನನ್ನ ಕೊಲೆಗೆ ಆರು ಜನ ಆರೋಪಿಗಳು ಸುಪಾರಿ ನೀಡಿದ್ದಾರೆ ಎಂಬುದು ಬೀದರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಬರೆದಿಟ್ಟ ಮರಣ ಪತ್ರದಲ್ಲಿ ಉಲ್ಲೇಖವಾಗಿದೆ. ಹೀಗಾಗಿ, ಈ ಆರು ಜನರಿಂದ ನಮಗೆ ಜೀವ ಭಯವಿದೆ' ಎಂದು ಆರೋಪಿಸಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಚಂದು ಪಾಟೀಲ ದೂರು ದಾಖಲಿಸಿದ್ದಾರೆ.

ಒತ್ತಡಕ್ಕೆ ಮಣಿದು ಎಫ್‌ಐಆರ್: ಜೀವ ಬೆದರಿಕೆ ಸಂಬಂಧ ಬಿಜೆಪಿ ಮುಖಂಡರು ದೂರು ಕೊಡಲು ಶುಕ್ರವಾರ ರಾತ್ರಿ ಸ್ಟೇಷನ್ ಬಜಾರ್ ಠಾಣೆಗೆ ಹೋಗಿದ್ದರು. ಇನ್‌ಸ್ಪೆಕ್ಟರ್ ಶಕೀಲ್ ಅಂಗಡಿ ಅವರು ಪ್ರಕರಣ ದಾಖಲಿಸಲು ಹಿಂದೇಟು ಹಾಕಿದ್ದು, ಪರಸ್ಪರ ವಾಗ್ವಾದವೂ ನಡೆದಿತ್ತು.

ಪೊಲೀಸರ ವಿಳಂಬ ನೀತಿಯನ್ನು ಖಂಡಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಶನಿವಾರ ನಗರದ ಜಗತ್ ವೃತ್ತದಲ್ಲಿ 3 ಗಂಟೆ ಕಾಲ ಪ್ರತಿಭಟನೆ ನಡೆಸಿದರು. ಬಳಿಕ ನ್ಯಾಯಾಲಯದ ಮೊರೆ ಹೋಗಿ, ಪೊಲೀಸರ ಮೇಲೆ ಒತ್ತಡ ತಂದು ಪ್ರಕರಣ ದಾಖಲಿಸುವಲ್ಲಿ ಯಶಸ್ವಿಯಾದರು.

ಬಂಧನಕ್ಕೆ ನಾರಾಯಣಸ್ವಾಮಿ ಒತ್ತಾಯ

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಮೃತ ಗುತ್ತಿಗೆದಾರ ಸಚಿನ್ ಅವರು ಏಳು ಪುಟಗಳ ಮರಣಪತ್ರ ಬರೆದಿದ್ದಾರೆ. ಸಾಮಾಜಿಕ ಜಾಲತಾಣದಲ್ಲೂ ಹಾಕಿದ್ದಾರೆ. ಅವರನ್ನು ಸುಪಾರಿ ಕೊಟ್ಟು ಕೊಲ್ಲಿಸುವ ವಿಚಾರವೂ ಪ್ರಸ್ತಾವವಾಗಿದೆ. ಅವರಲ್ಲಿ ಪ್ರಿಯಾಂಕ್ ಖರ್ಗೆ ಆಪ್ತರ ಹೆಸರುಗಳೂ ಇವೆ. ತನಿಖೆ ಸರಿಯಾಗಿ ನಡೆಯಲು ಅವರ ರಾಜೀನಾಮೆ ಅಗತ್ಯ ಎಂದರು.

'ಪ್ರಿಯಾಂಕ್ ಖರ್ಗೆ ತಮಗೆ ಬೇಕಾದವರನ್ನು ಮುಂದಿಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಾರೆ. ರಿಪಬ್ಲಿಕ್ ಆಫ್ ಕಲಬುರಗಿ ಆಗಿದೆ. ಕರ್ನಾಟಕದ ವ್ಯವಸ್ಥೆಯೇ ಬೇರೆ, ಅಲ್ಲಿನ ವ್ಯವಸ್ಥೆಯೇ ಬೇರೆ ಇದೆ. ಪೊಲೀಸರೂ ಖರ್ಗೆ ಹೇಳಿದಂತೆ ನಡೆದುಕೊಳ್ಳುತ್ತಿದ್ದಾರೆ. ದಲಿತ ಸಮುದಾಯಗಳು ಅವರ ವಿರುದ್ಧ ಮಾತನಾಡಿದರೆ ಶಿಕ್ಷೆ ಅನುಭವಿಸಬೇಕಾಗುತ್ತದೆ' ಎಂದು ದೂರಿದರು.

ಹೋರಾಟಕ್ಕೆ ಬಿಜೆಪಿ ಸಿದ್ಧತೆ: ರಾಜ್ಯದಲ್ಲಿ ಕಾನೂನು, ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಕಲಬುರಗಿ ಗುತ್ತಿಗೆದಾರ ಸಚಿನ್ ಕುಟುಂಬದ ಜತೆ ಬಿಜೆಪಿ ನಿಲ್ಲಲಿದೆ. ಈ ಕುರಿತು ಬಿಜೆಪಿ ಹೊರಾಟ ರೂಪಿಸಲಿದೆ ಎಂದು ಪಿ. ರಾಜೀವ್ ತಿಳಿಸಿದರು.

'ಕೀಳುಮಟ್ಟದ ರಾಜಕೀಯ'

ಜೆ.ಪಿ.ನಡ್ಡಾ

ನವದೆಹಲಿ (ಪಿಟಿಐ): ಮನಮೋಹನ ಸಿಂಗ್ ಅವರ ಸ್ಮಾರಕದ ವಿಚಾರದಲ್ಲಿ ಕಾಂಗ್ರೆಸ್ 'ಕೀಳುಮಟ್ಟದ ರಾಜಕೀಯ' ಮಾಡುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಟೀಕಿಸಿದ್ದಾರೆ.

ಸರ್ಕಾರವು ಸಿಂಗ್ ಅವರಿಗೆ ಅವಮಾನ ಮಾಡಿದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಕಟುವಾಗಿ ಪ್ರತಿಕ್ರಿಯಿಸಿರುವ ಅವರು, 'ಮಾಜಿ ಪ್ರಧಾನಿ ಅವರ ನಿಧನದ ದುಃಖದ ನಡುವೆಯೂ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ರಾಜಕೀಯ ಮಾಡುವುದನ್ನು ಬಿಡದಿರುವುದು ಅತ್ಯಂತ ದುರದೃಷ್ಟಕರ' ಎಂದಿದ್ದಾರೆ.

'ಕಾಂಗ್ರೆಸ್‌ನ ಈ ಅಗ್ಗದ ಚಿಂತನೆಯನ್ನು ಎಷ್ಟೇ ಖಂಡಿಸಿದರೂ ಸಾಲದು. ಸಿಂಗ್ ಬದುಕಿದ್ದಾಗ ಅವರಿಗೆ ನಿಜವಾದ ಗೌರವವನ್ನು ನೀಡದ ಪಕ್ಷವು ಈಗ ಅವರ ಗೌರವದ ಹೆಸರಿನಲ್ಲಿ ರಾಜಕೀಯ ಮಾಡುತ್ತಿದೆ' ಎಂದು ದೂರಿದರು.

ಸ್ಮಾರಕ ನಿರ್ಮಾಣಕ್ಕೆ ಜಾಗ ಮಂಜೂರು ಮಾಡುವುದಾಗಿ ಸರ್ಕಾರವು ಹೇಳಿದ್ದು, ಈ ವಿಷಯವನ್ನು ಅವರ ಕುಟುಂಬದವರಿಗೂ ತಿಳಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ತನ್ನದೇ ನಾಯಕರಿಗೆ ಅವಮಾನ: 'ಕಾಂಗ್ರೆಸ್ ಪಕ್ಷವು ಈ ಹಿಂದೆ ತನ್ನದೇ ನಾಯಕರಾದ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್, ಮಾಜಿ ರಾಷ್ಟ್ರಪತಿಗಳಾದ ಪ್ರಣವ್ ಮುಖರ್ಜಿ, ರಾಜೇಂದ್ರ ಪ್ರಸಾದ್ ಮತ್ತು ಮಾಜಿ ಉಪಪ್ರಧಾನಿ ವಲ್ಲಭಭಾಯಿ ಪಟೇಲ್ ಅವರಿಗೆ ಅವಮಾನ ಮಾಡಿದೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ದೂರಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಅಶೋಕ್ ಗೆಹಲೋತ್, ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಎಐಸಿಸಿ ಕೇಂದ್ರ ಕಚೇರಿಯಲ್ಲಿ ಮನಮೋಹನ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿದರು ಪಿಟಿಐ ಚಿತ್ರ

ಮನಮೋಹನ ಅಮರ್ ರಹೇ...

ಒಂದನೇ ಪುಟದಿಂದ...

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಒಳಗೊಂಡಂತೆ ಹಲವು ಪ್ರಮುಖರ ಸಮ್ಮುಖದಲ್ಲಿ ಸಿಖ್ ಪುರೋಹಿತರು ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಿದರು.

ಎಐಸಿಸಿ ಕಚೇರಿಯಲ್ಲಿ ಅಂತಿಮ ನಮನ: ಇದಕ್ಕೂ ಮುನ್ನ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಅಂತಿಮ ನಮನ ಸಲ್ಲಿಸಲಾಯಿತು. ಖರ್ಗೆ, ಸೋನಿಯಾ ಮತ್ತು ರಾಹುಲ್ ಅವರು ಎಐಸಿಸಿ ಕಚೇರಿಯಲ್ಲಿ ಹಾಗೂ ಆ ಬಳಿಕ ನಿಗಮ್ ಬೋಧ್ ಘಾಟ್‌ನಲ್ಲೂ ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ ಶ್ರದ್ಧಾಂಜಲಿ ಅರ್ಪಿಸಿದರು. ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಮತ್ತು ಪುತ್ರಿಯರಾದ ಉಪಿಂದರ್ ಸಿಂಗ್, ದಮನ್ ಸಿಂಗ್ ಹಾಗೂ ಅಮೃತ್ ಕೌರ್ ಮತ್ತು ಸಂಬಂಧಿಕರು ಹಾಜರಿದ್ದರು.

ಪಾರ್ಥಿವ ಶರೀರವನ್ನು ಎಐಸಿಸಿ ಕಚೇರಿಯಿಂದ ಮೆರವಣಿಗೆ ಮೂಲಕ ನಿಗಮ್ ಬೋಧ್ ಘಾಟ್‌ಗೆ ತರಲಾಯಿತು. ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮೃತದೇಹ ಇರಿಸಿದ್ದ ಸೇನೆಯ ತೆರೆದ ವಾಹನದಲ್ಲಿ ಕುಳಿತಿದ್ದರು. ಆ ಬಳಿಕ ಮೃತದೇಹವನ್ನು ಚಿತೆಯಲ್ಲಿ ಇರಿಸುವಾಗಲೂ ಅವರು ಹೆಗಲುಕೊಟ್ಟರು.

ಭೂತಾನ್ ದೊರೆ ಜಿಗ್ಮೆ ಖೇಸರ್ ನಮ್‌ಗ್ಯಾಲ್ ವಾಂಗ್ಚುಕ್ ಮತ್ತು ಮಾರಿಷಸ್ ವಿದೇಶಾಂಗ ಸಚಿವ ಧನಂಜಯ್ ರಾಮ್‌ಫೂಲ್ ಅವರು ನಿಗಮ್‌ಬೋಧ್ ಘಾಟ್‌ನಲ್ಲಿ ಅಂತಿಮ ನಮನ ಸಲ್ಲಿಸಿದರು.

2004 ರಿಂದ 2014ರವರೆಗೆ ದೇಶದ ಪ್ರಧಾನಿಯಾಗಿದ್ದ 92 ವರ್ಷದ ಸಿಂಗ್ ಅನಾರೋಗ್ಯದಿಂದ ಡಿ. 26ರಂದು ರಾತ್ರಿ ನಿಧನರಾಗಿದ್ದರು.

ಮನಮೋಹನ ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಮತ್ತು ಪುತ್ರಿಯರಾದ ದಮನ್ ಸಿಂಗ್, ಉಪಿಂದರ್ ಸಿಂಗ್ ಹಾಗೂ ಅಮೃತ್ ಸಿಂಗ್ ಅವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದರು ಪಿಟಿಐ ಚಿತ್ರ

ಎಐಸಿಸಿ ಕಚೇರಿಯಿಂದ ಅಂತಿಮ ಯಾತ್ರೆ

- ಸಿಂಗ್ ಅವರ ಪಾರ್ಥಿವ ಶರೀರ ಹೊತ್ತ ವಾಹನ ಬೆಳಿಗ್ಗೆ 9ಕ್ಕೆ ಮೋತಿಲಾಲ್ ನೆಹರೂ ಮಾರ್ಗದ ಅವರ ನಿವಾಸದಿಂದ ಎಐಸಿಸಿ ಕಚೇರಿಗೆ ಹೊರಟಿತು
- ಎಐಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಅಂತಿಮ ನಮನ ಸಲ್ಲಿಸಿದರು
- ಎಐಸಿಸಿ ಕಚೇರಿಯಿಂದ ಮೃತದೇಹವನ್ನು ಮೆರವಣಿಗೆ ಮೂಲಕ ಬೆಳಿಗ್ಗೆ 11.30ಕ್ಕೆ ನಿಗಮ್ ಬೋಧ್ ಘಾಟ್‌ಗೆ ತರಲಾಯಿತು
- ಪಾರ್ಥಿವ ಶರೀರವನ್ನು ನಿಗಮ್ ಬೋಧ್ ಘಾಟ್‌ನಲ್ಲಿ ಎತ್ತರದ ವೇದಿಕೆಯಲ್ಲಿರಿಸಿ, ಪಕ್ಷಭೇದ ಮರೆತು ಎಲ್ಲ ನಾಯಕರಿಗೆ ಪುಷ್ಪಗುಚ್ಛವನ್ನಿರಿಸಿ ಗೌರವ ಸಲ್ಲಿಸಲು ಅನುವು ಮಾಡಿಕೊಡಲಾಯಿತು
- ಚಿತೆಗೆ ಅಗ್ನಿ ಸ್ಪರ್ಶ ಮಾಡುವ ಮುನ್ನ ಭದ್ರತಾ ಪಡೆ ಸಿಬ್ಬಂದಿ ಗುಂಡು ಹಾರಿಸಿ '21 ಗನ್ ಸಲ್ಯೂಟ್' ನೀಡಿದರು
- ಸಿಖ್ ಪುರೋಹಿತರು ಮತ್ತು ಸಿಂಗ್ ಅವರ ಕುಟುಂಬದ ಸದಸ್ಯರು ಅಂತಿಮ ವಿಧಿ ವಿಧಾನ ನೆರವೇರಿಸುವ ಮೊದಲು ಗುರ್ಬಾನಿಯ ಸ್ತೋತ್ರಗಳನ್ನು ಪಠಿಸಿದರು

'ಮಾಜಿ ಪ್ರಧಾನಿಗೆ ಅವಮಾನ'

ಒಂದನೇ ಪುಟದಿಂದ...

'ಅಷ್ಟೊಂದು ವಿಶಾಲವಲ್ಲದ ನಿಗಮ್ ಬೋಧ್ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಿಸುವ ಮೂಲಕ ಸರ್ಕಾರವು ಸಿಂಗ್ ಅವರಿಗೆ ಅವಮಾನ ಮಾಡಿದೆ. ಇದುವರೆಗೂ, ಎಲ್ಲಾ ಮಾಜಿ ಪ್ರಧಾನಿಗಳ ಅಂತ್ಯಕ್ರಿಯೆಯನ್ನು ಅಧಿಕೃತ ಸಮಾಧಿ ಸ್ಥಳಗಳಲ್ಲೇ ನಡೆಸಲಾಗಿತ್ತು. ಆ ಮೂಲಕ ಯಾವುದೇ ಅನನುಕೂಲ ಇಲ್ಲದೆ ಎಲ್ಲರಿಗೂ ಅಂತಿಮ ದರ್ಶನ ಮತ್ತು ಗೌರವ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ದೇಶದ ಈ ಮಹಾನ್ ಪುತ್ರ ಮತ್ತು ಅವರ ಹೆಮ್ಮೆಯ ಸಮುದಾಯಕ್ಕೆ ಸರ್ಕಾರ ಗೌರವ ತೋರಿಸಬೇಕಿತ್ತು' ಎಂದು ರಾಹುಲ್, ಅಂತ್ಯಕ್ರಿಯೆ ನೆರವೇರಿದ ಬೆನ್ನಲ್ಲೇ ಹೇಳಿದ್ದಾರೆ.

ಸ್ಮಾರಕ ನಿರ್ಮಾಣ ಮಾಡಲು ಸಾಧ್ಯವಾಗುವಂತಹ ಜಾಗದಲ್ಲೇ ಅಂತ್ಯಕ್ರಿಯೆಗೆ ಅವಕಾಶ ನೀಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ, ಪ್ರಧಾನಿಗೆ ಮನವಿ ಮಾಡಿದ್ದರು. ಆದರೆ ಆ ಬೇಡಿಕೆಗೆ ಒಪ್ಪದ ಸರ್ಕಾರ, ನಿಗಮ್ ಬೋಧ್ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಸಲು ನಿರ್ಧರಿಸಿತ್ತು.

ಶುಕ್ರವಾರ ರಾತ್ರಿ ಪ್ರಕಟಣೆ ಹೊರಡಿಸಿದ ಕೇಂದ್ರ ಗೃಹ ಸಚಿವಾಲಯ, ಸ್ಮಾರಕ ನಿರ್ಮಾಣಕ್ಕೆ ಪ್ರತ್ಯೇಕ ಜಾಗ ನೀಡಲಾಗುವುದು ಎಂದು ಖರ್ಗೆ ಅವರಿಗೆ ತಿಳಿಸಿರುವುದಾಗಿ ಹೇಳಿದೆ.

'ಸ್ಮಾರಕಕ್ಕೆ ಜಾಗ ಮಂಜೂರು'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಸ್ಮಾರಕ ನಿರ್ಮಾಣಕ್ಕೆ ಸರ್ಕಾರವು ಜಾಗ ಮಂಜೂರು ಮಾಡಲಿದೆ ಮತ್ತು ಈ ವಿಷಯವನ್ನು ಅವರ ಕುಟುಂಬ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಿಳಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಶುಕ್ರವಾರ ರಾತ್ರಿ ಹೇಳಿದೆ.

'ಮಾಜಿ ಪ್ರಧಾನಿ ದಿವಂಗತ ಡಾ.ಮನಮೋಹನ ಸಿಂಗ್ ಅವರ ಸ್ಮಾರಕಕ್ಕೆ ಸಂಬಂಧಿಸಿದ ವಿಷಯ' ಎಂಬ ಶೀರ್ಷಿಕೆಯಡಿ ತಡರಾತ್ರಿ ಪ್ರಕಟಣೆ ಹೊರಡಿಸಿದ ಸಚಿವಾಲಯ, 'ಸಿಂಗ್ ಅವರ ಸ್ಮಾರಕಕ್ಕಾಗಿ ಜಾಗವನ್ನು ಮಂಜೂರು ಮಾಡುವಂತೆ ಎಐಸಿಸಿ ಅಧ್ಯಕ್ಷರು ಸರ್ಕಾರಕ್ಕೆ ಮಾಡಿರುವ ಮನವಿಯನ್ನು ಸಚಿವಾಲಯ ಸ್ವೀಕರಿಸಿದೆ' ಎಂದು ಹೇಳಿದೆ.

'ಸರ್ಕಾರವು ಸ್ಮಾರಕಕ್ಕೆ ಜಾಗ ಮಂಜೂರು ಮಾಡಲಿದೆ ಎಂಬುದನ್ನು ಶುಕ್ರವಾರ ನಡೆದ ಸಂಪುಟ ಸಭೆಯ ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಖರ್ಗೆ ಹಾಗೂ ಸಿಂಗ್ ಅವರ ಕುಟುಂಬಕ್ಕೆ ತಿಳಿಸಿದ್ದಾರೆ' ಎಂದು ಪ್ರಕಟಣೆ ಹೇಳಿದೆ.

ಅನಗತ್ಯ ವಿವಾದ: ಮನಮೋಹನ ಸಿಂಗ್ ಅವರ ಅಂತ್ಯಕ್ರಿಯೆ ವಿಚಾರದಲ್ಲಿ ಎನ್‌ಡಿಎ ಸರ್ಕಾರ 'ಅನಗತ್ಯ ವಿವಾದ' ಹುಟ್ಟುಹಾಕಿದೆ ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹೇಳಿದ್ದಾರೆ.

'ಸರ್ಕಾರದ ನಿರ್ಧಾರಕ್ಕೆ ದೇಶದ ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರ ಭಾವನೆಗಳ ಒತ್ತಡಕ್ಕೆ ಮಣಿದ ಬಳಿಕವೇ ಬಿಜೆಪಿ ಸರ್ಕಾರವು ಮುಂದೆ ಸ್ಮಾರಕ ನಿರ್ಮಿಸುವುದಾಗಿ ಘೋಷಿಸಿದೆ' ಎಂದಿದ್ದಾರೆ.

ಅಗೌರವ– ಖೇರಾ ಕಿಡಿ: 'ಮಾಜಿ ಪ್ರಧಾನಿಯೆಡೆಗೆ ಅವಮಾನದ ವರ್ತನೆ ತೋರಿರುವುದು, ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಈ ಸರ್ಕಾರಕ್ಕೆ ಗೌರವ ಇಲ್ಲ ಎಂಬುದನ್ನು ಬಹಿರಂಗಪಡಿಸುತ್ತದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ದೂರಿದ್ದಾರೆ.

'ದೂರದರ್ಶನ (ಡಿಡಿ) ಹೊರತುಪಡಿಸಿ ಯಾವುದೇ ಸುದ್ದಿ ವಾಹಿನಿಗಳ ಸಿಬ್ಬಂದಿಗೆ ಅಂತ್ಯಕ್ರಿಯೆ ನಡೆದ ಸ್ಥಳಕ್ಕೆ ಬರಲು ಅವಕಾಶ ಇರಲಿಲ್ಲ. ಡಿ.ಡಿಯವರು ಸಿಂಗ್ ಅವರ ಕುಟುಂಬದ ಸದಸ್ಯರ ಬದಲು ಪ್ರಧಾನಿ ಅವರ ಮುಖವನ್ನೇ ತೋರಿಸುತ್ತಿದ್ದರು' ಎಂದಿದ್ದಾರೆ.

'ಸಿಂಗ್ ಕುಟುಂಬದ ಸದಸ್ಯರಿಗೆ ಮೂರು ಕುರ್ಚಿಗಳನ್ನು ಮಾತ್ರ ಮೀಸಲಿಡಲಾಗಿತ್ತು. ಕಾಂಗ್ರೆಸ್ ಮುಖಂಡರು ಹೇಳಿದ ಬಳಿಕ ಅವರಿಗೆ ಹೆಚ್ಚುವರಿಯಾಗಿ ಕುರ್ಚಿಗಳನ್ನು ಮೀಸಲಿಡಲಾಯಿತು. ಚಿತೆಯ ಸುತ್ತಮುತ್ತ ಸ್ಥಳದ ಅಭಾವ ಇದ್ದ ಕಾರಣ ಸಿಂಗ್ ಅವರ ಮೊಮ್ಮಕ್ಕಳು ಅಂತಿಮ ವಿಧಿ ವಿಧಾನ ನಡೆಸಲು ಪ್ರಯಾಸಪಟ್ಟರು. ಅಮಿತ್ ಶಾ ಅವರ ಬೆಂಗಾವಲು ವಾಹನಗಳು ಪಾರ್ಥಿವ ಶರೀರದ ಮೆರವಣಿಗೆಗೆ ಅಡ್ಡಿಯಾದವು. ಸಿಂಗ್ ಅವರ ಪತ್ನಿಗೆ ರಾಷ್ಟ್ರಧ್ವಜ ನೀಡುವ ಸಂದರ್ಭದಲ್ಲಿ ಪ್ರಧಾನಿ ಹಾಗೂ ಇತರ ಸಚಿವರು ಎದ್ದು ನಿಲ್ಲಲಿಲ್ಲ' ಎಂದು ಅಲ್ಲಿನ ಅವ್ಯವಸ್ಥೆ ಬಗ್ಗೆ 'ಎಕ್ಸ್'ನಲ್ಲಿ ಕಿಡಿಕಾರಿದ್ದಾರೆ.

> **ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಪಿ.ವಿ.ನರಸಿಂಹರಾವ್ ಒಳಗೊಂಡಂತೆ ಗಾಂಧಿ ಕುಟುಂಬದ ಹೊರಗಿನ ನಾಯಕರಿಗೆ ಕಾಂಗ್ರೆಸ್ ಎಂದಿಗೂ ಮನ್ನಣೆ ನೀಡಿಲ್ಲ**
> **ಸುಧಾಂಶು ತ್ರಿವೇದಿ** ಬಿಜೆಪಿ ನಾಯಕ

> **ನಿಗಮ್ ಬೋಧ್ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆದ ಒಬ್ಬ ಮಾಜಿ ಪ್ರಧಾನಿಯನ್ನು ಮೋದಿ ಹೆಸರಿಸಬಹುದೇ? ಸಂಕುಚಿತ ಮನಸ್ಥಿತಿಯನ್ನು ಇದು ತೋರಿಸುತ್ತದೆ**
> **ಸಂಜಯ್ ಸಿಂಗ್** ಎಎಪಿ ನಾಯಕ

'ಸೂಕ್ತ ಸ್ಥಳ ಹುಡುಕಲು ಪರದಾಟ'

ಅಂತ್ಯಕ್ರಿಯೆಗೆ ಸ್ಥಳ ನಿಗದಿಪಡಿಸುವಾಗ ಸರ್ಕಾರವು, 'ರಾಜಕೀಯ ಮತ್ತು ಸಣ್ಣತನ'ವನ್ನು ಮೀರಿ ಯೋಚಿಸಬೇಕಿತ್ತು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

'ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಕುಟುಂಬ ಸದಸ್ಯರು ನಿಗಮ್ ಬೋಧ್ ಘಾಟ್‌ನಲ್ಲಿ ಅಂತ್ಯಕ್ರಿಯೆಗಾಗಿ ಸೂಕ್ತ ಸ್ಥಳ ಆಯ್ಕೆ ಮಾಡಲು ಹೆಣಗಾಡುತ್ತಿರುವುದು ನನ್ನ ಗಮನಕ್ಕೆ ಬಂತು. ಸ್ಥಳದ ಕೊರತೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸಿದರಲ್ಲದೆ, ಕೆಲವರು ಹೊರಭಾಗದ ರಸ್ತೆಯಲ್ಲಿದ್ದುಕೊಂಡೇ ಗೌರವ ಸಲ್ಲಿಸಿದ್ದಾರೆ' ಎಂದಿದ್ದಾರೆ.

ದುರಹಂಕಾರ: ಸ್ಟಾಲಿನ್

ಸಿಂಗ್ ಅವರ ಅತ್ಯುನ್ನತ ವ್ಯಕ್ತಿತ್ವ ಮತ್ತು ಸಿಖ್ ಸಮುದಾಯಕ್ಕೆ ಸರ್ಕಾರ ಅವಮಾನ ಮಾಡಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಟೀಕಿಸಿದ್ದಾರೆ.

'ಕುಟುಂಬದ ಕೋರಿಕೆಯನ್ನು ತಳ್ಳಿಹಾಕಿ ಸಿಂಗ್ ಅವರ ಅಂತ್ಯಕ್ರಿಯೆಗೆ ನಿಗಮ್ ಬೋಧ್ ಘಾಟ್‌ನಲ್ಲಿ ಸ್ಥಳ ನಿಗದಿಮಾಡಿರುವುದು ಸರ್ಕಾರದ ದುರಹಂಕಾರ ಮತ್ತು ಪಕ್ಷಪಾತಿ ಧೋರಣೆಯನ್ನು ತೋರಿಸುತ್ತದೆ. ಅವರ ಅಪಾರ ಕೊಡುಗೆಗಳನ್ನು ಜನರ ಮನಸ್ಸಿನಿಂದ ಅಳಿಸಬೇಕೆಂಬ ಉದ್ದೇಶ ಇದರ ಹಿಂದಿದೆ' ಎಂದಿದ್ದಾರೆ.

ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಪ್ರಧಾನಿ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು, ಭೂತಾನ್ ಪ್ರಧಾನಿ ಜಿಗ್ಮೆ ಖೇಸರ್ ನಮ್‌ಗ್ಯಾಲ್ ವಾಂಗ್ಚುಕ್ ಅವರು ಸಿಂಗ್ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರು ಪಿಟಿಐ ಚಿತ್ರ

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹450-650
ದ್ವಿತಳಿ (ಬಿ.ವಿ)	₹275-745

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್‌-4	₹185
ಆರ್‌ಎಸ್‌ಎಸ್‌-5	₹180
ಗುಡ್ ಲಾಟ್	₹174

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1355 (1355)
ಪಾಮೋಲಿನ್	₹1358 (1360)

ವಿನಿಮಯ ದರ

$ ಡಾಲರ್	85.39
£ ಪೌಂಡ್	107.40
€ ಯುರೊ	89.01
¥ ಯೆನ್ (100ಕ್ಕೆ)	54

ಜನವರಿಯಿಂದ ಕಟಾವು ಆರಂಭ: ಮತ್ತಷ್ಟು ಬೆಲೆ ಇಳಿಕೆ?

ಕುಸಿದ ಈರುಳ್ಳಿ ಸಗಟು ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರುಕಟ್ಟೆಯಲ್ಲಿ ಈರುಳ್ಳಿ ಆವಕ ಏರಿಕೆಯಾಗುತ್ತಿದ್ದು, ಸಗಟು ದರ ಇಳಿಕೆಯಾಗಿದೆ. ಇದರಿಂದ ಚಿಲ್ಲರೆ ದರವೂ ಇಳಿಕೆಯ ಹಾದಿ ಹಿಡಿದಿದೆ.

ಒಂದು ತಿಂಗಳ ಹಿಂದೆ 'ಎ' ಗ್ರೇಡ್ ಈರುಳ್ಳಿಯ ಸಗಟು ದರವು ಕ್ವಿಂಟಲ್‌ಗೆ ₹7,000ದಿಂದ ₹8,000 ಇತ್ತು. ಸದ್ಯ ₹3,500ರಿಂದ ₹4,000ಕ್ಕೆ ಇಳಿದಿದೆ. 'ಬಿ' ಗ್ರೇಡ್ ಈರುಳ್ಳಿ ಧಾರಣೆಯು ಕ್ವಿಂಟಲ್‌ಗೆ ₹3,000ದಿಂದ ₹3,400 ಇದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಗುಣಮಟ್ಟದ ಪ್ರತಿ ಕೆ.ಜಿ ಈರುಳ್ಳಿಯು ₹30ರಿಂದ ₹45ಕ್ಕೆ ಮಾರಾಟವಾಗುತ್ತಿದೆ.

ಸೆಪ್ಟೆಂಬರ್‌ನಲ್ಲಿ ದೇಶದಾದ್ಯಂತ ಈರುಳ್ಳಿ ದರವು ಏರಿಕೆಯ ಪಥ ಹಿಡಿದಿತ್ತು. ಇದರಿಂದ ಎಚ್ಚೆತ್ತುಕೊಂಡ ಸರ್ಕಾರವು ದೆಹಲಿ ಮತ್ತು ಮುಂಬೈನಲ್ಲಿ ಕೆ.ಜಿಗೆ ₹35ರ ರಿಯಾಯಿತಿ ದರದಡಿ ಈರುಳ್ಳಿ ಮಾರಾಟಕ್ಕೆ ಚಾಲನೆ ನೀಡಿತ್ತು.

ಕೇಂದ್ರವು ಈರುಳ್ಳಿ ಮೇಲೆ ಶೇ 20ರಷ್ಟು ಕನಿಷ್ಠ ರಫ್ತು ದರ ವಿಧಿಸಿದೆ. ಇದರಿಂದ ವಿದೇಶಗಳಿಗೆ ಈರುಳ್ಳಿ ರವಾನೆ ಕಡಿಮೆಯಾಗಿದೆ.

ಮಹಾರಾಷ್ಟ್ರದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕನಿಷ್ಠ ರಫ್ತು ದರವನ್ನು ಹಿಂಪಡೆಯುವಂತೆ ಬೆಳೆಗಾರರಿಂದ ಒತ್ತಾಯ ಕೇಳಿಬಂದಿತ್ತು. ಆದರೆ, ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸುವ ದೃಷ್ಟಿಯಿಂದ ಕೇಂದ್ರವು ಇದನ್ನು ವಾಪಸ್ ಪಡೆಯಲಿಲ್ಲ. ಇದು ಬೆಲೆ ಇಳಿಕೆಗೆ ಕಾರಣವಾಗಿದೆ ಎನ್ನುತ್ತಾರೆ ವ್ಯಾಪಾರಿಗಳು.

ಸದ್ಯ ಮಹಾರಾಷ್ಟ್ರದ ಸೊಲ್ಲಾಪುರ ಸೇರಿ ರಾಜ್ಯದ ವಿಜಯಪುರ, ಬಾಗಲಕೋಟೆ ಜಿಲ್ಲೆಯಲ್ಲಿ ಬೆಳೆದಿರುವ ಈರುಳ್ಳಿಯು ಇಲ್ಲಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಆವಕವಾಗುತ್ತಿದೆ. ಶನಿವಾರ 51,175 ಚೀಲ (ಪ್ರತಿ ಚೀಲ 50 ಕೆ.ಜಿ) ಆವಕವಾಗಿತ್ತು.

ಮುಂಗಾರಿನಲ್ಲಿ ತಡವಾಗಿ ಬಿತ್ತನೆ ಮಾಡಿರುವ ಹಾಗೂ ಹಿಂಗಾರಿನಲ್ಲಿ ಬಿತ್ತನೆ ಆಗಿರುವ ಈರುಳ್ಳಿಯ ಕಟಾವು ಜನವರಿ ಎರಡನೇ ವಾರದಿಂದ ಆರಂಭವಾಗಲಿದೆ. ಹಿರಿಯೂರು, ಚಿತ್ರದುರ್ಗ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಜಗಳೂರು, ಕೊಟ್ಟೂರು ಭಾಗದಲ್ಲಿ ಬೆಳೆದಿರುವ ಈರುಳ್ಳಿಯ ಕಟಾವು ಇದೇ ವೇಳೆಗೆ ಶುರುವಾಗಲಿದೆ.

'ಮಹಾರಾಷ್ಟ್ರದ ಸತಾರಾ, ನಾಸಿಕ್, ಪುಣೆ, ಜಲಗಾಂವ್ ಭಾಗದಲ್ಲಿ ಬಿತ್ತನೆಯಾಗಿರುವ ಈರುಳ್ಳಿ ಕಟಾವು ಫೆಬ್ರುವರಿಯಿಂದ ಶುರುವಾಗಲಿದೆ. ಆಗ ಮಾರುಕಟ್ಟೆಗೆ ಹೊಸ ಸರಕಿನ ಆವಕ ಹೆಚ್ಚಲಿದೆ. ಕೇಂದ್ರ ಸರ್ಕಾರವು ಕನಿಷ್ಠ ರಫ್ತು ದರವನ್ನು ವಾಪಸ್ ಪಡೆದರಷ್ಟೇ ದರ ಏರಿಕೆಯಾಗಲಿದೆ. ಇಲ್ಲವಾದರೆ ಮತ್ತಷ್ಟು ಇಳಿಕೆಯಾಗಬಹುದು' ಎಂದು ಈರುಳ್ಳಿ ಸಗಟು ವ್ಯಾಪಾರಿ ಲೋಕೇಶ್ ಜಿ. 'ಪ್ರಜಾವಾಣಿ'ಗೆ ತಿಳಿಸಿದರು.

ಇಳಿದ ಆವಕ

(ಬಾಗಲಕೋಟೆ ವರದಿ): ಜಿಲ್ಲೆಯಲ್ಲಿ ಈರುಳ್ಳಿ ಬೆಲೆಯು ಕ್ವಿಂಟಲ್‌ಗೆ ₹3,000ದಿಂದ ₹3,500 ಇದೆ. ಫಸಲು ಬಹುತೇಕ ಮುಗಿಯುತ್ತಾ ಬಂದಿರುವುದರಿಂದ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಆವಕ ಕೂಡ 700ರಿಂದ 1,000 ಚೀಲಕ್ಕೆ ಇಳಿದಿದೆ.

'ನವೆಂಬರ್‌ನಲ್ಲಿ ಈರುಳ್ಳಿ ಬೆಲೆಯು ಕ್ವಿಂಟಲ್‌ಗೆ ₹6 ಸಾವಿರದಿಂದ ₹7 ಸಾವಿರ ಇತ್ತು. ಅಕಾಲಿಕ ಮಳೆ ಸುರಿದ ನಂತರ ಸಾಕಷ್ಟು ಕಡೆ ಈರುಳ್ಳಿ ಬೆಳೆ ಹಾನಿಗೀಡಾಗಿತ್ತು. ಗುಣಮಟ್ಟ ಆಧರಿಸಿ ಬೆಲೆ ನಿಗದಿಯಾಗುತ್ತಿದೆ. ಆರಂಭಕ್ಕೆ ಹೋಲಿಸಿದರೆ ಈಗ ಬೆಲೆ ಕಡಿಮೆಯಾಗಿದೆ' ಎಂದು ಬಾಗಲಕೋಟೆ ಎಪಿಎಂಸಿ ಕಾರ್ಯದರ್ಶಿ ವಿ.ಡಿ. ಪಾಟೀಲ ತಿಳಿಸಿದರು.

ಬೆಳೆಗಾರರಿಗೆ ದಕ್ಕಿದ ಲಾಭ

(ವಿಜಯಪುರ ವರದಿ): ಈ ಬಾರಿ ಜಿಲ್ಲೆಯ ಈರುಳ್ಳಿ ಬೆಳೆಗಾರರಿಗೆ ಉತ್ತಮ ಲಾಭ ಸಿಕ್ಕಿದೆ.

ಜಿಲ್ಲೆಯಲ್ಲಿ ಈ ವರ್ಷ 17 ಸಾವಿರ ಹೆಕ್ಟೇರ್‌ನಲ್ಲಿ ಈರುಳ್ಳಿ ಬೆಳೆಯಲಾಗಿದೆ. ಇಳುವರಿಯೂ ಚೆನ್ನಾಗಿದೆ.

'ತಿಂಗಳ ಹಿಂದೆ ಈರುಳ್ಳಿ ಆವಕ ಕಡಿಮೆ ಇತ್ತು. ಇದರಿಂದ ಕ್ವಿಂಟಲ್‌ಗೆ ಗರಿಷ್ಠ ₹7 ಸಾವಿರವರೆಗೆ ದರ ಸಿಕ್ಕಿದೆ. ಸದ್ಯ ಮಾರುಕಟ್ಟೆಗೆ ಆವಕ ಹೆಚ್ಚಾಗಿದೆ. ಕ್ವಿಂಟಲ್‌ಗೆ ₹2,500ದಿಂದ ₹3,000ದ ವರೆಗೆ ದರ ಇದೆ' ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ರಾಹುಲ್ ಭಾವಿದೊಡ್ಡಿ ತಿಳಿಸಿದರು.

'ಜಿಲ್ಲೆಯ ನಿಡಗುಂದಿ, ಕೊಲ್ಹಾರ, ಬಬಲೇಶ್ವರ, ಮುದ್ದೇಬಿಹಾಳ, ಸಿಂದಗಿ, ವಿಜಯಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹೆಚ್ಚು ಈರುಳ್ಳಿ ಬೆಳೆಯಲಾಗುತ್ತದೆ. ಹುಬ್ಬಳ್ಳಿ, ಸೊಲ್ಲಾಪುರ, ಬೆಂಗಳೂರು ಮಾರುಕಟ್ಟೆಗೆ ರೈತರು ಕೊಂಡೊಯ್ಯುತ್ತಾರೆ' ಎಂದರು.

'ಈ ವರ್ಷ ಉತ್ತಮ ಫಸಲು ಬಂದಿದೆ. ಬೆಳೆಗಾರರಿಗೆ ಗರಿಷ್ಠ ಲಾಭವೂ ಕೈ ಸೇರಿದೆ' ಎಂದು ಕೊಲ್ಹಾರದ ರೈತ ಯಮನಪ್ಪ ನಾಗರಾಳ ತಿಳಿಸಿದರು.

ಮಹಾರಾಷ್ಟ್ರದಿಂದ ಹೆಚ್ಚಿದ ಪೂರೈಕೆ

(ಬೆಳಗಾವಿ ವರದಿ): ಇಲ್ಲಿನ ಎಪಿಎಂಸಿಯಲ್ಲಿ ಈರುಳ್ಳಿ ದರ ಕ್ವಿಂಟಲ್‌ಗೆ ₹1 ಸಾವಿರದಿಂದ ₹3,500ರವರೆಗೆ ಇದೆ. ಮಾದರಿ ದರ ₹3 ಸಾವಿರ ಇದೆ. 8,993 ಕ್ವಿಂಟಲ್ ಆವಕವಾಗಿದ್ದು, ಮಹಾರಾಷ್ಟ್ರದಿಂದ ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ಆವಕವಾಗುತ್ತಿದೆ.

ಡಿಸೆಂಬರ್ 14ರಂದು ಕ್ವಿಂಟಲ್‌ಗೆ ₹4,500ದ ವರೆಗೂ ರೈತರಿಗೆ ದರ ಲಭಿಸಿತ್ತು. ಗುಣಮಟ್ಟದ ಈರುಳ್ಳಿಯು ಕ್ವಿಂಟಲ್‌ಗೆ ₹5 ಸಾವಿರದವರೆಗೆ ಮಾರಾಟವಾಗಿತ್ತು. ಸದ್ಯ ಆವಕ ಹೆಚ್ಚಳವಾಗಿದೆ. ಇದರಿಂದ ಧಾರಣೆ ಇಳಿಕೆಯಾಗಿದೆ.

ಸಾಂಪ್ರದಾಯಿಕ ಬೆಲ್ಲಕ್ಕೆ ಬಂಪರ್ ಬೆಲೆ

• ರಾಜೇಂದ್ರ ಹೆಗಡೆ

ಶಿರಸಿ: ಮಲೆನಾಡಿನ ಆಲೆಮನೆಗಳಲ್ಲಿ ಸಾಂಪ್ರದಾಯಿಕವಾಗಿ ತಯಾರಿಸುವ ಬೆಲ್ಲಕ್ಕೆ ಬಂಪರ್ ಬೆಲೆ ಬಂದಿದ್ದು, ಕಬ್ಬು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ಶಿರಸಿ ಸೇರಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈ ತಿಂಗಳ ಆರಂಭದಿಂದ ಆಲೆಮನೆಗಳಲ್ಲಿ ಚಟುವಟಿಕೆಗಳು ಗರಿಗೆದರಿವೆ. ಕಬ್ಬಿನ ಗದ್ದೆಯ ಪಕ್ಕದಲ್ಲಿ ಗಾಣ ಹಾಕಿ, ಸಾಂಪ್ರದಾಯಿಕ ಮತ್ತು ರಾಸಾಯನಿಕ ರಹಿತವಾಗಿ ಬೆಲ್ಲ ತಯಾರಿಸುವ ರೈತರು ಅದನ್ನು ಮಾರಾಟ ಮಾಡುತ್ತಿದ್ದಾರೆ.

ಈ ಬಾರಿಯ ಬೆಲ್ಲ ತಯಾರಿಕೆ ಹಂಗಾಮಿನ ಆರಂಭದಲ್ಲೇ ರೈತರಿಗೆ ಒಂದು ಡಬ್ಬಿ (25 ಕೆ.ಜಿ) ಬೆಲ್ಲಕ್ಕೆ ₹2,600 ದರ ದೊರೆತಿದೆ. ಬೆಲ್ಲದ ಬೇಡಿಕೆ ಹೆಚ್ಚಿದಂತೆ ಖರೀದಿ ದರದಲ್ಲಿ ಏರಿಕೆಯಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಒಂದು ಡಬ್ಬಿ ಬೆಲ್ಲಕ್ಕೆ ₹1 ಸಾವಿರ ಬೆಲೆ ಹೆಚ್ಚಳವಾಗಿದೆ.

'ಒಂದೆಡೆ ಕಬ್ಬು ಬೆಳೆಗಾರರ ಸಂಖ್ಯೆ ಕಡಿಮೆಯಾದರೆ, ಮತ್ತೊಂದೆಡೆ ಕೃಷಿ ಕಾರ್ಮಿಕರ ಕೊರತೆ ಕಾಡುತ್ತಿದೆ. ನಿರ್ವಹಣೆ ವೆಚ್ಚ ಹೆಚ್ಚಳದ ಜೊತೆಗೆ ಮಳೆಯಿಂದ ಆಗಿರುವ ಹಾನಿ ಮತ್ತು ಬೆಲ್ಲ ತಯಾರಿಕೆಯ ಕಚ್ಚಾ ವಸ್ತುಗಳ ಕೊರತೆ ಕಾಡುತ್ತಿದೆ' ಎಂದು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರ ಸಂಘದ ಸಲಹೆಗಾರ ವಿಶ್ವೇಶ್ವರ ಭಟ್ ತಿಳಿಸಿದರು.

'ಈ ಮೊದಲು ಸ್ಥಳೀಯ ಗ್ರಾಹಕರಷ್ಟೇ ಬೆಲ್ಲ ಖರೀದಿಸುತ್ತಿದ್ದರು. ಈಗ ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ಮಂಗಳೂರು, ಕುಂದಾಪುರದ ಜನರು ಬೆಲ್ಲ ಕೊಳ್ಳಲೆಂದೇ ಶಿರಸಿಗೆ ಬರುತ್ತಾರೆ. ಶಿರಸಿಯೊಂದರಲ್ಲೇ ವಾರ್ಷಿಕ ₹2 ಕೋಟಿಗೂ ಹೆಚ್ಚು ವಹಿವಾಟು ನಡೆಯುತ್ತದೆ' ಎಂದು ವಿವರಿಸಿದರು.

'ಕದಂಬ ಮಾರ್ಕೆಟಿಂಗ್, ಟಿಎಸ್‌ಎಸ್ ಮತ್ತು ಉತ್ತರ ಕನ್ನಡ ಜಿಲ್ಲಾ ಸಾವಯವ ಒಕ್ಕೂಟಗಳು ವಾರ್ಷಿಕವಾಗಿ ಸರಾಸರಿ 25 ಕೆ.ಜಿ ತೂಕದ 10 ಸಾವಿರ ಡಬ್ಬಿ ಬೆಲ್ಲ ಖರೀದಿಸಿ ಮಾರುತ್ತಿವೆ. ಉಳಿದಂತೆ ಖಾಸಗಿಯಾಗಿಯೂ ಇಷ್ಟೇ ಪ್ರಮಾಣದ ಬೆಲ್ಲ ಮಾರಲಾಗುತ್ತಿದೆ' ಎಂದರು.

ಕಳೆದ ವರ್ಷದ ಹಂಗಾಮಿನ ಆರಂಭದಲ್ಲಿ ಡಬ್ಬಿಯೊಂದಕ್ಕೆ ₹1,400 ದರವಿದ್ದರೂ, ಉತ್ಪನ್ನದ ಕೊರತೆಯಿಂದಾಗಿ ಬೆಲ್ಲದ ಬೆಲೆ ₹1,600ಕ್ಕೆ ಏರಿತ್ತು. ಬೆಲ್ಲ ತಯಾರಿಸುವ ಹಲವು ರೈತರಿಗೆ ಈ ದರ ಲಭಿಸಿರಲಿಲ್ಲ. ಈ ಬಾರಿ ಎಲ್ಲರಿಗೂ ಲಾಭ ದೊರೆಯಲಿದೆ' ಎಂದು ತಿಳಿಸಿದರು.

ಮಲೆನಾಡಿನ ಆಲೆಮನೆಯಲ್ಲಿ ಸಾಂಪ್ರದಾಯಿಕ ಬೆಲ್ಲ ಸಿದ್ಧಪಡಿಸುತ್ತಿರುವುದು

ಹಿಂದಿನ ವರ್ಷಗಳಲ್ಲಿ ಬೆಲ್ಲದ ಬೆಲೆ ಕುಸಿದಾಗ ಅನೇಕ ರೈತರು ನಷ್ಟದಿಂದ ಕಬ್ಬು ಬೆಳೆಯುವುದನ್ನು ಬಿಟ್ಟಿದ್ದರು. ಈಗ ಬೆಲ್ಲ ತಯಾರಿಸುವ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆ ಸಿಗುತ್ತಿದೆ

ಶ್ರೀಧರ ಹೆಗಡೆ ಶಿರಸಿ, ಬೆಳೆಗಾರ

ಮಾರಾಟಗಾರರಿಂದ ಮದ್ಯ ಖರೀದಿ ದಾಖಲೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಪಾನೀಯ ನಿಗಮದಿಂದ (ಕೆಎಸ್‌ಬಿಸಿಎಲ್) ರಾಜ್ಯದ ಮದ್ಯ ಮಾರಾಟಗಾರರು ಶನಿವಾರ ಒಂದೇ ದಿನ ದಾಖಲೆಯ ಮದ್ಯ ಖರೀದಿಸಿದ್ದಾರೆ.

'₹80.58 ಕೋಟಿ ಮೊತ್ತದ ಬಿಯರ್ ಸೇರಿ ಒಟ್ಟು ₹408.58 ಕೋಟಿ ಮೊತ್ತದ ಮದ್ಯವನ್ನು ಮದ್ಯ ಮಾರಾಟಗಾರರು ಶನಿವಾರ ಖರೀದಿಸಿದ್ದಾರೆ' ಎಂದು ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ತಿಳಿಸಿದೆ.

'ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನರಾದ ಹಿನ್ನೆಲೆಯಲ್ಲಿ ಶುಕ್ರವಾರ ಮದ್ಯ ಖರೀದಿ ಸಾಧ್ಯವಾಗಿಲ್ಲ. ಡಿಸೆಂಬರ್ 28ರಂದು ನಾಲ್ಕನೇ ಶನಿವಾರದ ರಜೆ ಇದ್ದರೂ ಸಂಘದ ಮನವಿ ಮೇರೆಗೆ ನಿಗಮದ ಡಿಪೊಗಳನ್ನು ತೆರೆದು, ಕ್ರೆಡಿಟ್ ಸೌಲಭ್ಯವನ್ನೂ ನೀಡಲಾಯಿತು. ಇದರಿಂದ ದಾಖಲೆ ಮೊತ್ತದ ಮದ್ಯದ ಖರೀದಿ ಸಾಧ್ಯವಾಯಿತು' ಎಂದು ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಬಿ. ಗೋವಿಂದರಾಜ್ ಹೆಗ್ಡೆ 'ಪ್ರಜಾವಾಣಿ'ಗೆ ತಿಳಿಸಿದರು.

'ವರ್ಷದ ಕೊನೆ ದಿನ ಹೊರತುಪಡಿಸಿ, ಬೇರೆ ದಿನಗಳಲ್ಲಿ ಇಷ್ಟು ಮೊತ್ತದ ಖರೀದಿ ಆಗುವುದಿಲ್ಲ. ಸಾಲು ಸಾಲು ಬ್ಯಾಂಕ್ ರಜೆ ಇದ್ದಾಗಲಂತೂ ಇದು ಅಸಾಧ್ಯ. ಹೀಗಾಗಿ, ಬಡ್ಡಿರಹಿತವಾಗಿ ₹150 ಕೋಟಿಗೂ ಹೆಚ್ಚು ಕ್ರೆಡಿಟ್ ಸೌಲಭ್ಯ ಒದಗಿಸಲಾಗಿದೆ. ಒಟ್ಟಾರೆ ಖರೀದಿ ಮೊತ್ತದಲ್ಲಿ ₹350 ಕೋಟಿಗೂ ಹೆಚ್ಚು ತೆರಿಗೆ ಸರ್ಕಾರದ ಬೊಕ್ಕಸ ಸೇರುತ್ತದೆ' ಎಂದರು.

ಗೆಡ್ಡೆಗೆಣಸು ವೈವಿಧ್ಯ ಅನಾವರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಮೂರು ಸಾವಿರ ಮಠದ ಆವರಣದಲ್ಲಿರುವ ಮೂಜಗಂ ಸಭಾ ಭವನದಲ್ಲಿ ಶನಿವಾರ ಅಪರೂಪದ ಗೆಡ್ಡೆಗೆಣಸುಗಳ ಪ್ರದರ್ಶನ ನಡೆಯಿತು. ಸಹಜ ಸಮೃದ್ಧ, ಕ್ರಾಪ್ಸ್ ಫೋರ್ ಎಚ್‌ಡಿ ಸಂಸ್ಥೆ, ರೋಟರಿ ಕ್ಲಬ್ ಆಯೋಜಿಸಿದ್ದ ಈ ಪ್ರದರ್ಶನದಲ್ಲಿ ಜಾಗೃತಿಯನ್ನೂ ಮೂಡಿಸಲಾಯಿತು.

ಗುಲಾಬಿ, ಕೆಂಪು, ಬಿಳಿ, ನೀಲಿ, ಕಿತ್ತಳೆ, ಹಳದಿ ಬಣ್ಣದ ಸಿಹಿಗೆಣಸು, ನೀಲಿ ಹಾಗೂ ಬಿಳಿ ಕಾಚಲ್, ಕೆಸು, ಕಪ್ಪು ಅರಿಸಿನ, ಸುವರ್ಣ ಗೆಡ್ಡೆ, ತಾಯಿ ಶುಂಠಿ, ಕಪ್ಪು ಶುಂಠಿ, ಕಿಡ್ನಿ ಆಲೂಗೆಡ್ಡೆ, ಕೋವೆಗೆಡ್ಡೆ, ಭೂ ಆರೇಂಜ್ ಗೆಣಸು, ಉದ್ದನೆಯ ಕೆಸು, ಮರಗೆಣಸು ಕಡ್ಡಿ, ಗ್ರೇಟರ್ ಯಾಮ್, ಲೆಸ್ಸರ್ ಯಾಮ್, ಯಾಮ್ ಬೀನ್, ಕ್ಯಾನಾ, ಟ್ಯಾರೊ, ಏರಿಯಲ್ ಟ್ಯುಬರ್ ಕಂಡು ಜನರು ಬೆರಗಾದರು.

ಔಷಧ ಗುಣ: ಮೊಣಕಾಲು ನೋವು ನಿವಾರಕ ಗುಣ ಹೊಂದಿರುವ, ಕುಂಡಗಳಲ್ಲೂ ಬೆಳೆಯಬಹುದಾದ ಬಳ್ಳಿ ಆಲೂಗಡ್ಡೆ, ಪಿಲಿಪ್ಪೀನ್ಸ್‌ನ ರಾಷ್ಟ್ರೀಯ ಆಹಾರ ಹಾಗೂ ಕ್ಯಾನ್ಸರ್ ನಿರೋಧಕವಾದ ಪರ್ಪಲ್ ಯಾಮ್, ಮಾವಿನ ರುಚಿ, ವಾಸನೆವುಳ್ಳ ಮಾವಿನ ಶುಂಠಿ, ಧಾರವಾಡದ ಅಖಿಲ ಭಾರತ ಗೆಡ್ಡೆಗೆಣಸು ಸಂಶೋಧನಾ ಯೋಜನೆಯಡಿ ಅಭಿವೃದ್ಧಿಪಡಿಸಿದ ಅಪೌಷ್ಟಿಕತೆ ನಿವಾರಕ 'ಭೂಸೋನ', 'ಭೂ ಕೃಷ್ಣ' ಹಾಗೂ ಟಿಎಸ್–7 ತಳಿಯ ಸಿಹಿಗೆಣಸುಗಳು ಜನರು ಹಾಗೂ ರೈತರನ್ನು ಆಕರ್ಷಿಸಿದವು.

'ಅಪೌಷ್ಟಿಕತೆ ಸಮಸ್ಯೆಗೆ ವಿಟಮಿನ್ ಎ ಹಾಗೂ ಸಿ, ಜಿಂಕ್, ಕಬ್ಬಿಣದ ಕೊರತೆ ಕಾರಣ. ಈ ಅಂಶಗಳು ಯಥೇಚ್ಛವಾಗಿರುವ 'ಭೂಸೋನ', 'ಭೂ ಕೃಷ್ಣ', ಹಾಗೂ ಟಿಎಸ್–7 ತಳಿಯ ಸಿಹಿಗೆಣಸುಗಳನ್ನು ಧಾರವಾಡದ ಅಖಿಲ ಭಾರತ ಗೆಡ್ಡೆಗೆಣಸು ಸಂಶೋಧನಾ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ' ಎಂದು ಯೋಜನೆಯ ಮುಖ್ಯಸ್ಥ ಇಮಾಮ್ ಸಾಹೇಬ ಜತ್ತ ತಿಳಿಸಿದರು.

ಬಳ್ಳಿ ಆಲೂಗಡ್ಡೆ

ರಾಜ್ಯದ 590 ವಿದ್ಯಾರ್ಥಿಗಳಿಗೆ ರಿಲಯನ್ಸ್ ವಿದ್ಯಾರ್ಥಿ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಿಲಯನ್ಸ್ ಫೌಂಡೇಷನ್‌ನಿಂದ ನೀಡುವ ವಿದ್ಯಾರ್ಥಿ ವೇತನಕ್ಕೆ ಕರ್ನಾಟಕದ 590 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

2024–25ನೇ ಸಾಲಿಗೆ ಪ್ರಥಮ ವರ್ಷದ ಪದವಿ ಅಧ್ಯಯನ ಮಾಡುತ್ತಿರುವ ಒಂದು ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ ಐದು ಸಾವಿರ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಆಯ್ಕೆಯಾದವರಿಗೆ ₹2 ಲಕ್ಷದವರೆಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಆಯ್ಕೆಯಾಗಿರುವ ವಿದ್ಯಾರ್ಥಿಗಳ ಪೈಕಿ ಶೇ 70ರಷ್ಟು ಕುಟುಂಬಗಳ ವಾರ್ಷಿಕ ಆದಾಯವು ₹2.50 ಲಕ್ಷಕ್ಕಿಂತ ಕಡಿಮೆಯಿದೆ. ಈ ವಿದ್ಯಾರ್ಥಿ ವೇತನದಡಿ ವಿದ್ಯಾರ್ಥಿಯ ಬೋಧನಾ ಶುಲ್ಕ, ಹಾಸ್ಟೆಲ್ ವೆಚ್ಚ ಮತ್ತು ಇತರೆ ಶೈಕ್ಷಣಿಕ ಶುಲ್ಕವನ್ನು ಭರಿಸಲಾಗುತ್ತದೆ ಎಂದು ರಿಲಯನ್ಸ್ ಫೌಂಡೇಷನ್ ತಿಳಿಸಿದೆ.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು https://reliancefoundation.org/ug-scholarships-2024-25-results ವೆಬ್‌ಸೈಟ್‌ಗೆ ಭೇಟಿ ನೀಡಿ ಪರಿಶೀಲಿಸಬಹುದಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಡಾ. ಎನ್. ಕೃಷ್ಣಪ್ಪ
ಎಂ.ಬಿ.ಬಿ.ಎಸ್, ಎಂ.ಎಸ್.(ಆರ್ಥೋ)
29-12-2008
ಇಂತಿ : ಕುಟುಂಬವರ್ಗದವರು

ಸಂಕ್ಷಿಪ್ತ ಸುದ್ದಿ

ಜಿಎಸ್‌ಟಿ ಬಾಕಿ: ಝ್ಯುಡಸ್ ಕಂಪನಿಗೆ ನೋಟಿಸ್

ನವದೆಹಲಿ (ಪಿಟಿಐ): ಝ್ಯುಡಸ್ ವೆಲ್‌ನೆಸ್ ಕಂಪನಿಗೆ ₹56.33 ಕೋಟಿ ತೆರಿಗೆ ಪಾವತಿ ಬಾಕಿಗೆ ಸಂಬಂಧಿಸಿದಂತೆ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯದ (ಡಿಜಿಜಿಐ) ಸೂರತ್ ವಿಭಾಗದಿಂದ ನೋಟಿಸ್ ನೀಡಲಾಗಿದೆ.

ಈ ಮೊತ್ತದಲ್ಲಿ ಬಡ್ಡಿ ಹಾಗೂ ದಂಡವು ಒಳಗೊಂಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

2019ರ ಜನವರಿ 30ರಂದು ಹೈಂಜ್ ಇಂಡಿಯಾ ಕಂಪನಿಯು ಝ್ಯುಡಸ್ ಕಂಪನಿ ಜೊತೆಗೆ ವಿಲೀನಗೊಂಡಿತ್ತು. ಹೈಂಜ್ ಇಟಾಲಿಯಾ ಎಸ್‌ಪಿಎ ಕಂಪನಿಯಿಂದ ಬೌದ್ಧಿಕ ಹಕ್ಕುಗಳ ಸ್ವಾಧೀನಕ್ಕೆ ಸಂಬಂಧಿಸಿದಂತೆ ಜಿಎಸ್‌ಟಿ ಪಾವತಿ ಬಾಕಿ ಉಳಿದಿದೆ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ. ಕಂಪನಿಯ ಹಣಕಾಸು ಹಾಗೂ ಕಾರ್ಯಾಚರಣೆ ಸೇರಿ ಇತರೆ ಯಾವುದೇ ಚಟುವಟಿಕೆಗಳ ಮೇಲೆ ಈ ನೋಟಿಸ್ ಪರಿಣಾಮ ಬೀರುವುದಿಲ್ಲ ಎಂದು ಕಂಪನಿ ತಿಳಿಸಿದೆ.

ಜಿಎಸ್‌ಟಿ ವ್ಯತ್ಯಾಸ: ಮಹೀಂದ್ರ ಕಂಪನಿಯ ಕಚೇರಿಯಲ್ಲಿ ಶೋಧ

ನವದೆಹಲಿ (ಪಿಟಿಐ): ಜಿಎಸ್‌ಟಿ ಪಾವತಿ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಅಧಿಕಾರಿಗಳು ತಮಿಳುನಾಡಿನ ಚೆನ್ನೈನಲ್ಲಿರುವ ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಕಚೇರಿಯಲ್ಲಿ ಶೋಧ ನಡೆಸಿದ್ದಾರೆ.

ಜಿಎಸ್‌ಟಿ ಪಾವತಿಗೆ ಸಂಬಂಧಿಸಿದ ನ್ಯೂನತೆ ಬಗ್ಗೆ ಅಧಿಕಾರಿಗಳು ಕೆಲವು ದಾಖಲೆಗಳ ಬಗ್ಗೆ ತಪಾಸಣೆ ನಡೆಸಿದ್ದಾರೆ. ಇದಕ್ಕೆ ಅನ್ವಯಿಸುವ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದ್ದಾರೆ ಎಂದು ಕಂಪನಿಯು ಶನಿವಾರ ತಿಳಿಸಿದೆ.

ಸರಕು ಅಥವಾ ಸೇವೆ ಪೂರೈಕೆಗೆ ಸಂಬಂಧಿಸಿದ ವಹಿವಾಟು, ರಿವರ್ಸ್ ಚಾರ್ಜ್ ಹಾಗೂ ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಕುರಿತು ಪರಿಶೀಲನೆ ನಡೆಸಿದ್ದಾರೆ. ಅಧಿಕಾರಿಗಳು ಕೇಳಿದ ಎಲ್ಲಾ ದಾಖಲೆಗಳನ್ನು ಒದಗಿಸಲಾಗಿದೆ. ಹೆಚ್ಚುವರಿ ದಾಖಲೆಗಳನ್ನು ಜಿಎಸ್‌ಟಿ ಇಲಾಖೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದೆ.

ಈ ಶೋಧ ಕಾರ್ಯವು ಕಂಪನಿಯ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದೆ.

ಸರಪಂಚ್ ಸಂತೋಷ್ ಹತ್ಯೆ ಖಂಡಿಸಿ ಪ್ರತಿಭಟನೆ

ಮುಂಬೈ: ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಮಸಾಜೋಗ್ ಗ್ರಾಮದ ಸರಪಂಚ್ ಆಗಿದ್ದ ಸಂತೋಷ್ ದೇಶಮುಖ್ ಅವರ ಹತ್ಯೆಯನ್ನು ಪಕ್ಷಾತೀತವಾಗಿ ಖಂಡಿಸಿರುವ ನಾಯಕರು ನ್ಯಾಯಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಮರಾಠ ಸಮುದಾಯದ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ವಂಶಸ್ಥರಾದ ಯುವರಾಜ್ ಸಾಂಭಾಜಿ ರಾಜೆ ಛತ್ರಪತಿ ಅವರು ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಸಚಿವ ಧನಂಜಯ್ ಮುಂಡೆ ಅವರ ಆಪ್ತ ಸಹಾಯಕ ವಾಲ್ಮಿಕ್ ಕರಾಡ್, ಈ ಹತ್ಯೆಯ ಪ್ರಮುಖ ಸೂತ್ರಧಾರಿ ಎಂದು ಪ್ರತಿಪಕ್ಷಗಳು ಆರೋಪಿಸಿವೆ. ಈ ತಿಂಗಳ ಆರಂಭದಲ್ಲಿ ಸಂತೋಷ್ ಅವರನ್ನು ಅಪಹರಿಸಿ, ಹಿಂಸಿಸಿ ಹತ್ಯೆ ಮಾಡಲಾಗಿತ್ತು.

ಜೈಶಂಕರ್– ವಾಲ್ಟ್ಸ್ ಭೇಟಿ: ದ್ವಿಪಕ್ಷೀಯ ಮಾತುಕತೆ

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಅಮೆರಿಕ ಪ್ರವಾಸದಲ್ಲಿರುವ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈಗಾಗಲೇ ನೇಮಕ ಮಾಡಿರುವ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕೆಲ್ ವಾಲ್ಟ್ಸ್ ಅವರನ್ನು ಭೇಟಿಯಾಗಿ, ಮಾತುಕತೆ ನಡೆಸಿದ್ದಾರೆ.

ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧ ವೃದ್ಧಿ ಹಾಗೂ ಪ್ರಸಕ್ತ ಜಾಗತಿಕ ವಿಷಯಗಳ ಕುರಿತು ಈ ಇಬ್ಬರೂ ನಾಯಕರು ಚರ್ಚಿಸಿದರು. ಚುನಾಯಿತ ಅಧ್ಯಕ್ಷ ಟ್ರಂಪ್ ಅವರ ಮುಂದಿನ ಆಡಳಿತದ ಉನ್ನತಾಧಿಕಾರಿಯ ಜತೆಗೆ ಭಾರತದ ಸಚಿವರು ನಡೆಸಿದ ಮೊದಲ ಸಭೆ ಇದು.

'ನಮ್ಮ ದ್ವಿಪಕ್ಷೀಯ ಬಾಂಧವ್ಯದ ಬಗ್ಗೆ ಹಾಗೂ ಸದ್ಯದ ಜಾಗತಿಕ ವಿಷಯಗಳ ಕುರಿತು ವಿಸ್ತೃತ ಮಾತುಕತೆ ನಡೆಯಿತು. ಮೈಕೆಲ್ ವಾಲ್ಟ್ಸ್ ಅವರೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ' ಎಂದು ಜೈಶಂಕರ್ ಶುಕ್ರವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಾರತ- ಅಮೆರಿಕದ ಸಹಭಾಗಿತ್ವದ ನಿರಂತರ ಬೆಳವಣಿಗೆಯನ್ನು ಈ ಮಾತುಕತೆಯು ಮತ್ತಷ್ಟು ವೇಗಗೊಳಿಸುವ ವಿಶ್ವಾಸವಿದೆ' ಎಂದು ಅವರು ಹೇಳಿದ್ದಾರೆ.

ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಭಾರತೀಯ ರಾಯಭಾರಿಗಳ ಎರಡು ದಿನಗಳ ಸಮ್ಮೇಳನದಲ್ಲಿ ಜೈಶಂಕರ್ ಪಾಲ್ಗೊಂಡಿದ್ದರು.

ಗಾಳಿಪಟ ಹೈದರಾಬಾದ್‌ನಲ್ಲಿ ಮಕರ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ನಡೆಯುವ ಅಂತರರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಗಾಳಿಪಟದ ಚಕ್ರಗಳ ತಯಾರಿಕೆಯಲ್ಲಿ ಕಾರ್ಮಿಕರು ತೊಡಗಿದ್ದರು –ಪಿಟಿಐ ಚಿತ್ರ

ಗೆದ್ದ ನೆಲ ಕೈಬಿಡುವ ಸ್ಥಿತಿಯಲ್ಲಿ ಉಕ್ರೇನ್

ಕೀವ್ (ಎಪಿ): ರಷ್ಯಾದ ಮೇಲೆ ಪ್ರತಿ ದಾಳಿ ನಡೆಸಿ ಕುರ್ಸ್ಕ್‌ನ ಭೂಪ್ರದೇಶ ಆಕ್ರಮಿಸಿಕೊಂಡಿದ್ದ ಉಕ್ರೇನ್ ಸೇನೆ ಈಗ ಅದನ್ನು ಕಳೆದುಕೊಳ್ಳುವ ಸ್ಥಿತಿಗೆ ಸಿಲುಕಿದೆ.

ಕಳೆದ ಐದು ತಿಂಗಳಿನಿಂದ ಕುರ್ಸ್ಕ್‌ನ ಬಹುಭಾಗ ಹಿಡಿತಕ್ಕೆ ಪಡೆದಿದ್ದ ಉಕ್ರೇನ್ ಸೇನೆ ಈಗ ರಷ್ಯಾದ ಪ್ರತಿದಾಳಿಗೆ ತತ್ತರಿಸಿದ್ದು, ಸಾವಿರಾರು ಸೈನಿಕರು ಸತ್ತಿರುವ ಶಂಕೆ ಇದೆ. ಗಾಯಾಳು ಸೈನಿಕರು ಮತ್ತು ಮೃತಪಟ್ಟ ಸೈನಿಕರ ಶವಗಳನ್ನು ಸ್ಥಳಾಂತರಿಸಲು ಸಾಧ್ಯವಾಗದೆ, ಉಕ್ರೇನ್ ಸೇನೆ ಹತಾಶೆಗೆ ಸಿಲುಕಿದೆ ಎನ್ನುವ ಮಾಹಿತಿ ಹೊರಬಿದ್ದಿದೆ.

'ಇಲ್ಲಿ ಯುದ್ಧ ತುಂಬಾ ತೀವ್ರತೆ ಪಡೆದಿದೆ. ಸತ್ತವರ ಶವ ಸ್ಥಳಾಂತರಿಸಲು ಉಕ್ರೇನ್ ಸೇನಾ ಕಮಾಂಡರ್‌ಗಳಿಗೆ ಸಾಧ್ಯವಾಗುತ್ತಿಲ್ಲ. ಸಂವಹನದ ಕೊರತೆ ಮತ್ತು ಕಳಪೆ ತಂತ್ರಗಾರಿಕೆಯಿಂದಾಗಿ ಬಹಳಷ್ಟು ಜೀವಹಾನಿಯಾಗಿದೆ. ಸೇನಾ ತುಕಡಿಗಳಿಗೂ ಪ್ರತಿದಾಳಿಗೆ ಮಾರ್ಗಗಳು ಇಲ್ಲದಂತಾಗಿದೆ' ಎಂದು ಏಳು ಮುಂಚೂಣಿ ಸೈನಿಕರು ಮತ್ತು ಕಮಾಂಡರ್‌ಗಳು ತಮ್ಮ ಹೆಸರು ಬಹಿರಂಗಪಡಿಸಲು ಇಚ್ಛಿಸದೆ, ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಉಕ್ರೇನ್ ಸೇನೆಯ ಮಿಂಚಿನ ಆಕ್ರಮಣದ ಅರಿವಿಲ್ಲದೆ ಕುರ್ಸ್ಕ್‌ನಲ್ಲಿ ಹಿಡಿತ ಕಳೆದುಕೊಂಡಿದ್ದ ರಷ್ಯಾ, ನಂತರ ತನ್ನ ಮಿತ್ರರಾಷ್ಟ್ರ ಉತ್ತರ ಕೊರಿಯಾದ ಸೈನಿಕರು ಸೇರಿದಂತೆ 50 ಸಾವಿರಕ್ಕೂ ಹೆಚ್ಚು ಸೈನಿಕರನ್ನು ಈ ಪ್ರದೇಶಕ್ಕೆ ನಿಯೋಜಿಸಿದೆ. ಉಕ್ರೇನ್ ಆಗಸ್ಟ್‌ನಲ್ಲಿ ಕುರ್ಸ್ಕ್‌ನಲ್ಲಿ ವಶಪಡಿಸಿಕೊಂಡ 984 ಚದರ ಕಿಲೋಮೀಟರ್ ಜಾಗದಲ್ಲಿ ಶೇ 40ರಷ್ಟನ್ನು ಈಗಾಗಲೇ ಕಳೆದುಕೊಂಡಿದೆ ಎನ್ನಲಾಗುತ್ತಿದೆ.

ಅಜರ್‌ಬೈಜಾನ್ ವಿಮಾನ ಪತನ: ಪುಟಿನ್ ಕ್ಷಮೆಯಾಚನೆ

ಮಾಸ್ಕೊ: ಅಜರ್‌ಬೈಜಾನ್ ಏರ್‌ಲೈನ್ಸ್ ವಿಮಾನಯಾನ ಕಂಪನಿಗೆ ಸೇರಿದ ವಿಮಾನವು ಕಜಕಿಸ್ತಾನದಲ್ಲಿ ಪತನಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ 'ದುರಂತ ಘಟನೆ' ಎಂದು ಬಣ್ಣಿಸಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಈ ಸಂಬಂಧ ಕ್ಷಮೆಯಾಚಿಸಿದ್ದಾರೆ.

ಈ ವಿಮಾನವು ಅಜರ್‌ಬೈಜಾನ್ ರಾಜಧಾನಿ ಬಾಕುವಿನಿಂದ ರಷ್ಯಾದ ಗ್ರೋಜ್ನಿ ನಗರಕ್ಕೆ ತೆರಳುತ್ತಿತ್ತು. ವಿಮಾನದಲ್ಲಿ ಇದ್ದ 67 ಜನರ ಪೈಕಿ 38 ಮಂದಿ ಸಾವಿಗೀಡಾಗಿದ್ದಾರೆ. 29 ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು.

'ಉಕ್ರೇನ್ ಡ್ರೋನ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ರಷ್ಯಾ ವಾಯುರಕ್ಷಣಾ ವ್ಯವಸ್ಥೆಯು ಪ್ರತಿದಾಳಿ ನಡೆಸಿತ್ತು. ತಕ್ಷಣವೇ ದಾಳಿಯನ್ನು ನಿಲ್ಲಿಸಲಾಗಿತ್ತು. ಈ ಪೈಕಿ ಒಂದು ರಾಕೆಟ್ ಗ್ರೋಜ್ನಿ ಮೇಲೆ ಹಾರುತ್ತಿದ್ದ ಅಜರ್‌ಬೈಜಾನ್ ವಿಮಾನಕ್ಕೆ ಹೊಡೆದಿದೆ' ಎಂದು ರಷ್ಯಾ ಸರ್ಕಾರ ಅಧಿಕೃತವಾಗಿ ಹೇಳಿಕೆ ನೀಡಿದೆ.

ಬಾಹ್ಯ ಶಸ್ತ್ರಾಸ್ತ್ರ ದಾಳಿಯಿಂದ ವಿಮಾನ ಪತನಗೊಂಡಿದೆ ಎಂದು ಅಮೆರಿಕ ಹಾಗೂ ಅಜರ್‌ಬೈಜಾನ್‌ನ ಸಚಿವರು ಪ್ರತ್ಯೇಕ ಹೇಳಿಕೆ ನೀಡಿದ್ದರು.

ಗಾಜಾ ಆಸ್ಪತ್ರೆಯ ನಿರ್ದೇಶಕ ಇಸ್ರೇಲ್ ವಶಕ್ಕೆ

ದೀರ್ ಅಲ್–ಬಲಾಹ್ (ಎಪಿ): ಉತ್ತರ ಗಾಜಾದ ಮೇಲೆ ದಾಳಿ ನಡೆಸಿರುವ ಇಸ್ರೇಲ್ ಸೇನೆಯು ಆಸ್ಪತ್ರೆಯೊಂದರ ನಿರ್ದೇಶಕರೊಬ್ಬರನ್ನು ವಶಕ್ಕೆ ಪಡೆದಿದೆ. ದಾಳಿಯಲ್ಲಿ ಮಕ್ಕಳು ಸೇರಿದಂತೆ 9 ಮಂದಿ ಮೃತಪಟ್ಟಿದ್ದಾರೆ.

ಕಮಲ್ ಅಡ್ವಾನ್ ಆಸ್ಪತ್ರೆಯ ನಿರ್ದೇಶಕ ಡಾ.ಹುಸ್ಸಮ್ ಅಬು ಸಫಿಯಾ ಅವರನ್ನು ಮತ್ತು ಇತರ ಸಿಬ್ಬಂದಿಯನ್ನು ಇಸ್ರೇಲ್ ಪಡೆ ಶುಕ್ರವಾರ ಬಂಧಿಸಿ ವಿಚಾರಣಾ ಕೇಂದ್ರದಲ್ಲಿ ಇಟ್ಟುಕೊಂಡಿದೆ ಎಂದು ಗಾಜಾದ ಆರೋಗ್ಯ ಇಲಾಖೆ ಹೇಳಿದೆ.

ಆಸ್ಪತ್ರೆಗೆ ನುಗ್ಗಿದ ಇಸ್ರೇಲ್ ಸೈನಿಕರು ಸಿಬ್ಬಂದಿ ಮತ್ತು ರೋಗಿಗಳು ಹೊರಹೋಗುವಂತೆ ಒತ್ತಾಯಿಸಿದ್ದಾರೆ ಎಂದು ತಿಳಿಸಿದೆ.

ಹುಸ್ಸಮ್ ಅಬು ಅವರನ್ನು ವಶಕ್ಕೆ ಪಡೆದಿರುವ ಬಗ್ಗೆ ಇಸ್ರೇಲ್ ಸೇನೆ ಪ್ರತಿಕ್ರಿಯೆ ನೀಡಿಲ್ಲ. ಆಸ್ಪತ್ರೆಯ ಒಳಗೆ ನುಗ್ಗಿ ದಾಳಿ ನಡೆಸಲಾಗಿಲ್ಲ, ಆದರೆ ಜನರು ಹೊರಗೆ ಹೋಗುವಂತೆ ಆದೇಶಿಸಲಾಗಿದೆ ಎಂದು ಇಸ್ರೇಲ್ ಸೇನೆ ಶುಕ್ರವಾರ ಹೇಳಿತ್ತು.

ಕಳೆದ 24 ಗಂಟೆಗಳಲ್ಲಿ 48 ಜನ ಇಸ್ರೇಲ್ ದಾಳಿಯಿಂದಾಗಿ ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಇಲಾಖೆ ತಿಳಿಸಿದೆ.

ಉತ್ತರ ಗಾಜಾಕ್ಕೆ ನುಗ್ಗಲು ತಯಾರಾಗಿದ್ದ ಇಸ್ರೇಲ್ ಸೇನಾ ವಾಹನ – ಎಎಫ್‌ಪಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿತುನ್: 9112959375.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★||ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್||★ ಕೇರಳ_ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ_ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ_ನಂಬಿ ಕರೆಮಾಡಿ. ಪಂಡಿತ್. ಅಮರ್‌ನಾಥ್‌ಭಟ್. 9972407122

ಸ್ತ್ರೀ- ಪುರುಷ ವಶೀಕರಣ, ಮಾಟ ಮಂತ್ರ, ಶತ್ರು ನಾಶ,ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ. ಕೇರಳದ ಜ್ಯೋತಿಷ್ಯರು, ಸುಮಂತ್: 8722756967.

ಮೂಲ ನಕ್ಷತ್ರದವರಿಗೆ ಪರಿಹಾರ (ಉಚಿತ) 30-12-2024 ರಂದು ಪದ್ಮನಾಭನಗರದ ಶ್ರೀ ಸಾಯಿ ಬಾಬ ಮಂದಿರದಲ್ಲಿ ಸಂಜೆ 5 ಗಂಟೆಗೆ 'ಭದ್ರಕಾಳಿ ಹೋಮ' ನಡೆಯುವುದು. ಈ ನಕ್ಷತ್ರದವರು ಭಾಗವಹಿಸುವುದರಿಂದ ದೋಷ ಪರಿಹಾರವಾಗಿ ಶುಭವಾಗುವುದು. ಸಂಪರ್ಕಿಸಿ: ಕೇಶವಮೂರ್ತಿ: 9972852235

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

17.02.2025ರಿಂದ 17 ದಿನಗಳ ಭುವನೇಶ್ವರ್,ಕೋನಾರ್ಕ್, ಪೂರಿಜಗನ್ನಾಥ್,ಗಯಾ, ನೇಪಾಳ,ಕಾಶಿ, ಅಲಹಾಬಾದ್, ಅಯೋಧ್ಯೆ. ಮಹಾಶಿವರಾತ್ರಿಯಂದು ನೇಪಾಳ ಪಶುಪತಿನಾಥ್ ದರ್ಶನ, ಪೋಖ್ರಾ, ಮುಕ್ತಿನಾಥ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು-70. 9342287551, 8050629305

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಜೀನ್ಸ್ ಧರಿಸಿದ್ದ ಕಾರ್ಲ್‌ಸನ್ ಅನರ್ಹ

ವಿಶ್ವ ರ‍್ಯಾಪಿಡ್, ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್ • ವಸ್ತ್ರಸಂಹಿತೆ ಉಲ್ಲಂಘನೆಗೆ ಕ್ರಮ

ಅರ್ಜುನ್ ಇರಿಗೇಶಿ

ನ್ಯೂಯಾರ್ಕ್ (ಪಿಟಿಐ): ಫಿಡೆ ವಸ್ತ್ರಸಂಹಿತೆ ಉಲ್ಲಂಘನೆಗಾಗಿ ಐದು ಬಾರಿಯ ವಿಶ್ವ ಚಾಂಪಿಯನ್ ಹಾಗೂ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಮೊದಲು ದಂಡ ವಿಧಿಸಿ, ನಂತರ ವಿಶ್ವ ರ‍್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಿಂದ ಅನರ್ಹಗೊಳಿಸಲಾಯಿತು.

ವಾಲ್ ಸ್ಟ್ರೀಟ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಜೀನ್ಸ್ ಪ್ಯಾಂಟ್ ಧರಿಸಿ ಆಡಲು ಬಂದಿದ್ದ ಹಾಲಿ ಚಾಂಪಿಯನ್ ಕಾರ್ಲ್‌ಸನ್ ಅವರಿಗೆ ಮೊದಲು ಸುಮಾರು ₹17000 ($200) ದಂಡ ವಿಧಿಸಲಾಯಿತು. ಟೂರ್ನಿಯ ವಸ್ತ್ರಸಂಹಿತೆ ನಿಯಮಗಳ ಪ್ರಕಾರ ಆಟಗಾರರು ಜೀನ್ಸ್ ಧರಿಸುವಂತಿಲ್ಲ. ಎಂಟನೇ ಸುತ್ತಿನ ನಂತರ ಪ್ಯಾಂಟ್ ಬದಲಾಯಿಸಿ ಬರುವಂತೆ ಅವರಿಗೆ ಚೀಫ್ ಆರ್ಬಿಟರ್ ಅಲೆಕ್ಸ್ ಹೊಲೊವ್ಝಾಕ್ ಅವರು ವಿನಂತಿಸಿದ್ದರು. ಆದರೆ ಅದಕ್ಕೆ ಮ್ಯಾಗ್ನಸ್ ನಿರಾಕರಿಸಿದ ಕಾರಣ ಅನರ್ಹಗೊಳಿಸಲಾಯಿತು.

ಒಂಬತ್ತನೇ ಸುತ್ತಿನ ಪೇರಿಂಗ್ (ಆಟಗಾರರ ಮುಖಾಮುಖಿ) ವೇಳೆ ಅವರ ಹೆಸರನ್ನು ಸೇರ್ಪಡೆಗೊಳಿಸಲಿಲ್ಲ. ಅವರು ಕಳೆದ ಎರಡು ವರ್ಷಗಳಿಂದ ಈ ಚಾಂಪಿಯನ್‌ಷಿಪ್‌ನಲ್ಲಿ ವಿಜೇತರಾಗಿದ್ದಾರೆ.

ಮರುದಿನದಿಂದ ವಸ್ತ್ರ ಸಂಹಿತೆ ಪಾಲನೆ ಮಾಡಲು ಒಪ್ಪುವುದಾಗಿ ಚೆಸ್ ಲೋಕದ ದಿಗ್ಗಜ ಆಟಗಾರ ಕಾರ್ಲ್ ಸನ್ ತಿಳಿಸಿದರು. ಆದರೆ ತಕ್ಷಣಕ್ಕೆ ಬದಲಾಯಿಸಲು ಒಪ್ಪಲಿಲ್ಲ. ಹೀಗಾಗಿ ಅವರನ್ನು ಅನರ್ಹಗೊಳಿಸಲಾಯಿತು.

ವೃತ್ತಿಪರತೆ ಕಾಪಾಡುವ ದೃಷ್ಟಿಯಿಂದ ಭಾಗವಹಿಸುವ ಎಲ್ಲ ಆ ಟಗಾರರಿಗೆ ವಸ್ತ್ರಸಂಹಿತೆ ಬಗ್ಗೆ ಮೊದಲೇ ಮಾಹಿತಿ ನೀಡಲಾಗಿತ್ತು ಎಂದು 'ಎಕ್ಸ್'ನಲ್ಲಿ ಮಾಡಿದ ಪೋಸ್ಟ್‌ನಲ್ಲಿ ವಿಶ್ವ ಚೆಸ್ ಸಂಸ್ಥೆಯಾದ ಫಿಡೆ ತಿಳಿಸಿದೆ.

ವಸ್ತ್ರಸಂಹಿತೆಯನ್ನು ಫಿಡೆ ಅಥ್ಲೀಟ್ಸ್ ಕಮಿಷನ್ ರೂಪಿಸಿದೆ. ಕೆಲ ವರ್ಷ ಗಳಿಂದ ಈ ನಿಯಮ ಜಾರಿ ಯಲ್ಲಿದೆ ಆಟಗಾರರಿಗೆ ನೀಡಲಾಗಿರುವ ವಾಸ್ತವ್ಯದ ಸ್ಥಳ ನಡೆದುಕೊಂಡು ಹೋಗಬಹುದಾದ ಅಂತರದಲ್ಲಿದೆ. ಹೀಗಾಗಿ ನಿಯಮಕ್ಕೆ ಬದ್ಧರಾಗಿರುವುದು ಸ್ಪರ್ಧಿಗಳಿಗೆ ಕಷ್ಟವಾಗುವುದಿಲ್ಲ ಎಂದು ಹೇಳಿದೆ.

'ಇಂದು ಕಾರ್ಲ್‌ಸಬ್ ಅವರು ಜೀನ್ಸ್ ಧರಿಸಿ ವಸ್ತ್ರಸಂಹಿತೆ ಉಲ್ಲಂಘಿಸಿದ್ದಾರೆ. ಈ ಕೂಟಕ್ಕೆ ಹಲವು ವರ್ಷಗಳಿಂದ ಮಾಡಿರುವ ನಿಯಮಗಳ ಪ್ರಕಾರ ಜೀನ್ಸ್ ಧರಿಸುವಂತಿಲ್ಲ. ಚೀಫ್ ಆರ್ಬಿಟರ್ ಅವರು ಕಾರ್ಲ್‌ಸನ್ ಅವರಿಗೆ ಉಲ್ಲಂಘನೆ ಬಗ್ಗೆ ಮಾಹಿತಿ ನೀಡಿ 200 ಡಾಲರ್ ದಂಡ ವಿಧಿಸಿದ್ದಾರೆ. ಅವರಿಗೆ ಜೀನ್ಸ್ ಬದಲಾಯಿಸಿ ಬರುವಂತೆ ತಿಳಿಸಿದ್ದಾರೆ. ಆದರೆ ಕಾರ್ಲ್‌ಸನ್ ನಿರಾಕರಿಸಿದ್ದಾರೆ. 9ನೇ ಸುತ್ತಿನ ಮುಖಾಮುಖಿಯಲ್ಲಿ ಅವರ ಹೆಸರು ಉಳಿಸಲಿಲ್ಲ. ಯಾರೂ ನಿಯಮಗಳಿಗೆ ಅತೀತರಲ್ಲ. ಅದು ಎಲ್ಲರಿಗೂ ಒಂದೇ' ಎಂದು ಫಿಡೆ ತಿಳಿಸಿದೆ.

ಇದಕ್ಕೆ ಮೊದಲು ರಷ್ಯಾದ ಗ್ರ್ಯಾಂಡ್ ಮಾಸ್ಟರ್ ಇಯಾನ್ ನಿಪೊಮ್‌ನಿಷಿ ಅವರಿಗೂ ದಂಡ ವಿಧಿಸಲಾಯಿತು. ಆದರೆ ಅವರು ಜೀನ್ಸ್ ಪ್ಯಾಂಟ್ ಬದ ಲಾಯಿಸಿ ಬಂದರು.

ಜಂಟಿ ಅಗ್ರಸ್ಥಾನ ಹಂಚಿಕೊಂಡ ಅರ್ಜುನ್

ನ್ಯೂಯಾರ್ಕ್ (ಪಿಟಿಐ): ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚಾಂಪಿಯನ್‌ಷಿಪ್‌ನ ಎರಡನೇ ದಿನವೂ ಸ್ಫೂರ್ತಿಯುತ ಪ್ರದರ್ಶನ ನೀಡಿದ ಭಾರತದ ಅರ್ಜುನ್ ಇರಿಗೇಶಿ, ಇತರ ಮೂವರು ಆಟಗಾರರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಅರ್ಜುನ್ ಜೊತೆ ರಷ್ಯಾದ ವ್ಲೊಲೊಡರ್ ಮುರ್ಝಿನ್, ಅಲೆಕ್ಸಾಂಡರ್ ಗ್ರಿಸ್ಚುಕ್, ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡೂಡ ಅವರು ಶುಕ್ರವಾರದ ಕೊನೆಗೆ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿ (9 ಸುತ್ತುಗಳ ನಂತರ) ಮುನ್ನಡೆ ಹಂಚಿಕೊಂಡಿದ್ದಾರೆ. ಒಟ್ಟು 13 ಸುತ್ತುಗಳಿವೆ.

ಡ್ರೆಸ್ ಕೋಡ್ ಉಲ್ಲಂಘಿಸಿ ಅನರ್ಹಗೊಂಡ ನಾರ್ವೆಯ ಆಟಗಾರ, ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಅನರ್ಹತೆ ದಿನದ ಚರ್ಚೆಯ ವಿಷಯವಾಯಿತು.

ಕಾರ್ಲ್‌ಸನ್ ಅನುಪಸ್ಥಿತಿಯಲ್ಲಿ ಅರ್ಜುನ್ ಅವರಿಗೆ ಗೆಲ್ಲುವ ಅವಕಾಶ ಹೆಚ್ಚಿದೆ. ಅರ್ಜುನ್ ಅವರು ಹತ್ತನೇ ಸುತ್ತಿನಲ್ಲಿ ಗ್ರಿಸ್ಚುಕ್ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ವಿಭಾಗದಲ್ಲೂ ಭಾರತಕ್ಕೆ ಪದಕದ ಸಾಧ್ಯತೆ ಉಜ್ವಲವಾಗಿದೆ. ಕೋನೇರು ಹಂಪಿ ಚೇತರಿಕೆಯ ಪ್ರದರ್ಶನ ನೀಡಿದ್ದು, ಸ್ವದೇಶದ ಡಿ.ಹಾರಿಕಾ ಮತ್ತು ಚೀನಾದ ವೆನ್‌ಜುನ್ ಜೊತೆ 6.5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಎರಡನೇ ದಿನ ಗಮನಸೆಳೆದ ಅರ್ಜುನ್ ಮೊದಲು ಅಮೆರಿಕದ ರಾಬ್ಸನ್ ರೇ ಅವರನ್ನು ಸೋಲಿಸಿದರು. ನಂತರ ಅರ್ಮೇನಿಯಾದ ಶಾಂತ್ ಸರ್ಗಿಸಿನ್ ಅವರನ್ನು ಸೋಲಿಸಿದರು. ಮುರ್ಝಿನ್ ಮತ್ತು ಡೂಡ ಜೊತೆ ಡ್ರಾ ಮಾಡಿಕೊಂಡರು.

ಮಯಂಕ್ ಮಿಂಚಿನ ಶತಕ: ಕರ್ನಾಟಕದ ಜಯದ ಓಟ

ಮಯಂಕ್ ಅಗರ್‌ವಾಲ್

ಅಹಮದಾಬಾದ್: ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಪಂದ್ಯದಲ್ಲಿ ಶತಕ ದಾಖಲಿಸಿದರು. ಕರ್ನಾಟಕ ತಂಡದ ಗೆಲುವಿನ ಓಟವೂ ಮುಂದುವರಿಯಿತು.

ಶನಿವಾರ ಇಲ್ಲಿ ನಡೆದ ಸಿ ಗುಂಪಿನ ಪಂದ್ಯದಲ್ಲಿ ಅವರು 45 ಎಸೆತಗಳಲ್ಲಿ ಅಜೇಯ ಶತಕ ಹೊಡೆದರು. ಕರ್ನಾಟಕ ತಂಡ 10 ವಿಕೆಟ್ ಗಳಿಂದ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಉಳಿಯಿತು.

ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಾಸುಕಿ ಕೌಶಿಕ್ (30ಕ್ಕೆ4) ಮತ್ತು ಹಾರ್ದಿಕ್ ರಾಜ್ (30ಕ್ಕೆ4) ಅವರಿಬ್ಬರ ಅಮೋಘ ಬೌಲಿಂಗ್‌ನಿಂದಾಗಿ ಅರುಣಾಚಲ ಪ್ರದೇಶವು 43.2 ಓವರ್‌ಗಳಲ್ಲಿ 166 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಕರ್ನಾಟಕ ತಂಡವು 14.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 171 ರನ್ ಗಳಿಸಿ ಜಯಿಸಿತು.

ಬಲಿಷ್ಠ ಕರ್ನಾಟಕ ತಂಡದ ಎದುರು ಅರುಣಾಚಲ ತಂಡವು ಕೇವಲ 46 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಆದರೆ ಹೋರಾಟ ತೋರಿದ ಮಧ್ಯಮ ಕ್ರಮಾಂಕದ ಬ್ಯಾಟರ್ ಅಭಿನವ್ ಸಿಂಗ್ (ಔಟಾಗದೆ 71; 100ಎ, 4X7, 6X1) ಮತ್ತು ಹಾರ್ದಿಕ್ ವರ್ಮಾ (38; 82ಎ, 4X2) ತಂಡದ ಬಲ ತುಂಬುವ ಪ್ರಯತ್ನ ಮಾಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ಮಯಂಕ್ ಅವರೊಂದಿಗೆ ಅಭಿನವ್ ಮನೋಹರ್ (ಔಟಾಗದೆ 66; 41ಎ, 4X4, 6X4) ಇನಿಂಗ್ಸ್ ಆರಂಭಿಸಿದರು. ಇಬ್ಬರೂ ಬೀಸಾಟವಾಡಿದ್ದರಿಂದ ಇನಿಂಗ್ಸ್ ಬೇಗ ಮುಗಿಯಿತು.

ಸಂಕ್ಷಿಪ್ತ ಸ್ಕೋರು: ಅರುಣಾಚಲಪ್ರದೇಶ: 43.2 ಓವರ್‌ಗಳಲ್ಲಿ 166 (ರಾಜೇಂದ್ರ ಸಿಂಗ್ 30, ಹಾರ್ದಿಕ್ ವರ್ಮಾ 38, ಅಭಿನವ್ ಸಿಂಗ್ 71, ಹಾರ್ದಿಕ್ ರಾಜ್ 30ಕ್ಕೆ4, ವಿ. ಕೌಶಿಕ್ 30ಕ್ಕೆ4, ಮಯಂಕ್ ಅಗರವಾಲ್ 8ಕ್ಕೆ1) ಕರ್ನಾಟಕ: 14.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 171 (ಅಭಿನವ್ ಮನೋಹರ ಅಜೇಯ 66, ಮಯಂಕ್ ಅಗರವಾಲ್ ಅಜೇಯ 100)

ಫಲಿತಾಂಶ: ಕರ್ನಾಟಕ ತಂಡಕ್ಕೆ 10 ವಿಕೆಟ್ ಜಯ.

ವೃಂದಾ, ಅನ್ವಯ್‌ಗೆ ಪ್ರಶಸ್ತಿ

ಕೆಎಸ್‌ಸಿಎ ವಾರ್ಷಿಕ ಪ್ರಶಸ್ತಿ ಪ್ರದಾನ: ಸರ್ ಸಯ್ಯದ್ ಕ್ಲಬ್ ತಂಡಕ್ಕೆ ಗೌರವ

ಪ್ರಜಾವಾಣಿ ವಾರ್ತೆ

ವೃಂದಾ ದಿನೇಶ್

ಬೆಂಗಳೂರು: ವೃಂದಾ ದಿನೇಶ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಮನ ಸೆಳೆದರು. ಅವರು ಒಟ್ಟು ನಾಲ್ಕು ಟ್ರೋಫಿಗಳನ್ನು ತಮ್ಮದಾಗಿಸಿಕೊಂಡರು.

ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಮಹಿಳೆಯರ ತಂಡದ ವೃಂದಾ 2022–23ರಲ್ಲಿ ಸೀನಿಯರ್ ಏಕದಿನ ಕ್ರಿಕೆಟ್‌ನಲ್ಲಿ ಹೆಚ್ಚು ರನ್ ಗಳಿಕೆ, 23 ವರ್ಷದೊಳಗಿನವರ ಟಿ20 ಟ್ರೋಫಿ, ಸೀನಿಯರ್ ಟಿ20 ಟ್ರೋಫಿ ಮತ್ತು ಏಕದಿನ ಟ್ರೋಫಿ ಯಲ್ಲಿ ಉತ್ತಮ ಆಟಗಾರ್ತಿ ಪ್ರಶಸ್ತಿಗಳನ್ನುತಮ್ಮದಾಗಿಸಿಕೊಂಡರು.

2023–24ನೇ ಸಾಲಿನಲ್ಲಿ ವಿಜಯ್ ಮರ್ಚಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ (357 ರನ್) ಬ್ಯಾಟರ್ ಪ್ರಶಸ್ತಿ ಅನ್ವಯ್ ದ್ರಾವಿಡ್ ಅವರ ಪಾಲಾಯಿತು.

ಪ್ರಶಸ್ತಿ ವಿಜೇತರು 2022-23 ಋತು: ವಿಶೇಷ ಪ್ರಶಸ್ತಿಗಳು: ವಿಜಯ್ ಮರ್ಚಂಟ್ ಟ್ರೋಫಿ (16 ವರ್ಷದವರು): ಸಿದ್ಧೇಶ್ ಎ ಅಸಲಕರ್.

19 ವರ್ಷದೊಳಗಿನವರ ವಿನೂ ಮಂಕಡ್ ಟ್ರೋಫಿ: ಯಶೋವರ್ಧನ್ ಪರಂತಾಪ್. ಕೂಚ್ ಬಿಹಾರ್ ಟ್ರೋಫಿ: ವಿಶಾಲ್ ಓನತ್. 25 ವರ್ಷದವರುಉ ರಾಜ್ಯ ಎ ಏಕದಿನ ಟ್ರೋಫಿ: ಕೆ.ವಿ. ಅನೀಶ್. 25 ವರ್ಷದೊಳಗಿನ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ: ಲೋಚನ್ ಅಪ್ಪಣ್ಣ. ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ಮನೀಷ್ ಪಾಂಡೆ. ವಿಜಯ್ ಹಜಾರೆ ಟ್ರೋಫಿ: ನಿಕಿನ್ ಜೋಸ್. ರಣಜಿ ಟ್ರೋಫಿ: ಮಯಂಕ್ ಅಗರವಾಲ್.

ಬಾಲಕಿ, ಮಹಿಳೆಯರ ವಿಭಾಗ (ಹೆಚ್ಚು ರನ್ ಗಳಿಸಿದವರು): ಏಕದಿನ ಟ್ರೋಫಿ: ಶ್ರೇಯಾ ಎಸ್ ಚವಾಣ್. 19 ವರ್ಷದೊಳಗಿನವರ ಟಿ20 ಟ್ರೋಫಿ: ರೋಶಿನಿ ಕಿರಣ, 19 ವರ್ಷದೊಳಗಿನ ಏಕದಿನ ಟ್ರೋಫಿ: ರೋಷಿನಿ ಕಿರಣ್, ಸೀನಿಯರ್ ಟಿ20 ಟ್ರೋಫಿ: ಶುಭಾ ಸತೀಶ್. ಸೀನಿಯರ್ ಏಕದಿನ ಟ್ರೋಫಿ: ವೃಂದಾ ದಿನೇಶ್. ಗರಿಷ್ಠ ವಿಕೆಟ್ ಗಳಿಸಿದವರು (ಬಾಲಕ-ಪುರುಷರು): 16 ವರ್ಷದೊಳಗಿನವರ ಮರ್ಚಂಟ್ ಟ್ರೋಫಿ: ಸಮ್ಯಕ್ ವೆಲ್ಲಾಲೋರ್. 19 ವರ್ಷದ ವಿನೂ ಮಂಕಡ್ ಟ್ರೋಫಿ: ಆರ್. ಧನುಷ್ ಗೌಡ,. 19 ವರ್ಷದೊಳಗಿನ, ಕೂಚ್ ಬಿಹಾರ್ ಟ್ರೋಫಿ: ಮೊಹಸಿನ್ ಖಾನ್. 25 ವರ್ಷದೊಳಗಿನವರ ರಾಜ್ಯ ಎ ಏಕದಿನ ಟ್ರೋಫಿ: ರಿಷಿ ಬೋಪಣ್ಣ. ಕರ್ನಲ್ ಸಿಕೆ ನಾಯ್ಡು ಟ್ರೋಫಿ: ರೋಹಿತ್ ಕುಮಾರ್ ಎಸಿ. ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ವಿದ್ವತ್ ಕಾವೇರಪ್ಪ. ವಿಜಯ್ ಹಜಾರೆ ಟ್ರೋಫಿ : ವಿ. ಕೌಶಿಕ್, ರಣಜಿ ಟ್ರೋಫಿ: ವೈಶಾಖ ವಿಜಯಕುಮಾರ್.

ಮಹಿಳೆ/ಬಾಲಕಿಯರು: 15 ವರ್ಷದೊಳಗಿನವರ ಏಕದಿನ ಟ್ರೋಫಿ: ವಂದಿತಾ ಕೆ ರಾವ್. 19 ವರ್ಷದೊಳಗಿನವರ ಏಕದಿನ ಟ್ರೋಫಿ: ನಿಕಿ ಪ್ರಸಾದ್, ಸೀನಿಯರ್ ಟಿ20ಟ್ರೋಫೀ: ಸಹನಾ ಎಸ್ ಪವಾರ್. ಸೀನಿಯರ್ ಏಕದಿನ ಟ್ರೋಫಿ: ಶ್ರೇಯಾಂಕಾ ಆರ್. ಪಾಟೀಲ.

ಸ್ಥಳೀಯ ಟೂರ್ನಿಗಳು: ಎಸ್.ಎ. ಶ್ರೀನಿವಾಸನ್ ಸ್ಮಾರಕ 25 ವರ್ಷದೊಳಗಿನವರ ಟೂರ್ನಿ: ಪರೀಕ್ಷಿತ್ ಒಕ್ಕುಂದ (ಧಾರವಾಡವಲಯ), ಅತಿ ಹೆಚ್ಚು ವಿಕೆಟ್ ಗಳಿಕೆ: ಲಿಕಿತ್ ಬನ್ನೂರ (ಕಂಬೈನ್ಡ್ ಸಿಟಿ ಇಲೆವನ್).19 ವರ್ಷದೊಳಗಿನವರು: ಅಂತರ ಕ್ಲಬ್ ಟೂರ್ನಿ: ವಿಜೇತರು: ಸ್ವಸ್ತಿಕ್ ಯೂನಿಯ್ ಸಿಸಿ (2), ರನ್ನರ್ ಅಪ್: ವಿಜಯಾ ಸಿಸಿ. ಅಂತರ ವಲಯ ಟೂರ್ನಿ: ಗರಿಷ್ಠ ರನ್ ಸ್ಕೋರರ್: ರೋಹನ್ ಎಂ. ಯರೇಸಾಮಿ (ಧಾರವಾಡ ವಲಯ), ಗರಿಷ್ಠ ವಿಕೆಟ್ ಗಳಿಕೆ (ಹಾರ್ದಿಕ್ ರಾಜ್ (ಕಂಬೈನ್ಡ್ ಸಿಟಿ). 16 ವರ್ಷದೊಳಗಿನವರು: ಅಂತರ ಕ್ಲಬ್ ಟೂರ್ನಿ: ವಿಜೇತರು: ಬೆಂಗಳೂರು ಸ್ಪೋರ್ಟ್ಸ್ ಕ್ಲಬ್, ರನ್ನರ್ಸ್ ಅಪ್: ವಲ್ಚರ್ಸ್ ಸಿಸಿ. ಅಂತರ ವಲಯ ಟೂರ್ನಿ: ಹೆಚ್ಚು ರನ್ ಸ್ಕೋರರ್: ಆದೇಶ್ ಡಿ ಅರಸ್(ಕಂಬೈನ್ಡ್ ಸಿಟಿ), ಹೆಚ್ಚು ವಿಕೆಟ್ ಗಳಿಕೆ: ಆರ್. ಹಿಮೇಶ್ (ಮೈಸೂರು ವಲಯ). 14 ವರ್ಷದೊಳಗಿನವರು: ಅಂತರ ಕ್ಲಬ್: ವಿಜೇತರು: ವಲ್ಚರ್ಸ್ ಸಿಸಿ. ರನ್ನರ್ಸ್ ಅಪ್: ಯಂಗ್ ಲಯನ್ಸ್ ಕ್ಲಬ್. ಅಂತರ ವಲಯ ಟೂರ್ನಿ: ಹೆಚ್ಚು ರನ್ ಗಳಿಕೆ: ಆಯುಷ್ ಎಂ ಪಾಟೀಲ (ಧಾರವಾಡ), ಹೆಚ್ಚು ವಿಕೆಟ್: ಗಗನ್ ಸಾಯಿ ಕೆ (ಕಂಬೈನ್ಡ್ ಸಿಟಿ). ಗುಂಪು 1: 5ನೇ ಡಿವಿಷನ್: ಜೆಬಿ ಮಲ್ಲಾರಾಧ್ಯ ಶೀಲ್ಡ್: ವಿಜೇತರು: ಸಫೈರ್ ಸಿಸಿ, ರನ್ನರ್ಸ್ ಅಪ್: ಯಾಂಕೀಸ್ ಸಿಸಿ. 4ನೇ ಡಿವಿಷನ್: ಮೆಟ್ರೊ ಶೀಲ್ಡ್: ವಿಜೇತರು: ವರ್ಲ್‌ವಿಂಡ್ ಕ್ರಿಕೆಟರ್ಸ್, ರನ್ನರ್ಸ್ ಅಪ್: ಮಿನರ್ವಾ ಸಿಸಿ. 3ನೇ ಡಿವಿಷನ್: ಶ್ರೀ ನಾಸೂರ್ ಸ್ಮಾರಕ ಶೀಲ್ಡ್: ವಿಜೇತರು: ಸೆಂಚುರಿ ಕ್ರಿಕೆಟರ್ಸ್, ರನ್ನರ್ಸ್: ವಿಶ್ವೇಶ್ವರಪುರಂ ಸಿಸಿ (1). 2ನೇ ಡಿವಿಷನ್: ಎಂಎಟಿ ಆಚಾರ್ಯಶೀಲ್ಡ್: ವಿಜೇತರು: ಸರ್ ಸೈಯದ್ ಕ್ರಿಕೆಟರ್ಸ್. ರನ್ನರ್ಸ್: ಕೋಲ್ಸ್ ಸಿಸಿ. 1ನೇ ಡಿವಿಷನ್: ಸರ್ ಮಿರ್ಜಾ ಇಸ್ಮಾಯಿಸ್ ಶೀಲ್ಡ್: ಸರ್ ಸೈಯದ್ ಕ್ರಿಕೆಟರ್ಸ್, ರನ್ನರ್ಸ: ಸ್ವಸ್ತಿಕ್ ಯೂನಿಯನ್ ಸಿಸಿ (2) ಜಿ. ಕಸ್ತೂರಿರಂಗನ್ ಸ್ಮಾರಕ ಟಿ20 ಟ್ರೋಫಿ: ಜಂಟಿ ವಿಜೇತರು: ವಲ್ಚರ್ಸ್ ಸಿಸಿ–ಕೆಂಬ್ರಿಜ್ ಸಿಸಿ. ವೈ.ಎಸ್. ರಾಮಸ್ವಾಮಿ ಸ್ಮಾರಕ ಏಕದಿನ ಟ್ರೋಫಿ; ವಿಜೇತರು: ಸ್ವಸ್ತಿಕ್ ಯೂನಿಯನ್, ರನ್ನರ್ಸ್: ರಾಜಾಜಿನಗರ ಕ್ರಿಕೆಟರ್ಸ್. ಗುಂಪು 2, 3 ಡಿವಿಷನ್: ಕೆಎಸ್‌ಸಿಎ ಶೀಲ್ಡ್: ವಿಜೇತರು: ಅಡ್ವೋಕೆಟ್ ಅಸೋಸಿಯೇಷನ್, ರನ್ನರ್ಸ್ ಅಪ್: ಎಸ್‌ಡಬ್ಲ್ಯುಆರ್ ಸೆಂಟ್ರಲ್ ವರ್ಕ್‌ಶಾಪ್, ಅಶೋಕಪುರಂ, ಮೈಸೂರು. 2ನೇ ಡಿವಿಷನ್ ಲೀಗ್: ಕೆಎಸ್‌ಸಿಎ ಶೀಲ್ಡ್: ರಿಸರ್ವ್ ಬ್ಯಾಂಕ್ ರಿಕ್ರಿಯೇಷನ್ ಕ್ಲಬ್ , ರನ್ನರ್ಸ್ ಅಪ್: ಎಚ್‌ಎಎಲ್. ಸ್ಪೋರ್ಟ್ಸ್ ಕ್ಲಬ್.

ವಿಜಯ್ ಮರ್ಚಂಟ್ (16 ವರ್ಷ): ಅನ್ವಯ್ ದ್ರಾವಿಡ್. ವಿನೂ ಮಂಕಡ್ ಟ್ರೋಫಿ: (19ವರ್ಷ): ಹರ್ಷಿಲ್ ಧರ್ಮಾನಿ, ಕೂಚ್ ಬಿಹಾರ್ ಟ್ರೋಫಿ (19 ವರ್ಷ): ಪ್ರಖರ್ ಚತುರ್ವೇದಿ. ರಾಜ್ಯ ಎ ಟ್ರೋಫಿ (23 ವರ್ಷ): ಮೆಕ್ನಿಲ್ ಹ್ಯಾಡ್ಲಿ ನರೋನಾ. ಸಿ.ಕೆ. ನಾಯ್ಡು ಟ್ರೋಫಿ (23 ವರ್ಷ): ಕೆ.ವಿ. ಅನೀಶ್. ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ಮಯಂಕ್ ಅಗರವಾಲ್. ವಿಜಯ್ ಹಜಾರೆ ಮತ್ತು ರಣಜಿ ಟ್ರೋಫಿ ದೇವದತ್ತ ಪಡಿಕ್ಕಲ್.

ಋತುವಿನ ಉತ್ತಮ ಅಂಪೈರ್ : ಎ.ವಿ. ಮನು

ಬೆಂಗಳೂರು ಯುನೈಟೆಡ್‌ಗೆ ಜಯ

ಬೆಂಗಳೂರು ಯುನೈಟೆಡ್ ತಂಡದ ಎನ್.ರಾಕೇಶ್ ಸಿಂಗ್ (ಎಡ) ಅವರು ಪರಿಕ್ರಮ ತಂಡದ ತೌಸಿಫ್ ರಝಾ ಖಾನ್ (ಬಲ) ಪೈಪೋಟಿ ನಡೆಸಿದರು. ಪ್ರಜಾವಾಣಿ ಚಿತ್ರ

ಬೆಂಗಳೂರು: ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ 3–0 ಗೋಲುಗಳಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ಜೆರಿ ಒನೆಸ್‌ಮಸ್ ಪುಲ್ಮಾಟೆ (11ನೇ ನಿಮಿಷ), ಅಂಕುಶ ತ್ಯಾಗಿ 38ನೇ ನಿಮಿಷ) ಮತ್ತು ಎನ್. ರಾಕೇಶ್ ಸಿಂಗ್ (78ನೇ ನಿಮಿಷ) ಗೋಲುಗಳನ್ನು ಹೊಡೆದರು.

ಯೂತ್ ಪ್ರೀಮಿಯರ್ ಲೀಗ್: ಸೌರವ್ ಸತೀಶ್ ಅವರ ನಾಲ್ಕು ಗೋಲುಗಳ ನೆರವಿನಿಂದ ಆಲ್ಕಮಿ ತಂಡ 13–0 ಗೋಲುಗಳಿಂದ ಪ್ರೈಮ್ ಅಕಾಡೆಮಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಆಲ್ಕಮಿ ತಂಡದ ಸೌರವ್ ಸತೀಶ್ (10ನೇ, 11ನೇ, 18ನೇ ಮತ್ತು 30ನೇ ನಿಮಿಷ), ಆರವ್ ಶಾ (25ನೇ, 57ನೇ ಮತ್ತು 68ನೇ ನಿಮಿಷ), ಧ್ರುವ ಕಾಥಾಲಗಿರಿ (5ನೇ ಮತ್ತು 7ನೇ ನಿಮಿಷ), ಮನ್ವಿತ್ ಸಿದ್ದಪ್ಪರಾಧ್ಯ (8ನೇ ಮತ್ತು 53ನೇ ನಿಮಿಷ), ಯೋಹನನ್ ಕಾರಾಯತ್ ಜಾರ್ಜ್ (58ನೇ ನಿಮಿಷ), ಸಪ್ತರಿಷಿ ನಾಸ್ಕರ್ (70ನೇ ನಿಮಿಷ) ಗೋಲುಗಳನ್ನು ಬಾರಿಸಿದರು.

ಇನ್ನೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 4–3 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.ಕಿಕ್‌ಸ್ಟಾರ್ಟ್ ಎಫ್‌ಸಿ ಪರ ವಿ. ಯೋಗ ವಿಜಯನ್ (48ನೇ ನಿಮಿಷ), ಎ.ಆನಂದ ಆಸಿರ್ (75ನೇ ಮತ್ತು 90 + 3ನೇ ನಿಮಿಷ) ದೀಕ್ಷಿತ್ (89ನೇ ನಿಮಿಷ)ಚೆಂಡನ್ನು ಗುರಿ ಸೇರಿಸಿದರು.

ರೂಟ್ಸ್ ಸ್ಕೋರರ್ ತಂಡದ ಸಿದ್ದಾರ್ಥ್ ಜಯಂತ್ (29,39 ಮತ್ತು 58ನೇ ನಿಮಿಷ) ಹ್ಯಾಟ್ರಿಕ್ ಗೋಲು ಬಾರಿಸಿದರೂ ಗೆಲುವು ಸಾಧ್ಯವಾಗಲಿಲ್ಲ.

ಪ್ರಜಾವಾಣಿ QUIZ CHAMPIONSHIP

Co-powered by

PILOT Writing Is Emotion

ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಷಿಪ್ ಗ್ರ್ಯಾಂಡ್ ಫಿನಾಲೆ ವೀಕ್ಷಿಸಿ!

ಅತ್ಯಂತ ಪ್ರತಿಭಾವಂತ ಮನಸ್ಸುಗಳು ತಮ್ಮ ಜ್ಞಾನ ಹಾಗೂ ಉತ್ಸಾಹ ಪ್ರದರ್ಶಿಸಿ ಪರಸ್ಪರ ಸೆಣಸಾಡುವ ಸ್ಪರ್ಧೆಗೆ ಸಾಕ್ಷಿಯಾಗಿ. ಅಪ್ಪಟ ಕ್ರಿಯಾತ್ಮಕತೆಯಿಂದ ಕೂಡಿದ ಕಾರ್ಯಕ್ರಮದ ವೀಕ್ಷಣೆಯನ್ನು ತಪ್ಪಿಸಿಕೊಳ್ಳಬೇಡಿ.

ವೀಕ್ಷಿಸಿ

asianet ಸುವರ್ಣ ನ್ಯೂಸ್

ಇಂದು ಮಧ್ಯಾಹ್ನ 2 ಗಂಟೆಗೆ

ವೀಕ್ಷಿಸುವ ಮೂಲಕ ನಿಮ್ಮ ನೆಚ್ಚಿನ ತಂಡವನ್ನು ಬೆಂಬಲಿಸಿ!

Associate sponsors: WONDERLA, SIR MV, ICS MAHESH PU COLLEGE, GM UNIVERSITY

Special partner: BHIMA

TV partner:

Knowledge partner: QURIOSITY

ಪಣಿಯನ್ ಹುಡುಗಿ ಪಿಎಚ್.ಡಿ

ದಿವ್ಯಾ ಎಸ್.ಆರ್., ನಿರೂಪಣೆ: ಪ್ರಭಾ ಸ್ವಾಮಿ

ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಬಾರದು ಎನ್ನುವ ಮಾತನ್ನು ನನಗೇ ನಾನು ಎಷ್ಟು ಸಾರಿ ಹೇಳಿಕೊಂಡಿದ್ದೇನೋ ಗೊತ್ತಿಲ್ಲ!. ನಾನು ಹೀಗೆ ಹೇಳಿಕೊಳ್ಳದೇ, ಅದನ್ನು ನಂಬದೇ ಹೋಗಿದ್ದರೆ ನಿಮಗೆ ನನ್ನ ಕತೆಯನ್ನು ಹೇಳಲು ಸಾಧ್ಯವಾಗುತ್ತಿರಲಿಲ್ಲ.

ನಾನು ‘ಪಣಿಯನ್’ ಎನ್ನುವ ಬುಡಕಟ್ಟು ಸಮುದಾಯದ ಹುಡುಗಿ. ಕರ್ನಾಟಕದಲ್ಲಿ ನಮ್ಮ ಸಮುದಾಯದ ಜನಸಂಖ್ಯೆ ಕೇವಲ 495! ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸವಲತ್ತುಗಳನ್ನು ಹೊಂದಿರದ, ಅಸ್ಮಿತೆಗಾಗಿ ಅಂಗಲಾಚುತ್ತಿರುವ ತಬ್ಬಲಿ ಸಮುದಾಯ ನಮ್ಮದು.

ಮಲಯಾಳದಲ್ಲಿ ‘ಪಣಿಯನ್’ ಎಂದರೆ ಕೆಲಸಗಾರ ಎಂದರ್ಥ. ಜಮೀನ್ದಾರರ ಮನೆಯಲ್ಲಿ ಜೀತ ಮಾಡುತ್ತಿದ್ದರು. ಈಗ ಕೂಲಿ ಮಾಡುತ್ತಿದ್ದಾರೆ. ನನ್ನಪ್ಪ, ಅವ್ವ, ಅವರ ಪೂರ್ವಿಕರು ಇದೇ ಕೆಲಸ ಮಾಡುತ್ತಿದ್ದರು.

ನನ್ನದು ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಸೇಬಿನಕೊಲ್ಲಿ ಹಾಡಿ. ಇದು ಅಭಯಾರಣ್ಯದಲ್ಲಿದೆ. ಅಲ್ಲಿಂದ 6 ಕಿ.ಮೀ.ನಲ್ಲಿ ಮಚ್ಚೂರು ಇದೆ. ಅಲ್ಲಿನ ಸರ್ಕಾರಿ ಶಾಲೆಗೆ ನಾನು ಮತ್ತು ತಮ್ಮ ನಡೆದುಕೊಂಡು ಹೋಗುತ್ತಿದ್ದೆವು. ಹುಲಿ, ಆನೆ, ಇನ್ನಿತರ ಕಾಡುಪ್ರಾಣಿಗಳ ಭಯ ಕಾಡುತ್ತಲೇ ಇರುತ್ತಿತ್ತು. ಅಪ್ಪ ಕೂಲಿಗೆ ಹೋಗುವಾಗ ನಮ್ಮನ್ನು ಕರೆದುಕೊಂಡು ಹೋಗಿ ಶಾಲೆಗೆ ಬಿಡುತ್ತಿದ್ದರು. ಬರುವಾಗ ಅರ್ಧ ದಾರಿಗೆ ಅವ್ವ ಇಲ್ಲವೇ ಅಜ್ಜಿ ಬಂದು ನಿಂತಿರುತ್ತಿದ್ದರು.

ಮಚ್ಚೂರಿನ ಶಾಲೆ ಪಕ್ಕದಲ್ಲಿ ಅಂಗನವಾಡಿ ಇತ್ತು. ಅಲ್ಲಿ ಮಧ್ಯಾಹ್ನ ಮಕ್ಕಳಿಗೆ ಊಟ ಕೊಡುತ್ತಿದ್ದರು. ನಾನು ತಮ್ಮನನ್ನು ಕರೆದುಕೊಂಡು ಹೋಗಿ ನಮಗೂ ಕೊಡಬಹುದು ಎಂದು ಆಸೆಗಣ್ಣಿನಿಂದ ಕಾಯುತ್ತಾ ನಿಲ್ಲುತ್ತಿದ್ದೆ. ಆದರೆ ಕೊಡುತ್ತಲೇ ಇರಲಿಲ್ಲ. ಸ್ವಲ್ಪ ದಿನಗಳ ಬಳಿಕ ನಮ್ಮನ್ನೂ ಕರೆದು ತಿನ್ನಲು ಕೊಡಲು ಶುರು ಮಾಡಿದರು. ಹೀಗೆ ಅಂಗನವಾಡಿ ನಮ್ಮ ಹೊಟ್ಟೆಯನ್ನು ತುಂಬಿಸುತ್ತಿತ್ತು.

ನಮ್ಮ ಸಮುದಾಯದವರಿಗೆ ಹೊಟ್ಟೆ ತುಂಬಿಸಿಕೊಳ್ಳುವುದೇ ದೊಡ್ಡ ಕೆಲಸವಾಗಿತ್ತು. ಆದ್ದರಿಂದ ಮಕ್ಕಳ ಶಿಕ್ಷಣದ ಬಗೆಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ನನಗೆ ಓದು ಅಂದರೆ ಇಷ್ಟ. ಏಳನೇ ತರಗತಿಗೆ ಬಂದಾಗ ಪುಸ್ತಕ ಇತ್ಯಾದಿಗಳನ್ನು ಕೊಳ್ಳಲು ದುಡ್ಡು ಇರಲಿಲ್ಲ. ಆಗ ಓದು ಸಾಕು, ಮನೆಯಲ್ಲೇ ಇರು ಎಂದುಬಿಟ್ಟರು. ಅವರಿಗೆ ಹೊಟ್ಟೆ, ಬಟ್ಟೆಗೆ ಹೊಂದಿಸುವುದೇ ಕಷ್ಟವಾಗಿರುವಾಗ, ನನ್ನ ಓದಿಗೆ ದುಡ್ಡು ತರುವುದಾದರೂ ಹೇಗೆ? ಇದೇ ಗೊಂದಲ ಸ್ವಲ್ಪ ದಿನ ಮುಂದುವರಿಯಿತು. ಆಮೇಲೆ ಮೇಕೆಯನ್ನು ಮಾರಿ ದುಡ್ಡು ಹೊಂದಿಸಿದರು. ತುಂಬಾ ವರ್ಷ ಅವ್ವ, ನಾನು, ತಮ್ಮ, ತಂಗಿ ಹೊಟ್ಟೆ ತುಂಬ ಉಂಡು ಮಲಗಿದ್ದು ಗೊತ್ತೇ ಇಲ್ಲ. ಅಂದರೆ, ವರ್ಷದಲ್ಲಿ ಬಹುತೇಕ ದಿನಗಳು ಅರೆಹೊಟ್ಟೆ ಇಲ್ಲವೇ ತಣ್ಣೀರು ಬಟ್ಟೆ. ಸಿಕ್ಕ ಗೆಡ್ಡೆಗೆಣಸು ಬೇಯಿಸಿ ತಿಂದು ಮಲಗುತ್ತಿದ್ದೆವು.

ಬುಡಕಟ್ಟು ಸಮುದಾಯದವರಿಗೆ ಕುಡಿತವೇ ದೊಡ್ಡ ಶಾಪ. ನಮ್ಮಪ್ಪ ಕುಡಿತಕ್ಕೆ ದಾಸನಾಗಿದ್ದ. ಕೂಲಿ ದುಡ್ಡಲ್ಲಿ ಕುಡಿದು ಬರುತ್ತಿದ್ದ. ಬಂದವನು ಅವ್ವನೊಂದಿಗೆ ಜಗಳ ತೆಗೆಯುತ್ತಿದ್ದ. ಸಿಕ್ಕಸಿಕ್ಕಲ್ಲಿಗೆ ಹೊಡೆಯುತ್ತಿದ್ದ. ನಮಗೂ ಒದೆ ಬೀಳುತ್ತಿದ್ದವು. ನಾವು ಹೆದರಿ ಮೂಲೆ ಸೇರಿಬಿಡುತ್ತಿದ್ದೆವು. ಎಷ್ಟೋ ಸಾರಿ ಗುಡಿಸಲನ್ನು ಕಿತ್ತು ಬಿಸಾಡಿದ್ದ. ಅಪ್ಪ ಕುಡಿದು ಬಂದಾಗಿನ ರೌದ್ರಾವತಾರ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಆದ್ದರಿಂದ ಕುಡಿಯುವವರನ್ನು ಕಂಡರೆ ನನಗೆ ವಿಪರೀತ ಸಿಟ್ಟು.

ಎಂದಿನಂತೆ ಅಪ್ಪ ನಿಲ್ಲಲೂ ಆಗದಷ್ಟು ಕುಡಿದು ಬಂದಿದ್ದ. ನನ್ನ ಪುಟ್ಟ ತಂಗಿ ಒಲೆಯಲ್ಲಿ ಉರಿಯುತ್ತಿದ್ದ ಸೌದೆಯನ್ನು ತಂದು, ‘ಕುಡಿತೀಯಾ’ ಅಂಥ ಸಿಟ್ಟಿನಿಂದ ಬರೆ ಹಾಕಿಬಿಟ್ಟಳು!. ಆಮೇಲೆ ನಾನು ಧೈರ್ಯ ಮಾಡಿ ‘ನಮ್ಮನ್ನು ಎಲ್ಲರೂ ಕುಡುಕನ ಮಕ್ಕಳು ಅನ್ನುತ್ತಾರೆ, ನಿನಗೆ ಅದು ಇಷ್ಟನಾ?’ ಅಂತ ಕೇಳಿದ್ದೆ. ಅಪ್ಪನಿಗೆ ಏನನಿಸಿತೋ, ಆಮೇಲೆ ಬೀಡಿ ಸೇದುವುದು, ಕುಡಿಯುವುದನ್ನು ಬಿಟ್ಟರು! ನನ್ನ ಶಿಕ್ಷಣದ ಬಗೆಗೆ ಹೆಚ್ಚು ಕಾಳಜಿ ತೋರಿಸತೊಡಗಿದರು.

ನಾನು ಬಿ.ಎಡ್ ಅನ್ನು ಮೊದಲ ರ‍್ಯಾಂಕ್‌ನೊಂದಿಗೆ ಪೂರ್ಣಗೊಳಿಸಿದೆ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯೊಬ್ಬರು ಅಪ್ಪನಿಗೆ ಪರಿಚಯವಿದ್ದರು. ಅಪ್ಪ ಅವರಿಗೆ ವಿಷಯ ತಿಳಿಸಿದಾಗ, ಆನೆಮಾಳದ ಹಾಡಿಯ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪಾಠ ಮಾಡಲು ಅವಕಾಶ ಕೊಟ್ಟರು. ಹಾಡಿಯ ಪೋಷಕರ, ಮಕ್ಕಳ ಮನಸು ನನಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ನಾನೇ ಪ್ರತೀ ದಿನ ಹಾಡಿಗೆ ಹೋಗಿ ಮಲಗಿದ್ದ ಮಕ್ಕಳನ್ನು ಎಬ್ಬಿಸಿ, ಮುಖತೊಳೆಸಿ, ತಲೆಬಾಚಿ ರೆಡಿಮಾಡಿಕೊಂಡು ಜೊತೆಯಲ್ಲಿ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದೆ. ನನಗೆ ಹಸಿವು ಮತ್ತು ಅಕ್ಷರದ ಬೆಲೆ ಗೊತ್ತಿತ್ತು. ಆದ್ದರಿಂದ ನಮ್ಮ ಮನೆಯಲ್ಲಿ ಏನು ಇರುತ್ತಿತ್ತೋ ಅದನ್ನು ಬಾಕ್ಸ್‌ಗೆ ಹಾಕಿಕೊಂಡು ಹೋಗುತ್ತಿದ್ದೆ. ಅದನ್ನು ಮಕ್ಕಳಿಗೆ ತಿನಿಸುತ್ತಿದ್ದೆ. ಜೇನುಕುರುಬರ ಮಕ್ಕಳಿಗೆ ಅಕ್ಷರ ಕಲಿಸುವುದು ಕಷ್ಟ. ನಾನು ಅವರಲ್ಲಿ ಒಬ್ಬಳಾಗುತ್ತಿದ್ದೆ. ಅವರಿಂದ ಕತೆ ಹೇಳಿಸುತ್ತಿದ್ದೆ, ಹೇಳುತ್ತಿದ್ದೆ. ಹೊಳೆಯಲ್ಲಿ ಆಟವಾಡಿಸುತ್ತಿದ್ದೆ. ಪ್ರಕೃತಿಯಲ್ಲಿದ್ದ ಮಕ್ಕಳನ್ನು ಅದರೊಂದಿಗೇ ಸೇರಿಸಿಕೊಂಡು ಪಾಠ ಹೇಳಿಕೊಡಲು ಶುರು ಮಾಡಿದೆ. ಮಕ್ಕಳು ಬೇಗನೇ ಕಲಿಯಲು ಶುರು ಮಾಡಿದವು. ನಾನೇ ಹದಿನೈದು ಮಕ್ಕಳನ್ನು ಶಾಲೆಗೆ ಸೇರಿಸಿದೆ. ಅಲ್ಲಿನ ಪೋಷಕರು ‘ನೀನೊಬ್ಬಳೇ ಮಗಾ, ಮಕ್ಕಳನ್ನು ಪ್ರೀತಿ ಮಾಡೋಳು’ ಎಂದು ಹೇಳುತ್ತಿದ್ದರು. ಅಲ್ಲಿ ಆರು ತಿಂಗಳು ಅಷ್ಟೇ ಕೆಲಸ ಮಾಡಿದ್ದು.

ನನ್ನ ಕೆಲಸ ಮೆಚ್ಚಿದ ಅಧಿಕಾರಿ ಡಿ.ಬಿ.ಕುಪ್ಪೆಯ ಆಶ್ರಮ ಶಾಲೆಗೆ ನೇಮಕ ಮಾಡಿದರು. ಅಲ್ಲಿದ್ದ ಶಿಕ್ಷಕರಿಗೆ ಹಾಡಿಯ ಮಕ್ಕಳ ಮನಸು ಮತ್ತು ಭಾಷೆ ಅರ್ಥವಾಗುತ್ತಿರಲಿಲ್ಲ. ಆದರೆ, ನನಗೆ ಅದು ಸಹಜವಾಗಿತ್ತು. ಮಕ್ಕಳು ನನ್ನೊಂದಿಗೆ ಬೆರೆತರು, ನಾನು ಆಶ್ರಮ ಶಾಲೆಗೆ ಹೋಗುವ ಮುನ್ನ 50 ರಿಂದ 60 ಮಕ್ಕಳು ಶಾಲೆ ಬಿಟ್ಟಿದ್ದರು. ಶಾಲೆ ಬಿಟ್ಟ ಮಕ್ಕಳ ಮನೆಗೆ ಹೋಗಿ ‘ನಾನೂ ಹಾಡಿ ಮಗಳೇ’ ಎಂದು ಹೇಳಿ ಮನವೊಲಿಸಿ ಕರೆದುಕೊಂಡು ಬರುತ್ತಿದ್ದೆ. ದಿನಗಳು ಕಳೆದಂತೆ ಮಕ್ಕಳು ತಾವೇ ರೆಡಿಯಾಗಿ ನಮ್ಮ ಗುಡಿಸಲು ಮುಂದೆ ಬಂದುನಿಂತಿರುತ್ತಿದ್ದರು. ಇದು ನನಗೆ ಅತ್ಯಂತ ಖುಷಿಕೊಟ್ಟ ಕ್ಷಣಗಳು.



ವಿದ್ಯಾರ್ಥಿಗಳೊಂದಿಗೆ ಚರ್ಚೆಯಲ್ಲಿ ದಿವ್ಯಾ ಎಸ್.ಆರ್.
ಚಿತ್ರಗಳು: ಶ್ರೀನಿವಾಸ್ ಇನಾಂದಾರ್

2017ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಎ., ಪಿಎಚ್.ಡಿ ಮಾಡಲು ಹೋದೆ. ಸಮಾಜಶಾಸ್ತ್ರದಲ್ಲಿ ಎಂ.ಎ. ಮಾಡಿದೆ. ಬುಡಕಟ್ಟು ಅಧ್ಯಯನ ವಿಭಾಗದ ಪ್ರೊ. ಕೆ.ಎಂ.ಮೇತ್ರಿ ಅವರ ಮಾರ್ಗದರ್ಶನದಲ್ಲಿ ‘ಪಣಿಯನ್ ಬುಡಕಟ್ಟಿನ ಸಾಮಾಜಿಕ ಅಧ್ಯಯನ’ ವಿಷಯದಲ್ಲಿ ಪಿಎಚ್.ಡಿಗೆ ಮುಂದಾದೆ. ಪ್ರೋತ್ಸಾಹಧನ ತಿಂಗಳಿಗೆ ಹತ್ತು ಸಾವಿರ ಕೊಡಬೇಕಿತ್ತು. ಆದರೆ, ಮೂರು ವರ್ಷ ಕೊಡಲಿಲ್ಲ. ನನ್ನ ಕ್ಷೇತ್ರ ಕಾರ್ಯಕ್ಕಾಗಿ ಕೊಡಗಿಗೆ ಹೋಗಬೇಕಿತ್ತು. ಹಣ ಇಲ್ಲದೇ ತುಂಬಾ ತೊಂದರೆ ಆಗುತ್ತಿತ್ತು. ಕೆಲವೊಮ್ಮೆ ಗೈಡ್ ಸಹಾಯ ಮಾಡಿದರು. ಅಪ್ಪನಿಗೆ ‘ನಾನು ವಾಪಸ್ ಬಂದುಬಿಡುತ್ತೇನೆ. ಹಣದ ತೊಂದರೆ ಇದೆ’ ಎನ್ನುತ್ತಿದ್ದೆ. ಪ್ರೋತ್ಸಾಹಧನಕ್ಕಾಗಿ ವಿಶ್ವವಿದ್ಯಾಲಯದ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು ಧರಣಿ ಕುಳಿತೆವು. ಆಮೇಲೆ ಮೂರು ವರ್ಷದ ಹಣ ಒಟ್ಟಿಗೆ ಬಂದಿತು. ನನ್ನ ಪಿಎಚ್.ಡಿ ಕೆಲಸವೂ ಸರಾಗವಾಗಿ ಮುಗಿಯಿತು. ಹೀಗಾಗಿ ಪಣಿಯನ್ ಸಮುದಾಯದಲ್ಲಿ ಪಿಎಚ್.ಡಿ ಪಡೆದ ಮೊದಲಿಗಳಾದೆ! ಈಗ ರಾಯಚೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕಿಯಾಗಿದ್ದೇನೆ.

ನನಗೆ ಬುಡಕಟ್ಟು ಸಮುದಾಯದ ಮಕ್ಕಳ ನೋವು, ಸಮಸ್ಯೆಗಳು ಅರ್ಥವಾಗುತ್ತವೆ. ಆದ್ದರಿಂದ ಓದಿನಲ್ಲಿ ಆಸಕ್ತಿ ತೋರಿಸುವವರ ಬೆನ್ನಿಗೆ ನಿಲ್ಲುತ್ತಿದ್ದೇನೆ. ಕೊಡಗಿನ ಚಂದನಕೆರೆ ಹಾಡಿಯಲ್ಲಿ ಏಳು ವಿದ್ಯಾರ್ಥಿನಿಯರು ಬಿ.ಎ. ಪದವಿ ಪಡೆದಿದ್ದಾರೆ. ಒಬ್ಬಳು ಡಿಎಡ್ ಮುಗಿಸಿ ಶಿಕ್ಷಕಿಯಾಗಿದ್ದಾಳೆ. ನಾನು ಮೊದಲೇ ಹೇಳಿದಂತೆ, ‘ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಬೇಡಿ’ ಎನ್ನುವ ಮಾತನ್ನು ಇವರಿಗೂ ಹೇಳುತ್ತಲೇ ಇರುತ್ತೇನೆ. ಏಕೆಂದರೆ, ಗುರಿ ತಲುಪಬೇಕು ಎಂದರೆ ನಮಗೆ ನಮ್ಮಲ್ಲಿ ನಂಬಿಕೆ ಇರಬೇಕು.

ಕೆಲವೊಮ್ಮೆ ನಾನು ನನಗೇ ‘ಒಂದು ವೇಳೆ ಶಿಕ್ಷಣವನ್ನೇ ಪಡೆಯದೇ ಹೋಗಿದ್ದರೆ ನನ್ನ ಬದುಕು ಹೇಗಿರುತ್ತಿತ್ತು?’ ಎಂದು ಪ್ರಶ್ನೆ ಕೇಳಿಕೊಳ್ಳುತ್ತೇನೆ. ನಿಜ ಹೇಳುತ್ತೇನೆ, ಕತ್ತಲೆ ಕೋಣೆಯಲ್ಲಿ ಬಿದ್ದಿರುತ್ತಿದ್ದೆ. ಶಿಕ್ಷಣ ನನ್ನಲ್ಲಿ ವಿವೇಕ, ವಿಮೋಚನೆ, ಜಗತ್ತನ್ನು ಅರಿಯುವ ಮತ್ತು ಸ್ವತಂತ್ರವಾಗಿ ಬದುಕುವ ಶಕ್ತಿಯನ್ನು ಕೊಟ್ಟಿದೆ. ಇದನ್ನೇ ನಾನು ನನ್ನಂಥವರಿಗೆ ಹೇಳುತ್ತಿರುವುದು. ❖

ಹೊಸ ವರ್ಷದ ಹೊಸ್ತಿಲಲ್ಲಿ ನಿಂತು ಹೊಸತನಕ್ಕೆ ಮನಸ್ಸು ತುಡಿಯುತ್ತದೆ. ಹೊಸತುಗಳನ್ನು ಅಪ್ಪಿಕೊಂಡು ಬದುಕನ್ನು ಚಂದಗಾಣಿಸುವ ಪ್ರಯತ್ನ ತುಸು ಹೆಚ್ಚೇ ಇರುತ್ತದೆ. ಹೊಸದೇ ಹುಮ್ಮಸ್ಸಿನೊಂದಿಗೆ ವರ್ಷವನ್ನು ಆರಂಭಿಸುವ ಸಲುವಾಗಿಯೇ ಮೂವರ ಸ್ಫೂರ್ತಿದಾಯಕ ಕಥನಗಳು ಇಲ್ಲಿವೆ

ಕನಸಿಗೆ ರೆಕ್ಕೆ ಕಟ್ಟಿ ಹಾರುವಾಗ...

ಸಮೈರಾ ಹುಲ್ಲೂರ, ನಿರೂಪಣೆ: ರಶ್ಮಿ ಎಸ್.

ತಲೆ ಮೇಲೆ ಗಿರಗಿಟ್ಲೆಯಂತೆ ಹೆಲಿಕಾಪ್ಟರ್ ಫ್ಯಾನು ತಿರುಗುತ್ತಿತ್ತು. ನೋಡನೋಡುತ್ತಲೇ ವಿಜಯಪುರದ ನೆತ್ತಿಯ ಮೇಲೆ ಹಾರುತ್ತಿದ್ದೆವು. ಆ ಪೈಲಟ್‌ಗೆ ನಾನು ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದೆ. ಅವರು ಸಮಾಧಾನದಿಂದ ಉತ್ತರಿಸುತ್ತಲೇ ನಮ್ಮ ಯಾನ ಮುಗಿಸಿದ್ದರು. ನವರಸಪುರ ಉತ್ಸವದಲ್ಲಿ ಕೈಗೊಂಡ ಈ ಹೆಲಿಕಾಪ್ಟರ್ ಯಾನ ನನ್ನಲ್ಲಿ ಕನಸನ್ನು ಬಿತ್ತುತ್ತ ಹೋಗಿತ್ತು. ಮೇಲೆ ಹೋದಂತೆಲ್ಲ, ಆಳವಾಗಿ ಮನದೊಳಗೆ ಹಾರುವ ಕನಸು ಬೇರೂರತೊಡಗಿತ್ತು.

ಅದಾದ ಏಳು ವರ್ಷಗಳ ನಂತರ ನಾನು ವಿಮಾನದಲ್ಲಿ ಹತ್ತಿದ್ದೆ; ತರಬೇತಿಗಾಗಿ. ಮೊದಲ ಸಲ ಹತ್ತಿ ಇಳಿಯುವವರೆಗೂ ನಾನು ಮುಗುಳ್ನಗುತ್ತಲೇ ಇದ್ದೆ. ಜೊತೆಗಿದ್ದ ಪೈಲಟ್ ಕಲ್ಪನಾ ಅವರು ಕೇಳಿದರು, ‘ಮಜಾ ಆ ರಹಾ ಹೈ’. ನಾನು ನಗುತ್ತಲೇ ಹೇಳಿದೆ ‘ಹೌದು, ಬಹುತ್’ ಅಂತ. ಮತ್ತೆ ಭೂ ಸ್ಪರ್ಶ ಮಾಡುವವರೆಗೂ ನಗುತ್ತಲೇ ಇದ್ದೆ.

‘ನಗುಮೂಡಿಸಿದೆ ಈ ಬಾನಂಗಳ, ಭುವಿಯ ಸ್ಪರ್ಶಿಸುವವರೆಗೂ, ನನ್ನೊಳಗಿನ ಭಾವ, ಭಾವಲಹರಿಯ ಹೇಳುವುದೇನು, ಗಾಳಿ ಸೀಳಿ, ಬಾನ ಏರಿ ಕಿಟಕಿಯಿಂದಿಣುಕಿದೆ.. ಓಹ್.. ದೇವರೆ, ನಾನು ಭೂಮಿಗೆದುರಾಗಿ ಇಳಿಯುತ್ತಲಿರುವೆ, ಕಾಕ್‌ಪಿಟ್‌ನಲ್ಲಿ ಅದೆಷ್ಟು ಸುರಕ್ಷಿತ, ನಾನಿಲ್ಲಿಗೇ ಸೇರಿದವಳು’ ಎಂಬರ್ಥದ ಕವಿತೆಯೊಂದು ನನ್ನೊಳು ಮೂಡಿತು.

ಮೊದಲ ಹಾರಾಟದಲ್ಲಿ ನಮ್ಮ ದೇಹ ಹೇಗೆ ಸ್ಪಂದಿಸುತ್ತದೆ, ಮಾನಸಿಕವಾಗಿ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದನ್ನು ನೋಡುತ್ತಾರೆ. ನಾನು ಇಡೀ ಹಾರಾಟ ಮುಗಿಯುವವರೆಗೂ ಶಾಂತಚಿತ್ತಳಾಗಿದ್ದೆ. ತಲೆ ಸುತ್ತು, ವಾಂತಿ ಅಂಥದ್ದೇನೂ ಆಗಲಿಲ್ಲ. ನಾನು ಹುಟ್ಟಿರುವುದೇ ಹಾರಾಡಲು ಅಂತ ಆವತ್ತೇ ಖಾತ್ರಿ ಆಯಿತು.

ವಿಜಯಪುರದ ಯುವತಿಯೊಬ್ಬಳು, ಪಿಯುಸಿ ಮುಗಿಸಿ ಪದವಿ ಓದಬಹುದಾಗಿತ್ತು. ಆದರೆ ನನ್ನ ಕನಸಿಗೆ ನೀರೆರೆಯಲು ನನ್ನಮ್ಮ ನನ್ನ ಹಿಂದೆ ನಿಂತಿದ್ದರು. ಅಪ್ಪಾಜಿ ಶುಲ್ಕ ಭರಿಸಲು ತಯಾರಾಗಿದ್ದರು. ಪಿಯುಸಿ ಮುಗಿದ ತಕ್ಷಣ ಕಾರ್ವರ್ ಏವಿಯಷನ್ಸ್ ಕೇಂದ್ರಕ್ಕೆ ಸೇರಿಕೊಂಡೆ. ನನಗಾಗ ಹದಿನೇಳು ವರ್ಷ. ಕಠಿಣ ತರಬೇತಿ ಅದು. ಸಮಯ ಹೊಂದಿಸಿಕೊಳ್ಳುವುದೇ ಕಷ್ಟವಾಗಿತ್ತು. ಬೆಳಗಿನ ಜಾವ, ಸಂಜೆಯ ನಂತರ ಹಾರಾಟದ ಕ್ಲಾಸುಗಳಿದ್ದರೆ, ಇಡೀ ದಿನ ಥಿಯರಿಗಳಾಗುತ್ತಿದ್ದವು. ಹೈರಾಣಾಗದಂತೆ ಇರಬೇಕಿತ್ತು. ಹೊಸ ಉತ್ಸಾಹ ಮತ್ತು ವಿಶ್ವಾಸದಿಂದ ದಿನವಿಡೀ ತರಬೇತಿಯಲ್ಲಿ ಪಾಲ್ಗೊಳ್ಳಬೇಕಿತ್ತು.

ಆಸಕ್ತಿ ಒಂದಿದ್ದರೆ ಎಲ್ಲವೂ ಸರಳವಾಗುತ್ತದೆ. ಕಾಕ್‌ಪಿಟ್‌ನಲ್ಲಿ ಕುಳಿತ ತಕ್ಷಣ ಗಾಳಿಸೀಳುವ ಶಕ್ತಿ ಅದೆಲ್ಲಿಂದ ಬರುತ್ತಿತ್ತೋ ಗೊತ್ತಿಲ್ಲ. ನಮ್ಮಮ್ಮ ಅಪ್ಪಾಜಿ ಇಬ್ಬರೂ ಪ್ರಗತಿಪರರು. ಯಾವತ್ತೂ ನನ್ನ ಆಸೆಯನ್ನು ಕಡೆಗಣಿಸಲಿಲ್ಲ. ಅವರ ಮಹತ್ವಾಕಾಂಕ್ಷೆ ನನ್ನ ಬಲವಾಗಿ ಬದಲಾಗುತ್ತಿತ್ತು. ಒಮ್ಮೆ ಏರ್‌ಪೋರ್ಟ್‌ನ ಲಾಂಜ್‌ನಲ್ಲಿ ನನ್ನಮ್ಮ ಕಾಯುತ್ತಿದ್ದರು. ಆಗ ಪೈಲಟ್ ಮತ್ತು ವಿಮಾನಯಾನ ಸಿಬ್ಬಂದಿ ನಡೆದು ಬರುವಾಗ ಎಲ್ಲರೂ ಅವರಿಗೆ ಗೌರವ ನೀಡುವುದು ನೋಡಿದರು. ಅದಾಗಲೇ ಅವರೂ ನಿರ್ಧರಿಸಿ ಆಗಿತ್ತು. ಅವರ ಮಡಿಲ ಮಗು ಸಮೈರಾ ಗಗನದಲ್ಲಿ ಹಾರಾಡಬೇಕು ಎಂದು.

ಪ್ರತಿಸಲ ತರಬೇತಿ ಹಾರಾಟದಲ್ಲಿ ಪಾಲ್ಗೊಂಡಾಗಲೂ ಕಾಕ್‌ಪಿಟ್‌ನಲ್ಲಿ ಕುಳಿತ ಗಳಿಗೆಯಿಂದಲೇ ವಿಮಾನವನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭವಾಗುತ್ತಿತ್ತು. ಯಾವ ಸಂಕೇತ ಏನು ಹೇಳುತ್ತದೆ? ಜೊತೆಗಿರುವವರಿಗೆ ಸಂಕೇತ ಭಾಷೆಯಲ್ಲಿ ಏನು ಹೇಳಬೇಕು? ಹೇಗೆ ಹೇಳಬೇಕು? ಇವೆಲ್ಲವನ್ನೂ ಕಲಿಯುತ್ತಿದ್ದೆ. ಕಮರ್ಷಿಯಲ್ ಪೈಲಟ್ ಪರವಾನಗಿ ಪಡೆಯಲು ಒಟ್ಟು ಆರು ಪತ್ರಿಕೆಗಳನ್ನು ಪಾಸು ಮಾಡಬೇಕು. ಮೊದಲ ವರ್ಷವೇ ಐದು ಪತ್ರಿಕೆಗಳನ್ನು ಪಾಸು ಮಾಡಿದೆ. ಇನ್ನೊಂದು ಟೆಕ್ನಿಕಲ್ ಪತ್ರಿಕೆ ಬರೆಯಲು ಹದಿನೆಂಟು ವರ್ಷ ಪೂರೈಸಿರಬೇಕು. ಹದಿನೆಂಟು ವರ್ಷದವಳಾದ ಕೂಡಲೇ ಆ ಪತ್ರಿಕೆಯನ್ನೂ ಪಾಸು ಮಾಡಿದೆ. ಹದಿನೆಂಟು ಮುಗಿಯುವುದರೊಳಗೆ ಕಮರ್ಷಿಯಲ್ ಪೈಲಟ್ ಪರವಾನಗಿ ಕೈಗೆ ಸಿಕ್ಕಿತು. 200 ಗಂಟೆಗಳ ಹಾರಾಟದ ಅನುಭವ. ಆರು ಪತ್ರಿಕೆಗಳನ್ನೂ ಮೊದಲ ಪ್ರಯತ್ನದಲ್ಲಿಯೇ ಮುಗಿಸಿ ಯಶಸ್ಸು ಪಡೆದೆ.

ನನ್ನ ಯಶಸ್ಸಿನ ಹಿಂದೆ ಏವಿಯೇಷನ್ ತರಬೇತಿ ಕೇಂದ್ರಗಳ ಪರಿಶ್ರಮ ಇದೆ. ಅವರು ನಿರಂತರವಾಗಿ ನಮ್ಮನ್ನು ಹುರಿದುಂಬಿಸುತ್ತಿದ್ದರು. ಯಾವುದೂ ಕ್ಲಿಷ್ಟವೆನಿಸದಂತೆ ಕಲಿಸುತ್ತಿದ್ದರು. ಅತ್ಯಂತ ಕಿರಿಯ ಕ್ಯಾಪ್ಟನ್‌ಗಳಲ್ಲಿ ಒಬ್ಬರಾಗಿರುವ ಕ್ಯಾಪ್ಟನ್ ತಪೇಶ್ ಯಾವಾಗಲೂ ಪ್ರೋತ್ಸಾಹಿಸುತ್ತಿದ್ದರು. ನನಗೆ ಹಾರಾಟದ ತರಬೇತಿ ನೀಡುತ್ತಿದ್ದ ಕ್ಯಾಪ್ಟನ್ ಮೋನಿಕಾ ಚೌಧರಿ, ಕ್ಯಾಪ್ಟನ್ ಮಾಧವ್ ಸಿಂಗ್ ಅವರ ಪಾತ್ರವೂ ಮಹತ್ತರದ್ದಾಗಿದೆ. ಯಾವ ಕ್ಷಣದಲ್ಲಿಯೂ ನಮ್ಮ ಸಮಚಿತ್ತವನ್ನು ಕಾಪಿಡಲು ಹಲವಾರು ಸೂತ್ರಗಳನ್ನು ಅವರು ಹೇಳಿಕೊಟ್ಟರು. ಅಪ್ಪ ಅಮ್ಮನ ಒತ್ತಾಸೆ, ಅಜ್ಜ ಅಜ್ಜಿಯ ಪ್ರೋತ್ಸಾಹದ ಜೊತೆಗೆ ತರಬೇತಿ ಕೇಂದ್ರದ ಸಿಬ್ಬಂದಿ ಮತ್ತು ನಮ್ಮ ಮೆಂಟರ್ ಆಗಿದ್ದವರೆಲ್ಲರ ಉತ್ಸಾಹ ನನ್ನನ್ನು ಬಾನಿನಂಗಳದಲ್ಲಿ ರೆಕ್ಕೆ ಬಿಚ್ಚುವಂತೆ ಮಾಡಿತು.

ನನ್ನಮ್ಮನನ್ನು ಮೊದಮೊದಲು ಎಲ್ಲರೂ ದೂರುವವರೇ ಆಗಿದ್ದರು. ಇದ್ದೊಬ್ಬ ಮಗಳನ್ನು ದೆಹಲಿಗೆ ಕಳುಹಿಸುವ ಧೈರ್ಯವಾದರೂ ಹೇಗೆ ಬಂತು? ಇಲ್ಲೇ ಓದಿಸಬಾರದೆ? ಜಾಣೆ ಅವಳು. ಎಂಜಿನಿಯರಿಂಗ್ ಇಲ್ಲವೇ ಎಂಬಿಬಿಎಸ್ ಮಾಡಿಕೊಳ್ಳುತ್ತಿದ್ದಳು ಎಂದೆಲ್ಲ ಹೇಳುತ್ತಿದ್ದರು.

ನನ್ನ ಕನಸನ್ನು ಅಪ್ಪ ಅಮ್ಮ ನನಸಾಗಿಸಿದರು. ಇನ್ಮುಂದಿನ ಕೋರ್ಸಿಗೆ ತಯಾರಿ ನಡೆಸಿರುವೆ. ಹಾಗೆಯೇ ಈ ಕ್ಷೇತ್ರದಲ್ಲಿ ವಿಪುಲವಾದ ಅವಕಾಶಗಳಿವೆ. ಆಯ್ಕೆ ನನ್ನ ಕೈಯಲ್ಲಿಯೇ ಇದೆ. ಹಾರಾಡುವಾಗಲೆಲ್ಲ ಒಂದೇ ಹಾಡು ಗುನುಗುತ್ತೇನೆ. ‘ಮೇರಿ ಹೀರ್ ಆಸ್ಮಾನಿ’ ಅಂತ (ಈ ಬಾನಂಗಳವೇ ನನ್ನ ಹೀರ್, ನನ್ನ ಪ್ರೇಯಸಿ) ❖

ಕನಸಿಗೆ ನೀರೆರೆದ ಪೋಷಕರೊಂದಿಗೆ ಸಮೈರಾ ಹುಲ್ಲೂರ

ಸಮೈರಾ ಹುಲ್ಲೂರ

ವಿಜಯಪುರದ ಅಮೀನುದ್ದಿನ್ ಹುಲ್ಲೂರ ಮತ್ತು ನಾಝಿಯಾ ಹುಲ್ಲೂರ ಅವರ ಮಗಳು. ದೇಶದ ಅತ್ಯಂತ ಕಿರಿಯ ಕಮರ್ಷಿಯಲ್ ಪೈಲಟ್‌ಗಳಲ್ಲಿ ಒಬ್ಬರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ತಂದೆ ಇಂಟೀರಿಯರ್ ಡಿಸೈನರ್ ಆಗಿದ್ದಾರೆ. ತಾಯಿ ವಿಜಯಪುರದ ಡೆಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಕೋ ಆರ್ಡಿನೇಟರ್ ಆಗಿದ್ದಾರೆ. ವಿನೋದ್ ಯಾದವ್ ಏವಿಯೇಷನ್ ತರಬೇತಿ ಕೇಂದ್ರ, ಕಾರ್ವರ್ ಏವಿಯೇಷನ್ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದಿದ್ದಾರೆ.

‘ಮಗಳಿಗೆ ಸ್ವಪ್ರೀತಿ ಕಲಿಸಲು ಬಾನಂಗಳ ಕರೆಯಿತು’

ನಾಝಿಯಾ ಹುಲ್ಲೂರ

ಸಮೈರಾ 9ನೇ ತರಗತಿಯಲ್ಲಿದ್ದಾಗಲೇ ಅವಳ ಕನಸು ಏನೆಂದು ಗೊತ್ತಾಗಿತ್ತು. ಪಿಯುಸಿ ಮುಗಿದ ನಂತರ ಭಾರತದಲ್ಲಿ ಎಲ್ಲೆಲ್ಲಿ ಹಾರಾಟದ ತರಬೇತಿ ಕೇಂದ್ರಗಳಿವೆ ಎಂದು ಹುಡುಕಿದ್ದೆ. ಅವಳು ಏನೇ ಓದಿದರೂ ಜೀವನದ ಕಾಲು ಭಾಗ ಅದರಲ್ಲಿಯೇ ಕಳೆಯಬೇಕಿತ್ತು. 25 ವರ್ಷಗಳವರೆಗೂ ಓದಿನಲ್ಲಿಯೇ ಬದುಕು ಕಳೆದುಹೋಗುತ್ತದೆ. ನಂತರ ಮದುವೆ, ಮಕ್ಕಳು ಇದ್ದಿದ್ದೇ. ಅವಳ ಆಸಕ್ತಿ, ಅವಳ ಕುತೂಹಲ, ಅವಳ ಪ್ರೀತಿಯ ಈ ಹಾರಾಟವನ್ನು ಕಲಿಯುವುದು ಯಾವಾಗ? ಮುಂದುವರಿಯುವುದು ಯಾವಾಗ? ಎಂಬ ಎಲ್ಲ ಪ್ರಶ್ನೆಗಳಿಗೂ ಅವಳ ಪ್ರೀತಿಯೇ ಅವಳ ವೃತ್ತಿಯಾಗಲಿ ಎಂದೆನಿಸಿತು.

ಬೇರೆ ಕೋರ್ಸುಗಳಿಗೆ ಸೇರಿಸಿದರೂ ಇಷ್ಟೇ ಖರ್ಚು. ಮತ್ತೆ ಕೋರ್ಸು ಮುಗಿಸಿ, ವೃತ್ತಿಯಲ್ಲಿ ನೆಲೆಗಾಣಬೇಕಾದರೆ ಮಧ್ಯವಯಸ್ಸು ತಲುಪುತ್ತಾರೆ. ಈ ಮಧ್ಯೆ ಅವರು ಸ್ವಪ್ರೀತಿಯನ್ನೇ ಮರೆತುಬಿಡುತ್ತಾರೆ. ನಮ್ಮೆಲ್ಲರ ಬದುಕಿನಲ್ಲಿ ನಮಗಾಗಿ ತುಸು ಸಮಯಬೇಕು ಎಂದೆನಿಸುವಾಗಲೇ ಜವಾಬ್ದಾರಿಗಳನ್ನು ಹಾಸಿ ಹೊದ್ದಿರುತ್ತೇವೆ. ಹೆಣ್ಣುಮಕ್ಕಳಲ್ಲಿ ಕನಸುಗಳನ್ನು ಬಿತ್ತುವ ನಾವೇ ಹೊಂದಾಣಿಕೆಯನ್ನು ಕಲಿಸಿಕೊಡಬೇಕೆ ಎಂಬ ಪ್ರಶ್ನೆ ನನ್ನನ್ನು ಇರಿಯಿತು.

ಮನೆಯಲ್ಲಿ ಎಲ್ಲರ ಮನವೊಲಿಸಿದೆ. ನನ್ನತ್ತೆ ಮಾವನವರಂತೂ ಈ ಕೋರ್ಸು, ವೃತ್ತಿ ಅವಕಾಶ ಇವೆರಡೂ ನಮಗೇನೂ ಗೊತ್ತಿಲ್ಲ, ಆದರೆ ನಿನ್ನ ಮೇಲೆ ವಿಶ್ವಾಸವಿದೆ. ನಿನ್ನ ನಂಬಿಕೆಯ ಮೇಲೆ ವಿಶ್ವಾಸವಿದೆ. ಎಲ್ಲರೂ ಮಾಡುವುದು ಮಕ್ಕಳಿಗಾಗಿಯೇ ಎಂದು ಒಪ್ಪಿದಾಗ, ಮಗುವನ್ನು ದೂರದ ದೆಹಲಿಗೆ ಬಿಟ್ಟು ಬಂದೆವು. ಬಂಧುಗಳೆಲ್ಲರನ್ನು ಮುಗುಳ್ನಗುತ್ತಲೇ ಎದುರಿಸಿದೆ. ಕೆಲವರು ಅನುಮಾನಿಸಿದರು. ಸಮೈರಾಗೆ ಆ ಕೋರ್ಸ್ ಮುಗಿಸಲು ಸಾಧ್ಯವೇ ಎಂದು ಕೊಂಕು ನುಡಿಯುತ್ತಿದ್ದರು. ಈ ವರ್ಷ ಅವರೇ ಸಮೈರಾ ಜೊತೆಗೆ ಸೆಲ್ಫಿ ತೆಗೆದುಕೊಂಡು ಹಂಚಿದರು. ಸಿಹಿಯುಣಿಸಲು ಬಂದರು.

‘ಈ ಯಶಸ್ಸಿನ ಖುಷಿಯನ್ನು ಅನುಭವಿಸಿ, ಬೇಗನೆ ಮರೆತುಬಿಡು. ಮುಂದಿನ ಸಾಧನೆಗೆ ಸಜ್ಜಾಗು’ ಎಂದು ಸಮೈರಾಗೆ ಹೇಳಿರುವೆ. ನಮ್ಮ ಮಕ್ಕಳಿಗೆ ಕಲಿಸಬೇಕಿರುವುದು ಬೇಗ ಸ್ವಾವಲಂಬಿಗಳಾವುದನ್ನು. ಸ್ವಪ್ರೀತಿ ಮತ್ತು ಸ್ವಕಾಳಜಿಗೂ ಮಹತ್ವ ನೀಡಬೇಕು. ಅವೆಲ್ಲವೂ ಈ ವೃತ್ತಿಯಲ್ಲಿ ಸಮೈರಾಗೆ ಸಿಕ್ಕೇಸಿಗುತ್ತವೆ ಎನ್ನುವ ಭರವಸೆ ಇದೆ.

“ನಮ್ಮ ದೇಹ, ನಮ್ಮ ಜೀವ, ನಮ್ಮ ಜೀವನ, ನಮ್ಮಿಷ್ಟದಂತೆ ಬದುಕುತ್ತೇವೆ ಎಂದರೂ ಈ ಸಮಾಜ ಬಿಡುವುದಿಲ್ಲ. ಈ ಮನೋಭಾವ ಬದಲಾಗಬೇಕಿದೆ. ಎಲ್ಲರಂತೆ ನಮಗೂ ಬದುಕುವ ಸಮಾನ ಹಕ್ಕುಗಳಿವೆ ಎಂಬ ಅರಿವು ಮೂಡಬೇಕಿದೆ. ಈ ನಿಟ್ಟಿನಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ”

ಕಿರಣ್ ನಾಯಕ್
ಟ್ರಾನ್ಸ್‌ಮನ್

ಬದುಕಿದ್ದಾಗಲೇ ತಿಥಿಯಾದವನ ಬದುಕಿನ ಕತೆ

ಗುರು ಪಿ.ಎಸ್.

ಸಲಿಂಗಿಗಳ ಮದುವೆಗೆ ಮನೆಯವರ ತೀವ್ರ ವಿರೋಧ ಆತ್ಮಹತ್ಯೆಗೆ ಯತ್ನಿಸಿದ ಯುವ ಜೋಡಿ

...ಹೀಗೆ, ಆಂಧ್ರಪ್ರದೇಶದ ಸುದ್ದಿವಾಹಿನಿಗಳಲ್ಲಿ ಬ್ರೇಕಿಂಗ್ ನ್ಯೂಸ್ ಬರುತ್ತಲೇ ಇತ್ತು. ‘ನಾನು ಹೆಣ್ಣಾಗಿದ್ದರೂ ನನ್ನಲ್ಲಿ ಪುರುಷನ ಭಾವನೆಗಳೇ ಇವೆ. ನನ್ನ ಹುಡುಗಿಯೂ ಒಪ್ಪಿಕೊಂಡಿದ್ದಾಳೆ, ನಮ್ಮನ್ನು ನಮ್ಮ ಪಾಡಿಗೆ ಬಿಟ್ಟು ಬಿಡಿ, ಹೇಗೋ ಬದುಕು ಕಟ್ಟಿಕೊಳ್ಳುತ್ತೇವೆ’ ಎಂದು ಗೋಗರೆದರೂ ಎಲ್ಲರಿಂದ ವಿರೋಧವೇ ಎದುರಾದಾಗ ಆತ್ಮಹತ್ಯೆಗೆ ನಿರ್ಧರಿಸಿತ್ತು ಜೋಡಿ.

ಈ ಸುದ್ದಿಯನ್ನು ಗಮನಿಸಿದ ಬೆಂಗಳೂರಿನ ಸಂಗಮ ಫೌಂಡೇಷನ್, ಪೊಲೀಸರ ವಶದಲ್ಲಿದ್ದ ಜೋಡಿಯನ್ನು ಬೆಂಗಳೂರಿಗೆ ಕರೆತರುತ್ತದೆ. ಈಗಿನ ತೆಲಂಗಾಣದ ವಾರಂಗಲ್‌ನಿಂದ ಬೆಂಗಳೂರಿಗೆ ಬಂದವರೇ ಕಿರಣ್ ನಾಯಕ್ ಮತ್ತು ರಾಧಾ.

‘ತೆಲಂಗಾಣದ ಹನುಮ ತಾಂಡಾದ ದಲಿತ ಆದಿವಾಸಿ ಸಮುದಾಯಕ್ಕೆ ಸೇರಿದವನು ನಾನು. ನನ್ನ ಮೊದಲ ಹೆಸರು ಉಷಾ ಭಾನೋತ್. ಪೋಲಿಯೊ ಪೀಡಿತನಾಗಿದ್ದರಿಂದ ಅಂಗವಿಕಲನಾಗಿಯೇ ಬೆಳೆದೆ. ಬೆಳೆದಂತೆ ನನ್ನ ಭಾವನೆಗಳೂ ಬದಲಾಗತೊಡಗಿದವು. ಹೆಣ್ಣಿಗಿಂತ ಗಂಡಾಗಿಯೇ ನಾನು ಹೆಚ್ಚು ಸಂತೋಷದಿಂದ ಇರಬಹುದು ಎನಿಸತೊಡಗಿತು. ಕೊನೆಗೆ, ಟ್ರಾನ್ಸ್‌ಮನ್ ಆಗಿ ಬದಲಾದೆ’ ಎನ್ನುತ್ತಾರೆ ಕಿರಣ್ ನಾಯಕ್.

ಶಾಲೆಗೆ ಹೋಗಬೇಕು ಎಂದಾಗ ಅಲ್ಲಿ ಗಾಲಿ ಕುರ್ಚಿ ಇರಲಿಲ್ಲ. ಹೀಗಾಗಿ ಮನೆಯಲ್ಲಿಯೇ ಇರಬೇಕಾಯಿತು. ಮನೆಯಲ್ಲಿದ್ದುಕೊಂಡೇ ಎಸ್ಸೆಸ್ಸೆಲ್ಸಿಯವರೆಗೆ ಓದಿದರು. ಬಳಿಕ ಗಾಲಿ ಕುರ್ಚಿಯಲ್ಲಿ ಕಾಲೇಜಿಗೆ ಹೋಗತೊಡಗಿದರು. ದ್ವಿತೀಯ ಬಿಎ ಓದುತಿದ್ದಾಗಲೇ ದೈಹಿಕವಾಗಿ ಮತ್ತು ಮಾನಸಿಕವಾಗಿ ಬದಲಾವಣೆಗಳು ಗೋಚರವಾಗತೊಡಗಿದವು. ಆ ಸಂದರ್ಭದಲ್ಲಿಯೇ, ರಾಧಾ ಅವರಿಂದ ಬಂದ ಪ್ರೀತಿಯ ಕೋರಿಕೆಯನ್ನು ಒಪ್ಪಿಕೊಂಡರು ಕಿರಣ್ ನಾಯಕ್. 17 ವರ್ಷಗಳಿಂದ ಒಬ್ಬರಿಗೊಬ್ಬರು ಆಸರೆಯಾಗಿದ್ದಾರೆ.

‘ನಾನು–ರಾಧಾ ಮದುವೆಗೆ ಮುಂದಾದಾಗ ಮನೆಯವರ ವಿರೋಧ ವ್ಯಕ್ತವಾಯಿತು. ನಾನು ಬದುಕಿದ್ದಾಗಲೇ, ‘ನೀನು ಇನ್ನು ನಮ್ಮ ಪಾಲಿಗೆ ಇಲ್ಲ’ ಎಂದು ಮನೆಯವರು ನನ್ನ ತಿಥಿ ಮಾಡಿದ್ದರು. ಆಗ ಮನನೊಂದು ಆತ್ಮಹತ್ಯೆಗೆ ಪ್ರಯತ್ನಿಸಿದಾಗಲೇ, ಅದು ದೊಡ್ಡ ಸುದ್ದಿಯಾಗಿ ಸಂಗಮ ಫೌಂಡೇಷನ್‌ನ ಮನೋಹರ್ ನಮ್ಮನ್ನು ಬೆಂಗಳೂರಿಗೆ ಕರೆತಂದರು’ ಎನ್ನುತ್ತಾರೆ ಕಿರಣ್.

ಬೆಂಗಳೂರಿಗೆ ಬಂದ ನಂತರ, ನಾಲ್ಕು ಜನ ಮೆಚ್ಚುವಂತೆ ಬದುಕು ಕಟ್ಟಿಕೊಂಡ ಕಿರಣ್ ನಾಯಕ್, ತಮ್ಮ ಸಹೋದರನ ಮನವೊಲಿಕೆಯಿಂದ ಹುಟ್ಟೂರಿಗೆ ಕಾಲಿಟ್ಟರು. ‘ಸತ್ತವರು ಬದುಕಿ ಬಂದಿದ್ದಾರಂತೆ’ ಎನ್ನುತ್ತಾ, ಊರಿನ ಜನ ಬಂದು ನೋಡಿ ಹೋಗಿದ್ದೂ ಆಯಿತು. ಇದಕ್ಕೆಲ್ಲ ತಲೆಕೆಡಿಸಿಕೊಳ್ಳದ ಹೆತ್ತವರು, ನೀನೇ ನಮ್ಮ ಹಿರಿಯ ‘ಮಗ’ ಎನ್ನುತ್ತಾ ಒಪ್ಪಿಕೊಂಡರು, ಅಪ್ಪಿಕೊಂಡರು.

‘ಉಷಾ’ದಿಂದ ‘ಕಿರಣ’ ಎಂದು ಬದಲಾದ ಇವರಿಗೆ ಕರ್ನಾಟಕದಲ್ಲಿ ಬದುಕು ಸರಾಗವಾಗೇನೂ ಇರಲಿಲ್ಲ. 2008ರಲ್ಲಿ ಕರ್ನಾಟಕಕ್ಕೆ ಬಂದ ಕಿರಣ್ ನಾಯಕ್‌ಗೆ ಮೊದಲು ಎದುರಾದದ್ದು ಭಾಷೆ ಸಮಸ್ಯೆ. ಸಂಗಮ ಪುನರ್‌ವಸತಿ ಕೇಂದ್ರದಲ್ಲಿದ್ದ ಅವರಿಗೆ ಹೊಸ ನೆಲೆ ನೀಡಿದ್ದು ಬೆಂಗಳೂರಿನ ಲಿಂಗರಾಜಪುರಂನಲ್ಲಿನ ಎಪಿಡಿ ಸಂಸ್ಥೆ. ಅಲ್ಲಿ ಕನ್ನಡ ಕಲಿತ ಕಿರಣ್, ಡೇಟಾ ಆಪರೇಟರ್ ಆಗಿ ಕೆಲಸ ಮಾಡತೊಡಗಿದರು.

ಸಾಮಾಜಿಕ ಸಮಸ್ಯೆಗಳನ್ನು ಇಟ್ಟುಕೊಂಡು ಫೆಲೋಷಿಪ್ ಪ್ರಸ್ತಾವಗಳನ್ನು ಬರೆಯಲಾರಂಭಿಸಿದರು. ಇದಕ್ಕಾಗಿ ವಿವಿಧ ಎನ್‌ಜಿಒಗಳಿಂದ ಶಿಷ್ಯವೇತನವೂ ಲಭಿಸತೊಡಗಿತು. ಮೊದಲು, ಫೆಲೋಷಿಪ್‌ಗೆ ಆಯ್ಕೆಮಾಡಿಕೊಂಡಿದ್ದು ಚಿಕ್ಕಬಳ್ಳಾಪುರವನ್ನು. ಅಲ್ಲಿ ಲಿಂಗಪರಿವರ್ತಿತರು ಅದರಲ್ಲಿಯೂ ಹುಡುಗಿಯಿಂದ ಹುಡುಗನಾಗಿ ಲಿಂಗಪರಿವರ್ತನೆ ಮಾಡಿಕೊಂಡವರ ಸಮಸ್ಯೆಗಳ ಬಗ್ಗೆ ಬರೆಯತೊಡಗಿದರು. ಅಲ್ಲದೆ, ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಬಲವಂತದ ಮದುವೆಗಳು ಜಾಸ್ತಿ ಆಗುತ್ತಿದ್ದವು. ಜೊತೆಗೆ, ಎಚ್‌ಐವಿ ಪ್ರಕರಣಗಳ ಪ್ರಮಾಣವೂ ಹೆಚ್ಚಾಗಿತ್ತು. ಇಲ್ಲಿನ ಸಮಸ್ಯೆ ಕಂಡು, ಕೊನೆಗೆ, ಚಿಕ್ಕಬಳ್ಳಾಪುರವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು, ಇಲ್ಲಿಯೇ ನೆಲೆ ನಿಂತಿದ್ದಾರೆ.

‘2012ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಅಂಗವಿಕಲರ ಪ್ರಮಾಣ ಶೇ 45ರಷ್ಟು ಇತ್ತು. ಅಲ್ಲಿನ ನೀರಿನ ಸಮಸ್ಯೆಯಿಂದಾಗಿಯೇ ಹಲವರು ಅನಾರೋಗ್ಯಕ್ಕೆ ಈಡಾಗುತ್ತಿದ್ದರು.

13ನೇ ಪುಟಕ್ಕೆ...

ಸಿದ್ದೇಶ್ವರ ಶ್ರೀಗಳಿಲ್ಲದ ಎರಡು ವರ್ಷ...

ಸರಳತೆಗೆ ಮತ್ತೊಂದು ಹೆಸರಿನಂತಿದ್ದ ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಇಹಲೋಕ ತ್ಯಜಿಸಿ ಎರಡು ವರ್ಷಗಳು (ಜ.2) ಕಳೆದಿವೆ. ಆದಾಗ್ಯೂ ಸ್ಥಳೀಯ ಉದ್ಯಾನ, ಚಾರಣಧಾಮ, ಬಸ್ ನಿಲ್ದಾಣ, ಮನೆ...ಹೀಗೆ ಊರಿನೆಲ್ಲೆಡೆ ಅವರ ಆರಾಧನೆ ನಿರಂತರವಾಗಿದೆ.

ಬಸವರಾಜ್ ಸಂಪಳ್ಳಿ

ಭಕ್ತರು ದೊಡ್ಡ ಮಠ ಕಟ್ಟೋಣ ಎಂದರು. ಅವರು ಬೇಡ ಎಂದರು. ಮಹಲು ಕಟ್ಟೋಣ ಎಂದರು. ಬೇಡ ಎಂದರು. ಕಾರು ಕೊಡುತ್ತೇವೆ ಎಂದರು. ಬೇಡವೇ ಬೇಡ ಎಂದರು. ಅಂತಿಮ ದಿನದಲ್ಲಿ ನಿಮ್ಮ ಆರೋಗ್ಯ ಸುಧಾರಣೆಗೆ ಔಷಧ ಕೊಡುತ್ತೇವೆ ಎಂದು ಪ್ರಧಾನಿಯೇ ಫೋನ್ ಮಾಡಿದರು. ಅದಕ್ಕೂ ಬೇಡ ಎಂದರು. ನಿಮ್ಮ ನೆನಪಿಗೆ ಸ್ಮಾರಕ ಮಾಡೋಣ ಎಂದರು. ಅದುವೂ ಬೇಡ ಎಂದರು. ಹೀಗೆ ಬೇಡವೇ ಬೇಡ ಎನ್ನುತ್ತಿದ್ದ ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಬಯಲಲ್ಲಿ ಬಯಲಾಗಿ ಎರಡು ವರ್ಷಗಳು ಗತಿಸಿವೆ.

ಜ್ಞಾನಯೋಗಾಶ್ರಮ ಸೇರಿದಂತೆ ವಿಜಯಪುರ ಜಿಲ್ಲೆಯಲ್ಲಿ ಸುತ್ತಾಡಿದರೆ ಶ್ರೀಗಳು ಅಗಲಿ ಎರಡು ವರ್ಷವಾಯಿತು ಅನಿಸುವುದೇ ಇಲ್ಲ. ಅವರ ಆದರ್ಶಪ್ರಾಯವಾದ ಬದುಕು, ಪ್ರವಚನ, ನೀತಿ ಬೋಧನೆಯನ್ನು ಭಕ್ತರು, ಅನುಯಾಯಿಗಳು ಪ್ರತಿ ದಿನವೂ ಮೆಲುಕು ಹಾಕುವ ಮೂಲಕ ಪ್ರಕೃತಿ, ಪರಿಸರ ಸೇರಿದಂತೆ ಎಲ್ಲೆಲ್ಲೂ ಅವರನ್ನೇ ಕಾಣತೊಡಗಿದ್ದಾರೆ. ಹೀಗೆ ಶ್ರೀಗಳನ್ನು ತಮ್ಮ ತಮ್ಮ ರೀತಿಯಲ್ಲಿ ಜೀವಂತವಾಗಿಟ್ಟುಕೊಳ್ಳುವ ಪ್ರಯತ್ನ ನಡೆಸಿದ್ದಾರೆ.

'ನನ್ನ ಯಾವುದೇ ಸ್ಮಾರಕ ಮಾಡಕೂಡದು' ಎಂದು ಸಿದ್ದೇಶ್ವರ ಶ್ರೀಗಳೇ ಅಂತಿಮ ಅಭಿವಂದನಾ ಪತ್ರ (ವಿಲ್) ದಲ್ಲಿ ಬರೆದಿಟ್ಟಿದ್ದಾರೆ. ಆದರೆ, ಭಕ್ತರು, ಶಿಷ್ಯ ಕೋಟಿ ಕೇಳಬೇಕಲ್ಲ. ಮನದಲ್ಲಿ ಶ್ರೀಗಳ ನಾಮಸ್ಮರಣೆ ಸದಾ ಇರಬೇಕು, ನಾವು ನೋಡುವ ಪ್ರತಿಯೊಂದರಲ್ಲೂ ಶ್ರೀಗಳಿರಬೇಕು ಎಂಬ ತುಡಿತ, ಹಂಬಲ ಅವರ ಕಾಲಾನಂತರದಲ್ಲಿ ಹೆಚ್ಚಾಗಿಸಿಕೊಂಡಿದ್ದಾರೆ.

ಅದು ಶ್ರೀಗಳ ಮೇಲಿನ ಪ್ರೀತಿಯಿಂದಲೋ, ಭಕ್ತಿಯಿಂದಲೋ, ತತ್ವ–ಚಿಂತನೆಗಾಗಿಯೋ, ಅಭಿಮಾನಕ್ಕಾಗಿಯೋ, ತೋರಿಕೆಗಾಗಿಯೋ, ಒಟ್ಟಾರೆ ಸಿದ್ದೇಶ್ವರ ಶ್ರೀಗಳ ಹೆಸರು, ಭಾವಚಿತ್ರವನ್ನು ಕಂಡ, ಕಂಡ ಕಡೆಗಳಲ್ಲಿ ಬಳಸುವುದು ಜಾಸ್ತಿಯಾಗಿದೆ.

ಸಿದ್ದೇಶ್ವರ ಶ್ರೀಗಳು ಇಲ್ಲವಾದರೂ ಅವರ ಸ್ಮರಣೆ ಮೊದಲಿಗಿಂತ ಹೆಚ್ಚಾಗಿದೆ. ಶ್ರೀಗಳಿಲ್ಲ ಎಂಬ ಭಾವ ಮನಸ್ಸಿಗೆ ಆವರಿಸದಂತೆ ತಮಗೆ ಜನಿಸುವ ಮಕ್ಕಳಿಗೆ ಶ್ರೀಗಳ ಹೆಸರನ್ನು ಇಡುತ್ತಿದ್ದಾರೆ. ಅಷ್ಟೇ ಅಲ್ಲ, ಉದ್ಯಾನ, ಚಾರಣಧಾಮ, ಬಸ್ ನಿಲ್ದಾಣ, ಮನೆ, ಅಂಗಡಿ, ಮಳಿಗೆ, ವಾಹನ, ಹೋಟೆಲ್, ಆಸ್ಪತ್ರೆ, ಬಡಾವಣೆ, ಆಟೊ ನಿಲ್ದಾಣ, ಶಾಲೆ, ಕಾಲೇಜು, ಕೋಚಿಂಗ್ ಸೆಂಟರ್, ವೃತ್ತ, ರಸ್ತೆಗಳಿಗೆ ಶ್ರೀಗಳ ಹೆಸರಿಟ್ಟು, ಮನೆ, ಮನೆಗಳಲ್ಲಿ ಭಕ್ತರು ಸ್ವಾಮೀಜಿಯ ಪೋಟೊ ಇಟ್ಟು ಪೂಜಿಸುವ ಮೂಲಕ ಸದಾ ಸ್ಮರಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಇಷ್ಟೇ ಅಲ್ಲದೇ, ಮದುವೆ, ನಾಮಕರಣ, ಗೃಹ ಪ್ರವೇಶ, ಸಭೆ ಸಮಾರಂಭದಲ್ಲಿ ಶ್ರೀಗಳ ಭಾವಚಿತ್ರವನ್ನು, ಅವರ ಅಂತಿಮ ಅಭಿವಂದನ ಪತ್ರವನ್ನು, ಅವರು ಬರೆದ ಪುಸ್ತಕಗಳನ್ನು ಪ್ರೀತಿ–ಅಭಿಮಾನದಿಂದ ಹಂಚುವ ಮೂಲಕ ಶ್ರೀಗಳನ್ನು ಜೀವಂತವಾಗಿಸುವ ಕಾಯಕದಲ್ಲಿ ಭಕ್ತ ವೃಂದ ನಿರತವಾಗಿದೆ.

ವಿಜಯಪುರದಲ್ಲಿ ನಡೆಯುವ ಸರ್ಕಾರಿ ಅಥವಾ ಖಾಸಗಿ ಸಭೆ–ಸಮಾರಂಭಗಳಲ್ಲಿ 'ಸಂತನೆಂದರೆ ಯಾರು, ದಿವ್ಯತೆಯ ಅರಿತವನು, ಸರಳತೆಯ ಸೂತ್ರದಲಿ ಸುಖವ ಕಂಡವನು...' (ಕವಿ ಕೆ.ಸಿ.ಶಿವಪ್ಪ) ಎಂಬ ಗೀತೆಯನ್ನು ಹಾಡಿ ತಮ್ಮ ಮನವ ಸಂತೈಸಿಕೊಳ್ಳುವುದು ಸಂಪ್ರದಾಯವಾಗಿದೆ.

ಅವರು ಬಾಳಿ ಬದುಕಿ, ಪ್ರವಚನ ನೀಡಿದ್ದ ಜ್ಞಾನಯೋಗಾಶ್ರಮದ ಜ್ಞಾನ ಭಂಡಾರದಲ್ಲಿ ಪ್ರದರ್ಶನ, ಮಾರಾಟಕ್ಕೆ ಇಡಲಾಗಿರುವ ಸಿದ್ದೇಶ್ವರ ಶ್ರೀಗಳ ಪೋಟೊ, ಅವರ ಕೃತಿಗಳು, ಪ್ರವಚನದ ಆಡಿಯೊ, ವಿಡಿಯೊ, ಶ್ರೀಗಳ ಅಮೃತವಾಣಿ ಪುಸ್ತಕಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಮಾರಾಟವಾಗುತ್ತಿವೆ.

ಪ್ರತಿನಿತ್ಯ ಜನರು ಆಶ್ರಮಕ್ಕೆ ಭೇಟಿ ನೀಡಿ, ಶ್ರೀಗಳ ಭಾವಚಿತ್ರದ ದರ್ಶನ ಪಡೆದು ಭಕ್ತಿಯಿಂದ ನಮಿಸುತ್ತಾರೆ. ಆಶ್ರಮದ ಗಿಡ–ಮರಗಳ ನೆರಳಲ್ಲಿ ಕುಳಿತು 'ಯುಟ್ಯೂಬ್'ನಲ್ಲಿರುವ ಶ್ರೀಗಳ ಅಮೃತವಾಣಿ, ಪ್ರವಚನಗಳ ಆಡಿಯೊವನ್ನು ಕೇಳಿ ಅಧ್ಯಾತ್ಮದ ಅನುಭೂತಿಯನ್ನು ಪಡೆಯುತ್ತಾರೆ. ಆಶ್ರಮದ ಗಿಡ–ಮರಗಳಲ್ಲಿ ಕುಳಿತ ಪಕ್ಷಿ ಸಂಕುಲಗಳ ಚಿಲಿಪಿಲಿ ನಾದವನ್ನು ಕೇಳಿ ಮನಸ್ಸನ್ನು ಹಗುರು ಮಾಡಿಕೊಳ್ಳುತ್ತಾರೆ. ತಮ್ಮ ಕೈಲಾದಷ್ಟು ಧನ, ಧಾನ್ಯವನ್ನು ಆಶ್ರಮಕ್ಕೆ ನೀಡಿ ಹೋಗುತ್ತಾರೆ. ಹಿಂದಿಗಿಂತಲೂ ಹೆಚ್ಚು ಅನ್ನ ದಾಸೋಹ ನಿರಂತರವಾಗಿ ನಡೆಯುತ್ತಿದೆ.

ಶ್ರೀಗಳು ಆಶ್ರಮದ ಪರಿಸರದಲ್ಲಿ ಪ್ರಶಾಂತ ವಾತಾವರಣವನ್ನು ಬಯಸುತ್ತಿದ್ದರು, ಆಶ್ರಮದಲ್ಲಿ ಶ್ರೀಗಳಿದ್ದಾಗ ಏನಾದರೂ ಅಂದಾರು ಎಂಬ ಅವ್ಯಕ್ತ ಭಯದಿಂದ ಜನ ಅಂಜುತ್ತಿದ್ದರು, ಎಂಥವರೇ ಬಂದರು ಶಾಂತತೆಯನ್ನು ಕಾಪಾಡುತ್ತಿದ್ದರು. ಆದರೆ ಅವರು ಅಗಲಿದ ನಂತರ ಇದೇ ಮಾತನ್ನು ಹೇಳಲು ಆಗುತ್ತಿಲ್ಲ ಎನ್ನುವ ಬೇಸರ ಭಕ್ತರಲ್ಲಿದೆ.

'ಈ ಪ್ರಪಂಚದಲ್ಲಿ ಒಳ್ಳೆಯದನ್ನೆಲ್ಲ ಹೇಳಿ ಆಗಿದೆ, ಉಳಿದಿರುವುದು ಆಚರಣೆ ಮಾತ್ರ' ಎನ್ನುವ ಭೂಮಿತೂಕದ ಮಾತನ್ನು ಸಿದ್ದೇಶ್ವರ ಸ್ವಾಮೀಜಿ ಹೇಳಿದ್ದಾರೆ. ಈಗ ಏನಿದ್ದರೂ ಆಚರಣೆ ಮಾತ್ರ ಉಳಿದಿದೆ. ಈ ಮೂಲಕ ಶ್ರೀಗಳನ್ನು ಜೀವಂತವಾಗಿ ಇರಿಸಿಕೊಳ್ಳಬೇಕು.

ವಿಜಯಪುರದ ಜ್ಞಾನಯೋಗಾಶ್ರಮದ ಆವರಣದಲ್ಲಿ ಇಡಲಾಗಿರುವ ಸಿದ್ದೇಶ್ವರ ಶ್ರೀಗಳ ಭಾವಚಿತ್ರಕ್ಕೆ ನಮಿಸುತ್ತಿರುವ ಭಕ್ತರು ಚಿತ್ರಗಳು: ಸಂಜೀವ ಅಕ್ಕಿ

ವಿಜಯಪುರದ ಆಶ್ರಮ ರಸ್ತೆಯ ವೃತ್ತವೊಂದಕ್ಕೆ ಸಿದ್ದೇಶ್ವರ ಶ್ರೀಗಳ ಹೆಸರಿಡಲಾಗಿದೆ.

'ಅವರಿಲ್ಲ ಎನಿಸಿಲ್ಲ....'

'ಶ್ರೀಗಳು ಭೌತಿಕವಾಗಿ ಇಲ್ಲದೆ ಎರಡು ವರ್ಷ ಆಯ್ತು. ಆದರೆ, ಅವರಿಲ್ಲ ಎಂದು ನಮಗೆ ಎಂದೂ ಅನಿಸಿಲ್ಲ. ಇಲ್ಲೇ ಯಾವುದೋ ಹಳ್ಳಿಗೆ ಪ್ರವಚನಕ್ಕೆ ಹೋಗಿದ್ದಾರೆ ಅನಿಸುತ್ತಿದೆ. ಅಪ್ಪಗೋಳು ಇಲ್ಲ ಎನಿಸುತ್ತಿಲ್ಲ. ಅವರ ಶಕ್ತಿ ನಮ್ಮಲ್ಲಿ ಕೆಲಸ ಮಾಡುತ್ತಿದೆ' ಎಂದು ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಬಸವಲಿಂಗ ಸ್ವಾಮೀಜಿ ಹೇಳುತ್ತಾರೆ.

'ಶ್ರೀಗಳ ತತ್ವ, ಚಿಂತನೆ, ವಿಚಾರಧಾರೆಗಳು ಜನಮಾನಸದಿಂದ ಮರೆಯಾಗಬಾರದು ಎಂಬ ಕಾರಣಕ್ಕೆ ಗುರು ನಮನ ಕಾರ್ಯಕ್ರಮ ನಡೆಸಿದ್ದೇವೆ. ಶ್ರೀಗಳು ಅವರ ಗುರುಗಳಿಗಾಗಿ ಗುರು ನಮನ ಕಾರ್ಯಕ್ರಮ ಮಾಡುತ್ತಿದ್ದರು. ಈಗ ನಮ್ಮ ಗುರುಗಳದ್ದು, ನಾವು ಮಾಡುತ್ತಿದ್ದೇವೆ. ಇದು ನಮ್ಮ ಕರ್ತವ್ಯ. ಶ್ರೀಗಳು ಬಯಸದಿದ್ದರೂ ನಮ್ಮ ಗುರುಗಳ ಆರಾಧನೆ ಮಾಡಬೇಕಾಗಿರುವುದು ನಮ್ಮ ಕರ್ತವ್ಯ. ಕೆಲವೊಬ್ಬರು ಶ್ರೀಗಳು ನೆನಪುಳಿಯಬೇಕು ಎಂಬ ಕಾರ್ಯದಲ್ಲಿ ತೊಡಗಿದ್ದಾರೆ. ಶ್ರೀಗಳು ಜನರ ಮನದಲ್ಲಿ ಸದಾಕಾಲ ಉಳಿಯಬೇಕು. ಹಾಗಂತ ಅವರ ತತ್ವಕ್ಕೆ ವಿರುದ್ಧವಾದುದ್ದು ಮಾಡಲು ಅವಕಾಶವಿಲ್ಲ. ಶ್ರೀಗಳು ಯಾವುದು ಮಾಡಬಾರದು ಎಂದಿದ್ದರೋ ಅದನ್ನು ಮಾಡಬಾರದು, ಜನರೇ ಅದನ್ನು ತಿಳಿದುಕೊಳ್ಳಬೇಕು' ಎನ್ನುತ್ತಾರೆ.

ಹುಲ್ಲುಹುಲ್ಲಿಗೂ ಚೆಲ್ಲಂಬ್ರಿಗೊ..

ರಶ್ಮಿ ಎಸ್

ಎಳ್ಳಮವಾಸೆಯ ಸಂಭ್ರಮವೇ ಬಜ್ಜಿ ತಯಾರಿ, ಸಹಭೋಜನ, ವನ ಭೋಜನಗಳಲ್ಲಿ. ಕಲಬುರ್ಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಬಜ್ಜಿ ತಯಾರಿ ಬಲು ಜೋರು. ಯಾವುದೇ ಚರ್ಚೆಗಳಿಲ್ಲದೇ ಎಲ್ಲ ಮನೆಗಳಲ್ಲಿಯೂ ಒಗ್ಗಟ್ಟಿನಿಂದ ಕೆಲಸ ಮಾಡುವುದು ಬಜ್ಜಿ ತಯಾರಿ ಮಾತ್ರ. ಎಳೆಕಾಳುಗಳು, ಸೊಪ್ಪು, ಹೋಳುಕಾಯಿಗಳು, ಹೊಸ ಹುಣಸೇಕಾಯಿಯೊಂದಿಗೆ ತಯಾರಿಸುವ ಸ್ವಾದಿಷ್ಟ ಖಾದ್ಯ ಬಜ್ಜಿ.

ಅವರೆಕಾಳು, ತೊಗರಿಕಾಳು, ಬಟಾಣಿಕಾಳು, ಅಲಸಂದೆ ಕಾಳು, ಹೆಸರು, ಮಡಕೆ, ಹುರುಳಿ ಎಲ್ಲ ಹಸಿಕಾಳುಗಳನ್ನೂ ಸುಲಿಯಬೇಕು. ಇದು ಮಕ್ಕಳ ಪಾಲಿನ ಕೆಲಸ. ಹೆಸರುಹೆಸರಕಾಯಿ, ಮನೀಗೆ ಬಂದೋರು ಅವರಿಕಾಯಿ, ಕುಳ್ಯಾಗ ಕುಂತೋರು ಮಡಕಿಕಾಯಿ, ಉರಳಿಬಿದ್ದೋರಿಗೆ ಹುರಳಿಕಾಯಿ, ಒಡದು ತಿಂದೋರಿಗೆ ಸೇಂಗಾದ ಕಾಯಿ, ಕಾಯಿ–ಕಾಯಿ ಆಡೂ ಕಾಯಿ, ಸುಲಿಯೂ ಕಾಯಿ, ಕಾಳುಬೇಕಾದ್ರ ರಾತ್ರಿತನಾ ಕಾಯಿ ಅಂತ ಹಾಡು ಹೇಳುತ್ತ, ಪರಸ್ಪರ ಒಗಟುಗಳನ್ನು ಹೇಳುತ್ತ, ಕಾಳು ಸುಲಿಯಲು ಕೂರುತ್ತಾರೆ.

ಸೊಪ್ಪು ಸೋಸುವ ಸಂಯಮದ ಕೆಲಸ ಸದಾ ಮನೆಯ ಹಿರಿಯರ ಪಾಲಿನದ್ದು. ಅಂಗಳದಲ್ಲಿ, ಪಡಸಾಲೆಗಳಲ್ಲಿ ಕುಳಿತು, ಪಾಲಕ್, ಮೆಂತ್ಯ, ಹುಂಚಿಕ್ಕಿ, ಪುಂಡಿಪಲ್ಯ, ಕಿರಕಸಾಲಿ, ರಾಜಗಿರಾ ಹತ್ತು ಹಲವು ಸೊಪ್ಪುಗಳನ್ನೆಲ್ಲ ಸೋಸಿ, ತೊಳೆದು ಬಿಳಿ ಪಂಚೆಯ ಮೇಲೆ ಆರಿ ಹಾಕುವರು.

ಇವನ್ನೆಲ್ಲ ಒಗ್ಗರಣೆಗೆ ಹಾಕಿ, ಕಡಲೆ ಹಿಟ್ಟನ್ನು ದೋಸೆ ಹಿಟ್ಟಿನ ಹದಕ್ಕೆ ಮಿಶ್ರಣ ಮಾಡಿ ಸುರಿಯುತ್ತಾರೆ. ಹಿಟ್ಟಿನ ಹಸಿವಾಸನೆ ಹೋಗುವವರೆಗೂ ಕೈ ಕದಡುತ್ತಲೇ ಇರಬೇಕು. ಹುಣಸೇಕಾಯಿಯನ್ನು, ಹಸಿಶುಂಠಿ, ಬೆಳ್ಳುಳ್ಳಿಯೊಡನೆ ಅರೆದು, ಈ ಮಿಶ್ರಣಕ್ಕೆ ಬೆರೆಸುತ್ತಾರೆ. ಒಂದು ಹದಕ್ಕೆ ಬಂದ ನಂತರ ಎಲ್ಲ ಸೊಪ್ಪುಗಳನ್ನೂ ಒಂದೊಂದಾಗಿ ಬೆರೆಸುತ್ತಾರೆ. ಈ ಖಾದ್ಯವನ್ನೇ ಬಜ್ಜಿ ಎಂದು ಕರೆಯುವುದು.

ಎಳ್ಳಮವಾಸೆಗೆ ಎಳ್ಳಷ್ಟೇ ಬಿಸಿಲು ಎಂಬ ಆಡು ಮಾತನ್ನು ಆಡುತ್ತಲೇ ಚಳಿಗಾಲದ ಎಳೆ ಬಿಸಿಲಿನಲ್ಲಿ ಎಲ್ಲ ಎಣ್ಣೇಕಾಳುಗಳ ಆಹಾರ ಖಾದ್ಯಗಳನ್ನು, ಸಿರಿಧಾನ್ಯಗಳ ಖಾದ್ಯದೊಂದಿಗೆ ಊಟ ಸವಿಯುತ್ತಾರೆ.

ನಿಮ್ಮ ಊಟದ ತಟ್ಟೆಯೊಳಗೆ ಹದಿನಾರು ಬಗೆಯ ಖಾದ್ಯಗಳು ಇದ್ದೇ ಇರುತ್ತವೆ. ಬಜ್ಜಿ ಜೊತೆಗೆ ಕಾದೆಣ್ಣೆ (ಗಾಣದೆಣ್ಣೆಯನ್ನು ಹದವಾಗಿ ಕಾಯಿಸಿ, ಸಾಸಿವೆ, ಜೀರಿಗೆ ಮತ್ತು ಬೆಳ್ಳುಳ್ಳಿಯನ್ನು ಕೊಚ್ಚಿ ಹಾಕಿ, ಕರಿಬೇವನ್ನೂ ಸಿಡಿಸಿ ಇಟ್ಟಿರುತ್ತಾರೆ.) ಬಡಿಸಿ, ಸಪ್ಪನ ಬ್ಯಾಳಿ (ಬೇಯಿಸಿದ ತೊಗರಿಬೇಳೆಗೆ ಸಾಸಿವೆ, ಜೀರಿಗೆ ಒಗ್ಗರಣೆ ಮಾತ್ರ ಇರುತ್ತದೆ), ಎಣ್ಣೆಗಾಯಿ (ಬದನೆಕಾಯಿ ತಿನ್ನದವರಿಗಾಗಿ ಹೀರೆಕಾಯಿ, ಡೊಣ್ಣಮೆಣಸಿನಕಾಯಿಯ ಎಣ್ಣೆಗಾಯಿಯನ್ನೂ ಮಾಡಲಾಗುತ್ತದೆ.) ಮೂಲಂಗಿ ಪಚಡಿ (ಮೂಲಂಗಿ, ಮೂಲಂಗಿ ಸೊಪ್ಪನ್ನು ಸಣ್ಣದಾಗಿ ಕೊಚ್ಚಿ, ಹುರಿದ ಕಡಲೆಬೀಜ ಇದಕ್ಕೆ ಸೇರಿಸಿ, ಅಗಸೆ ಹಿಂಡಿ ಅಥವಾ ಗುರೆಳ್ಳುಹಿಂಡಿಯನ್ನು ಕಲಿಸಲಾಗಿರುತ್ತದೆ), ಇನ್ನು ಬಗೆಬಗೆಯ ಕೋಸಂಬರಿಗಳು, ಕೆಂಪು ಮೆಣಸಿನ ಚಟ್ನಿ ರಂಜಕ, ಕಲ್ಯಾಣಿ ಚಟ್ನಿ, ಕರಿಚಟ್ನಿ, ಟೊಮೆಟೊ ಕಾಯಿ ಚಟ್ನಿ. ಎರಡನೆಯ ಸಾಲಿಗೆ ಬಂದು ಕೂರುತ್ತವೆ. ಮೂರನೆಯ ಸಾಲಿನಲ್ಲಿ ಸೇಂಗಾ ಪುಡಿ, ಅಗಸಿ ಪುಡಿ, ಗುರೆಳ್ಳುಪುಡಿ, ಗಟ್ಟಿ ಮೊಸರು.

ಇದಾದ ಮೇಲೆ, ಎಲೆಗೆಲ್ಲ ತಾನೇ ಸುಂದರಿ ಎಂಬಂತೆ ಠೀವಿಯಿಂದ ಝುಣಕಾ ಗಿರಾರೆ ಅಂತ ಹಾಡಿಸಿಕೊಂಡೇ ತಟ್ಟೆಗೆ ಬರುವ ಝುಣಕದ ಒಡಿ. ನಿಮ್ಮ ನಿಮ್ಮ ತಟ್ಟೆಯ ಪಕ್ಕ, ಈರುಳ್ಳಿ ಕಂದು, ಎಳೆಮೆಂತ್ಯ ಸೊಪ್ಪು, ಹಕ್ಕರಿಕೆ ಸೊಪ್ಪು, ನಿಂಬೆ ಹಣ್ಣಿನ ಹೋಳು, ಗಜ್ಜರಿ, ಸೌತೆಕಾಯಿಗಳ ಉದ್ದುದ್ದನೆಯ ಹೋಳುಗಳು ಬಂದು ಕೂರುತ್ತವೆ.

ಇವುಗಳ ನಂತರ ಆಹಹಾ... ರಾಜ ಠೀವಿಯಲ್ಲಿ ಬರುವ ಬಿಳಿ ಜೋಳದ ಖಟಿ ರೊಟ್ಟಿ, ನಾನೇ ಈ ಹಬ್ಬದ ವಿಶೇಷ ಆಹ್ವಾನಿತ ಎಂಬಂತೆ ಬರುವ ಕರಿ ಎಳ್ಳು ಸವರಿದ ಸಜ್ಜೆ ರೊಟ್ಟಿಗಳು. ಖಳ... ಖಳಕ್ ಖಟ್... ಖಟಕ್ ಅಂತ ಮುರಿಯುವ ಸದ್ದಿನೊಂದಿಗೆ ಬರುತ್ತವೆ. ಕೆಲವರಂತೂ ರೊಟ್ಟಿಯನ್ನೇ ತಟ್ಟೆಯಾಗಿಸಿ, ಅದರೊಳಗೇ ಬಜ್ಜಿ ಪಲ್ಯ ಹಾಕಿಸಿಕೊಂಡು ದಂಡೆಯಿಂತ ತಿನ್ನುತ್ತ ಬರುತ್ತಾರೆ.

ಮಕ್ಕಳಿಗಾಗಿ ಪದರು ಚಪಾತಿ, ರೊಟ್ಟಿಯುಂಡವರೂ ಚಪಾತಿಗೇನೂ ಮೋಸ ಮಾಡುವುದಿಲ್ಲ. ಪಾಪ.. ಅದನ್ಯಾಕೆ ಬಿಡಬೇಕು, ಬೇಸರ ಮಾಡಿಸಬೇಕು ಅಂತ.. ಅನ್ಕೊಂಡು ಅದಕ್ಕೂ ನ್ಯಾಯ ಸಲ್ಲಿಸುತ್ತಾರೆ.

ನಂತರದ ಪಾಳಿ, ಸೇಂಗಾ ಹೋಳಿಗೆ, ಎಳ್ಳುಹೋಳಿಗೆ ಮೇಲೆ ಒಂದಷ್ಟು ಹರಳುಗಟ್ಟಿದ ತುಪ್ಪ ಸುರಿದರೆ ಕಂದು ಬಣ್ಣದ ತಟ್ಟೆಯೊಳಗೆ ಚಂದ್ರನಂಥ ತುಪ್ಪದ ಕುಪ್ಪೆ. ಅದನ್ನು ಸವರಿ ಸವಿಯುವಾಗ, ಬದುಕೂ ಇಷ್ಟೇ ಸವಿಸವಿಯಾಗಿ ಸವೆದು ಹೋಗಲಿ ಎಂಬಂತನಿಸುತ್ತದೆ...

ಬಿಸಿಯನ್ನ, ತುಪ್ಪ, ಬಜ್ಜಿ, ಎಣ್ಣೆಗಾಯಿ ಎಸರು ಉಣ್ಣುವವರಿಗಾಗಿಯೇ ತುಸು ಬಿಸಿಯನ್ನ ಇದ್ದರೆ, ಉಳಿದಂತೆ ಶಾಸ್ತ್ರಕ್ಕೆ ಮಾತ್ರ ಅನ್ನದ ಪಾತ್ರೆ. ಚಿತ್ರಾನ್ನ. ನಂತರ ಬಿಳಿಜೋಳದ ಬಾನ. ಜೋಳ ನೆನೆಯಿಟ್ಟು, ಕುಟ್ಟಿ ಹೊಟ್ಟು ತೂರಿ ಉಳಿದ ತಿರುಳನ್ನು ಹದವಾದ ಮಜ್ಜಿಗೆಯಲ್ಲಿ ಬೇಯಿಸಿ, ಬಿಳಿಬೋನ ಮಾಡಲಾಗುತ್ತದೆ. ಬಾನದ ಪಾಳಿ ಬರುವುದರೊಳಗೆ ಬಾನನ್ನು ದಿಟ್ಟಿಸುತ್ತ ಊಟ ಮುಗಿಸುವ ಕೊನೆಯ ಹಂತಕ್ಕೆ ಬಂದಿರುತ್ತಾರೆ.

ಹೊಲಕ್ಕೆ ಬಂದೊಡನೆ ತಾಮ್ರದ ಬಿಂದಿಗೆಯಲ್ಲಿ ತಂದ ನೀರಿನಿಂದ ಗಂಗೆ ಪೂಜೆ ಮಾಡಿ, ಹೊಲದ ಸಿರಿಗೆ ಗೌರಿಯ ಪೂಜೆ ಮಾಡಿ, ನೈವೇದ್ಯಕ್ಕೆ ಇವೆಲ್ಲವನ್ನೂ ಮೊದಲು ಒಂದು ಮಡಕೆಯೊಳಗೆ ಹಾಕಿ, ಗಿರ್ಮಿಟ್ಟನಂತೆ ಎಲ್ಲವನ್ನೂ ತಿರುವಿ, ಮನೆಯ ಹಿರಿಯನಿಗೆ ಆ ಮಡಕೆ ನೀಡಲಾಗುತ್ತದೆ. ಜಮೀನಿನ ಉದ್ದಗಲಕ್ಕೂ ಹಿರಿಯ ಓಡಾಡುತ್ತ ಹುಲ್ಲುಲ್ಲಿಗೂ... ಅಂತ ಕೂಗುತ್ತ ಒಂದೊಂದೇ ತುತ್ತು ಚೆಲ್ಲಾಡುತ್ತ ಹೊರಡುತ್ತಾನೆ. ಹಿಂದೆ ಹಿರಿಯನ ಬಾಲಂಗೋಸಿಯಂತೆ ಮನೆಯ ಸದಸ್ಯರೆಲ್ಲ ಚಲ್ಲಂಬ್ರಿಯೋ ಅನ್ನುತ್ತ ಓಡಾಡುತ್ತಾರೆ. ಇದು ಹುಲ್ಲುಹುಲ್ಲಿಗೆ.. ಚೆಲ್ಲುವೆವು ಅಮೃತ ಎಂಬ ಮಾತಿನ ಅಪಭ್ರಂಶವಾಗಿದೆ. ಇದನ್ನೇ ಚರಗ ಚೆಲ್ಲುವುದು ಎಂದು ಕರೆಯಲಾಗುತ್ತದೆ.

ಹಸಿರುಟ್ಟ ಭೂಮ್ತಾಯಿ, ಕಾಳುಬೆಳೆ ತುಂಬಿಕೊಂಡು ಬಸುರಿಯಾಗಿರುವುದರಿಂದ ಬಯಕೆಯ ಊಟ ಉಣ್ಣಿಸುವ ವಿಧಾನ ಇದು.

ಊಟಕ್ಕೆ ನೀಡುವಾಗ ಯಾರು ಏನೇನು ಸಹಾಯ ಮಾಡಿದರು, ಅದಕ್ಕೇ ಅಡುಗೆ ರುಚಿ ಆಯ್ತು ಎಂದೆಲ್ಲ ಹರಟುತ್ತಾರೆ. ನಾನು ಸುಲಗಾಯಿ ಸುಲಿದಿದ್ದಕ್ಕೇ, ನಾನು ಸೊಪ್ಪು ಸೋಸಿ ನೀಡಿದ್ದಕ್ಕೆ, ನಾನು ಅಡುಗೆ ಮಾಡುವಾಗ ಮಾತಾಡಿಸಿದ್ದಕ್ಕೇ. ಹೀಗೆ ಏನೆಲ್ಲ ಕಾರಣಗಳು ಸಿಗುತ್ತವೆಯೋ ಎಲ್ಲವನ್ನೂ ಹೇಳುತ್ತ, ಹಾಡಿ ಹೊಗಳುತ್ತ ಊಟ ಮಾಡುತ್ತಾರೆ.

ಮನೆಯಲ್ಲಿ ವರ್ಷಕ್ಕೆ ಒಮ್ಮೆಯಾದರೂ ಪರಸ್ಪರ ಹೊಗಳಿಕೊಳ್ಳುತ್ತ, ಮಾಡಿದ ಕೆಲಸಗಳನ್ನು ಮೆಚ್ಚುತ್ತ, ಬುತ್ತಿ ಸವಿಯುತ್ತಾರೆ.

ಬದುಕುವ ಭೂಮಿ ಒಂದೇ ಆಗಿರುವಾಗ, ಊಟವನ್ನೂ ಹಂಚಿ ಉಣ್ಣಬೇಕು ಎಂಬ ತತ್ವದಂತೆ ಯಾವ ಧರ್ಮಗಳ ಎಲ್ಲೆಗಳಿಲ್ಲದೆ ಎಳ್ಳಮವಾಸೆ ಸಂಭ್ರಮವನ್ನು ಹಂಚಿಕೊಳ್ಳುತ್ತಾರೆ.

ಎಳ್ಳಮವಾಸೆ ಅಂಗವಾಗಿ ಹೊಲದಲ್ಲಿ ಚರಗಾ ಚೆಲ್ಲುತ್ತಿರುವ ರೈತರು ಚಿತ್ರ: ತಾಜುದ್ದೀನ್ ಆಜಾದ್

ಎಳ್ಳಮವಾಸೆ ಅಂಗವಾಗಿ ಕಲಬುರಗಿಯ ಪಬ್ಲಿಕ್ ಗಾರ್ಡನ್‌ನಲ್ಲಿ ಸಹಭೋಜನದಲ್ಲಿ ತೊಡಗಿರುವುದು ಚಿತ್ರ: ಪ್ರಶಾಂತ್ ಎಚ್.ಜಿ

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೆಂಗಾವಿ

ಕೆಂಗಾವಿ (ನಾ). ಕೆಂಪುಬಣ್ಣದ ಮಣ್ಣು
(ಕೆಂ + ಕಾವಿ)

ರಾಕ್ಷಸರು ಮತ್ತು ವಾನರರ ಮಧ್ಯೆ ಯುದ್ಧ ಪ್ರಾರಂಭವಾದ ದಿನವನ್ನು ಕುವೆಂಪು ವರ್ಣಿಸುತ್ತ ಪ್ರಕೃತಿಯಲ್ಲಿ ಅದು ಪ್ರತಿಫಲನಗೊಂಡದ್ದನ್ನು ಚಿತ್ರಿಸುವಾಗ 'ಕೆಂಗಾವಿ' ಪದ ಬಳಸಿದ್ದಾರೆ. ಸಂಜೆಯ ಹೊತ್ತಿಗೆ ಕಾಳಗದ ಭೂಮಿಯಲ್ಲಿ ಹರಿದ ಕೆನ್ನೀರು ರಕ್ತದ ಆವಿಗೆ ಮೋಡಗಳು ರಕ್ತವರ್ಣದವಾದವು. ಆ ಸಂಜೆಯ ಆಗಸವು ರಕ್ತದಲ್ಲಿ ಮಿಂದು ಕೆಂಪುಬಣ್ಣದ ಮಣ್ಣಿನ ವಸ್ತ್ರ ತೊಟ್ಟು ಸಾಕ್ಷಾತ್ ಮೃತ್ಯುವಿನಿಂದ ದೀಕ್ಷೆ ಪಡೆದ ಭಯಂಕರ ತಾಂತ್ರಿಕ ತಪಸ್ಸಾದಕ ಕಾಪಾಲಿಕನಂತೆ ಜ್ವಲಿಸುತ್ತಿತ್ತು.

ಬೈಗಿನ ದಿಗಂಬರಂ, ಕಾಳಗದ
ಕಳನ ಕೆನ್ನೀರಾವಿಗುಡಿಸಿದ ಮುಗಿಲ್ಗಳಿಂ,
ನೆತ್ತರೊಳ್ ಮಿಂದು ಕೆಂಗಾವಿಯಂ ತೊಟ್ಟೆಸೆವ,
ಸಾಕ್ಷಾತ್ ಮೃತ್ಯುವಿಂ ದೀಕ್ಷೆಯನ್ನಾಂತ, ತಾಂತ್ರಿಕ
ತಪಸ್ಸಾಧನಾಸಕ್ತ, ರಕ್ತಾಜಿನಾಭೀಳ
ಕಾಪಾಲಿಕನವೋಲ್ ಜಿನದ್ವೇಷವೇಷದಿಂ
ಜ್ವಲಿಪನ್ನೆಗಂ!

ಲೋಲಬಾಲೆ

'ಲೋಲ' ಪದವು ಅತ್ತಿತ್ತ ಅಲುಗಾಡುವ, ಮಿಣುಕುವ, ಪ್ರೀತಿಯ ಅರ್ಥಗಳನ್ನು ಒಳಗೊಂಡಿದೆ. ಬಾಲೆ-ಹದಿನಾರು ವರ್ಷದ ಒಳಗಿನ ಹುಡುಗಿ, ಕುವೆಂಪು ಅವರು ಆ ವಯಸ್ಸಿನ ಹರೆಯ ಹೊಸ್ತಿಲ ತರುಣಿಯನ್ನು ಅವಳ ಮನದ ಚಂಚಲತೆ, ಪ್ರೀತಿಯ ಆಕಾಂಕ್ಷೆ, ಮಿಣುಕುವ ಲಜ್ಜೆಭರಿತ ನಡೆ ನೋಟವನ್ನು 'ಲೋಲಬಾಲೆ' ಪದ ರಚಿಸಿ ಪ್ರಯೋಗಿಸಿದ್ದಾರೆ.

'ಲೋಲಬಾಲೆ ನೆನಪು ಬಂದು
ಹೋದಬಾಳ ಬೆಳಕ ತಂದು
ಚಿತ್ತಭಿತ್ತಿಯಲ್ಲಿ ನಿಂದು
ನಲಿದು ಕುಣಿದು ಹಿಂದು ಮುಂದು,
ನಲ್ಮೆದೋರಿ ಮೆರೆವಳು:
ಒಲ್ಮೆದೋರಿ ಕರೆವಳು! (ಹೋದ ಬಾಳ ಬೆಳಕು - ಪ್ರೇಮ ಕಾಶ್ಮೀರ)

ತಂತಿಲಿಯಂಚೆ

ತಂತಿಲಿಯಂಚೆ = ತಂತಿ ಇಲ್ಲದ ಅಂಚೆ,
ಕುವೆಂಪು ಅವರು 'ರೇಡಿಯೋವನ್ನು 'ತಂತಿಲಿಯಂಚೆ' ಎಂಬ ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ.

ತಂತಿಲಿಯಂಚೆ ನೆರವಾಗಿ ಈ ವಾಣಿ
ಅಲ್ಲಿಯೂ ಕೇಳ್ದುದೆಂದರಿಯೆ ಸೊಗುಸುವೆನಿಲ್ಲಿ:
ಆದರಳನೆಂದಿಗೂ ಕೇಳ್ದುದಿಲ್ಲೆಂದಲ್ಲಿ!
(ಕವಿಯ ತೃಪ್ತಿ -ಕೃತಿಕೆ)

ತಾನು ತನ್ನ ಕಾವ್ಯದ ವೀಣೆಯನ್ನು ಮಿಡಿಯುವುದು ದೂರದ ಹೊನಲುಲು ಹವಾಯಿಗಳಲ್ಲಿ ಕೇಳಿಸಲಿ ಎಂದು ಅಲ್ಲ. ತಂತಿಲಿಯಂಚೆ ರೇಡಿಯೋವಿನ ಸಹಾಯದಿಂದ ನನ್ನ ವಾಣಿ ಅಲ್ಲಿಯೂ ಕೇಳುವುದೆಂದರೆ ಆನಂದಪಡುವೆನು. ಅಲ್ಲಿ ಅದು ಕೇಳಿಸಲಿಲ್ಲವೆಂದು ವ್ಯಥೆ ಪಡುವುದಿಲ್ಲ ಎಂದು ಅವರು 'ಕವಿಯತೃಪ್ತಿ' ಕವನದಲ್ಲಿ ತಿಳಿಸಿದ್ದಾರೆ.

'ನಮ್ಮ ಆತ್ಮ ಪ್ರತ್ಯಯವನ್ನು ಆ ಅನ್ಯ ಹೃದಯ ನಿಕಷಗಳಿಗೆ ಒಪ್ಪಿಸಿ ಬಿಡಬಾರದು' (ಸ.ಗ.2.ಪು472) ಎಂಬ ಅರಿವಿನಿಂದ ರಚಿತವಾಗಿರುವುದು ಈ ಮೇಲಿನ ಕವನ.

ಮುನ್ನೋಟ 29-12-2024 ರಿಂದ 04-01-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆದಾಯವು ನಿಮ್ಮ ನಿರೀಕ್ಷೆಗೆ ಹತ್ತಿರವಿರುತ್ತದೆ. ಬಂಧುಗಳ ನಡುವೆ ವ್ಯವಹಾರ ಮಾಡುವುದು ಒಳಿತಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ಕೆಲವರಿಗೆ ಹಳೆ ಕಾಯಿಲೆಗಳು ಮರುಕಳಿಸಬಹುದು. ಸಂಗಾತಿಯ ಸಹಾಯದಿಂದ ಉದ್ಯೋಗದಲ್ಲಿ ಸ್ವಲ್ಪ ಪ್ರಗತಿ ಇರುತ್ತದೆ. ವಿದೇಶಿ ವ್ಯವಹಾರಗಳಲ್ಲಿ ಮಂದಗತಿಯನ್ನು ಕಾಣಬಹುದು. ಹಣಕಾಸಿನ ವ್ಯವಹಾರದಲ್ಲಿ ಎಚ್ಚರವಿರಲಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಸಂಗಾತಿಯ ಸಹಕಾರದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಸರ್ಕಾರಿ ಕೆಲಸಗಳಿಂದ ಆದಾಯ ಪಡೆಯುತ್ತಿದ್ದವರಿಗೆ ಆದಾಯ ಕಡಿಮೆಯಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ಆರೋಗ್ಯದ ಕಡೆ ಗಮನವಿರಲಿ. ಅವಿವಾಹಿತರಿಗೆ ವಿವಾಹ ಯೋಗವಿದೆ. ವೃತ್ತಿಯಲ್ಲಿ ಒತ್ತಡಗಳು ಹೆಚ್ಚಾಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭದಲ್ಲಿ ಆಲಸ್ಯವಿದ್ದರೂ ನಂತರ ಸರಿಯಾಗುತ್ತದೆ. ಕೃಷಿ ಭೂಮಿ ಖರೀದಿ ಯೋಗವಿದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಮಕ್ಕಳ ಏಳಿಗೆ ನಿರೀಕ್ಷೆಗಿಂತ ಸ್ವಲ್ಪ ಕಡಿಮೆ ಇರುತ್ತದೆ. ಶ್ವಾಸಕೋಶದ ತೊಂದರೆಗಳಿರುವವರು ಎಚ್ಚರ ವಹಿಸಿ. ಸಂಗಾತಿಯು ನಿಮ್ಮ ಸಾಕಷ್ಟು ಕೆಲಸಗಳಿಗೆ ಸಹಕಾರ ನೀಡುವರು. ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಈ ವಾರ ಬಹಳ ಚುರುಕಾಗಿರುವಿರಿ. ಆದಾಯದಷ್ಟೇ ಖರ್ಚು ಇರುತ್ತದೆ, ಆದ್ದರಿಂದ ಸರಿಯಾಗಿ ಹಣ ನಿರ್ವಹಣೆ ಮಾಡಿ. ವಿದ್ಯಾರ್ಥಿಗಳಿಗೆ ಉತ್ತಮ ಪ್ರಗತಿ ಇರುತ್ತದೆ. ತಲೆನೋವು ಇರುವವರು ಹೆಚ್ಚು ಎಚ್ಚರ ವಹಿಸಿ. ಮಕ್ಕಳ ಬಗ್ಗೆ ಉತ್ತಮ ವಾರ್ತೆಗಳನ್ನು ಕೇಳಬಹುದು. ಸಂಗಾತಿಯಿಂದ ಹಣಕ್ಕಾಗಿ ಬೇಡಿಕೆ ಬರಬಹುದು. ಆಮದು ಮತ್ತು ರಫ್ತು ವ್ಯಾಪಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಸೌಮ್ಯವಾದ ಮಾತಿನಿಂದ ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ಹಿರಿಯರ ಕೃಷಿ ಭೂಮಿಯಿಂದ ನಿಮಗೆ ಆದಾಯ ಹೆಚ್ಚಾಗುತ್ತದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವೃತ್ತಿಯಲ್ಲಿ ಸ್ವಲ್ಪ ಗೊಂದಲಗಳಿರುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆದಾಯವು ನಿರೀಕ್ಷೆಗಿಂತ ಕಡಿಮೆ ಇರುತ್ತದೆ. ದಿನಸಿ, ಸಗಟು ವ್ಯಾಪಾರಿಗಳಿಗೆ ವ್ಯಾಪಾರ ಉತ್ತಮವಾಗಿರುತ್ತದೆ. ಮಕ್ಕಳ ಅಭಿವೃದ್ಧಿಯಲ್ಲಿ ಸ್ವಲ್ಪ ಹಿನ್ನಡೆಯಾಗಬಹುದು. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗಬಹುದು. ಸಂಗಾತಿಯ ದುಂದು ವೆಚ್ಚಗಳು ಕಷ್ಟ ತರಬಹುದು. ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರ ಆದಾಯ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಜನಮನ್ನಣೆಯನ್ನು ಪಡೆಯುವ ಪ್ರಯತ್ನವನ್ನು ಮಾಡುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಆಧುನಿಕ ಕೃಷಿ ಮಾಡುವವರಿಗೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಸಂಧಿವಾತ ಕೆಲವರನ್ನು ಕಾಡಬಹುದು. ಸಂಗಾತಿಯ ಕಠಿಣ ನಿರ್ಧಾರಗಳು ನಿಮ್ಮನ್ನು ಚಿಂತೆಗೀಡುಮಾಡುತ್ತದೆ. ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಧಾರ್ಮಿಕ ಮುಖಂಡರುಗಳಿಗೆ ಗೌರವ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಬಹಳ ವ್ಯವಹಾರ ಚತುರರಾಗಿರುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ಪೂರೈಸುತ್ತದೆ. ನಿಮ್ಮ ಶತ್ರುಗಳು ಈಗ ನಿಮ್ಮ ಪರವಾಗಿ ಮಾತನಾಡಲು ಪ್ರಾರಂಭಿಸುತ್ತಾರೆ. ಅಲಂಕಾರಿಕ ಹೂಗುಚ್ಛಗಳನ್ನು ತಯಾರಿಸುವವರಿಗೆ ಹೆಚ್ಚು ವ್ಯವಹಾರವಿರುತ್ತದೆ. ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಸಂಗಾತಿಯಿಂದ ನಿರೀಕ್ಷಿತ ಆರ್ಥಿಕ ಸಹಕಾರ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಜನರಿಂದ ಬಹಳ ಗೌರವ ಪಡೆಯುವ ಯೋಗವಿದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ವಿದೇಶಿ ವಸ್ತುಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುವುದಿಲ್ಲ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಸಂಗಾತಿಯ ಸಂತೋಷಕ್ಕಾಗಿ ಹಣ ಖರ್ಚಾಗುವುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಶ್ರಮಪಟ್ಟು ಹೆಚ್ಚು ಸಂಪಾದನೆ ಮಾಡುವತ್ತ ಗಮನ ಹರಿಸುವಿರಿ. ಆದಾಯವು ಸ್ವಲ್ಪ ಏರಿಕೆಯಾಗುತ್ತದೆ. ಸಾಕಷ್ಟು ವಿರೋಧದ ನಡುವೆಯೂ ನಿಮ್ಮ ಒಳ್ಳೆಯ ಕೆಲಸಗಳನ್ನು ಸಾಧಿಸುವಿರಿ. ಮಕ್ಕಳ ಬಗ್ಗೆ ಹೆಚ್ಚು ಪ್ರಶಂಸೆಯನ್ನು ಕೇಳುವಿರಿ. ಸ್ತ್ರೀಯರ ಜೊತೆಗೂಡಿ ಮಾಡುವ ವ್ಯವಹಾರಗಳಲ್ಲಿ ಲಾಭವಿರುವುದಿಲ್ಲ. ಬುದ್ಧಿವಂತಿಕೆಯಿಂದ ವೃತ್ತಿಯಲ್ಲಿ ಮೇಲೆ ಬರುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ನಿಮ್ಮ ಒಡಹುಟ್ಟಿದವರು ನಿಮ್ಮ ಕೆಲಸಗಳಿಗೆ ಅಡ್ಡಿ ಮಾಡುವುದರ ಜೊತೆಗೆ ನಿಮಗೆ ಮೋಸ ಮಾಡಲು ಪ್ರಯತ್ನಪಡುವರು. ಮನೆ ಪಾಠ ಮಾಡುವವರಿಗೆ ಈಗ ಹೆಚ್ಚು ಆದಾಯವಿರುತ್ತದೆ. ನಿಮ್ಮ ನಡವಳಿಕೆಯಿಂದ ವೃತ್ತಿಯಲ್ಲಿ ಗೌರವ ಪಡೆಯಬಹುದು. ಬಂಧುಗಳ ಜೊತೆ ಹಣದ ವ್ಯವಹಾರ ಬೇಡ. ಸಂಗಾತಿಯ ಸಹಕಾರದಿಂದ ಸರ್ಕಾರಿ ಕಚೇರಿಯ ಕೆಲಸಗಳು ಸರಾಗವಾಗಿ ಆಗುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಿದೇಶಿ ವ್ಯಾಮೋಹ ಅತಿಯಾಗಿರುತ್ತದೆ. ತಂದೆಯ ವ್ಯಾಪಾರ, ವ್ಯವಹಾರಗಳು ನಿಮಗೆ ದೊರೆಯಬಹುದು. ಕೃಷಿವಿಜ್ಞಾನವನ್ನು ಕಲಿಯುತ್ತಿರುವವರಿಗೆ ಹೆಚ್ಚು ಯಶಸ್ಸು ಇರುತ್ತದೆ. ಶೀತ ಬಾಧೆ ಹೆಚ್ಚಾಗಬಹುದು. ನಿಮ್ಮ ಸ್ವಂತ ಶ್ರಮದಿಂದ ವೃತ್ತಿಯಲ್ಲಿ ಮೇಲೆ ಬರುವ ಸಾಧ್ಯತೆ ಇದೆ. ರಾಜಕಾರಣಿಗಳು ಜನಾಕ್ರೋಶಕ್ಕೆ ಹೆದರಿ ಸ್ವಲ್ಪ ಖರ್ಚು ಮಾಡಬೇಕಾದ ಸಂದರ್ಭ ಬರಬಹುದು.

ಪದಬಂಧ 2872



ಮೇಲಿನಿಂದ ಕೆಳಕ್ಕೆ
1. ಒಪ್ಪವಾಗಿ ಕರುಣೆಯಿಂದ ಬರುವ ನಡುಕ 4
2. ಕೈಯಿಂದ ಕೈಗೆ ತಲುಪುವ ಓಲೆ 4
3. ಸಂತೋಷ ಆವರಿಸಿದ ಅಂತಿಮ ಮಜಲು 5
4. ಮಾತಿನಂತೆ ಮೂಡಿದ ಸಹಿತವಾದ ಬರಹದ ಸೃಷ್ಟಿ 6
6. ಮುದ್ರಣಕ್ಕೆ ಮುನ್ನ ಸಿದ್ಧವಾದ ಕಚ್ಚಾ ನಕಲು 5
9. ವಿಶೇಷ ಚಿತ್ರ ಅಸಹಜವಾದದ್ದು 3
11. ಪಾಟದ ಜೊತೆ ಮಕ್ಕಳಿಗೆ ಬೇಕಾಗುವ ಕ್ರೀಡೆ 2
12. ರೀತಿ, ದೃಷ್ಟಿ, ಆಚರಣೆ ಎಲ್ಲವೂ ವ್ಯಕ್ತವಾಗುವ ಗುಣ 5
13. ಎರಡು ಹೊಳೆಗಳು ಸೇರಿದ ಅನುಭಾವ ಸ್ಥಳ 6
14. ಪತಿಯ ಒಡನಾಡಿ 2
15. ವಿಶ್ವಾಮಿತ್ರನಿಗೆ ಸವಾಲೊಡ್ಡಿದ ಬ್ರಹ್ಮರ್ಷಿ 3
16. ವೇದಗಳ ಜೊತೆಯಲ್ಲೇ ಹುಟ್ಟಿ ಬಂದ ಅಗ್ನಿ 5
18. ಇವನಿಗೆ ಸರಿಗಟ್ಟುವವನೇ ಇಲ್ಲ 4
19 ತಾವರೆಯ ಒಡೆಯನಾಗಿ ವಿಶಲ ಹೀಗೆ ಪ್ರಕಾಶಿತ 4

ಎಡದಿಂದ ಬಲಕ್ಕೆ
1. ಮುಖ್ಯ ಪತ್ರದೊಂದಿಗೆ ಸೇರಿದ್ದು 3
3. ಭರವಸೆ ತುಂಬಿದ ಅಕ್ಕನ ಗಂಡನ ಅಂತರ್ಯ 4
5. ನೂಲು ತೆಗೆಯುವ ತಿರುಗುವ ಗಾಲಿ 3
7. ಕ್ಲಿಷ್ಟ ಪದಗಳನ್ನು ಒಡೆದು ಬಿಡಿಸುವ ಕಲೆ 4
8. ಅತ್ಯಂತ ಪಾವನವಾದದು 3
10. ಜೇನಿನಿಂದ ಕೂಡಿದ ತಿಂಗಳು ದೀರ್ಘವಾಗಿದೆ 4
11. ಆಲ ಲಯಗಳು ಸೇರಿದ ದೇಗುಲ 3
12. ಗೆಳೆಯರ ಸಂತೋಷದ ಔತಣ 4
14. ಮಹಾಭಾರತದ ಆರಂಭಕ್ಕೆ ನಾಂದಿ ಹಾಡಿದ ಬೆಸ್ತಕನ್ಯೆ 4
16. ಜಾತಿಯಲ್ಲಿ ಉಂಟಾಗುವ ಎಚ್ಚರ 3
17. ಶ್ರೀವನಿತೆಯರಸ 4
18. ಕೋಷ್ಟಕದಲ್ಲಿ ಎಂಟನೇ ಮನೆ 3
20. ಮಹಾಭಾರತವನ್ನು ಹೇಳಿದ ಮಹಾಮುನಿ 4
21. ಹೊಳೆಯುವ ಕಠಿಣ ಹರಳಿನಂತಹ ಅವಯವ 3
22. ಜಡವಾದ ಜೀವಕ್ಕೆ ಲವಲವಿಕೆಯ ಸ್ಫೂರ್ತಿ 4
23. ಜಾತಕದಲ್ಲಿ ಒಂಬತ್ತು ವಿಭಜನೆಯ ಕುಂಡಲಿ 3

ಪದಬಂಧ ಉತ್ತರ -2871

ಮೇಲಿಂದ ಕೆಳಕ್ಕೆ

1.ವಿಶ್ವವ್ಯಾಪಕ 2.ನವಗಾನ 3.ಜಯಜಯ 4.ರಘುವೀರ 6.ದಾನವಿ 8.ಮಾನಸಿ 10.ಜನುಮ 12.ಕುಬೇರಾ 14.ತರಂಗ 15.ರಾಣಿನಿವಾಸ 16.ಕೃತಯುಗ 17.ವಸುದೇವ 18.ಯವನ 19.ನಾಗರಿಕ

ಎಡದಿಂದ ಬಲಕ್ಕೆ

1.ವಿನೂತನ 3.ಜತಿಸ್ವರ 5.ವರದಾಭಯ 7.ಪವಮಾನ 9.ವಿಜಯನಗರ 11.ಸಿಲುಕು 13. ಮಹಾಂತ 16.ಕೃಷ್ಣದೇವರಾಯ 19.ನಾಗಮಣಿ 20.ದೇವನಗರಿ 21.ಗಣಾಧಿಪ 22.ಕರನ್ಯಾಸ

ವಿಶ್ವ ಕ್ರಿಕೆಟ್‌ನಲ್ಲಿ ಅಗ್ರಮಾನ್ಯ ವಿಕೆಟ್‌ಕೀಪರ್–ಬ್ಯಾಟರ್‌ಗಳ ಸಾಲಿನಲ್ಲಿ ಕರ್ನಾಟಕದ ಸೈಯದ್ ಕಿರ್ಮಾನಿ ಅವರದ್ದು ವಿಶಿಷ್ಟ ಛಾಪು. 1983ರ ವಿಶ್ವಕಪ್ ವಿಜಯದಲ್ಲಿ ಹಾಗೂ 1974ರಲ್ಲಿ ಕರ್ನಾಟಕ ತಂಡವು ಮೊದಲ ರಣಜಿ ಟ್ರೋಫಿ ಗೆದ್ದಾಗ ಕಾಣಿಕೆ ನೀಡಿದವರು. ವಿಶ್ವ ಶ್ರೇಷ್ಠ ಸ್ಪಿನ್ನರ್ ಮತ್ತು ಮಧ್ಯಮ ವೇಗಿಗಳ ಬೌಲಿಂಗ್‌ಗೆ ಅಚ್ಚುಕಟ್ಟಾಗಿ ವಿಕೆಟ್‌ಕೀಪಿಂಗ್ ಮಾಡಿ ತಮ್ಮ ಮುಂದಿನ ಪೀಳಿಗೆಗೆ ದಾರಿದೀಪವಾದವರು. ಡಿ.29 ರ ಭಾನುವಾರ ಕಿರ್ಮಾನಿ 75ನೇ ವಸಂತಕ್ಕೆ ಕಾಲಿಡುತ್ತಿದ್ದು, ಅವರ ಆತ್ಮಚರಿತ್ರೆ 'ಸ್ಟಂಪ್ಡ್ –ಲೈಫ್ ಬಿಹ್ಯಾಂಡ್ ಆ್ಯಂಡ್ ಬಿಯಾಂಡ್ ದ 22 ಯಾರ್ಡ್ಸ್' ಲೋಕಾರ್ಪಣೆಗೊಳ್ಳಲಿದೆ. ಈ ಸಂದರ್ಭದಲ್ಲಿ ಅವರು 'ಭಾನುವಾರದ ಪುರವಣಿ' ಜೊತೆ ತಮ್ಮ ವೈಯಕ್ತಿಕ ಹಾಗೂ ವೃತ್ತಿ ಬದುಕಿನ ನೆನಪುಗಳನ್ನು ಹಂಚಿಕೊಂಡಿದ್ದಾರೆ.

75ರ ಕಿರ್ಮಾನಿಗೆ 175ರ ಸವಿನೆನಪು

ಗಿರೀಶ ದೊಡ್ಡಮನಿ

• ನಿಮ್ಮ ವೃತ್ತಿಜೀವನದಲ್ಲಿ ಅತ್ಯಂತ ಹೆಚ್ಚು ಸಂತೃಪ್ತಿ ನೀಡಿದ ಇನಿಂಗ್ಸ್ ಯಾವುದು?

ಬಹಳಷ್ಟು ಇನಿಂಗ್ಸ್‌ಗಳಲ್ಲಿ ವಿಕೆಟ್ ಕೀಪಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ನನ್ನ ಸವಿನೆನಪುಗಳಿವೆ. ಆದರೆ, ನಿಸ್ಸಂಶಯವಾಗಿ ಜಿಂಬಾಬ್ವೆ ಎದುರು ಕಪಿಲ್ ದೇವ್ ಅವರೊಂದಿಗಿನ ಜೊತೆಯಾಟವೇ ನನ್ನ ಫೇವರಿಟ್. ಅದೊಂದು ಐತಿಹಾಸಿಕ ಇನಿಂಗ್ಸ್. ಕ್ರಿಕೆಟ್ ವಲಯದ ಚಹರೆಯನ್ನೇ ಬದಲಿಸಿದ ಆಟ ಅದು. ನನ್ನ ಸಹ ಆಟಗಾರರೆಲ್ಲರೂ ಪೆವಿಲಿಯನ್‌ನಲ್ಲಿ ಕುಳಿತಿದ್ದರು. ಅವರೆಲ್ಲರಿಗೂ ಸೋಲಿನ ಆತಂಕ ಕಾಡಿತ್ತು. ಆದರೆ, ಕಪಿಲ್ ಮಾತ್ರ ನಿರ್ಭಯವಾಗಿ ಬ್ಯಾಟ್ ಬೀಸುತ್ತಿದ್ದರು. ಪ್ರತಿಯೊಂದು ಎಸೆತವನ್ನು ಹೊಡೆಯಿರಿ. ರನ್ ಗಳಿಸೋಣ ಎಂದು ಅವರಿಗೆ ಹುರಿದುಂಬಿಸುತ್ತಿದ್ದೆ. ಅವರು ಅಜೇಯ 175 ಹೊಡೆದಿದ್ದು ಇಂದಿಗೂ ಸರ್ವಶ್ರೇಷ್ಠ ಇನಿಂಗ್ಸ್. ಅಂತಹ ಒತ್ತಡದಲ್ಲಿ ಈ ರೀತಿಯ ಆಟ ಯಾರಿಂದಲೂ ಸಾಧ್ಯವಿಲ್ಲ.

• ಕ್ರಿಕೆಟ್ ಆಟಗಾರನಾಗಬೇಕೆಂಬ ಆಸಕ್ತಿ ಹೇಗೆ ಹುಟ್ಟಿತು?

ಕ್ರೀಡೆಯ ಗುಣ ನನಗೆ ದೈವದತ್ತವಾಗಿ ಬಂದಿದ್ದು. ಅಪ್ಪ ಹಾಕಿ ಹಾಗೂ ಅಮ್ಮ ಬಾಲ್ ಬ್ಯಾಡ್ಮಿಂಟನ್ ಆಟಗಾರರಾಗಿದ್ದರು. ಅಪ್ಪ ಸರ್ಕಾರಿ ಇಲಾಖೆಯಲ್ಲಿ ಸ್ಟೆನೊಗ್ರಾಫರ್ ಆಗಿದ್ದರು. ನಾನು ಸೇಂಟ್ ಜೋಸೆಫ್ ಶಾಲೆಯಲ್ಲಿ ಓದುತ್ತಿದ್ದೆ. ನಾನು ಆಟೋಟಗಳಲ್ಲಿ ಬಹಳ ಚುರುಕಾಗಿದ್ದೆ. ಶಾಲೆಯ ಕ್ರೀಡಾಕೂಟಗಳ ಎಲ್ಲ ಆಟಗಳಲ್ಲಿಯೂ ಭಾಗವಹಿಸುತ್ತಿದ್ದೆ. ಕ್ರಿಕೆಟ್ ಕೂಡ ಆಡುತ್ತಿದ್ದೆ. ಆ ಕಾಲದಲ್ಲಿ ಕ್ರಿಕೆಟ್‌ಗೆ ಇಷ್ಟು ಕ್ರೇಜ್ ಇರಲಿಲ್ಲ. ಮನೆಯಲ್ಲಿಯೂ ನಾನು ಕ್ರೀಡೆಯಲ್ಲಿ ಭಾಗವಹಿಸುವುದು ಇಷ್ಟವಿರಲಿಲ್ಲ. ಪ್ರೋತ್ಸಾಹವೂ ಸಿಕ್ಕಿರಲಿಲ್ಲ. ಚೆನ್ನಾಗಿ ಓದಿ, ಸರ್ಕಾರಿ ನೌಕರಿ ಗಳಿಸಿ ಎಂಬ ಒತ್ತಾಯ ಇತ್ತು. ಶಾಲೆಯ ವಾರ್ಷಿಕ ಕ್ರೀಡೆಗಳಲ್ಲಿ ಪ್ರಶಸ್ತಿ ಗೆದ್ದಾಗಲೂ ಅಪ್ಪನಿಗೆ ಹೇಳಿರಲಿಲ್ಲ. ಅಮ್ಮನಿಗಷ್ಟೇ ಕಪ್ ಕೊಟ್ಟಿದ್ದೆ. ಅವರು ಅಪ್ಪನಿಗೆ ಹೇಳಿದ್ದರು. ಆದರೂ ಅಪ್ಪ ಆಟ ನಿಯಮಿತವಾಗಿರಲಿ, ಓದು ಹೆಚ್ಚಿರಲಿ ಎಂದಿದ್ದರು. ಪ್ರತಿಭೆ, ಪ್ರಯತ್ನದಿಂದ ಶಾಲಾ ಕ್ರಿಕೆಟ್ ತಂಡದಲ್ಲಿ ಆಡಿದೆ. ವಲಯ, ಆಗಿನ ಮೈಸೂರು ರಾಜ್ಯ ಮಟ್ಟಕ್ಕೆ ಆಯ್ಕೆಯಾದೆ. ಜೂನಿಯರ್ ಹಂತದಲ್ಲಿ ಆಡಿದೆ. 1967ರಲ್ಲಿ ಇಂಗ್ಲೆಂಡ್‌ಗೆ ಆಡಲು ಹೊರಟಿದ್ದ ಇಂಡಿಯನ್ ಸ್ಕೂಲ್ ತಂಡಕ್ಕೆ ಆಯ್ಕೆಯಾದೆ. ವಿಕೆಟ್‌ಕೀಪಿಂಗ್ ಕೂಡ ನನ್ನ ಆಯ್ಕೆಯಾಗಿರಲಿಲ್ಲ. ಬೇರೆಯವರು ಹೆಚ್ಚು ಇಷ್ಟಪಡದ ಕಾರಣ ನನಗೆ ಅವಕಾಶ ಸಿಕ್ಕಿತ್ತು. ಅದರಲ್ಲಿ ಆಸಕ್ತಿಯಿಂದ ತೊಡಗಿಕೊಂಡೆ. ಹೊಸತನ್ನು ಕಲಿಯುತ್ತ ಹೋದೆ. ಸುಬ್ರಮಣ್ಯಂ ನಾಯಕತ್ವದ ಮೈಸೂರು ರಣಜಿ ತಂಡದಲ್ಲಿ 1968ರಲ್ಲಿ ಪದಾರ್ಪಣೆ ಮಾಡಿದೆ. ಅದಾಗಿ 9 ವರ್ಷಗಳ ನಂತರ ಅಜಿತ್ ವಾಡೇಕರ್ ನಾಯಕತ್ವದ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದೆ. ಮುಂದಿನದ್ದು ನಿಮಗೆಲ್ಲ ಗೊತ್ತಿದೆ.

• ತಮ್ಮ ಕಾಲಘಟ್ಟದಲ್ಲಿ ಭಾರತ ಮತ್ತು ಕರ್ನಾಟಕದಲ್ಲಿ ಶ್ರೇಷ್ಠ ಸ್ಪಿನ್ನರ್‌ಗಳಿದ್ದರು. ಅವರ ಬೌಲಿಂಗ್‌ಗೆ ಕೀಪಿಂಗ್ ಮಾಡುವುದು ಎಷ್ಟು ಸವಾಲಾಗಿತ್ತು?

ಸವಾಲು ಎನ್ನುವ ಪದವೇ ನನಗೆ ಗೊತ್ತಿಲ್ಲ. ಏಕೆಂದರೆ; ನಮಗೆ ಆಗಿನ ಕಾಲದಲ್ಲಿ ಕೋಚ್, ಫಿಸಿಯೊ, ವಿಡಿಯೊ ಅನಾಲಿಸ್ಟ್ ಮುಂತಾದವರ ನೆರವು ಇರಲಿಲ್ಲ. ಕೇಕಿ ತಾರಾಪುರ್ ಅವರ ಮಾರ್ಗದರ್ಶನ ಮತ್ತು ಅಭ್ಯಾಸದ ಸಂದರ್ಭದಲ್ಲಿ ಪ್ರಯೋಗಗಳ ಮೂಲಕ ಕಲಿತದ್ದಷ್ಟೇ. ಯರಪಳ್ಳಿ ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ವೆಂಕಟರಾಘವನ್, ಬಿಷನ್ ಸಿಂಗ್ ಬೇಡಿ ಅವರ ಎಸೆತಗಳಿಗೆ ಕೀಪಿಂಗ್ ಮಾಡುವುದು ಅತ್ಯಂತ ಸಂತೋಷದ ವಿಷಯ. ಆ ಹಂತವನ್ನು ನಾನು ಮನಸಾರೆ ಆಸ್ವಾದಿಸಿದೆ. ನನ್ನದು ಎಂದಿಗೂ ಸೋಲೊಪ್ಪಿಕೊಳ್ಳದ ಸ್ವಭಾವ ಮತ್ತು ಶಿಸ್ತುಬದ್ಧ ಜೀವನ. ಅದರಿಂದಾಗಿ ಮಾನಸಿಕ, ದೈಹಿಕ ಒತ್ತಡ ಅನುಭವಿಸಲಿಲ್ಲ. ಎಂತಹದ್ದೇ ಸವಾಲಿಗೂ ನಗುನಗುತ್ತಲೇ ಎದೆಗೊಡುವುದು ರೂಢಿಯಾಗಿಬಿಟ್ಟಿದೆ.



ಸಯ್ಯದ್ ಕಿರ್ಮಾನಿ ಚಿತ್ರ: ರಂಜು ಪಿ.

• ಬ್ಯಾಟರ್ ಆಗಿ ತಾವು ಎದುರಿಸಿದ ಸವಾಲುಗಳೇನು?

ಆ ಕಾಲದಲ್ಲಿ ಅಪ್ರತಿಮ ವೇಗಿಗಳು ಇದ್ದರು. ವೆಸ್ಟ್ ಇಂಡೀಸ್‌ನ ಮೈಕೆಲ್ ಹೋಲ್ಡಿಂಗ್, ಜೋಲ್ ಗಾರ್ನರ್, ಮಾಲ್ಕಂ ಮಾರ್ಷಲ್, ಆಸ್ಟ್ರೇಲಿಯಾದ ಡೆನಿಸ್ ಲಿಲಿ, ಜೆಫ್ ಥಾಂಪ್ಸನ್ ಅವರ ಮುಂದೆ ಆಡುವುದೆಂದರೇ ಆತಂಕವಿದ್ದ ಕಾಲ. ಆದರೆ ನಾವು ಹೆಲ್ಮೆಟ್ ಇಲ್ಲದೇ ಆಡಿದ್ದೆವು.

• ಆಗ ಮತ್ತು ಈಗ ವಿಕೆಟ್‌ಕೀಪಿಂಗ್‌ನಲ್ಲಿ ಏನು ವ್ಯತ್ಯಾಸವಿದೆ?

ನಾನು ವಿಕೆಟ್‌ಕೀಪಿಂಗ್ ಕಲಿಯಲು ಆರಂಭಿಸಿದ್ದೇ ಇಟ್ಟಿಗೆಗಳ ನೆರವಿನಿಂದ. ಆಗ ಕೈಗವಸು ಖರೀದಿಸಲು ಹಣದ ಕೊರತೆ ಇತ್ತು. ಹಂತ ಹಂತವಾಗಿ ಕಲಿತು ಬೆಳೆದೆ. ಈಗ ಸ್ಥಿತಿ ಬಹಳ ಸುಧಾರಿಸಿದೆ. ವಿಕೆಟ್‌ಕೀಪಿಂಗ್ ವೃತ್ತಿಪರವಾಗಿದೆ. ಆಧುನಿಕ ತಂತ್ರಜ್ಞಾನ ಬಂದಿದೆ. ಅಂಪೈರಿಂಗ್ ನಲ್ಲಿ ತಂತ್ರಜ್ಞಾನ ಬಳಕೆಯಾಗುತ್ತಿದೆ. ಇದರಿಂದಾಗಿ ಉತ್ತಮ ನಿರ್ಣಯಗಳು ಹೊರಹೊಮ್ಮುತ್ತಿವೆ. ನಮ್ಮ ಸಂದರ್ಭದಲ್ಲಿ ಬಹಳಷ್ಟು ಅಂಪೈರ್‌ಗಳು ಪಕ್ಷಪಾತಿಗಳಾಗಿದ್ದರು. ಖ್ಯಾತನಾಮ ಆಟಗಾರರು ಮತ್ತು ತಮ್ಮ ದೇಶದ ಬ್ಯಾಟರ್‌ಗಳ ಪರವಾಗಿದ್ದ ಘಟನೆಗಳು ಇವೆ. ಟಿವಿ ಇರಲಿಲ್ಲ. ಇದರಿಂದಾಗಿ ಉಭಯ ತಂಡಗಳ ಆಟಗಾರರ ನಡುವೆ ಭಿನ್ನಾಭಿಪ್ರಾಯ ಮೂಡುತ್ತಿದ್ದವು. ಆದರೆ ನಾನು ಯಾವತ್ತೂ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ನಾವು ಸ್ಲೆಡ್ಜಿಂಗ್(ಕೆಣಕುವುದು) ಮಾಡುತ್ತಿರಲಿಲ್ಲ. ವಾಂಖೆಡೆಯಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಪಂದ್ಯವೊಂದರಲ್ಲಿ ಇಂಗ್ಲೆಂಡ್‌ನ ಆ್ಯಲನ್ ಲ್ಯಾಂಬ್ ಅವರನ್ನು ಸ್ಟಂಪ್ ಮಾಡಿ ಅಪೀಲ್ ಮಾಡಿದೆ. ಅವರ ಕಾಲು ಗಾಳಿಯಲ್ಲಿತ್ತು ಎಂದು ಅರಿತಿದ್ದೆ. ಲೆಗ್‌ಅಂಪೈರ್ ಔಟ್ ನೀಡಿದರು. ಲ್ಯಾಂಬ್ ನನ್ನನ್ನು ವಂಚಕ ಎಂದು ಬಯ್ಯುತ್ತ ಹೊರಹೋದರು. ನಾನು ಆ ರಾತ್ರಿ ನಿದ್ರಿಸಲಿಲ್ಲ. ಬೆಳಗಿನ ಜಾವ ಹೋಟೆಲ್‌ಗೆ ಸುದ್ದಿಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಚಿತ್ರಗಳಲ್ಲಿ ಅಲನ್ ಮುಂದಡಿ ಇಟ್ಟು ಆಡುವ ಪ್ರಯತ್ನದಲ್ಲಿ ಅವರ ಹಿಂಗಾಲು ಗಾಳಿಯಲ್ಲಿದ್ದಾಗಲೇ ನಾನು ಬೇಲ್ಸ್ ಹಾರಿಸಿದ್ದು ಸ್ಪಷ್ಟವಾಗಿತ್ತು. ಆ ಪತ್ರಿಕೆಗಳನ್ನು ಕ್ರೀಡಾಂಗಣಕ್ಕೆ ತೆಗೆದುಕೊಂಡು ಬಂದು ಅವರ ಡ್ರೆಸಿಂಗ್ ಕೋಣೆಗೆ ಹೋದೆ. ಅವರ ಮುಂದೆ ಪತ್ರಿಕೆಗಳನ್ನು ಬೀಸಿ ಒಗೆದು ಚಿತ್ರ ನೋಡಿಕೊಳ್ಳಿ. ನನ್ನನ್ನು ವಂಚಕ ಎಂದಿರಲ್ಲ ಎಂದು ಅಬ್ಬರಿಸಿದ್ದೆ.

'ಶ್ರೇಷ್ಠ ಇನಿಂಗ್ಸ್‌ಗೆ ಸಾಕ್ಷಿ'

'ಕ್ರಿಕೆಟ್ ಇತಿಹಾಸದಲ್ಲಿಯೇ ಶ್ರೇಷ್ಠ ಇನಿಂಗ್ಸ್ ಅದು. ಅದನ್ನು ಹೇಗೆ ಮರೆಯಲು ಸಾಧ್ಯ. ಅವತ್ತು ಕಪಿಲ್ ದೇವ್ ಅವರ ಐತಿಹಾಸಿಕ ಅಜೇಯ 175 ರನ್‌ಗಳ ಆಟವನ್ನು ಕೇವಲ 22 ಯಾರ್ಡ್ಸ್ ಅಂತರದಿಂದ ಕಣ್ಮನ ತುಂಬಿಕೊಂಡವನು ನಾನು. ಆ ದಿನ ಅವರೊಂದಿಗಿನ ಚಾರಿತ್ರಿಕ ಜೊತೆಯಾಟದಲ್ಲಿ ನನ್ನದೂ ಪಾಲಿತ್ತು ಎಂಬುದೇ ಹೆಮ್ಮೆಯ ಸಂಗತಿ'– ವಿಶ್ವದ ಶ್ರೇಷ್ಠ ವಿಕೆಟ್‌ಕೀಪರ್‌ಗಳಲ್ಲಿ ಒಬ್ಬರಾದ ಸೈಯದ್ ಮುಜ್ತಾಬಾ ಹುಸೇನ್ ಕಿರ್ಮಾನಿ ಅವರು ನೆನಪಿನಂಗಳದಲ್ಲಿ ವಿಹರಿಸಿದರು.

1983 ರಲ್ಲಿ ಭಾರತ ಕ್ರಿಕೆಟ್ ತಂಡವು ಮೊದಲ ಬಾರಿಗೆ ವಿಶ್ವಕಪ್ ಜಯಿಸಿದಾಗ ಕರ್ನಾಟಕದ ಕಿರ್ಮಾನಿ, ವಿಕೆಟ್ ಕೀಪರ್ ಆಗಿದ್ದರು. ಆ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು 'ಕಪ್ಪುಕುದುರೆ'ಯಾಗಿ ಕಣಕ್ಕಿಳಿದಿತ್ತು. ತಂಡವು ಲೀಗ್ ಹಂತದಲ್ಲಿ ಜಿಂಬಾಬ್ವೆ ಎದುರು ಸೋತಿದ್ದರೆ, ನಾಕೌಟ್ ಹಂತಕ್ಕೆ ಕ್ವಾಲಿಫೈ ಆಗುವುದೂ ಕಷ್ಟವಿತ್ತು. ಅಂತಹ ಕಠಿಣ ಸವಾಲಿದ್ದ ಆ ಪಂದ್ಯದಲ್ಲಿ ಭಾರತ ತಂಡವು ಮೊದಲು ಬ್ಯಾಟಿಂಗ್ ಮಾಡುವಾಗ 17 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಆಗ ಕಪಿಲ್, ಏಕಾಂಗಿ ಹೋರಾಟ ಮಾಡಿದ್ದು ತಂಡದ ಗೆಲುವಿಗೆ ಕಾರಣವಾಯಿತು. ಆ ಪಂದ್ಯದಲ್ಲಿ 9ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದ ಕಿರ್ಮಾನಿ ಅವರು ಕಪಿಲ್‌ದೇವ್ ಜೊತೆಗೆ ಅಜೇಯ ಜೊತೆಯಾಟ ಕಟ್ಟಿದರು. ಆ ಇನಿಂಗ್ಸ್‌ನಿಂದಾಗಿ ಭಾರತ ತಂಡವು ಮುಂದೆ ಇತಿಹಾಸ ಬರೆಯಿತು. ಅವತ್ತು ಕಿರ್ಮಾನಿ ಕೇವಲ 24 ರನ್ ಗಳಿಸಿದ್ದರು. ಆದರೆ ಆ ಚಿಕ್ಕ ಮೊತ್ತ ಅಮೂಲ್ಯವಾಗಿತ್ತು.

ಎನ್‌ಸಿಇಆರ್‌ಟಿ ಲಾಂಛನ ಕರುನಾಡಿನ ಹೆಮ್ಮೆ

ಈರಣ್ಣ ಬೆಂಗಾಲಿ

ರಾಯಚೂರು ಅನ್ನ, ಚಿನ್ನ ಮತ್ತು ಬೆಳಕು ನೀಡುವ ಜಿಲ್ಲೆಯಾಗಿದ್ದು, ಈ ನೆಲಕ್ಕಾಗಿ ಇತಿಹಾಸದಲ್ಲಿ ಅನೇಕ ಕದನಗಳು ನಡೆದಿವೆ. ಭವ್ಯ ಇತಿಹಾಸ ಹೊಂದಿರುವ ರಾಯಚೂರು ಜಿಲ್ಲೆಯ ಉದ್ದಗಲಕ್ಕೂ ಸ್ಮಾರಕಗಳನ್ನು, ಕೋಟೆಗಳನ್ನು, ಅವಶೇಷಗಳನ್ನು ಕಾಣಬಹುದು. ಇವುಗಳ ಮಧ್ಯೆ ಜಿಲ್ಲೆಯ ಮಸ್ಕಿ ಪಟ್ಟಣವು ದೇಶವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದೆ. ಮಸ್ಕಿಗೆ ಈ ಹಿಂದೆ 'ಮೊಸಂಗಿಪುರ' ಎಂದು ಹೆಸರಿರುವುದನ್ನು ಶಾಸನಗಳ ಮೂಲಕ ತಿಳಿದು ಬಂದಿದ್ದು, ಈ ನೆಲದಲ್ಲಿ ದೊರೆತ ಶಿಲಾಶಾಸನವೊಂದು ಸಾಮ್ರಾಟ ಅಶೋಕನೇ 'ದೇವನಾಂಪ್ರಿಯ' ಎಂದು ಜಗಕ್ಕೆ ಅನಾವರಣಗೊಳಿಸಿತು. ಪ್ರಾಗೈತಿಹಾಸಿಕ ನೆಲೆ ಹೊಂದಿದ ಇಲ್ಲಿನ ಬೆಟ್ಟಗುಡ್ಡಗಳ ಬಂಡೆಗಳ ಮೇಲೆ ಶಿಲಾ ರೇಖಾಚಿತ್ರಗಳನ್ನು, ಕೆತ್ತನೆಗಳನ್ನು ಈಗಲೂ ಕಾಣಬಹುದು. ಇತಿಹಾಸ ಮಾತ್ರವಲ್ಲದೆ ಶೈಕ್ಷಣಿಕವಾಗಿಯೂ ಮಸ್ಕಿ ಮಹತ್ವವನ್ನು ಪಡೆದಿದೆ. ಇತಿಹಾಸಕ್ಕೆ ತಳುಕು ಹಾಕಿಕೊಂಡ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಅಪಾರವಾದ ಖ್ಯಾತಿಯನ್ನು ಪಡೆದಿದೆ.

ಎನ್‌ಸಿಇಆರ್‌ಟಿ ಲಾಂಛನ

ಮಸ್ಕಿಯ ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನವು ಎರಡನೇ ಶ್ರೀಶೈಲ ಎಂದೇ ಖ್ಯಾತಿ ಪಡೆದಿದ್ದು, ಇದೇ ದೇವಸ್ಥಾನದ ದಕ್ಷಿಣ ದಿಕ್ಕಿನ ಎಡಬದಿಯ ಹೊರಗೋಡೆಯ ಮೇಲಿನ ಮೂರು ಮುಖದ ಹಂಸಗಳ ಉಬ್ಬುಶಿಲ್ಪ ಕೆತ್ತನೆಯು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಲಾಂಛನವಾಗಿ ಬಳಕೆಯಾಗಿದೆ. ದೇಶದ ಉದ್ದಕ್ಕೂ ಸಿಬಿಎಸ್‌ಸಿ ಪಠ್ಯಪುಸ್ತಕ ಒದಗಿಸುವ ಭಾರತದ ಏಕೈಕ ಸಂಸ್ಥೆಯಾದ ಎನ್‌ಸಿಇಆರ್‌ಟಿ ತನ್ನ ಪುಸ್ತಕಗಳಲ್ಲಿ ಮೂರು ಮುಖದ ಹಂಸಗಳ ಲಾಂಛನವನ್ನು ನೋಡಬಹುದು. ಈ ಹಿಂದೆ ಇಲ್ಲಿನ ಉತ್ಖನನದಲ್ಲಿ ದೊರೆತ ಮೂರು ಮುಖಗಳ ಹಂಸಗಳ ಉಬ್ಬುಶಿಲ್ಪವನ್ನು ದೇವಾಲಯದ ಗೋಡೆಗೆ ಅಳವಡಿಸಲಾಗಿದೆ. ಲಾಂಛನಲ್ಲಿನ ಮೂರು ಮುಖದ ಹಂಸಗಳು ವೃತ್ತಾಕಾರದಲ್ಲಿ ಪರಸ್ಪರ ಬೆಸೆದು ಕೊಂಡಿವೆ. ಹಂಸಗಳು ಜ್ಞಾನದ ಮತ್ತು ನಿರಂತರತೆಯ ಪ್ರತೀಕವಾಗಿವೆ.

ಏನಿದು ಎನ್‌ಸಿಇಆರ್‌ಟಿ?

ಎನ್‌ಸಿಇಆರ್‌ಟಿಯು ನವದೆಹಲಿಯಲ್ಲಿ 1961 ರಲ್ಲಿ ಸ್ಥಾಪಿತವಾದ ಸ್ವತಂತ್ರ ಸಂಸ್ಥೆ. ಭಾರತದ ಶಾಲಾ ಶಿಕ್ಷಣದ ಪದ್ಧತಿಯಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಣೆ ಮಾಡಲು ಮತ್ತು ಶಿಕ್ಷಣವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದೆ. ಸಂಪೂರ್ಣ ಕೇಂದ್ರದ ಸ್ವಾಮ್ಯಕ್ಕೆ ಒಳಪಟ್ಟ ಎನ್‌ಸಿಇಆರ್‌ಟಿಯು ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಮಟ್ಟದಲ್ಲಿ ನೀತಿ ನಿಯಮಗಳು, ತರಬೇತಿ, ಸಂಶೋಧನೆ ಮುಂತಾದ ಅಗತ್ಯಗಳನ್ನು ರೂಪಿಸುತ್ತದೆ. ದೇಶದ ಶಿಕ್ಷಣ ನೀತಿಯಲ್ಲಿ ಏಕರೂಪತೆ ತರಲು ಕಾರ್ಯ ನಿರ್ವಹಿಸುತ್ತಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಿಕ್ಷಣ ವಿಭಾಗದ ಶೈಕ್ಷಣಿಕ ಭಾಗವೇ ಇದಾಗಿದ್ದು, ಇದರಲ್ಲಿ ನಿರ್ದೇಶಕ, ಜಂಟಿ ನಿರ್ದೇಶಕರು, ಪ್ರಾಧ್ಯಾಪಕರು, ರೀಡರ್, ಉಪನ್ಯಾಸಕರು ಒಳಗೊಂಡಿದ್ದು, ದೇಶದಲ್ಲಿ ನಾಲ್ಕು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು, ಶಿಕ್ಷಕ ತರಬೇತಿ ಹಾಗೂ ಸಂಶೋಧನಾ ಕಾರ್ಯದಲ್ಲಿ ತೊಡಗಿಕೊಂಡಿವೆ. ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ ಎನ್‌ಸಿಇಆರ್‌ಟಿಯ ರಾಷ್ಟ್ರ ಮಟ್ಟದಲ್ಲಿ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಸಂಶೋಧನೆಯನ್ನು ಮಾಡುವುದು, ಪಠ್ಯಕ್ರಮ, ಬೋಧನಾ ಸಲಕರಣೆಗಳು, ಬೋಧನಾ ತಂತ್ರಗಳು, ಬೋಧನಾ ವಿಧಾನಗಳು, ಮೌಲ್ಯಮಾಪನ ಮತ್ತು ಬೋಧನೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ನಿರ್ವಹಿಸುವುದು, ರಾಷ್ಟ್ರ ಮಟ್ಟದಲ್ಲಿ ಶಿಕ್ಷಕರಿಗೆ ತರಬೇತಿ ನೀಡುವುದು, ರಾಷ್ಟ್ರೀಯ ಶಿಕ್ಷಣ ಪದ್ಧತಿಯಲ್ಲಿ ಕಾಲಕಾಲಕ್ಕೆ ಸುಧಾರಿತ ರೀತಿಯ ಬದಲಾವಣೆಗಳನ್ನು ಜಾರಿಗೆ ತುರುವುದು ಅಲ್ಲದೇ ಶಿಕ್ಷಣದ ಪ್ರತಿಯೊಂದು ವಿಭಾಗದಲ್ಲಿ ಸಂಶೋಧನೆ ಕೈಗೊಳ್ಳಲು ನೆರವಾಗುವುದು ಇವುಗಳನ್ನು ಒಳಗೊಂಡಂತೆ ಇನ್ನು ಮುಂತಾದ ಕಾರ್ಯಗಳು, ಕರ್ತವ್ಯಗಳನ್ನು ನಿಭಾಯಿಸುತ್ತದೆ. ಇಂತಹ ಮಹತ್ವದ ಸಂಸ್ಥೆಯು ರಾಷ್ಟ್ರೀಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಹೀಗೆ ತನ್ನ ಮೂರು ಧ್ಯೇಯೋದ್ದೇಶಗಳಿಗೆ ಅನುಸಾರವಾಗಿ ಲಾಂಛನ ಹೊಂದಿದ್ದು, ಈ ಲಾಂಛನವನ್ನು ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದಿಂದ ತೆಗೆದುಕೊಂಡಿದ್ದು ಎಂದು ಸಂಸ್ಥೆ ಹೇಳಿಕೊಂಡಿದೆ.

ದೇವಸ್ಥಾನದ ಗೋಡೆಯ ಚಿತ್ರ

'ಮಲ್ಲಿಕಾರ್ಜುನ ದೇವಸ್ಥಾನದ ಮೂರು ಮುಖದ ಹಂಸದ ಶಿಲಾಫಲಕವು ಕ್ರಿ.ಶ. 17 ಅಥವಾ 18ನೇ ಶತಮಾನದ್ದು. ವಿಜಯನಗರ ಸಾಮ್ರಾಜ್ಯದ ನಂತರದ ಕಾಲದ್ದು ಆಗಿರಬಹುದು. ಕಲ್ಯಾಣ ಚಾಲುಕ್ಯರ, ಚೋಳರ, ವಿಜಯನಗರದ ಸಾಮ್ರಾಜ್ಯದ ಕುರುಹುಗಳು ಇಲ್ಲಿದ್ದು, ಪ್ರಾಚೀನ ಕಾಲದ ಇನ್ನೂ ಅನೇಕ ಶಾಸನಗಳು, ಸ್ಮಾರಕಗಳು, ರೇಖಾಚಿತ್ರಗಳು ಈ ಪ್ರದೇಶದ ಬೆಟ್ಟಗುಡ್ಡಗಳಲ್ಲಿ ಇರಬಹುದು. ಅವುಗಳನ್ನು ನಿರಂತರ ಉತ್ಖನನ, ಸಂಶೋಧನೆ ಮೂಲಕ ಹೊರಹಾಕಬೇಕು' ಎಂದು ಇತಿಹಾಸ ಸಂಶೋಧಕ ಚನ್ನಬಸವ ಮಲ್ಕಂದಿನ್ನಿ ಅವರು ಹೇಳುತ್ತಾರೆ.

'ದೇಶದ ವಿದ್ಯಾರ್ಥಿಗಳು ಹೆಮ್ಮೆಯಿಂದ ಸಂದರ್ಶಿಸುವ ಶೈಕ್ಷಣಿಕ ಮಹತ್ವದ ತಾಣವಾಗಬಹುದಾದ ಮಸ್ಕಿಯ ಶಿಲಾಶಾಸನ, ಮಲ್ಲಿಕಾರ್ಜುನ ದೇವಾಲಯದ ಗೋಡೆಯ ಎನ್‌ಸಿಇಆರ್‌ಟಿ ಲಾಂಛನ ಮತ್ತು ದೇಶದ ಏಕೈಕ ಕಾರ್ಯನಿರತ ಚಿನ್ನದ ಗಣಿ ಇರುವ ಹಟ್ಟಿ, ಪ್ರಾಗೈತಿಹಾಸಿಕ ನೆಲೆಗಳಿರುವ ಪಿಕಳಿಹಾಳ ಮತ್ತು ಮುದಗಲ್ ಕೋಟೆಗಳನ್ನು ಸೇರಿಸಿ ಶೈಕ್ಷಣಿಕ ಪ್ರವಾಸದ ಹಬ್ ಅನ್ನು ಪ್ರವಾಸೋದ್ಯಮ ಇಲಾಖೆ ರೂಪಿಸಬೇಕು. ಅಲ್ಲಿನ ಸ್ಥಳೀಯರಾದರೂ ರಾಷ್ಟ್ರೀಯ ಮಹತ್ವದ ಸ್ಮಾರಕಗಳ ಹತ್ತಿರ ಅವುಗಳ ಮಹತ್ವ ವಿವರಿಸುವ ಫಲಕವನ್ನಾದರೂ ಬರೆಯಿಸಿ ಹಾಕುವ ಮುಂದಡಿ ಇಡಬೇಕಿದೆ' ಎಂದು ಲೇಖಕ ಚಿದಾನಂದ ಸಾಲಿ ಹೇಳುತ್ತಾರೆ.

ರಾಯಚೂರು ಇತಿಹಾಸದ ಪುಟದಲ್ಲಿ ತನ್ನದೇ ಆದ ಹೆಸರನ್ನು ಹೊಂದಿದ್ದು, ಶೈಕ್ಷಣಿಕ ಕ್ಷೇತ್ರದ ಮಸ್ಕಿಯ ಎನ್‌ಸಿಇಆರ್‌ಟಿ ಲಾಂಛನ ಹೆಸರನ್ನು ತಂದುಕೊಟ್ಟಿದೆ. ಇದು ಕರ್ನಾಟಕಕ್ಕೇ ಹೆಮ್ಮೆ.

ಮಲ್ಲಿಕಾರ್ಜುನ ದೇವಸ್ಥಾನ

ಮೊದಲ ಓದು

ಕಥೆಗಾರನ ಜೀವನಾನುಭವ



ಪು: 126 ₹180

ಆನೆ ಡಾಕ್ಟರ್
ಲೇ: ಜೆಯಮೋಹನ್
ಕನ್ನಡಕ್ಕೆ: ಎಸ್. ನಾರಾಯಣನ್
ಪ್ರ: ಬಹುವಚನ
ಸಂ: 63625-88659

ತಮಿಳಿನ ಪ್ರಸಿದ್ಧ ಕಥೆಗಾರಲ್ಲಿ ಓರ್ವರಾದ ಜೆಯಮೋಹನ್ ಅವರ 'ಆರಂ' ಕಥಾ ಸಂಕಲದ ಆಯ್ದ ಐದು ಕಥೆಗಳ ಗುಚ್ಛ ಇದು. ಇಂಗ್ಲೀಷ್ ಹಾಗೂ ತೆಲುಗಿಗೆ ಈಗಾಗಲೇ ಅನುವಾದಗೊಂಡಿವೆ. ಲೇಖಕರು ತಮ್ಮ ನಿಜ ಜೀವನದಲ್ಲಿ ಭೇಟಿ ಮಾಡಿದ ವ್ಯಕ್ತಿಗಳ ಬಗ್ಗೆಯೇ ಬರೆದ ಕಥೆಗಳಿವು.

ನಮ್ಮ ಜೀವನದಲ್ಲಿ ದಿನನಿತ್ಯ ಹಾದುಹೋಗುವ ಜನರೇ ಕಥೆಗಳ ಪಾತ್ರಗಳು. ಪಾತ್ರಗಳನ್ನು, ಸನ್ನಿವೇಶಗಳನ್ನು ಕಥೆಗಾರ ಸೂಕ್ಷ್ಮವಾಗಿ ಹೆಣೆದಿದ್ದಾರೆ. ಪಾತ್ರದ ಸಣ್ಣ ವಿವರಗಳನ್ನೂ ಮನಮುಟ್ಟುವಂತೆ ವರ್ಣಿಸಲಾಗಿದೆ. ಹಿಂದೆ ಯಾವತ್ತೋ ಭೇಟಿ ಮಾಡಿದ, ಹಿಂದೆ ಎಂದೋ ಅದ ನಮ್ಮ ಅನುಭವಗಳೇ ಕಥೆ ರೂಪ ಪಡೆದಿದೆ ಎನ್ನುವ ಭಾವ ಆಗಾಗ್ಗೆ ಸುಳಿದು ಹೋಗುತ್ತದೆ. ಪಾತ್ರ ಹಾಗೂ ಕಥಾ ವಸ್ತುವಿನಲ್ಲಿರುವ ತೀವ್ರತೆ ಅಗಾಧವಾದುದು. ಓದಿಸಿಕೊಂಡು ಹೋಗುವ ಶೈಲಿ ಮನಮುಟ್ಟುವಂತಿದೆ.

ಆನೆ ಡಾಕ್ಟರ್ ಕಥೆಯಲ್ಲಿನ ಮರಿಯಾನೆಗೆ ಚಿಕಿತ್ಸೆ ನೀಡುವ, ಆನೆಗಳ ನೆನಪಿನ ಶಕ್ತಿ ಕುರಿತಾದ ಸನ್ನಿವೇಶಗಳು ಕುತೂಹಲಕಾರಿಯಾಗಿವೆ. ಊಟದ ಲೆಕ್ಕ ಕಥೆಯಲ್ಲಿನ ಕೆತ್ತೇಲ್ ಸಾಹಿಬ್ ಅವರ ಹೋಟೆಲ್ ಒಂದು ತಲೆಮಾರು ಹಾದು ಹೋದ ಅನುಭವ ನೀಡುತ್ತದೆ. ಕೆತ್ತೇಲ್ ಸಾಹೇಬರ ರೂಪವನ್ನು, ಹೋಟೆಲ್ ಸ್ಥಿತಿಯನ್ನು ಲೇಖಕರು ಚೆಂದವಾಗಿ ಹಿಡಿದಿಟ್ಟಿದ್ದಾರೆ. ಸಾಹೇಬರ ಊಟದ ರುಚಿಯನ್ನು ಓದಿನಲ್ಲಿಯೇ ಸವಿಯಬೇಕು. ಒಂದೇ ಜಗತ್ತು ಹಾಗೂ ಧರ್ಮ ಕಥೆಗಳು ವ್ಯಕ್ತಿತ್ವ ಹಾಗೂ ಮನಸ್ಸಿಗೆ ಹಿಡಿದ ಕನ್ನಡಿಯಂತಿದೆ. ಐದು ಕಥೆಗಳು ಭಿನ್ನ ಮಾದರಿಯವು. ಲೇಖಕರ ಜೀವನಾನುಭವ ಕಥೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿವೆ. ಅನುವಾದವೂ ಓದುಗನಿಗೆ ನಿರಾಸೆಗೊಳಿಸುವುದಿಲ್ಲ. ಆದರೆ ನಡುನಡುವೆ ಅನಾವಶ್ಯಕವಾಗಿ ದೀರ್ಘೀಸಲಾಗಿದೆಯೇನೋ ಎಂದನಿಸುತ್ತದೆ. ಕೊನೆಯಲ್ಲಿ ಲೇಖಕರೊಂದಿಗಿನ ದೀರ್ಘ ಸಂದರ್ಶನ ಇದ್ದು, ಪುಸ್ತಕ ತುಂಬಿಸಲು ಸೇರಿಸಲಾಗಿದೆ ಎನ್ನುವಂತಿದೆ.

ಕಾಣುವ ಪಾತ್ರ, ಕಾಡುವ ಕತೆ

ಪುಸ್ತಕದ ಹತ್ತೂ ಕತೆಗಳು, ಓದುಗನಿಗೆ ಹತ್ತಾರು ರೀತಿಯಲ್ಲಿ ಕಾಡುತ್ತವೆ. ಒಂದರ ನಂತರ ಇನ್ನೊಂದು ಕತೆಯನ್ನು ಓದಲಾಗುವುದೇ ಇಲ್ಲ. ಪಾತ್ರಗಳೆಲ್ಲ ನಿಮ್ಮ ಆಸುಪಾಸಿನಲ್ಲಿಯೇ ಓಡಾಡಿಕೊಂಡು ಇರುವಷ್ಟು ಸಹಜವೆನಿಸುವಂತೆ ಕತೆ ಕಟ್ಟಲಾಗಿದೆ. ಪ್ರತಿ ಕತೆಯೂ ಓದಿದ ನಂತರ ಒಳಗೊಳಗೇ ಸುಳಿದಾಡತೊಡಗುತ್ತದೆ. ಮರಳಲ್ಲಿ ಪಾದ ಹೂತು ಹೋಗುವಂತೆ, ಮನಸು ಕತೆಯಲ್ಲಿ ಹೂತು ಹೋಗುತ್ತದೆ. ಮತ್ತೊಂದು ಕತೆ ಓದಲು ಮತ್ತೆ ಹೊಸದಿನ ಬೇಕು.

ಈ ಕತೆಗಳಲ್ಲಿರುವ ಒಂದು ಸಾಮಾನ್ಯ ಅಂಶವೆಂದರೆ ಹುಡುಕಾಟ. ಪ್ರತಿ ಕತೆಯಲ್ಲಿಯೂ ಒಂದಾದರೂ ಪಾತ್ರ ತನ್ನೊಳಗೆ ತಾನೇ ಇಳಿದು ಏನನ್ನೋ ಹುಡುಕುತ್ತಿರುತ್ತದೆ. ಆ ಆತ್ಮಶೋಧ ನಮ್ಮ ನಿಮ್ಮದೂ ಆಗಬಹುದು. ಮನುಷ್ಯನ ಸ್ವಾರ್ಥದಿಂದ ತೋರುವ ಸಣ್ಣತನ, ಮೌಲ್ಯಗಳ ಹಿನ್ನೆಲೆಯಲ್ಲಿ ಹುಟ್ಟುವ ಅಪರಾಧಿ ಮನೋಭಾವ ಇವೆರಡರ ನಡುವಿನ ಸಂಘರ್ಷದಲ್ಲಿ ಮತ್ತೇನೋ ಆಗಿಹೋಗುವ ಪ್ರಕ್ರಿಯೆಯಲ್ಲಿಯೇ ಈ ಕತೆಗಳ ಹಂದರ ಹೆಣೆದುಕೊಂಡಿವೆ. ಹತ್ತೂ ಕತೆಗಳು ಮೂವರು ವ್ಯಕ್ತಿಗಳ ಬಗ್ಗೆ ಮಾತ್ರ ಚರ್ಚೆ ಮಾಡುತ್ತವೆ. ನಾನು, ನೀನು ಮತ್ತು ಅವರಿವರ ಕುರಿತು. ನಮ್ಮ ಸುತ್ತಲಿನ ಸಂಕೀರ್ಣ ಸ್ವಭಾವಗಳನ್ನು ಪಾತ್ರಗಳಲ್ಲಿ ಪರಿಚಯಿಸುವ ಬಣಮಿ ನಿಮ್ಮಿಂದ ಕಾಲವನ್ನೂ, ನಿಮ್ಮ ಮನೋಲೋಕದಲ್ಲಿ ಪ್ರವೇಶವನ್ನೂ ಬಯಸುವ ಕೃತಿಯಾಗಿದೆ.

ಪು: 96 ₹110

ಬಣಮಿ
ಲೇ: ಕಪಿಲ ಪಿ. ಹುಮನಾಬಾದೆ
ಪ್ರ: ಕಾವ್ಯಮನೆ ಪ್ರಕಾಶನ
ಸಂ: 8722039612

ಕಥೆ
ಮಂಜುನಾಥ್ ಕುಣಿಗಲ್ ಅವರ ದ್ಯಾವ್ರ್ರೂ ಬಯ್ಸ್ಕಾರ!
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಯಶಸ್ವಿನಿ ಎಂ. ಎನ್. ಅವರ ಮೇಣದ ರೆಕ್ಕೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
2ನೇ ಸಂಪುಟ
ಇದೀಗ ಲಭ್ಯ
ಹೊನ್ನ ಕಣಜ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080
22161900/901/913/914
Shop Online www.navakarnataka.com

ಗೆಳೆಯರ ಕಣ್ಣಲ್ಲಿ ಭೂ ವಿಜ್ಞಾನಿ



ಪು: 488 ₹800

ಅನಂತಮುಖಿ
ಸಂ: ಡಾ.ಸುಕನ್ಯಾ ಸೂನಗಹಳ್ಳಿ
ಪ್ರ: ಹರಿವು ಬುಕ್ಸ್
ಸಂ: 8088822171

ಕನ್ನಡದ ವಿಜ್ಞಾನ ಬರಹಗಾರರಲ್ಲಿ ಡಾ.ಟಿ.ಆರ್.ಅನಂತರಾಮು ಜನಪ್ರಿಯ. ಭೂ ವಿಜ್ಞಾನಿಯಾಗಿರುವ ಅವರಿಗೆ 75 ವರ್ಷ ತುಂಬಿದ್ದು, ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಲ್ಲೆಂದು ಸಿದ್ಧಗೊಂಡಿರುವ ಕೃತಿ 'ಅನಂತಮುಖಿ'. ವಿಜ್ಞಾನವನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಬಹಳ ಸರಳವಾಗಿ ವಿವರಿಸುವ ಅವರ ವ್ಯಕ್ತಿತ್ವವನ್ನು, ಸಾಧನೆಗಳನ್ನು ಕಟ್ಟಿಕೊಡುವ ಹಲವಾರು ಲೇಖನಗಳು ಕೃತಿಯಲ್ಲಿದೆ.

ಒಟ್ಟು ಎಂಟು ವಿಭಾಗಗಳಿದ್ದು, ಮೊದಲ ಭಾಗದಲ್ಲಿ ಅನಂತರಾಮು ಅವರ ಗೆಳೆಯರು, ಒಡನಾಡಿಗಳು ಅವರ ಕುರಿತಾಗಿ ಬರೆದ ಬರಹಗಳಿವೆ. ನೇಮಿಚಂದ್ರ, ಪಾಲಹಳ್ಳಿ ವಿಶ್ವನಾಥ್, ಡಾ.ವಸುಂಧರಾ ಭೂಪತಿ ಮೊದಲಾದವರು ತಮ್ಮ ಬರಹಗಳ ಮೂಲಕ ಅವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ. ಎರಡನೇ ಭಾಗದಲ್ಲಿ ವಿಜ್ಞಾನ ಸಾಹಿತ್ಯದಲ್ಲಿ ಅವರ ಕೊಡುಗೆಗಳನ್ನು ಅವಲೋಕಿಸಲಾಗಿದೆ. ಡಾ.ನಾ. ಸೋಮೇಶ್ವರ, ಡಾ.ಬಿ.ಎಸ್.ಶೈಲಜಾ, ಟಿ.ಜಿ.ಶ್ರೀನಿಧಿ ಮೊದಲಾದ ಬರಹಗಾರರು ಅನಂತರಾಮು ಸಾಹಿತ್ಯ ಮತ್ತು ಸರಳತೆ ಕುರಿತು ಬರೆದಿದ್ದಾರೆ. ಮೂರನೇ ಭಾಗದಲ್ಲಿ ಅನಂತರಾಮು ಎಷ್ಟು ಮಾಧ್ಯಮಸ್ನೇಹಿಯಾಗಿದ್ದರು, ಹೇಗೆ ಮಾಧ್ಯಮಗಳ ಅಗತ್ಯಕ್ಕೆ ತಕ್ಕಂತೆ ಲೇಖನ ಬರೆದುಕೊಡುತ್ತಿದ್ದರು ಎಂಬ ವಿವರಗಳಿವೆ. ನಾಗೇಶ ಹೆಗಡೆ ಸೇರಿದಂತೆ ಕೆಲವು ಪತ್ರಕರ್ತರ ಲೇಖನಗಳು ಈ ವಿಭಾಗದಲ್ಲಿದೆ. ಅವರ ವೃತ್ತಿ ಜೀವನದ ಮೆಲುಕಿದೆ. ಕುಟುಂಬದ ಸದಸ್ಯರು ಅವರ ಕುರಿತಾಗಿ ಬರೆದ ಲೇಖನಗಳು ಕೃತಿಯಲ್ಲಿದೆ. ಅವರ ಜೀವನ ಮತ್ತು ಸಾಧನೆಯನ್ನು ವಿವರಿಸುವ ಪ್ರತ್ಯೇಕ ಅಧ್ಯಾಯದಲ್ಲಿ ಅವರು ಸಾಗಿಬಂದ ಹಾದಿಯ ಚಿತ್ರಣವಿದೆ.

'ಮನದಂಗಳದಲ್ಲಿ ನಿಂತ ಸ್ಮೃತಿ ಚಿತ್ರಗಳು' ವಿಭಾಗ ಅವರ ಚಿತ್ರಪಟಗಳಿಗೆ ಮೀಸಲಾಗಿದೆ. ಅವರ ಕೃತಿಗಳ ಪರಿಚಯವೂ ಸೇರಿದಂತೆ ಅನಂತರಾಮು ಕುರಿತಾಗಿ ಸಮಗ್ರ ನೋಟ ಕಟ್ಟಿಕೊಡುವ ಕೃತಿಯಿದು. ಡಾ.ಸುಕನ್ಯಾ ಸೂನಗಹಳ್ಳಿ ಅಚ್ಚುಕಟ್ಟಾಗಿ ಕೃತಿಯನ್ನು ಸಂಪಾದಿಸಿದ್ದಾರೆ. ನಾಡಿನ ಅನೇಕ ಗಣ್ಯರು ಇದರಲ್ಲಿ ಬರೆದಿದ್ದಾರೆ.

ಅಪೂರ್ವ ಕೊಹಿನೂರ್ ವಜ್ರ ಹೇಳುವ ಕತೆ

ಟವರ್ ಆಫ್ ಲಂಡನ್

ಬೆಳಕಿನ ಪರ್ವತ ಎಂದೂ ಕರೆಯಲ್ಪಡುವ ಕೊಹಿನೂರ್ ವಜ್ರವಿರುವ ಕಿರೀಟ

ಮೋಹನ ಭಟ್ಟ, ಅಗಸೂರು

ಪ್ರವಾಸ

ವಿಶ್ವದಲ್ಲಿಯೇ ಪುರಾತನವಾದ, ಅತಿ ಹೆಚ್ಚು ತೂಕ ಹಾಗೂ ಮೌಲ್ಯವನ್ನು ಹೊಂದಿರುವ ಕೊಹಿನೂರ್ ವಜ್ರ 1850ರಿಂದ ಬ್ರಿಟಿಷ್ ಸಾಮ್ರಾಜ್ಯದ ಸೊತ್ತಾಗಿದೆ. ಲಂಡನ್‌ನ ಟವರ್ ಮ್ಯೂಸಿಯಂನ ಹದ್ದಿನ ಕಣ್ಗಾವಲಿನಲ್ಲಿ ಇದು ಪ್ರದರ್ಶಿತವಾಗಿದೆ. ಈ ಮ್ಯೂಸಿಯಂ ಜಗತ್ತಿನಲ್ಲಿ ಪ್ರಖ್ಯಾತಿ ಹೊಂದಿದ್ದು ಕೊಹಿನೂರ್ ವಜ್ರದಿಂದಾಗಿಯೇ. ಟವರ್ ಕಟ್ಟಡ ಎಂದೇ ಜನಪ್ರಿಯವಾದ ಇದು ಹದಿನೆಂಟು ಎಕರೆ ಪ್ರದೇಶದಲ್ಲಿ ಹರಡಿದೆ. ಒಳಾಂಗಣ ಗೋಡೆಯೊಳಗೆ 12 ಎಕರೆ ಇದೆ. ಎತ್ತರ 27 ಮೀಟರ್ ಹೊಂದಿದೆ. ಈ ಬೃಹತ್ ಕಟ್ಟಡದ ಒಂದು ಭಾಗ ಅಪರಾಧಿಗಳನ್ನು ಕೂಡಿ ಹಾಕುವ ವಿವಿಧ ರೀತಿಯ ಕತ್ತಲೆ ಕೋಣೆಗಳನ್ನು ಹೊಂದಿತ್ತು. ಕೈ ಕಾಲಿಗೆ ಸರಪಳಿಯನ್ನು ಹಾಕಿ ಬ್ರಿಟಿಷ್ ಕಾಲೊನಿಗಳಿಂದ ಹಡಗಲ್ಲಿ ತಂದು ಕ್ರೂರ ಹಿಂಸೆಯನ್ನು ನೀಡಿ ಸಾಯಿಸಲಾಗುತ್ತಿತ್ತು. ಅಷ್ಟೇ ಅಲ್ಲ, ಕಾರಾಗೃಹದ ಕೋಣೆಗೆ ಹೊಂದಿಕೊಂಡು ಇರುವ ಕಪ್ಪು ವಿಷ ನೀರು, ಮೊಸಳೆಯಿರುವ ಆಳವಾದ ಕಾಲುವೆಗಳಿಗೆ ದೂಡಲಾಗುತಿತ್ತು ಎಂದು ಹೇಳಲಾಗಿದೆ.

ಇದೇ ಕಾರಾಗೃಹವು ಮುಂದೆ ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿತು. ಬ್ರಿಟಿಷರ ಶೌರ್ಯವನ್ನು ಎತ್ತಿ ಹೇಳುವ ಯುದ್ಧಗಳನ್ನು ಹೊಗಳುವ ಕತೆಗಳನ್ನು ಇಲ್ಲಿ ವೈಭವೀಕರಿಸಲಾಗಿದೆ.

ಇಲ್ಲಿಯ ಸಂಗ್ರಹದಲ್ಲಿ ಉಡುಗೊರೆಯಾಗಿ ಬಂದ ವಿವಿಧ ದೇಶಗಳ ಅಮೂಲ್ಯ ವಜ್ರಗಳನ್ನು ಇಲ್ಲಿನ ಕತ್ತಲೆ ಕೋಣೆಯಲ್ಲಿ ಇಡಲಾಗಿದೆ. ಬೆಳಕಿನ ಕಿರಣಗಳು ವಿವಿಧ ಕೋನಗಳಲ್ಲಿ ಇವುಗಳ ಮೇಲೆ ಬಿದ್ದಾಗ ಕಾಣುವ ದೃಶ್ಯ ಅಪೂರ್ವವಾದುದು. ಒಮ್ಮೆ ನೋಡಿದವನಿಗೆ ಮತ್ತೆ ಹಿಂದೆ ಬಂದು ನೋಡಲು ಅವಕಾಶ ಇಲ್ಲ. ಇವುಗಳನ್ನು ನೋಡಲು ನಿಮಿಷ ಅಥವಾ ಅದಕ್ಕಿಂತ ಕಡಿಮೆ ಕಾಲಾವಕಾಶವಷ್ಟೇ ದೊರಕುತ್ತದೆ. ಇದರಿಂದಾಗಿಯೇ ಲಂಡನ್‌ಗೆ ಹೋದವರು ಕೊಹಿನೂರ್ ವಜ್ರ ನೋಡದೇ ಹಿಂದಿರುಗುವುದು ಅಪರೂಪ ಎಂದೇ ಹೇಳಬಹುದು.

ರೋಚಕ ಕತೆ

ಕೊಹಿನೂರ್ ವಜ್ರದ ಇತಿಹಾಸದ ಕತೆ ರೋಚಕವಾಗಿದೆ. 12-14ನೇ ಶತಮಾನದಲ್ಲಿ ಇದನ್ನು ಗಣಿಯಿಂದ ಹೊರ ತೆಗೆಯಲಾಯಿತು ಎನ್ನಲಾಗಿದೆ. ಒಬ್ಬ ರಾಜನ ಕೈಯಿಂದ ಮತ್ತೊಬ್ಬ ರಾಜನಿಗೆ, ಆತನಿಂದ ಮಗದೊಬ್ಬನಿಗೆ ಹೀಗೆ ಕೈ ಬದಲಾಯಿಸುತ್ತಾ ಬೇರೆ, ಬೇರೆ ದೇಶಗಳಿಗೆ ಇದು ಪ್ರಯಾಣಿಸಿತು. 1739ರವರೆಗೂ ಈ ವಜ್ರಕ್ಕೆ ಹೆಸರು ಇರಲಿಲ್ಲ. ದೆಹಲಿ ಸಾಮ್ರಾಜ್ಯವನ್ನು ಪರ್ಷಿಯನ್ ರಾಜ ನಾದಿರ್ ಶಾ ವಶಕ್ಕೆ ಪಡೆದಾಗ ಆತ ಈ ವಜ್ರವನ್ನು ಮೊದಲ ಬಾರಿಗೆ ನೋಡಿದ. ಅದರ ಪ್ರಖರತೆಗೆ ಮೆಚ್ಚಿ, 'ಕೊಹ್ ಇ ನೂರ್' ಎಂದು ಉಲ್ಲೇಖಿಸಿದ ಎಂದು ಇತಿಹಾಸದಲ್ಲಿ ದಾಖಲಾಗಿದೆ. ಕೊಹ್ ಇ ನೂರ್ ಎಂದರೆ 'ಬೆಳಕಿನ ಪರ್ವತ' ಎಂದರ್ಥ. ಅಂದಿನಿಂದ ಈ ವಜ್ರಕ್ಕೆ ಕೊಹ್ ಇ ನೂರ್ ಎಂಬ ಹೆಸರೇ ಉಳಿಯಿತು. ಕಾಲಾಂತರದಲ್ಲಿ ಅದು ಕೊಹಿನೂರ್ ಆಗಿ ಬದಲಾಯಿತು ಎಂದಿದ್ದಾರೆ ಇತಿಹಾಸ ತಜ್ಞರು. ಮೊಘಲರ ರಾಜರಾದ ಬಾಬರ್, ಶಹಜಹಾನ್ ಮುಂತಾದವರಿಂದ ಇದು ಹಸ್ತಾಂತರವಾಗಿದೆ. ಶಹಜಹಾನನ ರಾಣಿಯರಲ್ಲಿ ಒಬ್ಬರಾದ ವಫಾ ಬೇಗಂ ಈ ವಜ್ರದಿಂದ ತನ್ನ ರಾಜನಿಗೆ ಹಾಗೂ ರಾಜಕುವರನಿಗೆ ಕೆಡಕಾಗಬಹುದು ಎಂಬ ಭಯದಿಂದ ತನ್ನ ಬಳಿ ಇಟ್ಟುಕೊಳ್ಳಲು ಹಿಂಜರಿದಳು ಎನ್ನಲಾಗಿದೆ. ಪಂಜಾಬಿನ ಸಿಖ್ ಚಕ್ರವರ್ತಿ ತಾನು ನೀಡಿದ ಆದರಾತಿಥ್ಯಕ್ಕೆ ಪ್ರತಿಯಾಗಿ ಕೊಹಿನೂರ್ ವಜ್ರವನ್ನು ಪಡೆದ ಎನ್ನಲಾಗುತ್ತದೆ.

ಈ ಅಮೂಲ್ಯ ವಜ್ರವನ್ನು 1849ರಲ್ಲಿ ಹನ್ನೊಂದು ವರ್ಷ ವಯಸ್ಸಿನ ಮಹಾರಾಜ ದುಲೀಪ್ ಸಿಂಗ್, ಲಾಹೋರ್ ಒಪ್ಪಂದಕ್ಕೆ ಪ್ರತಿಯಾಗಿ ಹಾಗೂ ಬ್ರಿಟಿಷ್ ರಾಣಿಗೆ ಕಾಣಿಕೆಯಾಗಿ ಈಸ್ಟ್ ಇಂಡಿಯಾ ಕಂಪನಿಗೆ ಹಸ್ತಾಂತರಿಸಿದ. 1851ರಲ್ಲಿ ಮೊದಲ ಬಾರಿ ಸಾರ್ವಜನಿಕವಾಗಿ 'ಗ್ರೇಟ್ ಎಕ್ಸಿಬಿಷನ್ ಲಂಡನ್'ನಲ್ಲಿ ಇದನ್ನು ಪ್ರದರ್ಶಿಸಲಾಯಿತು. ಆದರೆ ಜನರ ಮನಗೆಲ್ಲಲಿಲ್ಲ ಎಂಬ ಕಾರಣಕ್ಕಾಗಿ ಪ್ರಿನ್ಸ್ ಆಲ್ಬರ್ಟ್ ಕೊಹಿನೂರ್ ಅನ್ನು ಮರು ಕತ್ತರಿಸಲು ಹಾಗೂ ಪಾಲಿಷ್ ಮಾಡಲು ಆದೇಶಿಸಿದ. ಆಗ ರಾಜಮನೆತನದ ಅಕ್ಕಸಾಲಿಗರ ಮಾರ್ಗದರ್ಶನದಲ್ಲಿ ಕೊಹಿನೂರ್ ವಜ್ರವನ್ನು ಕತ್ತರಿಸಿ, ಅದಕ್ಕೆ ಈಗಿನ ಆಕಾರ ಮತ್ತು ಹೊಳಪು ನೀಡಲಾಯಿತು. ಈ ಪ್ರಕ್ರಿಯೆಯಲ್ಲಿ ಕೊಹಿನೂರ್ ವಜ್ರವು 105.6 ಕ್ಯಾರೆಟ್‌ನಿಂದ ಅರ್ಧಕ್ಕೆ ಇಳಿಯಿತು ಎಂಬ ವದಂತಿ ಹರಡಿತು. ತೆಗೆದು ಇರಿಸಬಹುದಾದ ಸ್ವರೂಪದಲ್ಲಿ ಈ ವಜ್ರವನ್ನು ಕಿರೀಟದಲ್ಲಿ ಕೂರಿಸಲಾಗಿದೆ. ರಾಣಿ ಮೇರಿಯ ಕಿರೀಟದಲ್ಲಿ ಮೊದಲು ಇದನ್ನು ಕೂರಿಸಲಾಗಿತ್ತು. ನಂತರ ರಾಣಿ ಮೊದಲನೇ ಎಲಿಜಬೆತ್ ಅವರ ಕಿರೀಟದಲ್ಲಿ ಈ ವಜ್ರವನ್ನು ಕೂರಿಸಲಾಯಿತು. ಈ ಕಿರೀಟವನ್ನು 'ಕ್ವೀನ್ ಎಲಿಜಬೆತ್ ದಿ ಕ್ವೀನ್ ಮದರ್ಸ್ ಕ್ರೌನ್' ಎಂದು ಕರೆಯಲಾಗುತ್ತದೆ.

ಟವರ್ ಮ್ಯೂಸಿಯಂನಲ್ಲಿನ ಚಿತ್ರವೊಂದರಲ್ಲಿ ವಿಕ್ಟೋರಿಯಾ ರಾಣಿಗೆ ಕೊಹಿನೂರ್ ಅನ್ನು ಕಾಣಿಕೆಯಾಗಿ ನೀಡಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಇಲ್ಲಿಗೆ ಕೊಹಿನೂರ್ ವಜ್ರದ ಪಯಣ ಮುಗಿದು 'ಸೆರೆಮನೆ'ಯಲ್ಲಿ ಬಂಧಿಯಾಗಿದೆ ಎಂದರೂ ತಪ್ಪಾಗದು.

ಟವರ್ ಮ್ಯೂಸಿಯಂ ಆವರಣದಲ್ಲಿ ಅಲ್ಲಲ್ಲಿ ಕಾಗೆಗಳಿಂದ ದೂರವಿರಿ ಎಂಬ ಫಲಕಗಳಿವೆ. ಸಾಮಾನ್ಯ ಕಾಗೆಗಳಿಗಿಂತ ಎರಡು ಪಟ್ಟು ದೊಡ್ಡವಿರುವ ಕಾಗೆಗಳಿವು. ಇವುಗಳಿಗೆ ವಿಶೇಷ ಮಹತ್ವವಿದೆ. ಇವು ಆಕ್ರಮಣಕಾರಿ.

ಕೊಹಿನೂರ್ ಮತ್ತೆ ಮರಳಿ ಮೂಲ ದೇಶ ಸೇರಲು ರಾಜತಾಂತ್ರಿಕ ಚರ್ಚೆ ಅಥವಾ ಒಪ್ಪಂದದಿಂದ ಸಾಧ್ಯವಿಲ್ಲ. ಇದು ಸಾಧ್ಯವಾದರೆ ಆಶ್ಚರ್ಯ. ಆಗ ಟವರ್ ಮ್ಯೂಸಿಯಂಗೆ ಯಾವ ಆಕರ್ಷಣೆ, ಮಹತ್ವ ಇರದು ಎಂಬ ಅಭಿಪ್ರಾಯವೂ ಇದೆ. ಇದನ್ನು ಕಾಲವೇ ನಿರ್ಧರಿಸಲಿದೆ. ❖

ಕರ್ನಾಟಕದಲ್ಲಿ ಸಿಕ್ಕಿತ್ತೇ ಈ ವಜ್ರ?

12ರಿಂದ 14ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದ ಕಾಕತೀಯ ವಂಶದ ಅರಸರ ಕಾಲದಲ್ಲಿ ಕೊಹಿನೂರ್ ವಜ್ರವನ್ನು ಗಣಿಯಿಂದ ತೆಗೆಯಲಾಯಿತು ಎನ್ನಲಾಗುತ್ತದೆ. ಆದರೆ ಇದು ದೊರೆತ ಖಚಿತ ಜಾಗ ಎಲ್ಲಿ ಎಂಬ ಗೊಂದಲ ಹಾಗೆಯೇ ಇದೆ. ಅವಿಭಜಿತ ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿ ಹರಿಯುವ ಕೃಷ್ಣಾ ನದಿ ವ್ಯಾಪ್ತಿಯ ಗೋಲ್ಕೊಂಡ ಪ್ರದೇಶದ ಗಣಿಯಲ್ಲಿ ಈ ವಜ್ರ ಸಿಕ್ಕಿತ್ತು ಎನ್ನಲಾಗುತ್ತದೆ. ಕೊಳ್ಳುರು ಎಂಬುದು ವಜ್ರ ಸಿಕ್ಕ ಜಾಗ. ಈ ಕೊಳ್ಳುರು ಎಂಬ ಜಾಗ ಈಗಿನ ಯಾದಗಿರಿ ಜಿಲ್ಲೆಯ ಶಹಪುರ ತಾಲ್ಲೂಕಿನಲ್ಲಿದ್ದು , ವಜ್ರ ಸಿಕ್ಕಿದ್ದು ಇದೇ ಜಾಗದಲ್ಲಿ ಎಂಬುದಾಗಿ ಅಲ್ಲಿ ಫಲಕವನ್ನೂ ಹಾಕಲಾಗಿದೆ. ಆದರೆ, ಆಂಧ್ರದಲ್ಲಿರುವ ಕೊಳ್ಳುರು ಎಂಬ ಜಾಗವೇ ಕೊಹಿನೂರ್ ವಜ್ರ ಸಿಕ್ಕಿದ್ದ ಸ್ಥಳ ಎಂಬ ವಾದವಿವೆ. ಯಾವ ಕೊಳ್ಳುರಿನಲ್ಲಿ ವಜ್ರ ಸಿಕ್ಕಿದೆ ಎಂಬುದಕ್ಕೆ ಸ್ಪಷ್ಟ ಪುರಾವೆಗಳಿಲ್ಲ.

...ಬದುಕಿನ ಕತೆ

10ನೇ ಪುಟದಿಂದ...

ಲಿಂಗಪರಿವರ್ತಿತರು, ಎಚ್‌ಐವಿ ಪೀಡಿತರು, ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳ ಜೊತೆಗೆ, ಅಂಗವಿಕಲರ ಬಗ್ಗೆಯೂ ಕೆಲಸ ಮಾಡತೊಡಗಿದೆ. ಸ್ನೇಹಿತರ ಜೊತೆ ಸೇರಿ, ಕರ್ನಾಟಕ ವಿಕಲಚೇತನರ ಸಂಸ್ಥೆ ಮಾಡಿದೆ. ಈಗ, ಅದರ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ಜೊತೆಗೆ, ರಾಜ್ಯ ಮತ್ತು ತೆಲಂಗಾಣದಲ್ಲಿ ಸ್ಟಾರ್ ಎಂಬಂತಹ ಸಂಸ್ಥೆಗಳನ್ನೂ ಮಾಡಿದ್ದೇನೆ. ಈ ಎಲ್ಲ ಸಂಸ್ಥೆಗಳಲ್ಲಿ ಸುಮಾರು 15 ಸಾವಿರ ಸದಸ್ಯರು ಇದ್ದಾರೆ' ಎನ್ನುತ್ತಾರೆ ಕಿರಣ್.

ಎಪಿಡಿ ಮುಖಾಂತರ ಅಜೀಂ ಪ್ರೇಮ್‌ಜಿ ಫೌಂಡೇಷನ್ ಐವರು ಸಿಬ್ಬಂದಿಯನ್ನು ಒದಗಿಸಿದೆ. ಅಲ್ಲದೆ ಕಚೇರಿಯನ್ನೂ ಮಾಡಿಕೊಟ್ಟಿದೆ. ಲಿಂಗಪರಿವರ್ತಿತರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಸರ್ಕಾರಕ್ಕೆ ತಿಳಿಸಿಕೊಡುವ, ಈ ಸಮಸ್ಯೆ ಬಗೆಹರಿಸಲು ಬೇಕಾದ ಸಲಹೆಯನ್ನು ಕೊಡುವ ಕೆಲಸವನ್ನು ಇವರು ಮಾಡುತ್ತಿದ್ದಾರೆ.

ಲಿಂಗಪರಿವರ್ತನೆ ಮಾಡಿಕೊಳ್ಳಬಯಸುವ ಅಥವಾ ಹೆಣ್ಣು ಗಂಡಾಗಿ ಅಥವಾ ಗಂಡು ಹೆಣ್ಣಾಗಿ ಜೀವಿಸಬಯಸುವವರನ್ನು ಸಮಾಜದಲ್ಲಿ ಕೆಟ್ಟದಾಗಿ ನೋಡಿಕೊಳ್ಳಲಾಗುತ್ತಿದೆ. ಎಷ್ಟೋ ಯುವಕ-ಯುವತಿಯರಿಗೆ ಬಲವಂತದ ಮದುವೆ ಮಾಡಿಬಿಡುತ್ತಿದ್ದಾರೆ. ಇಂತಹ ಸವಾಲುಗಳನ್ನು ಎದುರಿಸಲಾಗದೆ ಎಷ್ಟೋ ಜನ ಸಾವಿಗೀಡಾಗುತ್ತಾರೆ ಎಂಬ ಸಮಸ್ಯೆಯನ್ನು ಕಂಡುಕೊಂಡಿರುವ ಕಿರಣ್, ಅದಕ್ಕೆ ಆದಷ್ಟು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ.

'ಟ್ರಾನ್ಸ್‌ಮನ್, ಅಂಗವಿಕಲರು ಯಾರೇ ಆದರೂ ಒಂದೇ ದೇಹ. ನನ್ನ ದೇಹಕ್ಕೂ ಭಾವನೆಗಳಿವೆ. ಮದುವೆ ಮಾಡಿಕೊಳ್ಳಬೇಕು, ಮಕ್ಕಳು ಬೇಕು ಎಂಬ ಭಾವನೆ ಅವರಲ್ಲಿಯೂ ಇರುತ್ತದೆ. ಆದರೆ, ನಮ್ಮ ಮನಸಿಗೆ ತಕ್ಕಂತೆ, ನಮ್ಮ ದೇಹವನ್ನು ಇಟ್ಟುಕೊಳ್ಳೋದಕ್ಕೂ ಸಮಾಜ ಒಪ್ಪುವುದೇ ಇಲ್ಲ. ಲಿಂಗಪರಿವರ್ತನೆ ಬಯಸುವವರೂ ಅದನ್ನು ಬಹಿರಂಗವಾಗಿ ಹೇಳಿಕೊಳ್ಳಬೇಕು' ಎನ್ನುವುದನ್ನು ಕಿರಣ್ ಒತ್ತಿಹೇಳುತ್ತಾರೆ.

ಅಂಗವಿಕಲರ ಹಕ್ಕುಗಳಿಗಾಗಿಯೂ ಕಿರಣ್ ಹೋರಾಡುತ್ತಿದ್ದಾರೆ. ಅಂಗವಿಕಲ ಮಹಿಳೆಯರ ದೇಹದ ಮೇಲೆ ಮೂರನೇ ವ್ಯಕ್ತಿ ಅಧಿಕಾರ ಚಲಾಯಿಸಲು ಬರುತ್ತಾನೆ. ಅಂಥವರ ದೇಹದ ಬಗ್ಗೆ ಮೂರನೇ ವ್ಯಕ್ತಿ ನಿಯಂತ್ರಣ ಸಾಧಿಸುವ, ನಿರ್ಧಾರ ತೆಗೆದುಕೊಳ್ಳುವ ಪ್ರವೃತ್ತಿ ನಿಲ್ಲಬೇಕು. ಅವರ ದೇಹಕ್ಕೆ ಅವರು ಏನು ಕೇಳುತ್ತಿದ್ದಾರೆ, ಅವರಿಗೆ ಏನು ಬೇಕು ಅಂತ ಹೇಳೋದಕ್ಕೆ ಅವಕಾಶ ಕೊಡಬೇಕು. ಸಾರ್ವಜನಿಕ ಸ್ಥಳಗಳಲ್ಲಿ, ಉದ್ಯಾನಗಳಲ್ಲಿ ಅಂಗವಿಕಲರಿಗಾಗಿ ಅಲ್ಲಲ್ಲಿ ಶೌಚಾಲಯ, ಗಾಲಿ ಕುರ್ಚಿ, ರ್‍ಯಾಂಪ್ ವ್ಯವಸ್ಥೆ ಮಾಡಬೇಕು, ಸ್ಯಾನಿಟರಿ ಪ್ಯಾಡ್ ಒದಗಿಸಬೇಕು ಎನ್ನುವ ಹಕ್ಕೊತ್ತಾಯ ಮಾಡುತ್ತಾರೆ.

ಆಂಧ್ರಪ್ರದೇಶ, ತೆಲಂಗಾಣ, ರಾಜಸ್ಥಾನ, ದೆಹಲಿ, ಕೇರಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ ಮಾಡಿದ್ದಾರೆ. ಆ ಮೂಲಕ ಲೈಂಗಿಕ ಅಲ್ಪಸಂಖ್ಯಾತರಿಗೆ ₹800 ಮೈತ್ರಿ ಪಿಂಚಣಿ ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಈ ಸೌಲಭ್ಯವನ್ನು ಒದಗಿಸಿಕೊಟ್ಟರೆ ಹಲವು ಜನರಿಗೆ ನ್ಯಾಯ ಸಿಗುತ್ತದೆ ಎಂಬ ವಾದ ಕಿರಣ್ ಅವರದ್ದು.

ಕಿರಣ್ ಅವರ ಸಮಾಜಮುಖಿ ಸೇವೆ ಗಮನಿಸಿ ಹಲವು ಸಂಘ-ಸಂಸ್ಥೆಗಳು ಅವರಿಗೆ ಪ್ರಶಸ್ತಿ-ಪುರಸ್ಕಾರ ನೀಡಿ ಗೌರವಿಸಿವೆ. 2016ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗೂ ಪಾತ್ರರಾಗಿದ್ದಾರೆ. 'ಬೇರೆ ರಾಜ್ಯದವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ ಎಂಬ ಟೀಕೆಗಳು ಆಗ ಎದುರಾದವು. ಆದರೆ, ಚಿಕ್ಕಬಳ್ಳಾಪುರ ಜನ 'ನೀವು ನಮ್ಮವರೇ, ನೀವು ಈ ಪ್ರಶಸ್ತಿಗೆ ಅರ್ಹರು' ಎಂದು ಬೆನ್ನಿಗೆ ನಿಂತಾಗ ಬದುಕು ಸಾರ್ಥಕ ಎನಿಸಿತು' ಎಂದು ಕಣ್ಣರಳಿಸಿದರು ಕಿರಣ್.

ಟ್ರಾನ್ಸ್‌ಮನ್ ಅಥವಾ ಟ್ರಾನ್ಸ್‌ವುಮನ್ ಆಗಿ ಬದುಕುವ ಹಕ್ಕು ಎಲ್ಲರಿಗೂ ಇದೆ. ಈ ಸಮಾಜ ನಮ್ಮನ್ನೂ ಮನುಷ್ಯರು ಅಂತ ನೋಡುವುದನ್ನು ಕಲಿಯಬೇಕು. ನಮ್ಮ ಜೀವನ, ನಮ್ಮ ದೇಹ, ನಮ್ಮ ಆಯ್ಕೆ... ನಾವೂ ಗೌರವಯುತವಾಗಿ ಬದುಕು ಸಾಗಿಸಬೇಕೆಂದರೆ, ನಮಗೂ ಗೌರವವಾದ ಸಮಾನ ಹಕ್ಕು ಸಿಗಬೇಕು ಎನ್ನುವ ಕಿರಣ್ ನಾಯಕ್, ಆ ನಿಟ್ಟಿನಲ್ಲಿ ತಮ್ಮ ಹೋರಾಟ ಮುಂದುವರಿಸಿದ್ದಾರೆ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡರ್‍ನ್ಗ ಚಕ್ಕು ಕೇಶ್ರಪ್ತ ಕಥೆಯ — ನಾಯಿ ಬಾಲ ಯಾವತ್ತೂ ಡೊಂಕೆ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಗುಂಡ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ನಾಯಿಯೊಂದನ್ನು ನೋಡಿದ. ತಕ್ಷಣವೇ ಅವನಿಗೆ 'ನಾಯಿ ಬಾಲ ಡೊಂಕು' ಎಂಬ ಗಾದೆಯೊಂದು ನೆನಪಾಯಿತು. ಸ್ವಲ್ಪ ಹೊತ್ತು ಯೋಚಿಸಿದ ಗುಂಡ ಅಲ್ಲೇ ಇದ್ದ ಪ್ಲಾಸ್ಟಿಕ್ ಪೈಪೊಂದನ್ನು ತಂದು ಬಾಲವನ್ನು ಅದರೊಳಗೆ ಹಾಕಿ ನೇರ ಮಾಡಿದ. ಸ್ವಲ್ಪ ಹೊತ್ತಿನಲ್ಲೇ ಪ್ಲಾಸ್ಟಿಕ್ ಪೈಪು ಸಹಿತ ನಾಯಿ ಬಾಲ ಮತ್ತೆ ಡೊಂಕಾಯಿತು. ಇಂತಹ ಗಾದೆಗಳನ್ನು ಸುಮ್ಮನೆ ಮಾಡಿಲ್ಲ ಎಂದು ಗುಂಡ ಅರಿತ.



ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಜ	ಹೊ	ದಿ	ಸ
ಕೂ	ತೋ	ಅ	ಸಾ
ಕೊ	ಮು	ತೂ	ಕ

1

	ರಿ	ಗೆ
	ರಿ	ಗೆ

2

	ರ	ಳು
	ರ	ಳು

3

	ರಿ	ಸು
	ರಿ	ಸು

4

	ಗಿ	ಲು
	ಗಿ	ಲು

5

	ನ	ಲು
	ನ	ಲು

6

	ವಾ	ರಿ
	ವಾ	ರಿ

ಚಿಣ್ಣರ ಚುಟುಕು



ಗಜ್ಜರಿ ಗಜ್ಜರಿ ಗಜ್ಜರಿ
ಸಣ್ಣಾಗಿ ಅದನು ಜಜ್ಜಿರಿ
ಮಾಡಿಕೊಂಡು ತಿಂದ್ರೆ ಹಲ್ವಾ
ಬಾಯಿಗೆ ರುಚಿಯು ಅಲ್ವಾ

ಗಣಿತದಲ್ಲಿ ಗರ್ದಿ ಗಮ್ಮತ್ತು

ನಿನ್ನ ಹುಟ್ಟಿದ ದಿನಾಂಕ ನಾ ಹೇಳಲೆ?

ಇಲ್ಲಿ ಕೊಟ್ಟಿರುವ ದಿನಾಂಕಗಳ ಪಟ್ಟಿಯಲ್ಲಿ ನಿನ್ನ ಹುಟ್ಟಿದ ದಿನಾಂಕ ಯಾವ ಯಾವ ಸಾಲಿನಲ್ಲಿದೆ ಎಂದು ಹೇಳಿದರೆ ನಾನು ನಿನ್ನ ಹುಟ್ಟಿದ ದಿನಾಂಕ ಹೇಳುತ್ತೇನೆ. ಅದು ಹೇಗೆ ಎನ್ನುತ್ತೀಯಾ? ಹೀಗೆ ನೋಡು. ನೀನು ಯಾವ ಸಾಲಿನಲ್ಲಿ ಜನ್ಮದಿನಾಂಕವಿದೆ ಎಂದು ಹೇಳುತ್ತೀಯೋ ಆ ಸಾಲಿನ ಮೊದಲ ಸಂಖ್ಯೆಗಳನ್ನು ಕೂಡಿಸಿ ಹೇಳಿದರೆ ಅದೇ ನಿನ್ನ ಹುಟ್ಟಿದ ದಿನಾಂಕವಾಗಿರುತ್ತದೆ.

ಉದಾ: ಈಗ ನೀನು ಎರಡನೇ ಸಾಲು ಮತ್ತು ನಾಲ್ಕನೇ ಸಾಲಿನಲ್ಲಿ ಹುಟ್ಟಿದ ದಿನಾಂಕವಿದೆ ಎಂದರೆ ಆ ಸಾಲಿನ ಮೊದಲ ಸಂಖ್ಯೆಗಳು 8 ಮತ್ತು 2. ಇವುಗಳನ್ನು ಕೂಡಿಸಿದರೆ: 8 + 2 = 10. ನಿನ್ನ ಹುಟ್ಟಿದ ದಿನಾಂಕ: 10

ದಿನಾಂಕಗಳ ಪಟ್ಟಿ				
1	2	4	8	16
3	3	5	9	17
5	6	6	10	18
7	7	7	11	19
9	10	12	12	20
11	11	13	13	21
13	14	14	14	22
15	15	15	15	23
17	18	20	24	24
19	19	21	25	25
21	22	22	26	26
23	23	23	27	27
25	26	28	28	28
27	27	29	29	29
29	30	30	30	30
31	31	31	31	31

ಜಾಣಪದಾಕ್ಷರ ಆಟ

ಇಲ್ಲಿ ಕೊಟ್ಟಿರುವ ನಾಲ್ಕಕ್ಷರಗಳು ಅದಲು ಬದಲಾಗಿದ್ದು, ಅವುಗಳನ್ನು ಸರಿಯಾಗಿ ಕೂಡಿಸಿ ಅರ್ಥಬದ್ಧಪದ ಮಾಡಬಲ್ಲಿರಾ?

ಉದಾ: ಅರಸ + ವ = ಅವಸರ

1	ಉದಾರ	ಡ	
2	ಚವಳಿ	ಳ	
3	ಜನನ	ಮ	
4	ದಾನವ	ರ	
5	ಕವಳ	ಳ	
6	ಮಾರಿಸು	ಕು	
7	ಸಂಧಾನ	ವಿ	
8	ಕಾಡಿಗೆ	ಲ್ನ	
9	ರವಾನೆ	ಗು	
10	ಹಳದಿ	ತ	

ಮೋಜಿನ ENGLISH — 'IN'TERESTING ಆಟ

ಇಲ್ಲಿ ಕೊಟ್ಟಿರುವ IN ಪದದ ಹಿಂದೊಂದು ಮುಂದೊಂದು ಇಂಗ್ಲಿಷ್ ಅಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1		I	N	
2		I	N	
3		I	N	
4		I	N	
5		I	N	
6		I	N	
7		I	N	
8		I	N	
9		I	N	
10		I	N	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ತೊಂಭತ್ತು-ಎಂಭತ್ತು 2.ಮಾಲಿನ-ಶಾಲಿನಿ 3.ಸಂಕುಲ-ನಕುಲ 4.ನಂಬಿಗೆ-ತಂಬಿಗೆ 5.ಗೋರಂಟಿ-ಗ್ಯಾರಂಟಿ 6.ಅಖಿಲ-ನಿಖಿಲ

ಜಾಣಪದಾಕ್ಷರ ಆಟ: 1.ಅವಸರ 2.ಅವತಾರ 3.ಸಮರಸ 4.ಇಳುವರಿ 5.ಭರವಸೆ 6.ಕನಿಕರ 7.ಗಮನಿಸು 8.ಅವನತಿ 9.ಸುಮಧುರ 10.ಜನವರಿ

ಪದಶೋಧ: ಸಕ್ಕರೆನಾಡು

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಕುಶಲ್ ಜಿ.ಎನ್. ಬೈಲಹೊಂಗಲ

ಹಸ್ಮಿತಾ ಎಸ್. ಬೆಂಗಳೂರು

ಯಜತ್ ಆರ್. ಚಾಮರಾಜನಗರ

ಸಮೀಕ್ಷಾ ಸಿ. ಬೆಂಗಳೂರು

ಆರ್ಯ ಡಿ. ನಾಯ್ಕ್ ಬೆಂಗಳೂರು

ದೀಪ್ತಿ ಲಕ್ಷ್ಮಣ್ ಗೌಡ ಅಂಕೋಲ

ಬಾಕ್ಸಿಂಗ್ ಡೇ ಟೆಸ್ಟ್: ಎಂಟನೇ ವಿಕೆಟ್ ಜೊತೆಯಾಟದಿಂದ ಭಾರತಕ್ಕೆ ತಪ್ಪಿದ ಫಾಲೋ ಆನ್

ನಿತೀಶ್ ಕುಮಾರ್ ಸೂಪರ್ ವಾಷಿಂಗ್ಟನ್ 'ಸುಂದರ'

> ಭಾರತದ ಯುವ ಆಟಗಾರ (ನಿತೀಶ್) ಅವರ ಸಂಗ್ರಹದಲ್ಲಿ ಕ್ರಿಕೆಟ್ ಪುಸ್ತಕದ ಎಲ್ಲ ಹೊಡೆತಗಳೂ ಇವೆ. ಕೆಳಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ಅಮೋಘವಾಗಿ ಆಡಿದರು.
> **ಸ್ಕಾಟ್ ಬೊಲ್ಯಾಂಡ್,** ಆಸ್ಟ್ರೇಲಿಯಾ ಬೌಲರ್

> ಈ ಇನಿಂಗ್ಸ್ ಅನ್ನು ನಿತೀಶ್ ಸದಾಕಾಲ ನೆನಪಿನಲ್ಲಿಡುತ್ತಾರೆ. ಅವರು ಮಾನಸಿಕವಾಗಿ ಬಹಳ ಗಟ್ಟಿಯಾಗಿದ್ದಾರೆ. ಅತ್ಯಂತ ಸುಂದರವಾದ ಶತಕ ಇದು. ಬಾಕ್ಸಿಂಗ್ ಡೇ ಸೆಂಚುರಿ ವೈಶಿಷ್ಟ್ಯಪೂರ್ಣ.
> **ವಾಷಿಂಗ್ಟನ್ ಸುಂದರ್,** ಭಾರತದ ಆಲ್‌ರೌಂಡರ್

• ಮಧು ಜವಳಿ

ಮೆಲ್ಬರ್ನ್: ಸಾಹಸ ಮತ್ತು ಬೇಜವಾಬ್ದಾರಿತನದ ನಡುವೆ ಒಂದು ತೆಳುವಾದ ಗೆರೆ ಇರುತ್ತದೆ. ಶನಿವಾರ ರಿಷಭ್ ಪಂತ್ ಅವರು ಆ ಗೆರೆಯನ್ನು ಉಲ್ಲಂಘಿಸಿದರು. ಅವರು ಆಡುತ್ತಿದ್ದ ಸಂದರ್ಭಕ್ಕೆ ಅಪಾಯಕಾರಿಯಾದ ಹೊಡೆತವನ್ನು ಅವರು ಆಯ್ಕೆ ಮಾಡಿಕೊಂಡಿದ್ದು ಭಾರತ ತಂಡದ ಭರವಸೆಯನ್ನು ಬುಡಮೇಲು ಮಾಡಿತು. ಪಿಚ್ ಮೇಲೆ ಉರುಳಿ ಭಾಗಶಃ ಪುಲ್ ಮತ್ತು ಭಾಗಶಃ ಸ್ಕೂಪ್ ಮಿಶ್ರಿತ ಹೊಡೆತವನ್ನು ಆಡಿದರು. ವಿಕೆಟ್ ತೆತ್ತರು.

ಅತ್ತ ಕಾಮೆಂಟ್ರಿ ಬಾಕ್ಸ್‌ನಲ್ಲಿ ಬ್ಯಾಟಿಂಗ್ ದಂತಕಥೆ ಸುನಿಲ್ ಗಾವಸ್ಕರ್ ವೀಕ್ಷಕ ವಿವರಣೆಯಲ್ಲಿ ಪಂತ್ ವಿರುದ್ಧ ಕಿಡಿಕಾರಿದರು. ಅದು ಸಾಮಾಜಿಕ ಜಾಲತಾಣಗಳಲ್ಲಿ ಜಗಜ್ಜಾಹೀರಾಯಿತು. ಆ ಮಾತುಗಳು ಆ ಹೊತ್ತಿನಲ್ಲಿ ಭಾರತ ತಂಡದ ಅಭಿಮಾನಿಗಳ ಭಾವನೆಗಳ ಪ್ರತೀಕವಾಗಿದ್ದವು.

ಮುಖ್ಯಾಂಶಗಳು
- ರಿಷಭ್ ಪಂತ್ ಹೊಡೆತದ ಶೈಲಿಗೆ ಗಾವಸ್ಕರ್ ಟೀಕೆ
- ಭಾರತಕ್ಕೆ ಇನಿಂಗ್ಸ್ ಮುನ್ನಡೆ ಗಳಿಸಲು ಇನ್ನೂ ಬೇಕು 116 ರನ್
- ತಲಾ 3 ವಿಕೆಟ್ ಗಳಿಸಿದ ಕಮಿನ್ಸ್, ಬೋಲ್ಯಾಂಡ್

ಶುಕ್ರವಾರ ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 474 ರನ್‌ಗಳಿಗೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿ ಎರಡನೇ ದಿನದಾಟದ ಮುಕ್ತಾಯಕ್ಕೆ ಭಾರತ 5 ವಿಕೆಟ್‌ಗಳಿಗೆ 164 ರನ್ ಗಳಿಸಿತ್ತು. ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು 310 ರನ್‌ಗಳ ಅವಶ್ಯಕತೆ ಇತ್ತು. ಕ್ರೀಸ್‌ನಲ್ಲಿ ಉಳಿದಿದ್ದ ಪಂತ್ ಮೇಲೆ ನಿರೀಕ್ಷೆಯ ಭಾರ ಇತ್ತು. ತಮ್ಮ ಅಸಾಂಪ್ರದಾಯಿಕ ಹೊಡೆತಗಳಿಗೆ ಖ್ಯಾತರಾಗಿರುವ ಪಂತ್ ಬಹಳಷ್ಟು ಬಾರಿ ಯಶಸ್ಸು ಗಳಿಸಿದ್ದಾರೆ. ಶನಿವಾರ ಅವರ ನಿರ್ಧಾರ ತಪ್ಪಾಯಿತು. ಥರ್ಡ್‌ಮ್ಯಾನ್ ವಲಯದಲ್ಲಿ ಉದ್ದೇಶಪೂರ್ವಕವಾಗಿ ನೇಥನ್ ಲಯನ್ ಅವರನ್ನು ಫೀಲ್ಡಿಂಗ್‌ಗೆ ನಿಯೋಜಿಸಿದ್ದ ನಾಯಕ ಪ್ಯಾಟ್ ಕಮಿನ್ಸ್ ಲೆಕ್ಕಾಚಾರ ಈಡೇರಿತು. ಸ್ಕಾಟ್ ಬೋಲ್ಯಾಂಡ್ ಎಸೆತವನ್ನು ಆಡುವ ಕೆಟ್ಟ ನಿರ್ಣಯವು ಲಯನ್‌ಗೆ ಕ್ಯಾಚ್ ಆಗಿ ಆಸ್ಟ್ರೇಲಿಯಾ ಸಂಭ್ರಮಿಸಿತು.

ಸ್ವಲ್ಪ ಹೊತ್ತಿನ ನಂತರ ರವೀಂದ್ರ ಜಡೇಜ ಅವರನ್ನು ಲಯನ್ ತಮ್ಮ ಸ್ಪಿನ್ ಮೋಡಿಗೆ ಕೆಡವಿದರು. ಆಗ ತಂಡದ ಮೊತ್ತ 7ಕ್ಕೆ221 ಆಗಿತ್ತು. ಫಾಲೋ ಆನ್ ತಪ್ಪಿಸಿಕೊಳ್ಳಲು ಇನ್ನೂ 54 ರನ್ ಬೇಕಿದ್ದವು. ಇನ್ನೂ ಮೂರು ವಿಕೆಟ್ ಹೋಗಿದ್ದರೆ, ಆಸ್ಟ್ರೇಲಿಯಾವು ರೋಹಿತ್ ಶರ್ಮಾ ಬಳಗಕ್ಕೆ ಎರಡನೇ ಇನಿಂಗ್ಸ್ ಆಡಲು ಫಾಲೋ ಆನ್ ಕೊಡುವ ಸಾಧ್ಯತೆ ಇತ್ತು.

ಆದರೆ ಗಟ್ಟಿ ಮನೋಬಲ ಮತ್ತು ಸಂದರ್ಭಕ್ಕೆ ಉಚಿತವಾದ ಆಟವಾಡುವುದು ಹೇಗೆ ಎಂದು ನೋಡುವ ಸಮಯ ಆಗ ಬಂತು.

21 ವರ್ಷ ವಯಸ್ಸಿನ ನಿತೀಶ್ ರೆಡ್ಡಿ (ಔಟಾಗದೆ 105, 176ಎ, 4X10, 6X1) ಮತ್ತು ವಾಷಿಂಗ್ಟನ್ ಸುಂದರ್ ಅವರು 127 ರನ್‌ಗಳ ಜೊತೆಯಾಟವಾಡಿದರು. ಫಾಲೋ ಆನ್ ತಪ್ಪಿಸಿದರು. ಬ್ಯಾಟರ್ ಶುಭಮನ್ ಗಿಲ್ ಅವರನ್ನು ಬೆಂಚ್‌ನಲ್ಲಿ ಕೂರಿಸಿ ಆಲ್‌ರೌಂಡರ್ ವಾಷಿಂಗ್ಟನ್ ಅವರಿಗೆ ಅವಕಾಶ ಕೊಟ್ಟಿದ್ದು ಫಲ ನೀಡಿತು. ಮೂರನೇ ದಿನದಾಟದ ಅಂತ್ಯಕ್ಕೆ ತಂಡವು 9 ವಿಕೆಟ್‌ಗಳಿಗೆ 358 ರನ್ ಗಳಿಸಿತು. ಲೆಕ್ಕ ಚುಕ್ತಾ ಮಾಡಲು ಇನ್ನೂ 116 ರನ್ ಬೇಕು.

ವಾಷಿಂಗ್ಟನ್ ಅವರ ಬ್ಯಾಟಿಂಗ್ ಕೌಶಲಗಳು ಮತ್ತೊಮ್ಮೆ ಆಸ್ಟ್ರೇಲಿಯಾದ ನೆಲದಲ್ಲಿ ಒಡಮೂಡಿದವು. ಎಡಗೈ ಬ್ಯಾಟರ್ ವಾಷಿಂಗ್ಟನ್ ಅವರ ಶಾಂತ ಸ್ವಭಾವ ಮತ್ತು ಏಕಾಗ್ರ ಚಿತ್ತದ ಆಟ ಒಂದೆಡೆ. ಇನ್ನೊಂದು ಕಡೆ ಅಪಾರ ತಾಳ್ಮೆಯಿಂದ ಲೆಕ್ಕಾಚಾರ ಮಾಡಿ ಒಂದೊಂದೇ ಹೊಡೆತವನ್ನು ಜತನದಿಂದ ಆಯ್ಕೆ ಮಾಡಿ ಆಡುತ್ತಿದ್ದ ನಿತೀಶ್. ಯಾವುದೇ ಹಂತದಲ್ಲಿಯೂ ಗಡಿಬಿಡಿ ಮಾಡದ ಅವರಿಬ್ಬರ ಆಟ ಅಗ್ರಕ್ರಮಾಂಕದ ಬ್ಯಾಟರ್‌ಗಳಷ್ಟೇ ಉತ್ಕೃಷ್ಟವಾಗಿತ್ತು. ಅದರಿಂದಾಗಿ ರೋಹಿತ್ ಪಡೆಗೆ ಫಾಲೋ ಆನ್ ತಪ್ಪಿತು.

ಅಪ್ಪನ ತ್ಯಾಗ, ಅಮ್ಮನ ಪ್ರೀತಿಯಲ್ಲಿ ಅರಳಿದ ನಿತೀಶ್

ನಿತೀಶ್ ಕುಮಾರ್ ರೆಡ್ಡಿ ಕ್ರಿಕೆಟ್ ಅಂಗಳದಲ್ಲಿ ಮಾಡಿದ ಸಂಭ್ರಮಾಚರಣೆಗಳು ತೆಲುಗು ಸಿನಿಮಾ ರಂಗದ ಎರಡು ಸುಪ್ರಸಿದ್ಧ ದೃಶ್ಯಗಳ ಪ್ರತಿಕೃತಿಗಳಾಗಿದ್ದವು. ತೆಲುಗು ಭಾಷಿಕ ರಾಜ್ಯಗಳ ಜನರಲ್ಲಿ ಇರುವ ಸಿನಿಮಾ ಪ್ರೇಮ, ಪ್ರಭಾವಗಳ ಪ್ರತಿಬಿಂಬಗಳಾಗಿದ್ದವು ಆ ಸಡಗರಗಳು.

ನಿತೀಶ್ ಕುಮಾರ್ ರೆಡ್ಡಿ

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದ ಮೂರನೇ ದಿನದಾಟದಲ್ಲಿ ಶನಿವಾರ ನಿತೀಶ್ ಅರ್ಧಶತಕ ಗಳಿಸಿದಾಗ ಪುಷ್ಪ ಚಲನಚಿತ್ರದಲ್ಲಿ ನಾಯಕ ಅಲ್ಲು ಅರ್ಜುನ್ ಅವರು ತಮ್ಮ ಗಡ್ಡವನ್ನು ಹುರಿಗೊಳಿಸುವ ಶೈಲಿಯನ್ನು ಅನುಕರಿಸಿದರು. ಆದರೆ ನಿತೀಶ್ ತಮ್ಮ ಬ್ಯಾಟ್‌ನಿಂದ ಗಡ್ಡವನ್ನು ನೀವಿಕೊಂಡರು. ಶತಕ ಪೂರೈಸಿದಾಗ ಬಾಹುಬಲಿ ಸಿನಿಮಾದಲ್ಲಿ ನಾಯಕ ಪ್ರಭಾಸ್ ಅವರ 'ಸಿಗ್ನೇಚರ್ ಸೀನ್' ಅನುಕರಿಸಿದರು.

ನಿತೀಶ್ ತೋರಿದ ಈ ಸಂಕೇತಗಳು ಸಿನಿಮಾದ ಸೂಪರ್‌ಸ್ಟಾರ್‌ಗಳ ಅನುಕರಣೆ ಅಷ್ಟೇ ಅಲ್ಲ. ಸ್ವತಃ ನಿತೀಶ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ದಾಖಲಿಸಿದ ಚೊಚ್ಚಲ ಶತಕದ ಮಹತ್ವವನ್ನೂ ಬಿಂಬಿಸಿದವು. ಸೂಪರ್ ಹಿಟ್ ಸಿನಿಮಾಗಳ ಯಶಸ್ಸಿನ ಹಿಂದೆ ಇರುವಷ್ಟೇ ಸಾಹಸದ ಕಾರ್ಯ ನಿತೀಶ್ ಬ್ಯಾಟಿಂಗ್‌ನಲ್ಲಿಯೂ ಇತ್ತು. 100ರ ಗಡಿ ಮುಟ್ಟಲು 3 ರನ್‌ಗಳಿಸುವ ಸಂದರ್ಭವಂತೂ ರೋಚಕ ಥ್ರಿಲ್ಲರ್ ಸಿನಿಮಾದಂತೆಯೇ ಇತ್ತು.

ವಿಶಾಖಪಟ್ಟಣದ ನಿತೀಶ್ 97 ರನ್ ಗಳಿಸಿದ್ದ ಸಂದರ್ಭದಲ್ಲಿ ವಾಷಿಂಗ್ಟನ್ ಸುಂದರ್ (50; 162ಎಸೆತ) ಅವರು ಸ್ಪಿನ್ನರ್ ನೇಥನ್ ಲಯನ್ ಓವರ್‌ನ ಕೊನೆಯ ಎಸೆತದಲ್ಲಿ ಔಟಾದರು. ಆಗ ಕೊನೆಯ ಇಬ್ಬರು ಬಾಲಂಗೋಚಿ ಬ್ಯಾಟರ್‌ಗಳು ಉಳಿದಿದ್ದರು.

ಸ್ಕಾಟ್ ಬೋಲ್ಯಾಂಡ್ ಓವರ್‌ನ ಕೊನೆಯ ಎಸೆತದಲ್ಲಿ ನಿತೀಶ್ ಎರಡು ರನ್ ಗಳಿಸುವ ಅಪಾಯವನ್ನು ಮೈಮೇಲೆಳೆದುಕೊಂಡು, ಪಾರಾದರು. ನಂತರದ ಕಮಿನ್ಸ್ ಓವರ್‌ನಲ್ಲಿ ಬೂಮ್ರಾ ಬ್ಯಾಟಿಂಗ್‌ಗೆ ಬರಬೇಕಾಯಿತು.

ಇನಿಂಗ್ಸ್‌ಗೆ ತೆರೆಯೆಳೆಯಲು ಆಸ್ಟ್ರೇಲಿಯಾಕ್ಕೆ ಎರಡು ವಿಕೆಟ್ ಮಾತ್ರ ಬೇಕಿತ್ತು. ಅದಕ್ಕೆ ತಕ್ಕಂತೆ ಕಮಿನ್ಸ್ ಎಸೆತದಲ್ಲಿ ಬೂಮ್ರಾ ಔಟಾದರು. ನಿತೀಶ್ ಚೊಚ್ಚಲ ಶತಕದ ಕನಸು ಕೈತಪ್ಪುವ ಆತಂಕ ಪ್ರೇಕ್ಷಕರ ವಲಯದಲ್ಲಿ ಆವರಿಸಿತು. ಆದರೆ ಕ್ರೀಸ್‌ಗೆ ಬಂದ ಮೊಹಮ್ಮದ್ ಸಿರಾಜ್ ಆ ಓವರ್‌ನಲ್ಲಿದ್ದ ಮೂರು ಎಸೆತಗಳನ್ನು ಎದುರಿಸಿ ನಿಂತರು. ಇದರಿಂದಾಗಿ ನಿತೀಶ್‌ಗೆ ಒಂದು ಅವಕಾಶ ಲಭಿಸಿತು.

ಶಾಂತಚಿತ್ತದ ನಿತೀಶ್ ಬೋಲ್ಯಾಂಡ್ ಎಸೆತವನ್ನು ಲಾಫ್ಟ್ ಮಾಡಿದರು. ಮಿಡ್ ಆನ್ ಫೀಲ್ಡರ್ ದಾಟಿದ ಕೆಂಪುಚೆಂಡು ಬೌಂಡರಿಗೆರೆ ಮುತ್ತಿಕ್ಕಿ ಸಾಗಿತು. ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಮುಗಿಲುಮುಟ್ಟಿತು. ಅದರಲ್ಲಿ ನಿತೀಶ್ ಅವರ ತಂದೆ ಮುತ್ಯಾಲ ರೆಡ್ಡಿ, ತಾಯಿ ಶೈಲಜಾ ಮತ್ತು ತಂಗಿ ತೇಜಸ್ವಿ ಅವರೂ ಸೇರಿದ್ದರು. 'ಚಿಕ್ಕವನಾಗಿದ್ದಾಗ ನಾನು ಕ್ರಿಕೆಟ್ ಬಗ್ಗೆ ಹೆಚ್ಚು ಗಂಭೀರವಾಗಿರಲಿಲ್ಲ. ನನ್ನನ್ನು ಕ್ರಿಕೆಟಿಗನನ್ನಾಗಿ ಬೆಳೆಸಲು ಅಪ್ಪ,ತಮ್ಮ ನೌಕರಿ ಬಿಟ್ಟರು. ಸಮಾಜದ ಟೀಕೆ, ವ್ಯಂಗ್ಯಗಳನ್ನು ಸಹಿಸಿಕೊಂಡರು. ಹಣಕಾಸಿನ ಮುಗ್ಗಟ್ಟು ಎದುರಿಸಿದರು. ಅದೊಂದು ದಿನ ಅವರು ಅಳುತ್ತ ಕೂತಿದ್ದನ್ನು ನೋಡಿದ್ದೆ. ಅದು ನನ್ನ ಜೀವನವನ್ನೇ ಬದಲಿಸಿತು. ಅವರ ಶ್ರಮ, ತ್ಯಾಗಕ್ಕೆ ತಕ್ಕ ಪ್ರತಿಫಲ ಸಿಗುವಂತಾಗಬೇಕು. ಅದಕ್ಕಾಗಿ ನಾನು ಕಠಿಣ ಪರಿಶ್ರಮಪಡಬೇಕು ಎಂದು ನಿರ್ಧರಿಸಿದೆ. ಭಾರತ ತಂಡಕ್ಕೆ ಪದಾರ್ಪಣೆ ಮಾಡಿ ನನ್ನ ಮೊದಲ ಜೆರ್ಸಿಯನ್ನು ಅವರಿಗೆ ಕೊಟ್ಟಿದ್ದು ಜೀವನದ ಅತ್ಯಂತ ತೃಪ್ತಿಕರ ಕ್ಷಣ' ಎಂದು ಸಂದರ್ಶನದಲ್ಲಿ ನಿತೀಶ್ ಹೇಳಿದ್ದರು.

ನಿತೀಶ್ ರೆಡ್ಡಿಗೆ ₹25 ಲಕ್ಷ ನಗದು

ನವದೆಹಲಿ (ಪಿಟಿಐ): ನಾಲ್ಕನೇ ಟೆಸ್ಟ್‌ನಲ್ಲಿ ಶತಕ ಹೊಡೆದು ಭಾರತದ ಪ್ರತಿಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರಿಗೆ ಆಂಧ್ರ ಕ್ರಿಕೆಟ್ ಸಂಸ್ಥೆ ಶನಿವಾರ ₹25 ಲಕ್ಷ ನಗದು ಬಹುಮಾನ ಘೋಷಿಸಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 474 (122.4 ಓವರ್‌ಗಳಲ್ಲಿ)
ಭಾರತ 9ಕ್ಕೆ 358 (116 ಓವರ್‌ಗಳಲ್ಲಿ)
(ಶುಕ್ರವಾರ 5ಕ್ಕೆ 164) (46 ಓವರ್‌ಗಳಲ್ಲಿ)
ಪಂತ್ ಸಿ ಲಯನ್ ಬಿ ಬೋಲ್ಯಾಂಡ್ 28 (37 ಎ, 4x3)
ಜಡೇಜ ಎಲ್‌ಬಿ ಡಬ್ಲ್ಯು ಲಯನ್ 17 (51 ಎ, 4x3)
ನಿತೀಶ್ ಕುಮಾರ್ ಔಟಾಗದೇ 105 (176 ಎ, 4x10, 6x1)
ವಾಷಿಂಗ್ಟನ್ ಸುಂದರ್ ಸಿ ಸ್ಮಿತ್ ಬಿ ಲಯನ್ 50 (162 ಎ, 4x1)
ಬೂಮ್ರಾ ಸಿ ಖ್ವಾಜಾ ಬಿ ಕಮಿನ್ಸ್ 0 (3 ಎ)
ಸಿರಾಜ್ ಔಟಾಗದೇ 2 (7 ಎ)
ಇತರೆ: ಲೆಗ್ ಬೈ 2, ನೋಬಾಲ್ 4, ವೈಡ್ 5
ವಿಕೆಟ್ ಪತನ: 6–191 (ರಿಷಭ್ ಪಂತ್, 55.4), 7–221 (ರವೀಂದ್ರ ಜಡೇಜ, 64.5), 8–348 (ವಾಷಿಂಗ್ಟನ್ ಸುಂದರ್, 111.6), 9–350 (ಜಸ್‌ಪ್ರೀತ್ ಬೂಮ್ರಾ, 113.3)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 25–2–86–0, ಪ್ಯಾಟ್ ಕಮಿನ್ಸ್ 27–6–86–3, ಸ್ಕಾಟ್ ಬೋಲ್ಯಾಂಡ್ 27–7–57–3, ನೇಥನ್ ಲಯನ್ 27–4–88–2, ಮಿಚೆಲ್ ಮಾರ್ಷ್ 7–1–28–0, ಟ್ರಾವಿಸ್ ಹೆಡ್ 3–0–11–0.

ಚೆಂಡಿಗಾಗಿ ಪೈಪೋಟಿ ನಡೆಸಿದ ಬೆಂಗಳೂರು ಎಫ್‌ಸಿ ಮತ್ತು ಚೆನ್ನೈಯಿನ್ ಎಫ್‌ಸಿ ತಂಡದ ಆಟಗಾರರು. ಚಿತ್ರ: ಪಿಟಿಐ

ಬಿಎಫ್‌ಸಿಗೆ ಮಣಿದ ಚೆನ್ನೈಯಿನ್

ಚೆನ್ನೈ (ಪಿಟಿಐ): ಬೆಂಗಳೂರು ಎಫ್‌ಸಿ ತಂಡ, ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಶನಿವಾರ ಚೆನ್ನೈಯಿನ್ ಎಫ್‌ಸಿ ತಂಡವನ್ನು 4–2 ಗೋಲುಗಳಿಂದ ಸೋಲಿಸಿತು. ಗೆಲುವಿನೊಡನೆ ಲೀಗ್ ಪಟ್ಟಿಯಲ್ಲಿ ಎರಡನೇ ಸ್ಥಾನ ಕಾಪಾಡಿಕೊಂಡಿತು.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಸ್ಕೋರ್ 2–2 ಗೋಲುಗಳಿಂದ ಸಮನಾಗಿತ್ತು.

ಬೆಂಗಳೂರು 13 ಪಂದ್ಯಗಳನ್ನು ಆಡಿದ್ದು ಎಂಟನೇ ಗೆಲುವಿನೊಡನೆ 27 ಪಾಯಿಂಟ್ಸ್ ಸಂಗ್ರಹಿಸಿದೆ. ಚೆನ್ನೈಯಿನ್ ತಂಡ 14 ಪಂದ್ಯಗಳಲ್ಲಿ ಏಳನೇ ಸೋಲು ಕಂಡಿದ್ದು, 15 ಪಾಯಿಂಟ್‌ಗಳೊಡನೆ 9ನೇ ಸ್ಥಾನದಲ್ಲಿದೆ.

ಬಿಎಫ್‌ಸಿ ತಂಡಕ್ಕೆ 16ನೇ ನಿಮಿಷ ರಯಾನ್ ವಿಲಿಯಮ್ಸ್ ಅವರು ಜಾರ್ಜ್ ಪೆರೀರಾ ಡಯಾಜ್ ಪಾಸ್‌ನಲ್ಲಿ ಗೋಲು ಗಳಿಸುವ ಮೂಲಕ ಮುನ್ನಡೆ ಒದಗಿಸಿದರು. ಆದರೆ ಮೂರು ನಿಮಿಷಗಳ ನಂತರ ಸ್ಕೋರ್ ಸಮನಾಯಿತು. ಇರ್ಫಾನ್ ಯಾದವಾಡ ಅವರು ಲುಕಾಸ್ ಬ್ರಂಬಿಲಾ ಅವರ ಪಾಸ್‌ನಲ್ಲಿ ಚೆನ್ನೈಯಿನ್ ತಂಡಕ್ಕೆ ಗೋಲು ಗಳಿಸಿದರು.

43ನೇ ನಿಮಿಷ ನಾಯಕ ಸುನೀಲ್ ಚೆಟ್ರಿ ಅವರು ರಯಾನ್ ವಿಲಿಯಮ್ಸ್ ಅವರ ಕ್ರಾಸ್‌ನಲ್ಲಿ ಚೆಂಡನ್ನು ಹೆಡ್ ಮಾಡಿ ಬಿಎಫ್‌ಸಿಗೆ ಮತ್ತೆ ಮುನ್ನಡೆ ಒದಗಿಸಿದರು. ಆದರೆ ವಿರಾಮಕ್ಕೆ ಕೆಲವೇ ಸೆಕೆಂಡುಗಳಿರುವಾಗ ರೆಂತ್ಲಿ ಗೋಲು ಗಳಿಸಿದ್ದರಿಂದ ಸ್ಕೋರ್ ಸಮನಾಯಿತು. ವಿರಾಮದ ನಂತರ, ಪಂದ್ಯದ 68ನೇ ನಿಮಿಷ ವಿಲಿಯಮ್ಸ್ 'ಬ್ಲೂಸ್' ತಂಡಕ್ಕೆ ಮತ್ತೆ ಮುನ್ನಡೆ ಒದಗಿಸಿದರು. 82ನೇ ನಿಮಿಷ ರೆಂತ್ಲಿ ಅವರ ಉಡುಗೋರೆ ಗೋಲು ಬಿಎಫ್‌ಸಿ ಗೆಲುವಿನ ಅಂತರ ಹೆಚ್ಚಿಸಿತು.

ಪ್ರೊಕಬಡ್ಡಿ ಫೈನಲ್: ಸ್ಟೀಲರ್ಸ್‌ಗೆ ಪೈರೇಟ್ಸ್ ಸವಾಲು

ಪುಣೆ (ಪಿಟಿಐ): ಹರಿಯಾಣ ಸ್ಟೀಲರ್ಸ್ ತಂಡವು ಬಾಲೇವಾಡಿಯ ಶ್ರೀಶಿವ ಛತ್ರಪತಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಭಾನುವಾರ ನಡೆಯುವ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಫೈನಲ್ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು ಎದುರಿಸಲಿದೆ. ಹರಿಯಾಣ ತಂಡ ಪ್ರಬಲ ರಕ್ಷಣೆ ಹೊಂದಿದ್ದರೆ, ಪಟ್ನಾ ಪೈರೇಟ್ಸ್‌ನ ರೇಡಿಂಗ್ ವಿಭಾಗದ ಬಲಿಷ್ಠವಾಗಿದೆ.

ಸ್ಟೀಲರ್ಸ್ ತನ್ನ ಯಶಸ್ಸಿನ ಓಟವನ್ನು ಫೈನಲ್‌ನಲ್ಲೂ ಮುಂದುವರಿಸುವ ಉತ್ಸಾಹದಲ್ಲಿದ್ದರೆ, ಪೈರೇಟ್ಸ್ ನಾಲ್ಕನೇ ಬಾರಿ ಪ್ರಶಸ್ತಿ ಗೆಲ್ಲುವ ಸನ್ನಾಹದಲ್ಲಿದೆ.

ಜೈದೀಪ್ ಅವರ ನಾಯಕತ್ವದಲ್ಲಿ ಹುರಿಗೊಂಡಿರುವ ಹರಿಯಾಣ ತಂಡ ಕಳೆದ ವರ್ಷವೂ ಫೈನಲ್ ತಲುಪಿತ್ತು. ಆದರೆ ಪುಣೇರಿ ಪಲ್ಟನ್ ಎದುರು ಸೋತಿತ್ತು.

ನೇರ ಪ್ರಸಾರ: ರಾತ್ರಿ 8.00 ಸ್ಟಾರ್ ಸ್ಪೋರ್ಟ್ಸ್‌ನೇರ ಪ್ರಸಾರ

ಟ್ರೋಫಿಯೊಂದಿಗೆ ಪಟ್ನಾ ಪೈರೇಟ್ಸ್ ನಾಯಕ ಅಂಕಿತ್ ಮತ್ತು ಹರಿಯಾಣದ ತಂಡದ ನಾಯಕ ಜೈದೀಪ್

ಐಸಿಸಿ: ಶ್ರೇಯಾಂಕಾ ನಾಮನಿರ್ದೇಶನ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತೋರಿದ ಉತ್ತಮ ಸಾಧನೆಗಾಗಿ ಯುವ ಸ್ಪಿನ್ ಬೌಲರ್ ಶ್ರೇಯಾಂಕಾ ಪಾಟೀಲ ಅವರನ್ನು ಐಸಿಸಿ ವರ್ಷದ ಮಹಿಳಾ ಉದಯೋನ್ಮುಖ ಆಟಗಾರ್ತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಕರ್ನಾಟಕದ ಈ ಆಫ್ ಸ್ಪಿನ್ ಬೌಲರ್ ಭಾರತದ ಏಕದಿನ ಮತ್ತು ಟಿ20 ತಂಡದಲ್ಲಿ ಆಡಿದ್ದಾರೆ. 2023ರ ಡಿಸೆಂಬರ್‌ನಲ್ಲಿ ಮಹಿಳಾ ಕೆರಿಬಿಯನ್ ಲೀಗ್‌ನಲ್ಲಿ ಆಡಿದ ಭಾರತದ ಮೊದಲ ಆಟಗಾರ್ತಿ ಎನಿಸಿದ್ದರು.

22 ವರ್ಷ ವಯಸ್ಸಿನ ಶ್ರೇಯಾಂಕಾ ಜೊತೆ ದಕ್ಷಿಣ ಆಫ್ರಿಕಾದ ಆನ್ನೇರಿ ಡೆರ್ಕ್ಸೆನ್, ಸ್ಕಾಟ್ಲೆಂಡಿನ ಸಸ್ಕಿಯಾ ಹಾರ್ಲಿ ಮತ್ತು ಐರ್ಲೆಂಡ್‌ನ ಫ್ರೇಯಾ ಸರ್ಜೆಂಟ್ ಅವರೂ ಈ ಗೌರವಕ್ಕೆ ನಾಮನಿರ್ದೇಶನಗೊಂಡಿದ್ದಾರೆ. ಕಳೆದ ವರ್ಷ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ ನಂತರ ಕನ್ನಡತಿ ಬೌಲರ್ 13 ಟಿ20 ಪಂದ್ಯಗಳಲ್ಲಿ 15 ವಿಕೆಟ್‌ಗಳನ್ನು ಪಡೆದಿದ್ದಾರೆ. ಎರಡು ಏಕದಿನ ಪಂದ್ಯಗಳಲ್ಲಿ ನಾಲ್ಕು ವಿಕೆಟ್ ಗಳಿಸಿದ್ದಾರೆ.

ಪ್ರಧಾನಿಗೆ ಚೆಸ್ ಬೋರ್ಡ್ ಕಾಣಿಕೆ ನೀಡಿದ ಗುಕೇಶ್

ಪ್ರಧಾನಿ ಮೋದಿ ಅವರಿಗೆ ಹಸ್ತಾಕ್ಷರವಿರುವ ಚೆಸ್ ಬೋರ್ಡ್ ನೀಡಿದ ಗುಕೇಶ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ನೂತನ ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಅವರು ಶನಿವಾರ ಪ್ರಧಾನಿ ನಿವಾಸದಲ್ಲಿ ಭೇಟಿಯಾದರು. ಈ ವೇಳೆ ಪ್ರಧಾನಿ ಅವರು ಗುಕೇಶ್ 'ಸಂಯಮ ಮತ್ತು ವಿನಯಂತಿಕೆ ಮೈದಳೆದ ಆಟಗಾರ' ಎಂದು ಬಣ್ಣಿಸಿದ್ದಾರೆ.

ಡಿಂಗ್ ಲಿರೆನ್ ಅವರನ್ನು ಇತ್ತೀಚೆಗೆ ಸಿಂಗಪುರದಲ್ಲಿ ನಡೆದ ವಿಶ್ವ ಚಾಂಪಿ ಯನ್‌ಷಿಪ್ ಫೈನಲ್‌ನಲ್ಲಿ ಸೋಲಿಸಿದ 18 ವರ್ಷ ವಯಸ್ಸಿನ ಗುಕೇಶ್ ಅತಿ ಕಿರಿಯ ಚಾಂಪಿಯನ್ ಎಂಬ ಶ್ರೇಯಕ್ಕೆ ಪಾತ್ರರಾಗಿದ್ದರು.

'ಚೆಸ್ ಚಾಂಪಿಯನ್ ಮತ್ತು ಭಾರತದ ಹೆಮ್ಮೆ ಗುಕೇಶ್ ಜೊತೆ ಸಂವಾದದಲ್ಲಿ ಭಾಗಿಯಾದೆ' ಎಂದು ಗುಕೇಶ್ ಹಾಗೂ ಅವರ ತಂದೆ–ತಾಯಿಯನ್ನು ಭೇಟಿಯಾದ ನಂತರ ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದಾರೆ.

'ಕೆಲವು ವರ್ಷಗಳಿಂದ ಅವರ ಜೊತೆ ಸಂಪರ್ಕದಲ್ಲಿದ್ದೆ ನನಗೆ ಗಮನ ಸೆಳೆದಿದ್ದು ಆತನ ಛಲ ಮತ್ತು ಆಟದ ಬಗ್ಗೆಯಿರುವ ಅರ್ಪಣಾ ಮನೋಭಾವ' ಎಂದು ಮೋದಿ ಬರೆದಿದ್ದಾರೆ. 'ಕೆಲವು ವರ್ಷ ಹಿಂದಿನ ವಿಡಿಯೊದಲ್ಲಿ ಅತಿ ಕಿರಿಯ ವಿಶ್ವ ಚಾಂಪಿಯನ್ ಆಗಬೇಕೆಂದು ಬಯಸಿರುವುದಾಗಿ ಹೇಳಿದ್ದ. ಅವನ ಸ್ವಪ್ರಯತ್ನದಿಂದ ಅದು ಸಾಕಾರಗೊಂಡಿದೆ' ಎಂದು ಮೋದಿ ನೆನಪಿಸಿದ್ದಾರೆ.